ಶ್ರೀ ಎಸ್. ಎಸ್. ಪಾಟೀಲ್ : ಮಾನ್ಯ ಅಧ್ಯಕ್ಷರೆ, 1997ನೇ ಇಸವಿಯ ಕರ್ನಾಟಕ ಲೇವಾದೇವಿದಾರರ (ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಅಧ್ಯಕ್ಷರು : ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲಾಗಿದೆ. * ಈಗ ಬೇಡಿಕೆ ಮೇಲಿನ ಚರ್ಚೆ. ಮಾನ್ಯ ವಿರೋಧಪಕ್ಷದ ನಾಯಕರು ಚರ್ಚೆಯನ್ನು ಪ್ರಾರಂಭಿಸಬೇಕು.

ವಿತ್ತೀಯ ಕಾರ್ಯಕಲಾಪಗಳು

1997 - 98ನೇ ಸಾಲಿನ ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ (ಮುಂದು)

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : (ವಿರೋಧಪಕ್ಷದ ನಾಯಕರು) : ಸನ್ಮಾನ್ಯ ಅಧ್ಯಕ್ಷರೆ, ಇಂದು ನಮ್ಮ ಮುಂದೆ ಇರತಕ್ಕ ಅನೇಕ ಬೇಡಿಕೆಗಳನ್ನು ನಾನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡುತ್ತೇನೆ. ಏಕೆಂದರೆ, ಮಾನ್ಯ ಮುಖ್ಯಮಂತ್ರಿಗಳ ಬೇಡಿಕೆಗಳೂ ಇವೆ. ಇರಿಗೇಷನ್ ಮಂತ್ರಿಗಳ ಬೇಡಿಕೆ ಇದೆ. ಒಟ್ಟಾರೆ ಹೆಚ್ಚು ಕಡಿಮೆ ಒಂದು ಚೌಚೌ ಇದ್ದಹಾಗೆ ನಾವು ಸಾಕಷ್ಟು ಸಮಯವನ್ನು ಈ ಬಾರಿ ಸದನದಲ್ಲಿ ಈ ಸಲ ಇಟ್ಟುಕೊಂಡಿದ್ದರೂ ಕೂಡ ಕೊನೆಗೆ ಈ ಬೇಡಿಕೆಯ ಮೇಲೆ ಮಾತನಾಡುವಾಗಲೇ ಸಮಯದ ಅಭಾವವಾಗಿ ಇವತ್ತು ಅನೇಕ ಬೇಡಿಕೆಗಳನ್ನು ಒಂದುಕಡೆ ಕೂಡಿಸಿ ಮಾತನಾಡತಕ್ಕ ಪರಿಸ್ಥಿತಿ ಬಂದಿದೆ. ಪ್ರಮುಖವಾಗಿ ಮೊದಲನೆಯದಾಗಿ ನಾನು ನಮ್ಮ ನೀರಾವರಿ ಇಲಾಖೆಯ ಮೇಲೆ ಕೆಲವು ಮಾತುಗಳನ್ನು ಆಡಿ ಮುಂದೆ ಎಕ್ಸೈಜ್, ಲಾ ಅಂಡ್ ಆರ್ಡರ್ ಉಳಿದ ವಿಷಯಗಳ ಮೇಲೆ ನಾನು ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಅನೇಕ ಸಾರಿ ಸದನದ ಹೊರಗಡೆ ಪ್ರಸ್ತಾಪ ಮಾಡತಕ್ಕದ್ದು ಏನೆಂದರೆ ಯಾವಾಗಲೂ ವಿರೋಧಪಕ್ಷದವರು ಟೀಕೆ ಮಾಡುವಾಗ ಅವರ ಟೀಕೆಗಳು ಕನ್‌ಸ್ಟ್ರಕ್ಟೀವಾಗಿ ಇರುವುದಿಲ್ಲ, ಕೇವಲ ಮಾತಿಗಾಗಿ ಮಾತು ಎಂದು ಆಡಿ ಅದರ ಪ್ರಯೋಜನ ನಮಗೂ ಆಗುವುದಿಲ್ಲ, ರಾಜ್ಯಕ್ಕೂ ಆಗುವುದಿಲ್ಲ ಎನ್ನತಕ್ಕ ಮಾತನ್ನು ಹೊರಗಡೆ ಹೇಳಿದ್ದಾರೆ. ಕೆಲವು ಸಾರಿ ಈ ಸದನದಲ್ಲೂ ಕೂಡ ಪ್ರಸ್ತಾಪ ಮಾಡಿದ್ದಾರೆ. ಈಗ ನಾವು ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡುತ್ತೇವೆ. ಅವು ಕಾನೂನು ರೀತಿಯಾಗಿ ಮತ್ತು ಕೆಲವು ಅವರು ಮಾಡಿದಂಥ ಕೆಲಸ ಕಾನೂನು ಬಾಹಿರವಾಗಿರತಕ್ಕದ್ದು ಕೂಡ ಅವರ ಗಮನಕ್ಕೆ ನಾವು ತಂದಾಗಲೂ ಕೂಡ ಅದನ್ನೇ ಸರಿ ಇದೆ, ತಪ್ಪು ಮಾಡಿದ್ದನ್ನೇ ಸರಿ ಇದೆ ಎಂದು ಹೇಳಿ ಸಮರ್ಥಿಸಿಕೊಳ್ಳತಕ್ಕ ಶಕ್ತಿ ಅವರಿಗೆ ಇದೆ. ಇದನ್ನು ಅನೇಕ ಸಾರಿ ಅವರು ಮಾಡಿದ್ದಾರೆ. ಆ ಬಗ್ಗೆ ಕೆಲವು ಉದಾಹರಣೆಗಳನ್ನು ನಾನು ಈ ಸದನದ ಮುಂದೆ ಕೊಡುತ್ತೇನೆ. ಇವತ್ತು ನೀರಾವರಿ ಬಗ್ಗೆ ನಾವು ಹೇಳಬೇಕಾದರೆ ನೀರಾವರಿ ಇಲಾಖೆ ರೈತರ ಜೀವನಕ್ಕೆ ನೇರವಾಗಿ ಸಂಬಂಧಪಟ್ಟಂಥ ಇಲಾಖೆ, ಮತ್ತು ನೀರಾವರಿಯಿಂದ ನಮ್ಮ ರಾಜ್ಯದಲ್ಲಿ ಇರತಕ್ಕ ಸುಮಾರು 67-70 ಲಕ್ಷ ಕುಟುಂಬಗಳು ಏನಿವೆ ಆ ಕುಟುಂಬಕ್ಕೆ ಪ್ರತ್ಯಕ್ಷ ಮತ್ತು ಅಪ್ರತ್ಯಕ್ಷವಾಗಿ ಅವರ ಜೀವನ ಮಟ್ಟವನ್ನು ಎತ್ತರಿಸತಕ್ಕದ್ದಾಗಲೀ ಅಥವಾ ಅವರಿಗೆ ಅವರ ಜೀವನವನ್ನು ನಡೆಸಿಕೊಳ್ಳತಕ್ಕ ಬೇಸಿಕ್ ರಿಸೋರ್ಸಸ್ ಎಂದರೆ ತಪ್ಪಾಗುವುದಿಲ್ಲ. ಈ ಒಂದು ನೀರಾವರಿಯಲ್ಲಿ ನಾವು ಎಷ್ಟರಮಟ್ಟಿಗೆ ಲಕ್ಷ್ಯವನ್ನುರಿಸಿದ್ದೇವೆ. ಪ್ರಶ್ನೆ ಅದಲ್ಲ. ನಾವು ಎಷ್ಟು ಹಣ ಖರ್ಚು ಮಾಡಿದ್ದೇವೆ ಎಂಬುದೂ ಪ್ರಶ್ನೆಯಲ್ಲ. ನಾವು ಎಷ್ಟರಮಟ್ಟಿಗೆ ಹಣದ ಜೊತೆಯಲ್ಲಿ ಆ ಇರಿಗೇಷನ್

ಕೆಲಸದ ಗುಣಮಟ್ಟವನ್ನು ಕಾಪಾಡಿದ್ದೇವೆ, ಫಿಸಿಕಲ್ ಅಚೀವ್‌ಮೆಂಟ್ ಏನಾಗಿದೆ ಫೈನಾನ್ಷಿಯಲ್ ಟಾರ್ಗೆಟ್ ಜೊತೆಯಲ್ಲಿ ಫಿಸಿಕಲ್ ಟಾರ್ಗೆಟ್ ಏನು ಅಚೀವ್ ಮಾಡಿದ್ದೇವೆ ಮತ್ತು ಎಷ್ಟು ಅದರ ಗುಣಮಟ್ಟ, ಅದು ಕನ್‌ಸ್ಟ್ರಕ್ಷನ್ ಇರಬಹುದು ಅಥವಾ ಡ್ಯಾಮ್ ಕನ್‌ಸ್ಟ್ರಕ್ಷನ್ ಇರಬಹುದು, ಕೆನಾಲ್ ಕನ್‌ಸ್ಟ್ರಕ್ಷನ್ ಇರಬಹುದು ಅಥವಾ ಪಿಚ್ಚಿಂಗ್ ಇರಬಹುದು ಅಥವಾ ಅನೇಕ ಕೆಲಸಗಳನ್ನು ಏನು ಮಾಡುತ್ತಿದ್ದೀರಿ ಬ್ರಿಡ್ಜ್ ಕನ್‌ಸ್ಟ್ರಕ್ಷನ್, ಓವರ್ ಬ್ರಿಡ್ಜ್ ಅದರ ಮೇಲೆ ಮಾಡತಕ್ಕದ್ದು ಇರಬಹುದು ಎಷ್ಟರಮಟ್ಟಿಗೆ ಅದನ್ನು ಒಳ್ಳೆಯ ಗುಣಮಟ್ಟದ ಕೆಲಸವನ್ನು ಮಾಡಿದಿರಿ ಎಂಬುದು ಬಹಳ ಮಹತ್ವವಾದುದು. ಅದಕ್ಕೆ ನಾನು ಅನೇಕ ಸಾರಿ ಸರ್ಕಾರದ ಗಮನಕ್ಕೆ ತಂದಿದ್ದೇನೆ. ಪತ್ರ ಕೂಡ ಬರೆದಿದ್ದೇನೆ. ಕೆಲವು ಕಡೆ ನಾನು ಖುದ್ದಾಗಿ ಭೇಟಿ ಕೊಟ್ಟಮೇಲೆ ಯಾವರೀತಿ ಕಳಪೆ ಕೆಲಸಗಳು ನಡೆದಿವೆ, ಇದಕ್ಕೆ ತಾವು ಗಮನಹರಿಸಬೇಕು, ಇದನ್ನು ಲೋಕಾಯುಕ್ತಕ್ಕೆ ತಾವು ಕಳುಹಿಸಬೇಕು ಎನ್ನತಕ್ಕದ್ದು ಕೂಡ ತಂದಿದ್ದೆ. ಕೆಲವು ಮಾತುಗಳನ್ನು ನೇರವಾಗಿ ಕಮಿಟಿಗಳಿಗೂ ಬರೆದೆ. ಆದರೆ ಕಮಿಟಿಯಲ್ಲಿ ಇದಕ್ಕೆ ತೆಗೆದುಕೊಳ್ಳತಕ್ಕ ಅವಕಾಶ ಇಲ್ಲ ಎಂದಮೇಲೆ ಪುನಃ ತಮ್ಮ ಗಮನಕ್ಕೆ ತಂದು ಅಲ್ಲಿಗೆ ನಾನು ಬಿಟ್ಟಿದ್ದೇನೆ. ಇವತ್ತು ಪ್ರಥಮವಾಗಿ ಅಪ್ಪರ್‌ಕೃಷ್ಣ ತೆಗೆದುಕೊಳ್ಳೋಣ. ಈ ಅಪ್ಪರ್‌ಕೃಷ್ಣ ಪ್ರಾಜೆಕ್ಟ್ ವಿಶೇಷವಾಗಿ ಗುಲ್ಬರ್ಗ, ಬಿಜಾಪುರ, ರಾಯಚೂರು ಈ ಮೂರು ಜಿಲ್ಲೆಯಲ್ಲಿರತಕ್ಕ ಸುಮಾರು 10-12 ತಾಲ್ಲೂಕುಗಳಿಗೆ ಒಂದು ಜೀವದಾನ ಕೊಡತಕ್ಕ ಅಥವಾ ಅಲ್ಲಿರುವ ರೈತರಿಗೆ ಹೆಚ್ಚಿನ ಸಹಾಯಕವಾಗತಕ್ಕ ಒಂದು ಪ್ರಾಜೆಕ್ಟ್. ಈ ಒಂದು ಪ್ರಾಜೆಕ್ಟ್‌ನ್ನು ಎರಡುಸಾವಿರದ ಇಸವಿಯೊಳಗಾಗಿ ನಾವು ಕಂಪ್ಲೀಟ್‌ಮಾಡಬೇಕು. ಕೃಷ್ಣಾ ಬೇಸಿಸ್‌ನಲ್ಲಿ ಸುಮಾರು 734 ಟಿ.ಎಂ.ಸಿ. ನೀರನ್ನು ಏನು ನಾವು ಬಳಸಿಕೊಳ್ಳಬೇಕು ಎಂದು ಬಚಾವತ್ ಅವಾರ್ಡ್ ಪ್ರಕಾರ ಒಂದು ತೀರ್ಮಾನವಾಗಿದೆ ಆ ತೀರ್ಮಾನದ ಪ್ರಕಾರ ನಾವು 734ರಲ್ಲಿ 5 ಟಿ.ಎಂ.ಸಿ. ನೀರು ನಾವು ಏನು ಕುಡಿಯುವ ನೀರಿಗಾಗಿ ಮದ್ರಾಸಿಗೆ, ತಮಿಳುನಾಡಿಗೆ ಬಿಡುವುದಕ್ಕೆ ಒಪ್ಪಿಕೊಂಡಿದ್ದೇವೆ ಅದು ಬಿಟ್ಟರೆ ಸುಮಾರು 729 ಟಿ.ಎಂ.ಸಿ. ನೀರನ್ನು ನಾವು ಉಪಯೋಗ ಮಾಡಬಹುದು. ಈ ಉಪಯೋಗ ಮಾಡಿಕೊಳ್ಳಬೇಕು ಅಂದರೆ ಎಷ್ಟರಮಟ್ಟಿಗೆ ನಾವು ಇವತ್ತು ಉಪಯೋಗ ಮಾಡಿಕೊಂಡಿದ್ದೇವೆ ಮತ್ತು ಉಳಿದಂಥ ನೀರನ್ನು ಉಪಯೋಗ ಮಾಡಿಕೊಳ್ಳಲಿಕ್ಕೆ ಎಷ್ಟು ವರ್ಷ, ಎಷ್ಟು ತಿಂಗಳು ಇದೆ ಎಂದು ನಾವು ವಿಚಾರ ಮಾಡಿಕೊಂಡಾಗ ಖಂಡಿತವಾಗಿ 2,000 ಇಸವಿಯೊಳಗೆ ನಾವು ಎಷ್ಟೇ ಪ್ರಯತ್ನ ಮಾಡಿದರೂ ಕೂಡ ಬಳಸಿಕೊಳ್ಳತಕ್ಕ ಸ್ಥಿತಿ ಇಲ್ಲ. ನಾವು ಕಷ್ಟಪಟ್ಟು ಪ್ರಯತ್ನವನ್ನು ಸ್ಟೋರ್ ಮಾಡಿಕೊಳ್ಳಬಹುದೇ ಹೊರತು ನೇರವಾಗಿ ಬಳಸಿಕೊಳ್ಳತಕ್ಕ ಸ್ಥಿತಿಯೇ ಇಂದು ಇಲ್ಲ ಅದೆಷ್ಟೇ ನಾವು ಮಾತನಾಡಿದರೂ. ನಾವು ಎಷ್ಟೇ ಮಾತನಾಡಬಹುದು. ಆದರೆ, ನಮ್ಮ ನೀರಾವರಿ ಮಂತ್ರಿಗಳು ಮಾತ್ರ ಆಶಾದಾಯಕವಾದ ಮಾತನಾಡುತ್ತಾರೆ. ಪ್ರೆಸ್ ಕಾನ್ಫರೆನ್ಸ್ ಅಥವಾ ಯಾವುದೇ ಕಾನ್ಫರೆನ್ಸ್ ಇರಲಿ, ಯಾವುದೇ ಮೀಟಿಂಗ್ ಇರಲಿ, ಯಾವುದೇ ರಿವ್ಯೂ ಇರಲಿ, ಅದರಲ್ಲಿ ಮಾತ್ರ ಅವರು, 2,000ನೇ ಇಸವಿಯೊಳಗೆ ನಾವು ಸಂಪೂರ್ಣವಾಗಿ, ಕೃಷ್ಣ ಬೇಸಿಸ್‌ನಲ್ಲಿರತಕ್ಕ ಆಲಮಟ್ಟಿ ಇರಬಹುದು, ಶಹಾಪುರ್ ಬ್ರಾಂಚ್, ಜೇವರ್ಗಿ, ಮುದ್ಬಾಲ್ ಬ್ರಾಂಚ್, ಇಂಡಿ ಬ್ರಾಂಚ್, ಇವೆಲ್ಲವನ್ನೂ ಕೂಡ ಕಟ್ಟಿ ಮುಗಿಸುತ್ತೇವೆನ್ನುವ ಮಾತನ್ನು ಅವರು ಪದೇಪದೇ ಹೇಳುತ್ತಿರುತ್ತಾರೆ. ಒಂದೆರಡು ಮೀಟಿಂಗ್ ಕರೆದು ನಮಗೆ ಕೆಲವು

ಕಾಗದಪತ್ರಗಳನ್ನು ಅಂದರೆ ಬುಕ್‌ಲೆಟ್‌ಗಳನ್ನು ಕೊಟ್ಟು, ಎಷ್ಟರಮಟ್ಟಿಗೆ ಅದು ಸಾಧನೆಯಾಗಿದೆ, ಎಷ್ಟರಮಟ್ಟಿಗೆ ಕೆಲಸ ನಡೆದಿದೆ, ಇನ್ನೂ ಕೆಲಸವಾಗಬೇಕು, 2000ನೇ ಇಸವಿಯೊಳಗೆ ನಾವು ಏನು ಮಾಡುತ್ತೇವೆ ಎನ್ನತಕ್ಕ ಮಾತನ್ನೂ ಅವರು ಹೇಳಿದರು. ಇದು 729 ಟಿಎಂಸಿ ನೀರನ್ನು ಬಳಸಿಕೊಳ್ಳುವುದು ಒಂದು ಕಡೆ. ಉಳಿದ 2ನೇ ಹಂತದಲ್ಲಿ, ಬಚಾವತ್ ಅವಾರ್ಡ್ 2000ನೇ ಇಸವಿ ಆದಮೇಲೆ, ತಮಗೆ ಸಿಗತಕ್ಕ ನೀರೇನಿದೆ ಅದು ಸುಮಾರು 23 TMC available to the State in Krishna basin by way of Godavari diversion, 183 TMC available to the state when the surplus waters of Krishna water are allocated under Scheme - (B) ಹೀಗೆ, ಇವೆಲ್ಲವನ್ನೂ ಕೂಡ ನಾವು ಲೆಕ್ಕಹಾಕಿದರೆ, ಅದೂ ಕೂಡ ಸುಮಾರು 216 ಟಿಎಂಸಿ ಹೆಚ್ಚೂ ಕಡಿಮೆ ನಮಗೆ ಸಿಗುವ ಸಾಧ್ಯತೆ ಇದೆ. ಅಂದಮೇಲೆ, ಇದನ್ನು ನಾವು ಯಾವ ರೀತಿಯಾಗಿ ಮುಂದೆ ಬೆಳೆಸಬೇಕು ಎನ್ನುವುದನ್ನು ಹೆಚ್ಚಿಗೆ ಹೇಳುವುದಕ್ಕೆ ನಾನು ಹೋಗುವುದಿಲ್ಲ ಸ್ಕೀಂ 'ಬಿ' ನಲ್ಲಿ, ಸ್ಕೀಂ 'ಏ' ನಲ್ಲಿ ನೀವು ಮಾಡಿದ್ದೇನು ? ನಿಜ. ದುಡ್ಡನ್ನು ಹೆಚ್ಚಿಗೆ ಒದಗಿಸತಕ್ಕ ಪ್ರಯತ್ನವನ್ನು ನಾವು ಮಾಡಿದ್ದೇವೆ, ಅದಕ್ಕಾಗಿ ಹಿಂದಿನ ಸರ್ಕಾರ ಏನೂ ಕೆಲಸ ಮಾಡಿಲ್ಲ, ಅಷ್ಟೊಂದು ಕೆಲಸವನ್ನು ಈ ಸರ್ಕಾರ ಮಾಡಿದೆ ಅನ್ನತಕ್ಕ ಮಾತನ್ನು ತಾವು ಪದೇಪದೇ ಹೇಳುತ್ತೀರಿ. ತಾವು ಕೊಟ್ಟಂತಹ ಇರಿಗೇಷನ್ ಇನ್ ಕರ್ನಾಟಕ 1997-98, ಆಗಸ್ಟ್ 1997, ಈ ಬುಕ್‌ಲೆಟ್‌ನಲ್ಲಿ ಸ್ಟೇಟ್‌ಮೆಂಟ್ ನಂ. 1, ಆಮೇಲೆ ಸ್ಟೇಟ್‌ಮೆಂಟ್‌ನಂ.2 ಮತ್ತು 3. ಈ ಮೂರನ್ನೂ ಅಧ್ಯಕ್ಷರೆ ತಾವು ಅವಲೋಕನ ಮಾಡಿದರೆ, ಪರಿಶೀಲಿಸಿದರೆ ತಮಗೇ ಗೊತ್ತಾಗುತ್ತದೆ, ಎಷ್ಟರಮಟ್ಟಿಗೆ ಇವರು ಫೈನಾನ್‌ಷಿಯಲ್ ಟಾರ್ಗೆಟ್ ಅಚೀವ್‌ಮೆಂಟ್ ಮಾಡಿದ್ದಾರೆ, ಹಣವನ್ನು ಖರ್ಚು ಮಾಡಿದ್ದಾರೆ, ಅದರ ಮಟ್ಟಿಗೆ ಫಿಸಿಕಲ್ ಟಾರ್ಗೆಟ್ ಇವರು ಅಚೀವ್ ಮಾಡಿಲ್ಲ ಎನ್ನುವುದನ್ನು ನಾನು ಸಾಬೀತುಪಡಿಸುತ್ತೇನೆ. ಅದಕ್ಕೆ ತಾವು ರಿವ್ಯೂ ಮಾಡಬೇಕು. ತಾವು ರಿವ್ಯೂ ಮಾಡುತ್ತಿಲ್ಲವೆನ್ನುವುದೇ ನಮ್ಮ ಕೊರಗು. ಇದರ ಬಗ್ಗೆ ಸಾಕಷ್ಟು ಸಮಯವನ್ನು ತಾವು ಕೊಟ್ಟು, ಈ ಕಡೆ ಲಕ್ಷ್ಯ ಕೊಡುತ್ತಿಲ್ಲ ವೆನ್ನುವುದೇ ನಮ್ಮ ವಾದ. ಏಕೆಂದರೆ, ಬರೀ ಹಣವನ್ನು ನಾನು ಕೊಟ್ಟಿದ್ದೇನೆ ಅಥವಾ ಕೃಷ್ಣಾ ಜಲಭಾಗ್ಯ ನಿಗಮದಲ್ಲಿ ಹಣವಿದೆ, ಪ್ರಾಜೆಕ್ಟ್‌ನಲ್ಲಿ ಹಣವಿದೆ, ಆ ಹಣವನ್ನು ಕೊಟ್ಟರೆ ಸಾಕಾಗುವುದಿಲ್ಲ. ಹಣದ ಜೊತೆಯಲ್ಲಿ ಅದರ ಉಪಯೋಗವಾಗುತ್ತಿದೆಯೇ, ಇಲ್ಲವೇ ಮತ್ತು ಅದರ ದುರುಪಯೋಗ ಎಷ್ಟರಮಟ್ಟಿಗೆ ಆಗಿದೆ ಎಂದೂ ಕೂಡ ನೋಡತಕ್ಕದ್ದು ಹಾಗೂ ಅದರ ಉಸ್ತುವಾರಿಯನ್ನು ಮಾಡತಕ್ಕ ಕೆಲಸವನ್ನೂ ಕೂಡ ತಾವು ಮಾಡಬೇಕು. ಆದರೆ, ಇವತ್ತಿನ ದಿವಸ ಏನಾಗಿದೆ? ಸ್ಟೇಟ್‌ಮೆಂಟ್ ನಂ.2ನಲ್ಲಿ ಅಲೋಕೇಷನ್ ಅಂಡ್ ಯುಟಿಲೈಜೇಷನ್ comitted ಇದರಲ್ಲಿ ನಮ್ಮ ಅಲೋಕೇಷನ್, ಕೃಷ್ಣಾ ಬೇಸಿನ್‌ನಲ್ಲಿರತಕ್ಕ 757 ಟಿ.ಎಂ.ಸಿ. ನೀರಿನಲ್ಲಿ ನಾವು ಇಲ್ಲಿಯವರೆಗೆ ಉಪಯೋಗ ಮಾಡಿಕೊಂಡಿದ್ದು ಕೇವಲ 222 ಟಿ.ಎಂ.ಸಿ. ಆಮೇಲೆ, ಆನ್-ಗೋಯಿಂಗ್ ಪ್ರಾಜೆಕ್ಟ್ ಎಷ್ಟಿದೆ ಎಂದರೆ, 489. ಆಮೇಲೆ, ಟೋಟಲ್ 712 ಅಂದರೆ ಆನ್-ಗೋಯಿಂಗ್ ಪ್ರಾಜೆಕ್ಟ್ ಅಂಡ್ ಕಂಪ್ಲೀಟ್ ಆಗಿದ್ದೂ ಸೇರಿಕೊಂಡು ಸುಮಾರು 712. ಅಂದರೆ, ಯಾವುದೇ ಲಕ್ಷ್ಯ ಕೊಡದೆ, ಅಲೋಕೇಷನ್ನಿನಲ್ಲೇ ಆ ಕಡೆ ಗಮನಹರಿಸಲಿಲ್ಲ. 44ಟಿಎಂಸಿ ಬಗ್ಗೆ ನಮ್ಮ ಚಿಂತನೆ ಇಲ್ಲ. ಯುಟಿಲೈಜೇಷನ್ ಟುಬಿ ಕಮಿಟೆಡ್, ಅಂದರೆ, 44.94 ಟಿಎಂಸಿಗೆ ನಮ್ಮ ಯಾವ ಪ್ರಾಜೆಕ್ಟ್ ಕೂಡ ಇಲ್ಲ. ಇದನ್ನು ನೀವು

ಕೊಟ್ಟಿದ್ದೀರಿ. ಅದು ಅನ್‌ಯುಟಿಲೈಜ್ಡ್. 45 ಟಿಎಂಸಿಗೆ ಒಂದು ಕಾರ್ಯಕ್ರಮವೇ ಇಲ್ಲ ಎಂದಾಗ 2,000ನೇ ಇಸವಿಯೊಳಗೆ ಉಪಯೋಗ ಮಾಡಿಕೊಳ್ಳತಕ್ಕದ್ದೇನಿದೆ? ಉಳಿದಿದ್ದು, ನಾರಾಯಣಪುರ ಡ್ಯಾಮ್ ಇರಬಹುದು, ಆಲಮಟ್ಟಿ ಇರಬಹುದು, ಇವೆಲ್ಲಾ 712 ಟಿಎಂಸಿನಲ್ಲಿ ಇನ್‌ಕ್ಲೂಡಿಂಗ್ ಮೈನರ್ ಇರಿಗೇಷನ್ ಅಂಡ್ ಅದರ್ ಪ್ರಾಜೆಕ್ಟ್ಸ್ ಅಂದರೆ, 45 ಟಿಎಂಸಿಗೆ ನೀವು ಗಮನಹರಿಸಲಿಲ್ಲ ವೆಂದಾಗ, ಎಷ್ಟರಮಟ್ಟಿಗೆ 2-3 ವರ್ಷಗಳಲ್ಲಿ ನೀವು ಸಾಧನೆಯನ್ನು ಈ ಕೃಷ್ಣಾ ಬೇಸಿನ್ ಪ್ರಾಜೆಕ್ಟ್ ಕಂಪ್ಲೀಟ್ ಮಾಡುವುದರಲ್ಲಿ ಸಹಾಯಕರಾಗುತ್ತೀರಿ ಎನ್ನುವುದನ್ನು ತಾವು ಹೇಳಬೇಕು. ಕೇವಲ ಭಾಷಣವಲ್ಲ, ಪ್ರೆಸ್ ನೋಟ್‌ಅಲ್ಲ. ಇದು ನೀವು ಕೊಟ್ಟ ಅಂಕಿ-ಅಂಶಗಳಿಂದಲೇ ನಾನು ಹೇಳುತ್ತಿದ್ದೇನೆ. ಅದಕ್ಕೆ, ಸಂಪೂರ್ಣವಾಗಿ ಇದರ ಬಗ್ಗೆ ಕಾರ್ಯಕ್ರಮ ಹಾಕಿಕೊಳ್ಳುವುದರಲ್ಲಿ ತಾವು ವಿಫಲರಾಗಿದ್ದೀರೆಂಬ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ ಮತ್ತು ಈ ಕಡೆ ಗಮನ ಕೊಟ್ಟಿಲ್ಲ ಅದಕ್ಕೆ ನಾನು ಮುಖ್ಯಮಂತ್ರಿಗಳನ್ನು ದೂಷಿಸುತ್ತೇನೆ. ಏಕೆಂದರೆ, ಇದು ಮೇಜರ್ ಇರಿಗೇಷನ್. ಇನ್ನು ನಮ್ಮ ಡೆವಲಪ್‌ಮೆಂಟ್ ಹಣದಲ್ಲಿ ಅಥವಾ ಪ್ಲಾನ್ ಸ್ಕೀಂ ಮತ್ತು ನಾನ್-ಪ್ಲಾನ್ ಸ್ಕೀಂನಲ್ಲಿ ಎರಡರಲ್ಲೂ ಹಣ ಖರ್ಚಾಗಿರತಕ್ಕದ್ದು 45 ಪರ್ಸೆಂಟ್‌ನಲ್ಲಿ ಸುಮಾರು 20, 23 ಪರ್ಸೆಂಟ್ ಹಣವನ್ನು ನಾವು ಇಲ್ಲಿ ಕೇಳಿದ್ದೇವೆ. ಅಂದರೆ, ಇದರ ಕಡೆ ಗಮನಹರಿಸದೇ ಹೋದರೆ ಇದು ಹೇಗೆ ಇಂಪ್ಲಿಮೆಂಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ? ಅದಕ್ಕಾಗಿ, ಸರ್ಕಾರ ಈ ಒಂದು 45 ಟಿಎಂಸಿ ನೀರು ಉಪಯೋಗ ಮಾಡುವುದರಲ್ಲಿ ಯಾವ ಕಾರ್ಯಕ್ರಮವನ್ನೂ ಹಾಕಿಕೊಂಡಿಲ್ಲ, ಯಾವ ಯೋಜನೆಯನ್ನೂ ತಯಾರು ಮಾಡಿಲ್ಲ ಎನ್ನತಕ್ಕ ಮಾತು ಇಲ್ಲಿ ಸ್ಪಷ್ಟವಾಗಿದೆ. ಅದಕ್ಕೆ 2000ನೇ ಇಸವಿಯೊಳಗೆ ನಾವು ನೀರನ್ನು ನಿಲ್ಲಿಸಿಕೊಳ್ಳುತ್ತೇವೆನ್ನುವುದೂ ಸಾಧ್ಯವಿಲ್ಲ. ನಾವು ಇಲ್ಲಿಯವರೆಗೆ ಉಪಯೋಗ ಮಾಡಿಕೊಳ್ಳಬೇಕಾದುದು ಬಿಡಿ. ಆದರೆ, ನಮಗೆ ಅಲೋಕೇಷನ್ ಆದಂತಹ ನೀರನ್ನು ನಾವು ನಿಲ್ಲಿಸಿಕೊಂಡು, ಮುಂದೆ ಅದನ್ನು ಕೆನಾಲ್, ಡಿಸ್ಟ್ರಿಬ್ಯೂಟರೀಸ್ ಅಥವಾ ಮೈನ್ ಕೆನಾಲ್ ಮಾಡಿಕೊಂಡು ಬೇಕಾದರೆ ಆಮೇಲೆ ಯುಟಿಲೈಜೇಷನ್ ಮಾಡಿಕೊಳ್ಳತಕ್ಕದ್ದು ಮಾಡೋಣವೆಂದು ತಾವು ಹೇಳಬಹುದಾಗಿತ್ತು. ಅದನ್ನು ಹೇಳುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ, ನಮಗೆ ಸ್ಕೀಂ ಇಲ್ಲ. ಈಗ ನಮ್ಮ ಶ್ರೀ ಕೆ. ಎಸ್. ಪುಟ್ಟಣ್ಣಯ್ಯನವರು ಯಾವಾಗಲೂ, 1 ಟಿಎಂಸಿ ನೀರೆಂದರೆ, 1 ಲಕ್ಷ ಎಕರೆಗೆ ಒಂದು ಸಲ ನೀರು ಕೊಡಬಹುದೆಂದು ಹೇಳುತ್ತಿರುತ್ತಾರೆ. ಅಟ್ ಎ ಟೈಂ, ಅವರ ಥಿಯರಿ ಪ್ರಕಾರ. ಅಂದರೆ, ನಾನೇನು ಹೇಳುತ್ತೇನೆಂದರೆ, ನಾನು ವಾದ ಮಾಡುತ್ತಿಲ್ಲ. ಕನಿಷ್ಠ ಪಕ್ಷ ಇವತ್ತಿನ ದಿವಸ ಒಂದು ಸಲ ನೀರು ಕೊಡಬೇಕಾದರೆ 44 ಲಕ್ಷ ಎಕರೆ ಎಂದು ಬೇಡ, 10 ಲಕ್ಷ ಎಕರೆ, ಅದರ ಪ್ರಕಾರ ಅಂದರೆ, 10 ಲಕ್ಷ ಎಕರೆಗೆ ನೀರಾವರಿ ಆಗತಕ್ಕದ್ದು, ಸೆಮಿ ಡ್ರೈ ಎಂದೇ ಇಟ್ಟುಕೊಳ್ಳಿ ಅಥವಾ 4-5 ಸಲ ತಾವು ನೀರು ಕೊಟ್ಟರೂ ಕೂಡ, 5 ಲಕ್ಷ ಎಕರೆಗೆ ಎಂದೇ ತಿಳಿದುಕೊಳ್ಳಿ, ಅಷ್ಟು ಮಟ್ಟಿಗಾದರೂ ಕೂಡ ಇವತ್ತು ನಿಮ್ಮ ಯೋಜನೆಗಳಿಲ್ಲ.

ಶ್ರೀ ಕೆ. ಎನ್. ನಾಗೇಗೌಡ : 44 ಟಿಎಂಸಿ ಅಂದರೆ 1 ಟಿಎಂಸಿ ಭತ್ತಕ್ಕೆ 4 ಸಾವಿರ, ಬೇರೆ ಬೆಳೆಗೆ ಅಂದರೆ ಎಂಟರಿಂದ ಎಂಟೂವರೆ ಸಾವಿರ ಎಕರೆ ಆಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :44 ಟಿಎಂಸಿ ಇಂಟು 10 ಸಾವಿರ ಎಕರೆ ಎಂದೇ ಇಟ್ಟುಕೊಳ್ಳಿ. ಅದಕ್ಕೆ ಹೇಳಿದೆ 5 ಸಾವಿರ ಎಕರೆ ಎಂದು. ನೀವು ಆ ಲೆಕ್ಕ ಬಿಟ್ಟುಬಿಡಿ. ನಾನು ಹೇಳುವುದಿಷ್ಟೇ, 45 ಟಿಎಂಸಿಗೆ ನಿಮ್ಮ ಪ್ರೋಗ್ರಾಂ ಇಲ್ಲ. ಅಂದರೆ, ಕೊಟ್ಟಿರುವ ಡಾಕ್ಯುಮೆಂಟ್ ಸುಳ್ಳು ಎಂದಾಯಿತು. ಎರಡನೆಯದು, ಈಗ ನಮ್ಮ plan wise financial and potential programme of irrigation projects. ಇಲ್ಲಿ 2-3 ಸಲ ನಾವು ಯುಕೆಪಿ, ಆಲಮಟ್ಟಿ ಇದರ ಬಗ್ಗೆ ಪ್ರಸ್ತಾಪ ಮಾಡಿದಾಗ, ನಮ್ಮ ಸರ್ಕಾರ ಬಂದ ಮೇಲೆ ಮೀಡಿಯಂ, ಮೇಜರ್ ಇರಿಗೇಷನ್, ಯುಕೆಪಿಗೆ ಸುಮಾರು 1 ಸಾವಿರ ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ, ಆಮೇಲೆ, ಇರಿಗೇಷನ್‌ಗೆ ಹೆಚ್ಚಿನ ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದರು. ಆಗ ನಾನು ಹೇಳಿದೆ, ಸ್ವಾಮಿ, ಹಿಂದೆ ಒಂದು ಚೀಲ ಸಿಮೆಂಟ್ ತೆಗೆದುಕೊಳ್ಳಬೇಕಾದರೆ ಅದರ ಬೆಲೆ ಏನಿತ್ತು? ಇವತ್ತು ತಾವು ಒಂದು ಚೀಲ ಸೀಮೆಂಟ್ ತೆಗೆದುಕೊಳ್ಳಬೇಕಾದರೆ ಅದರ ಬೆಲೆ ಏನಿದೆ? ಇವತ್ತು ರಿಯಲ್ ವ್ಯಾಲ್ಯೂ ಆಫ್ ಮನಿ ಏನಿದೆ? ಅದರದ್ದೇನು? ಆದರಮೇಲೆ, ಇವರು ಫಿಸಿಕಲ್ ಟಾರ್ಗೆಟ್ ಮತ್ತು ಹಣ ಖರ್ಚು ಮಾಡಿದ್ದು ಸರಿಯೋ ಅಥವಾ ಹಿಂದೆ ಫಿಸಿಕಲ್ ಟಾರ್ಗೆಟ್ ಹಣ ಖರ್ಚು ಮಾಡಿದಂಥದ್ದನ್ನು ತಮ್ಮ ಗಮನಕ್ಕೆ ತರುತ್ತೇನೆ. ನೀವು ಯಾವುದನ್ನು ಸರಿ ಎಂದು ಹೇಳುತ್ತೀರೋ, ಅದನ್ನು ನಾನು ಒಪ್ಪುತ್ತೇನೆ. ಅಧ್ಯಕ್ಷರೆ ತಮ್ಮ ಗಮನಕ್ಕೆ ತರುತ್ತೇನೆ, 6ನೇ ಪ್ಲಾನ್‌ನಲ್ಲಿ 1982-85ರಲ್ಲಿ ಫೈನಾನ್‌ಷಿಯಲ್ ಇಂಪ್ರೂವ್‌ಗೆ 5 ವರ್ಷಗಳಲ್ಲಿ ಖರ್ಚಾದ ಹಣ 582 ಕೋಟಿ ರೂಪಾಯಿಗಳು ಮೈನರ್ ಇರಿಗೇಷನ್‌ಗೆ 95 ಕೋಟಿ ರೂಪಾಯಿಗಳು ಒಟ್ಟು677ಕೋಟಿ ರೂಪಾಯಿಗಳು. ಅಚೀವ್‌ಮೆಂಟ್ 1.96ಲಕ್ಷ ಹೆಕ್ಟೇರ್ ಅಂದರೆ 2 ಲಕ್ಷ ಹೆಕ್ಟೇರ್. ಅಂದರೆ ಪ್ರತಿವರ್ಷ ಆ್ಯವರೇಜ್ ನಾವು 125 ಕೋಟಿ ಅಥವಾ 130 ಕೋಟಿ ಎಂದು ಇಟ್ಟು ಕೊಳ್ಳೋಣ. ಆ್ಯವರೇಜ್ ಅಲ್ಲಿ ಅಚೀವ್‌ಮೆಂಟ್ ಅಂದರೆ ನೂರು ಕೋಟಿ ರೂಪಾಯಿಗಳಿಗೆ ಅಚೀವ್‌ಮೆಂಟ್ ಸಾಧಾರಣವಾಗಿ 20ರಿಂದ 30 ಸಾವಿರ ಹೆಕ್ಟೇರ್ಸ್. ಆಮೇಲೆ 7ನೇ ಪ್ಲಾನ್, ಅದುರಲ್ಲಿ 1,101 ಕೋಟಿ. ಇದರಲ್ಲಿ ಅಚೀವ್‌ಮೆಂಟ್ ಎಷ್ಟು ಎಂದರೆ 1.5 ಲಕ್ಷ ಹೆಕ್ಟೇರ್ಸ್. 1990-91ರಲ್ಲಿ 266 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದು, 27ಸಾವಿರ ಹೆಕ್ಟೇರ್ಸ್ ನೀರಾವರಿ ಮಾಡಿದ್ದು. ಆಮೇಲೆ 1991-92ರಲ್ಲಿ 375 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದು, ಸುಮಾರು 42ಸಾವಿರ ಹೆಕ್ಟೇರ್ಸ್ ನೀರಾವರಿ ಮಾಡಿದ್ದು. ಆಮೇಲೆ 1992-93ನಲ್ಲಿ ಸುಮಾರು 524 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, 44 ಸಾವಿರ ಹೆಕ್ಟೇರ್ ಇವತ್ತಿನದಿವಸ ನೀರಾವರಿ ಮಾಡಿದ್ದು. 1993-94ರಲ್ಲಿ 707ಕೋಟಿ ರೂಪಾಯಿಗಳನ್ನು ಖರ್ಚುಮಾಡಿದ್ದು ನೀರಾವರಿ ಮಾಡಿದ್ದು 70 ಸಾವಿರ ರೂಪಾಯಿಗಳನ್ನು ಖರ್ಚುಮಾಡಿದ್ದು ನೀರಾವರಿ ಮಾಡಿದ್ದು 49 ಸಾವಿರ ಹೆಕ್ಟೇರ್ಸ್. ಆಮೇಲೆ 1996-97ಕ್ಕೆ 1,369 ರೂಪಾಯಿಗಳಿಗೆ ಕೋಟಿ 36 ಸಾವಿರ ಹೆಕ್ಟೇರ್ಸ್. ನಿಮ್ಮ ಫಿಸಿಕಲ್ ಅಚೀವ್‌ಮೆಂಟ್ ನೋಡಿ. ಇದರಲ್ಲಿ ದುಡ್ಡು ಪೋಲಾಗಿದೆ ಎಂದು ತಿಳಿದುಕೊಳ್ಳೋಣ್ವಾ? ಅಥವಾ ನೀವು ಖರ್ಚು ಮಾಡತಕ್ಕಂಥ ನಿಮ್ಮ ಫಿಸಿಕಲ್ ಟಾರ್ಜೆಂಟ್‌ನ್ನು ಅಚೀವ್ ಮಾಡಿಲ್ಲ ಎಂದು ತಿಳಿದುಕೊಳ್ಳೋಣ್ವಾ ಎನ್ನತಕ್ಕಂಥಾದ್ದು ಹೇಳಿ. ನೀವು ಅದನ್ನೇ ಹೇಳಿದಿರಿ, ಪಡೆದುಕೊಂಡಿರಾ ಅದಕ್ಕೆ? ನಾವೇನು ಹೇಳಿದ್ದೇವೆ? ನೀವು ಇಷ್ಟು ಹಣ ಇಟ್ಟಿದ್ದರೂ ಕೂಡ ಹಿಂದಿನ ಫಿಸಕಲ್ ಅಚೀವ್‌ಮೆಂಟ್‌ಗೆ,

ನಿಮ್ಮ ಟಾರ್ಗೆಟ್‌ಗೆ ಹೊಂದಾಣಿಕೆ ಇಲ್ಲ. ನಾವು 1,500 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. ಹಿಂದೆ ಯಾವ ಸರ್ಕಾರ ಇಷ್ಟು ಮಾಡಿದೆ? ಹೇಳಿ ಎಂದು ಇಲ್ಲಿ ಹೇಳಿದ್ದೇ ಹೇಳಿದ್ದು. ಈ ಪುಸ್ತಕವನ್ನು ನೀವು ಓದಿಕೊಂಡಿದ್ದೀರೋ ಇಲ್ಲವೋ ನನಗೆ ಗೊತ್ತಿಲ್ಲ. ನೀವು ಕೊಟ್ಟಿದ್ದೇ. ಅದಕ್ಕೆ ಅಧ್ಯಕ್ಷರೇ, ಇವತ್ತು ಹೇಳುವುದು ಒಂದು. ಇದರಲ್ಲಿ ಏನಾಗುತ್ತದೆ ಎಂದರೆ, ಇದು ಕ್ಲಿಯರ್ ಕೇಸ್. ನೀವು ಹಣ ಎಷ್ಟು ಖರ್ಚುಮಾಡಿದ್ದೀರಿ, ಅದಕ್ಕೆ ತಕ್ಕಂತೆ ನಿಮ್ಮ ಫಿಸಿಕಲ್ ಟಾರ್ಗೆಟ್ ಅಚೀವ್ ಆಗಲಿಲ್ಲ ಎಂದರೆ ಇದರಲ್ಲಿ ಹಣ ಪೋಲಾಗಿದೆ. ಇಲ್ಲ, ನೀವು ಎಕ್ಸ್‌ಟ್ರಾಕ್ಟ್ ಮಾಡತಕ್ಕಂಥ ಕೆನಲ್ ಕಂಟ್ರಾಕ್ಟರ್ಸ್‌ಗೆ ಹೆಚ್ಚಿನ ಹಣವನ್ನು ಕೊಟ್ಟಿರಬೇಕು, ಇಲ್ಲಿ ಅವರು ಕ್ಲೇಮ್ಸ್‌ನ್ನು ಕೊಟ್ಟಿರಬೇಕು, ಒಂದು. ಇಲ್ಲ, ದುಬಾರಿ ಕೆಲಸ ಮಾಡಿಸಿರಬೇಕು ಒಂದು. ಇಲ್ಲದಿದ್ದರೆ ಇಷ್ಟೊಂದು ಹಣ ಖರ್ಚುಮಾಡಿ ಇಷ್ಟು ಅಚೀವ್‌ಮೆಂಟ್ ಇವತ್ತಿನ ದಿವಸ, 36 ಸಾವಿರ ಹೆಕ್ಟೇರ್ಸ್‌ಗೆ ಬರುತ್ತೇವೆ ಎಂದರೆ, ಇದರ ಮೇಲಿಂದಲೇ ನಾನು ಸ್ಪಷ್ಟವಾಗಿ ಹೇಳಬೇಕಾಗಿದೆ, ಹಣ ಯಾವರೀತಿಯಾಗಿ ಇವತ್ತಿನದಿವಸ ಪ್ರಾಜೆಕ್ಟ್‌ಗಳಲ್ಲಿ ಪೋಲಾಗುತ್ತಿದೆ, ಅದರ ಕಡೆ ಸರ್ಕಾರದ ಗಮನ ಏಕೆ ಇಲ್ಲ? ಅನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ತಮಗೆ ಕೇಳುತ್ತಿದ್ದೇನೆ. ಅದಕ್ಕೆ ಈ ಮಾತು ಹೇಳಿದರೆ, ಅದು ಕನ್ಸ್ಟ್ರಕ್ಟೀವ್ ಕ್ರಿಟಿಸಿಸಮ್ಮೋ ಎಂಥಾದ್ದೋ ನನಗೆ ಗೊತ್ತಿಲ್ಲ. ಆದ್ದರಿಂದ ಇದು ತಾವೇ ಕೊಟ್ಟಿರತಕ್ಕಂಥ ಫಿಗರ್ಸ್. 1961ರಿಂದ ಇಲ್ಲಿಯವರೆಗೆ ನೋಡಬಹುದು. ಇದನ್ನು ನೋಡಿದ ಮೇಲೆ ನಮಗೆ ಗೊತ್ತಾಗುತ್ತದೆ. ಇಲ್ಲ, ಅಲ್ಲಿ ಸರಿಯಾಗಿ ಕೆಲಸ ನಡೆದಿಲ್ಲ ಎನ್ನುವುದು ಒಂದು. ಇಲ್ಲದಿದ್ದರೆ ಕೆಲಸ ಮಾಡತಕ್ಕಂಥ ಕೆಲಸಗಳಿಗೆ ಕ್ಲೇಮ್ಸ್ ಹೆಚ್ಚಿಗೆ ಕೊಡುತ್ತಿದ್ದಾರೆ ಎನ್ನತಕ್ಕಂಥಾದ್ದು ಒಂದು. ಮೂರನೇಯದು ಸುಮ್ಮನೆ ಬಿಲ್ ಮಾಡಿ ತೆಗೆದುಕೊಳ್ಳತಕ್ಕಂಥ ಜನ ಇದ್ದಾರೆ ಎನ್ನತಕ್ಕಂಥಾದ್ದು ಮಾತು ಒಂದು. ನಾನು ಹಿಂದೆ ಇಲ್ಲಿ ಪ್ರಸ್ತಾಪ ಮಾಡಿದೆ. ಆಪರೇಶನ್ ಅಂಡ್ ಮೈನ್‌ಟೆನೆನ್ಸ್ ಎಂದು ಹೇಳಿ ಅದು ಯಾವುದೋ ಒ.ಎಂ.ಡಿ. ಅದರ ಬಗ್ಗೆ ನಿಮ್ಮ ಗಮನಕ್ಕೆ ತರಬೇಕಾದರೆ ನನ್ನ ಹತ್ತಿ ಲೆಟರ್ ಇದೆ. ಅದು ಓದು ಅಂದರೆ ಓದುತ್ತೇನೆ. ಏಕೆಂದರೆ ಟೈಮ್ ಆಗುತ್ತದೆ. ಅಲ್ಲಿ ಏನಿಲ್ಲ ಕೆಲವು ಕಂಟ್ರಾಕ್ಟರ್ಸ್, ಕೆಲವು ಲೀಡರ್ಸ್, ಕೆಲವು ಪುಢಾರಿಗಳು ಆ ಇಂಜಿನಿಯರ್ ಹತ್ತಿರ ಹೋಗುವುದು, ಫಾಲ್ಸ್ ಬಿಲ್ಸ್ ಬರೆಸುವುದು, ಹಣ ಕ್ಲೇಮ್ ಮಾಡುವುದು, ಎಷ್ಟು? ಒಂದು ಕೋಟಿ ರೂಪಾಯಿ ನನಗೆ ಇವತ್ತು ಬಿಲ್ ಮಾಡಿ ಕೊಡು. ಈಗ ಒಬ್ಬನಿಗೆ ಒಂದು ಮಾಡಿಕೊಟ್ಟರೆ 'ಬಿ' ಎನ್ನುವನು ಅಲ್ಲಿ ಹೋಗುತ್ತಾನೆ. ಅವನಿಗೆ ಹೇಗೆ ಮಾಡಿಕೊಟ್ಟಿರಿ, ನನಗೆ ಏಕೆ ಇಲ್ಲ? ಎಂದು ಕೇಳುತ್ತಾನೆ. ಹೀಗೆ ಆ ಒಂದು ಆಪರೇಷನ್ ಅಂಡ್ ಮೈಂಟೆನೆನ್ಸ್‌ನಲ್ಲಿ ಹತ್ತು ಇಪ್ಪತ್ತು ಕೋಟಿ ರೂಪಾಯಿ ಪ್ರತಿವರ್ಷ ಬಿಲ್ ಆಗುವುದು. ಇದು ಕೇಸ್ ಇದೆ. ಮೊನ್ನೆ ಕೂಡ ಅವರಿಗೆ ಕೊಟ್ಟಿದ್ದೇವೆ. ಎಲ್ಲೆಲ್ಲಿ ಆಗಿದೆ ಎಂದು ಹೇಳಿದ್ದೇವೆ. ಭೀಮರಾಯನ ಗುಡಿಯ ಕೆನಾಲ್‌ನಲ್ಲಿ ಆಗಿದೆ. ಮಣ್ಣು ತೆಗೆಯುತ್ತೇವೆ ಎಂದು ಹೇಳಿ 50 ಲಕ್ಷ ರೂಪಾಯಿಗೆ ಒಂದು ಎಸ್ಟಿಮೇಟ್ ಮಾಡಿಸುವುದು. ಅಲ್ಲಿ 50 ಸಾವಿರ ರೂಪಾಯಿಯ ಕೆಲಸವೂ ಆಗುವುದಿಲ್ಲ. ಹತ್ತು ಲಕ್ಷ ರೂಪಾಯಿ ಬಿಲ್ ತೆಗೆದುಕೊಳ್ಳುವುದು. ಆಮೇಲೆ ಬಳ್ಳಾರಿ ಜಾಲಿ ಇರುತ್ತದಲ್ಲ, ಕೆನಾಲ್ ಪಕ್ಕದಲ್ಲಿ ಬಳ್ಳಾರಿ ಜಾಲಿ ಕಡಿಯಲಿಕ್ಕ ಎಂದು ಹೇಳಿ ಒಂದು ಎಸ್ಟಿಮೇಟ್ ಮಾಡಿಸುವುದು. ಜಾಲಿ ಅಲ್ಲೇ ಇರುತ್ತದೆ. ಆದರೆ ಬಿಲ್ಲು ಒಂದೈದು ಲಕ್ಷ ರೂಪಾಯಿಗೆ ಮಾಡಿಸುವುದು. ಹೀಗೆ ತುಂಡುತುಂಡುಮಾಡಿ ಪ್ರತಿಯೊಬ್ಬ ಮುಖಂಡರಿಗೆ ಯಾರು ಹೆದರಿಸುತ್ತಾರೋ, ಯಾರು

ಅವರಮೇಲೆ ಇನ್‌ಫ್ಲ್ಯೂಯೆನ್ಸ್ ಹಾಕುತ್ತಾರೋ, ಪ್ರಭಾವ ಬೀರುತ್ತಾರೋ, ಅವರೆಲ್ಲರಿಗೂ ಕೂಡ ಹಣ ಸಪ್ಲೈ ಮಾಡತಕ್ಕಂಥ ಇದೊಂದು ಎಜೆನ್ಸಿ ಇದೆ. ಅದಕ್ಕೆ ನಾನು ಹೇಳಿದೆ. ಇದರ ಬಗ್ಗೆ ಕೆಲವು ಜನ ಬಹಳ ಪರ್ಟಿಕ್ಯುಲರ್ ಆಗಿರುತ್ತಾರೆ. ಪಾರ್ಟಿ, ಪಾಲಿಟಿಕ್ಸ್ ಅದ್ಯಾವುದೂ ಮಾತನಾಡಬೇಡಿ. ಕೆಲವು ಜನರ ಹುನ್ನಾರ ಅದೇ ಇದೆ.

(ಮಾನ್ಯ ಸದಸ್ಯರಾದ ಶ್ರೀ ಚಂದ್ರಕಾಂತ ಬೆಲ್ಲದ್ ಅವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು.)

ಆ ಪಾರ್ಟಿಯನ್ನು ಏಕೆ ಉಪಯೋಗ ಮಾಡಿಕೊಳ್ಳುತ್ತಾರೆ ಎಂದರೆ, ನಿಮ್ಮ ಪಾರ್ಟಿ ಇರಬಹುದು, ನಮ್ಮ ಪಾರ್ಟಿ ಇರಬಹುದು, ಬಿ.ಜೆ.ಪಿ. ಇರಬಹುದು, ರೈತ ಸಂಘ ಇರಬಹುದು. ಅವರು ಏಕೆ ಲೇಬಲ್ ಉಪಯೋಗ ಮಾಡಿಕೊಳ್ಳುತ್ತಾರೆ ಎಂದರೆ ಸ್ವಾಮಿ, ಅವರು ಹಾಗೆ ಮಾಡಿದ್ದಾರಲ್ಲ, ನಮ್ಮವರಿಗೆ ಏಕೆ ಅನುಕೂಲ ಆಗಬಾರದು? ಆದ್ದರಿಂದ ತಾವು ನೇರವಾಗಿ ಈ ಆಪರೇಶನ್ ಅಂಡ್ ಮೈನ್‌ಟೆನೆನ್ಸ್ ಎನ್ನತಕ್ಕಂಥ ಸೆಕ್ಷನ್ ಭೀಮರಾಯನಗುಡಿಯಲ್ಲಿ ಏನಿದೆ ಅದರಬಗ್ಗೆ ತಾವು ಲೋಕಾಯುಕ್ತಕ್ಕಾದರೂ ಕಳುಹಿಸಿ ಇಲ್ಲದಿದ್ದರೆ ವಿಜಿಲೆನ್ಸ್‌ನವರಿಗಾದರೂ ಕಳಿಸಿ ಐದಾರು ವರ್ಷದ ಎಲ್ಲ ರಿಪೋರ್ಟ್ಸ್ ಸೀಜ್ ಮಾಡಿಸಿ. ಇವತ್ತಿನದ್ದೇ ಎಂದು ನಾನು ಹೇಳುವುದಿಲ್ಲ. ನಿಮ್ಮ ಮೂರು ವರ್ಷದ್ದೂ ಇರಲಿ, ಹಿಂದೆ ಐದು ವರ್ಷದ್ದೂ ಇರಲಿ. ಎಲ್ಲ ಲೆಕ್ಕತೆಗೆಸಿ, ಯಾರ್‍ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಕೊಡಿ. ಇಲ್ಲ ಅಂದರೆ ತಾವು ಕೂಡ ಅನೇಕ ಸಾರಿ ಅಲ್ಲಿಗೆ ಹೋಗಿದ್ದೀರಿ. ಮೂರು ನಾಲ್ಕು ಸಲ ವಿಸಿಟ್ ಮಾಡಿದ್ದೀರಿ. ಏಕೆ ಅದನ್ನು ಇನ್ನೂ ನಿಲ್ಲಿಸಿಲ್ಲ? ಇನ್ನೂ ನಡೆದಿದೆ, ನಿಂತಿಲ್ಲ. ಲೋಕಾಯುಕ್ತಕ್ಕೆ ಒಂದು ಸಾರಿ ಹೋಯಿತು, ಒಂದು ಸಾರಿ ಸ್ಟೇಟ್‌ಮೆಂಟ್ ಬಂದಮೇಲೆ. ಮತ್ತೆ ಪುನಃ ಪ್ರೆಶರ್ ಬಂದಮೇಲೆ, ಪುನಃ ಅದೇರೀತಿಯಾಗಿ ನಡೆದಿದೆ. ವೀಕ್ ಆದ ಚೀಫ್ ಇಂಜಿನಿಯರ್ ಹೋದರು ಅಂದರೆ ಅವನ ಜೀವ ತಿನ್ನುತ್ತಾರೆ. ಶರ್ಟ್ ಹಿಡಿಯುತ್ತಾರೆ, ಹೆದರಿಸುತ್ತಾರೆ ನೀನು ಮಾಡಿಕೊಡಲಿಲ್ಲ ಎಂದರೆ ಇಲ್ಲಿ ಬುದುಕುವುದಕ್ಕಾಗುವುದಿಲ್ಲ ಎಂದು ಹೇಳಿ. ಇಲ್ಲ, ರಾತ್ರಿ ಅವನಿಗೆ ಕಲ್ಲು ಹೊಡೆದು ಓಡಿಸುತ್ತಾರೆ. ಇಲ್ಲ, ಅವನಿಗೆ ಅಲ್ಲಿ ಕೆಲಸ ಮಾಡುವುದಕ್ಕೆ ಬಿಡುವುದಿಲ್ಲ. ಈ ರೀತಿಯಾದರೆ ಆ ಪ್ರಾಜೆಕ್ಟ್‌ಗಳು ಹೇಗೆ ಕಂಪ್ಲೀಟ್ ಆಗಬೇಕು? ನಾವೇನು ನಿಂತು ಇದನ್ನು ಮಾಡುವುದಕ್ಕೆ ಆಗುವುದಿಲ್ಲ. ಮತ್ತೊಂದು ಏನಾಗಿದೆ ಎಂದರೆ ಆ ಪ್ರಾಜೆಕ್ಟ್‌ನಲ್ಲಿ ಕೆಲವು ವೆಸ್ಟೆಡ್ ಇಂಟರೆಸ್ಟ್ ಅಲ್ಲಿ ಡೆವಲಪ್ ಆಗಿದೆ. ಅವರು ತಮಗೆ ಬೇಕಾದಂಥ ಇಂಜಿನಿಯರ್ಸ್‌ನ್ನು ಹಾಕಿಕೊಂಡು ಹೋಗುವುದು. ಅವರ ಮಾತು ಕೇಳಲಿಲ್ಲ ಎಂದರೆ ಅಲಿಗೇಶನ್ ಮಾಡುವುದು, ಹೀಗೆ ಮಾಡುತ್ತಾರೆ. ಈಗ ಅವನೇನು ಮಾಡುತ್ತಾನೆ? ಹೋಗಲಪ್ಪ, ಇವರ ಕಿರಿಕಿರಿ ಏಕೆ ಎಂದು ಅವರು ಏನಾದರೂ ಮಾಡಿಕೊಂಡು ಹೋಗಲಿ. ಅವನಿಗೆ ಇಷ್ಟು ಕೊಟ್ಟುಬಿಡುತ್ತಾರೆ, ಇವರು ಮೇಜರ್ ವರ್ಕ್ ಮಾಡಿಕೊಂಡು ವರ್ಷಕ್ಕೆ 10 ಕೋಟಿ ರೂಪಾಯಿಗಳು ಇದೇ ರೀತಿಯಾಗುತ್ತದೆ. ಈ ಸಲ 24 ಕೋಟಿ ರೂಪಾಯಿಗಳು ಏನೋ ಇವರು ಇಟ್ಟಿದ್ದಾರೆ. ಅದು ಹೈಯೆಸ್ಟ್ ಬಜೆಟ್, ಅದಕ್ಕೆ ನಾನು ಏನು ಹೇಳುತ್ತೇನೆ ಎಂದರೆ, ಇದು ಕೋಟಿಗಟ್ಟಲೆ ಪೋಲಾಗುವುದರಿಂದಲೇ ನೀವು ಫಿಸಿಕಲ್ ಟಾರ್ಗೆಟ್ ಅಚೀವ್ ಮಾಡುತ್ತಿಲ್ಲ,

ಮತ್ತೆ ಎಲ್ಲವೂ ಕಂಟ್ರಾಕ್ಟರ್ ಸಪ್ಲೈ ಮಾಡುವುದೇ. ಬೇರೆ ಯಾವುದಾದರೂ ಅವರಿಗೆ ನೀವು ಕೆನಾಲ್ ಕೆಲಸ ಮಾಡಿರಿ, ಹಾರ್ಡ್‌ವರ್ಕ್ ಯಾವುದಾದರೂ ಮಾಡಿರಿ ಎಂದರೆ, ಒಂದೂ ಕೆಲಸವನ್ನು ಅವರು ಮಾಡುವುದಿಲ್ಲ. ಅವರಿಗೆ ಏನು ಬೇಕು ಎಂದರೆ, ಪುಢಾರಿಗಳ ಒಂದು ಇನ್ ಫ್ಲುಯೆನ್ಸ್‌ನಿಂದ, ಲೀಡರ್ಸ್ ಇನ್‌ಫ್ಲ್ಯುಯೆನ್ಸ್‌ನಿಂದ ಅವನಿಗೆ ಒಂದು ಹತ್ತು ಲಕ್ಷವೋ ಅಥವಾ ಒಂದು ಕೋಟಿಯೋ ಸಪ್ಲೈ ಇದೆ, ಸಪ್ಲೈ ತೆಗೆದುಕೊಂಡು ಅವನಿಗೆ ಬೇಕಾದ ಸಾಮಾನುಗಳು ಬೋಲ್ಟು, ನೆಟ್ಟು, ಯಾವುದೋ ಒಂದು ಟೈರು, ಟ್ಯೂಬು ಇಂಥಾದ್ದು ಒಂದು ಆರ್ಡರ್ ತೆಗೆದುಕೊಳ್ಳುವುದು. ಅದು ಐದೈದು ಆರಾರು ವರ್ಷಗಳಿಗೆ ಆಗುವುದನ್ನು ಒಮ್ಮೆಲೆ ಪರ್ಚೇಸ್ ಮಾಡುವುದು. ವಾಸ್ತವವಾಗಿ ಅವರಿಗೆ ಅಷ್ಟು ಬೇಕಾಗಿರುವುದಿಲ್ಲ. ಆದರೆ ಅದನ್ನು ಸ್ಟೋರ್‌ಗೆ ತಂದು ಬಿಸಾಕುವುದು. ಏಕೆಂದರೆ ಅದಕ್ಕೆ ಒತ್ತಾಯ ಇರುತ್ತದೆ. ಇಲ್ಲ, ಲೋಕಲ್ ಲೀಡರ್ಸ್ ಆದರೂ ಒತ್ತಾಯ ಮಾಡುತ್ತಾರೆ, ಇಲ್ಲ ಸರ್ಕಾರದ ವತಿಯಿಂದಲಾದರೂ ಒತ್ತಾಯ ಹೋಗುತ್ತಿರಬೇಕು. ಇಲ್ಲವಾದರೆ ಐದೈದು ಆರಾರು ವರ್ಷಕ್ಕೆ ಬೇಕಾದಂಥ ಸಾಮಾನು ತೆಗೆದುಕೊಳ್ಳತಕ್ಕಂಥ ಅವಶ್ಯಕತೆ ಏನಿದೆ? ನಿಮಗೆ ಬೇಕಾದರೆ ಸ್ಟೋರ್ಸ್ ಪರ್ಚೆಸ್ ಡಿಪಾರ್ಟ್‌ಮೆಂಟ್ ಇದೆ ಅಲ್ಲಿ ನೀವು ದರವನ್ನು ನಿಗದಿ ಮಾಡಿರುತ್ತೀರಿ. ಅದರ ಪ್ರಕಾರ, ಆ ರೇಟಿನ ಪ್ರಕಾರ ಪರ್ಚೇಸ್ ಮಾಡುವುದಕ್ಕೆ ಯಾವಾಗ ಬೇಕೋ ಆಗ ತೆಗೆದುಕೊಳ್ಳಬೇಕು ಅನ್ನತಕ್ಕಂಥಾದ್ದು ಮಾಡಿ. ಅದು ಬಿಟ್ಟು ಏನಾಗುತ್ತದೆ ಎಂದರೆ, ಈ ಎಲ್.ಒ.ಸಿ. ಕೊಡುವುದು ನೀವು ಏನು ಮಾಡುತ್ತೀರಿ ಎಂದರೆ, ಹೆಚ್ಚಿನ ಹಣ ನಮ್ಮದು ಫೆಬ್ರವರಿ ಮಾರ್ಚ್‌ನಲ್ಲಿ ಹೋಗುತ್ತದೆ. ಫೆಬ್ರವರಿ ಮಾರ್ಚ್‌ನಲ್ಲಿ ಹೋದಾಗ ಈ ಕಂಟ್ರಾಕ್ಟರ್ಸ್ ಏಳು-ಎಂಟು ತಿಂಗಳು ಏನೂ ಕೆಲಸ ಮಾಡುವುದಿಲ್ಲ. ಇವರ ಕೆಲಸ ಯಾವಾಗ ಎಂದರೆ, ಈ ಎಲ್.ಓ.ಸಿ. ಹೋದಮೇಲೆ ವರ್ಷದ ಕೊನೆಯಲ್ಲಿ ಇದ್ದಾಗ. ಜನವರಿ, ಫೆಬ್ರವರಿ, ಮಾರ್ಚ್- ಈ ಮೂರು ತಿಂಗಳಲ್ಲಿ ಎಲ್ಲ ಕಂಟ್ರಾಕ್ಟರ್ಸ್ ಆ್ಯಕ್ಟೀವ್ ಇರುತ್ತಾರೆ, ಇಂಜಿನಿಯರ್ಸ್ ಆ್ಯಕ್ಟೀವ್ ಇರುತ್ತಾರೆ. ಆಗ ಆರ್ಡರ್ ಕೊಡುವುದು, ಆರ್ಡರ್ ತೆಗೆದುಕೊಳ್ಳುವುದು ಆಮೇಲೆ ಮನೆಗೆ ಹೋಗುವುದು, ಆ ಸಾಮಾನುಗಳನ್ನು ಎಲ್ಲಿಯಾದರೂ ಒಂದು ಸ್ಟೋರ್‌ನಲ್ಲಿ ಬಿಸಾಕಿಬಿಡುವುದು. ಜಾಗ ಇರಲಿಲ್ಲವೆಂದರೂ ಕೂಡ ತೆಗೆದುಕೊಳ್ಳುವುದು. ಅವಶ್ಯಕತೆ ಇರಲಿಲ್ಲವೆಂದರೂ ಕೂಡ ತೆಗೆದುಕೊಳ್ಳುವುದು. ಹೀಗಾಗಿ ಕೋಟ್ಯಾಂತರ ರೂಪಾಯಿ ಇವತ್ತಿನ ದಿವಸ ಅಲ್ಲಿ ಅವ್ಯವಹಾರ ನಡೆದಿದೆ. ಅದಕ್ಕೇ ನಾನು ಹೇಳಿದೆ, ನೀವು ನಿರ್ದಿಷ್ಟವಾಗಿ ಇರುವುದು ಹೇಳಿ ಎಂದಿರಿ. ಇದರಲ್ಲಿ ಎಲ್ಲವೂ ಕೂಡ ಯು.ಕೆ.ಪಿ. ಯಲ್ಲಿ ನಿರ್ದಿಷ್ಟವಾಗಿ ನಡೆದಿರುವುದೇ ಆಗಿದೆ.

12.30 ಪಿ.ಎಂ.

ಇದು ಒಂದೇ ಅಲ್ಲ. ತಮಗೆ ಗೊತ್ತಿದೆ, ಪೀಸ್ ಕಾಂಟ್ರಾಕ್ಟ್ ಕೂಡ ಕೊಟ್ಟಿದೆ. ಅದಕ್ಕೆ ತಾವೇನೋ ಸಮರ್ಥನೆ ಮಾಡಿಕೊಂಡಿರಿ. ಬಹುಶಃ ಅದು ನಿಮಗೆ ನುಂಗಲಾರದ ತುತ್ತು ಇರಬಹುದು. ನೀವೇ ಹೇಳಿ, ಯಾವ ಕಾಲದಲ್ಲಿ ತರಾತುರಿಯಲ್ಲಿ ಒಂದು ರಾತ್ರಿಯಲ್ಲಿ 300-400 ಕೋಟಿ ರೂಪಾಯಿಗಳ ಪೀಸ್ ವರ್ಕ್ಸ್ ಕಾಂಟ್ರಾಕ್ಟ್ ಕೊಟ್ಟಿದ್ದರು? ಕೆಲಸ ನಡೆಯಬೇಕೆಂದು ನೀವು ಮುಗ್ಧ ಮನಸ್ಸಿನಿಂದ ಕೊಟ್ಟರೆ ನಾನು ಅಡ್ಡಿ ಬರುವುದಿಲ್ಲ. ಆದರೆ, ಕೊಡಬೇಕೆಂದು ಹೇಳಿ ರಾತ್ರಿಯಲ್ಲಿ ತರಾತುರಿಯಲ್ಲಿ ಕರೆದು, ಕೆಲವೇ ಜನರಿಗೆ ಪೀಸ್ ಕಾಂಟ್ರಾಕ್ಟನ್ನು ಅಪ್ರೂವ್ ಮಾಡಿಸಿ ಕೊಟ್ಟಿದ್ದೀರಿ. ಇದು 200-300 ಕೋಟಿ

ರೂಪಾಯಿಗಳ ವ್ಯವಹಾರ. ನಾರಾಯಣಪುರ ಬಲದಂಡೆ ಕಾಲುವೆ, ಜೇವರ್ಗಿ ಬ್ರಾಂಚ್‌ನಲ್ಲಿ, ಇಂಡಿ ಬ್ರಾಂಚ್‌ನಲ್ಲಿ, ಇವೆಲ್ಲವನ್ನೂ ಪೀಸ್ ಕಾಂಟ್ರಾಕ್ಟ್ ಮೇಲೆ ತಾವು ಕೊಟ್ಟಿದ್ದೀರಿ. ಅಂದಾಗ, ನಾನು ಅದಕ್ಕೇ ನಿಮಗೆ ಹೇಳಿದೆ. ಇದರ ಬಗ್ಗೆ ಲೋಕಾಯುಕ್ತ ಎನ್‌ಕ್ವೈರಿ ಮಾಡಿಸಿ. ಇದರಲ್ಲಿ ನೀವಂತು ಅಲಾಟ್ ಮಾಡಿಲ್ಲ. ನಿಮ್ಮದು ತಪ್ಪಿಲ್ಲವೆಂದು ಹೇಳುತ್ತೀರಿ. ಬೇರೆಯವರು ಕಾನೂನಿನ ಪ್ರಕಾರ ಮಾಡಿದ್ದಾರೆಂದು ಹೇಳಿ, ಸಮರ್ಥನೆ ಮಾಡಿದ್ದೀರಿ. ಕಾನೂನಿನ ಪ್ರಕಾರ ಅಲಾಟ್‌ಮೆಂಟ್ ಮಾಡಿದರೆ, ಮತ್ತು ಕಾನೂನಿನ ಪ್ರಕಾರ ಇಂಜಿನಿಯರುಗಳು ಆಲಾಟ್‌ಮೆಂಟ್ ಕೊಟ್ಟರೆ, ಇವತ್ತು ಅದರ ಎನ್‌ಕ್ವೈರಿ ಮಾಡುವುದಕ್ಕೆ ಹಿಂದೆ ಮುಂದೆ ಏಕೆ ನೋಡುತ್ತೀರಿ? ಏಕೆಂದರೆ, ಅಲ್ಲಿ ರೇಟ್ ಏನಿದೆ, ಒರಿಜಿನಲ್ ರೇಟ್ ಏನು ಫಿಕ್ಸ್ ಆಗಿತ್ತು, ಅದಕ್ಕಿಂತಲೂ 156 ಪರ್ಸೆಂಟ್, 150 ಪರ್ಸೆಂಟ್, ಕೆಲವು ಕಡೆ 100 ಪರ್ಸೆಂಟ್ ಎನ್ ಹ್ಯಾನ್ಸ್‌ಮೆಂಟ್ ಆಯಿತು. ಅಂದಾಗ, ಯಾವರೀತಿಯಾಗಿ ಎಸ್ಟಿಮೇಟ್ ಆಯಿತು? ಏನೋ ಅಲ್ಪಸ್ವಲ್ಪ ತಪ್ಪಾಗುತ್ತವೆ, ಇಲ್ಲವೆಂದಲ್ಲ. ಏಕೆಂದರೆ, ಇಂತಹ ದೊಡ್ಡ ಪ್ರಾಜೆಕ್ಟ್‌ಗಳು ನಡೆದಾಗ ತಪ್ಪುಗಳಾಗುತ್ತವೆ. ಆದರೆ, ಅದನ್ನ ಪುನಃ ನೀವು ಬೋರ್ಡ್ ಮುಂದೆ ತಂದು, ನಿಮ್ಮ ಚೀಫ್ ಇಂಜಿನಿಯರ್ ಬೋರ್ಡ್ ಮುಂದೆ ತಂದು ರ್ಯಾಟಿಫೈ ಮಾಡಿಕೊಂಡು, ನಾವು ಎಸ್ಟಿಮೇಟ್ ಮಾಡುವಾಗ ಈ ರೀತಿಯಾಗಿತ್ತು, ಇವತ್ತಿನ ಪರಿಸ್ಥಿತಿ ಈ ರೀತಿ ಇದೆ, ಎಂದು ಹೇಳಿ ಸ್ಥಳ ಪರೀಕ್ಷೆ ಮಾಡಿದಮೇಲೆ, ನಿಮ್ಮ ಎಲ್ಲಾ ಎಕ್ಸ್‌ಪರ್ಟ್ಸ್ ಸ್ಥಳ ಪರೀಕ್ಷೆ ಮಾಡಿದಮೇಲೆ, ಬೇಕಾದರೆ ಕಾರಣಗಳನ್ನು ಕೊಟ್ಟು ಬದಲಾವಣೆ ಮಾಡಬೇಕು. ಇವತ್ತು ಒಂದಲ್ಲ, ಎರಡಲ್ಲ ಸುಮಾರು 122 ಕಾಂಟ್ರಾಕ್ಟ್ಸ್ ಈ ರೀತಿಯಾಗಿ ಕೊಟ್ಟಿದ್ದೀರಿ. ಅದಕ್ಕೆ ನಾನು ನೇರವಾಗಿ ಕೇಳಿದೆ. ಇದರಲ್ಲಿ ತಾವು ಬೇಕಾದರೆ ಲೋಕಾಯುಕ್ತ ಎನ್‌ಕ್ವೈರಿ ಮಾಡಿಸಿ ಎಲ್ಲಾ ಹೊರಕ್ಕೆ ಬರಲಿ. ಇನ್ನು ಮುಂದೆ ಬೇರೆಯವರೂ ತಪ್ಪು ಮಾಡುವುದಕ್ಕೆ ಹೆದರುತ್ತಾರೆ. ಒಂದೇ ಸಲ 200-300 ಕೋಟಿ ರೂಪಾಯಿಗಳನ್ನು ಕುಂತಲ್ಲೇ ಒಂದೇ ರಾತ್ರಿ ಈ ರೀತಿಯಾಗಿ ಅಲಾಟ್‌ಮೆಂಟ್ ಮಾಡಿದರೆ ಜನರು ಬಿಡುವುದಿಲ್ಲ, ಸರ್ಕಾರ ಕೇಳುತ್ತದೆ ಎನ್ನತಕ್ಕಂಥ ಒಂದು ಭಾವನೆ ಬರುತ್ತದೆ. ಆಗಿದ್ದೆಲ್ಲಾ ಸರಿ ಎಂದು ಪ್ರತಿಪಾದನೆ ಮಾಡುತ್ತೀರೆಂದರೆ, ನಿಮ್ಮ ಫಿಜಿಕಲ್ ಟಾರ್ಗೆಟ್ ಈ ರೀತಿಯಾಗುತ್ತದೆ. ಹಣ ಎಷ್ಟು ಖರ್ಚಾಗುತ್ತದೆಂದು ನೀವು ಅದರ ಕಡೆಗೆ ನೋಡಬಾರದು. ಹಣ ಖರ್ಚಾಗುತ್ತಾ ಇದೆ, ನಾನು ಅಲಾಟ್‌ಮೆಂಟ್ ಮಾಡಿದ್ದೇನೆ ಎಂದು ಹೇಳಿ ನೀವು ಬರೀ ಹಣದ ಖರ್ಚನ್ನು ಮಾತ್ರ ನೋಡಿಕೊಂಡು ಭೌತಿಕ ಗುರಿ ಕಡೆ ನಿಮ್ಮ ಲಕ್ಷ್ಯ ಇಲ್ಲದೇ ಇದ್ದಾಗ, ಈ ರೀತಿಯಾಗಿ ನಾವು ಆ ಪ್ರಾಜೆಕ್ಟನ್ನು ಕೈಬಿಟ್ಟಹಾಗೆಯೇ. ಇವತ್ತಿನದಿವಸ ಸುಮ್ಮನೆ ಹೆಸರಿಗೆ ನಾವು ಮಾಡಿಕೊಂಡ ಹಾಗೆ. ಆದರೆ, ನಿಧಾನವಾಗಿ ನಾವಾಗಿಯೇ ಸೂಯಿಸೈಡ್ ಮಾಡಿದ ಹಾಗೆ, ದಯವಿಟ್ಟು ಇದರ ಕಡೆ ಗಮನಹರಿಸಿ, ಇದನ್ನು ರೆಫರ್ ಮಾಡಿ. ಮಾನ್ಯ ನಾಗೇಗೌಡರು ಜುಲೈ ತಿಂಗಳಲ್ಲಿ ಇದನ್ನು ಕೊಟ್ಟರು. ಅದರಲ್ಲಿ ಅವರೇ ಹೇಳಿದ್ದಾರೆ. ಏನೆಂದರೆ, "ಸರ್ಕಾರಿ ಆದೇಶ ಎಸ್‌ಐಡಿ 56 ಕೆ.ಬಿ.ಎನ್ 96, ದಿನಾಂಕ : 24-5-96 ಮುಖ್ಯ ಕಾಲುವೆ ಹಾಗೂ ಶಾಖಾ ಕಾಲುವೆ ಕೆಲಸಗಳು. ಇಂಡಿ ಶಾಖಾ ಕಾಲುವೆ ಕಿಲೋಮೀಟರ್ 121 ರಿಂದ ಕಿಲೋಮೀಟರ್ 150ರ ವರೆಗೆ 4 ಕಿಲೋ ಮೀಟರ್ ಟೆಂಡರ್ ಆಧಾರದ ಮೇಲೆ ತೆಗೆದುಕೊಳ್ಳುವುದನ್ನು ಹೊರತುಪಡಿಸಿ, ಉಳಿದುದೆಲ್ಲಾ ಪೀಸ್ ಕಾಂಟ್ರಾಕ್ಟ್. ಆಮೇಲೆ ಜೇವರ್ಗಿ ಶಾಖಾ ಕಾಲುವೆ, ಕಿಲೋಮೀಟರ್ 51 ರಿಂದ ಕಿಲೋಮೀಟರ್

70ರ ವರೆಗೆ ನಾರಾಯಣಪುರ ಬಲದಂಡೆ ಕಾಲುವೆ ಕಿಲೋಮೀಟರ್ 41ರಿಂದ ಕಿಲೋಮೀಟರ್ 70ರ ವರೆಗೆ ಮತ್ತು ಕಿಲೋಮೀಟರ್ 24ರಿಂದ ಕಿಲೋಮೀಟರ್35ರ ವರೆಗೆ. ಮೇಲೆ ಹೇಳಿದ ಮುಖ್ಯ ಕಾಲುವೆಗಳ ಭಾಗಗಳಲ್ಲಿ ವಿತರಣಾ ಕಾಲುಗಳು ಅಂದರೆ ಡಿಸ್ಟಿಬ್ಯೂಟರ್‌ಗಳು. ಆಮೇಲೆ ಸರ್ಕಾರಿ ಆದೇಶ, ಇದು ಯಾವುದೆಂದರೆ, 16 ಕೆಬಿಎ 96, ದಿನಾಂಕ : 24-5-96 ವಿತರಣಾ ಕಾಲುವೆಗಳು ಈ ಕೆಳಗೆ ಹೇಳಿದ ಭಾಗಗಳಲ್ಲಿ ಇಂಡಿ ಶಾಖಾ ಕಾಲುವೆ ಕಿಲೋಮೀಟರ್ 64 ರಿಂದ ಕಿಲೋಮೀಟರ್120ರವರೆಗೆ. ಜೇವರ್ಗಿ ಶಾಖಾ ಕಾಲುವೆ ಕಿಲೋಮೀಟರ್18 ರಿಂದ ಕಿಲೋಮೀಟರ್ 50ರವರೆಗೆ. ನಾರಾಯಣಪುರ ಬಲದಂಡೆ ಕಾಲುವೆ ಕಿಲೋಮೀಟರ್ ಸೊನ್ನೆಯಿಂದ ಕಿಲೋಮೀಟರ್ 40ರವರೆಗೆ. ಮೇಲೆ ಹೇಳಿದ ಸರ್ಕಾರಿ ಆದೇಶದಲ್ಲಿ, ನಿರ್ದೇಶಿಸಿದಂತೆ ಸುಮಾರು 200 ಕೋಟಿ ರೂಪಾಯಿಗಳ ಮುಖ್ಯ ಕಾಲುವೆ ಕೆಲಸಗಳನ್ನು 119 ಅರೆ ಗುತ್ತೇದಾರರಿಗೆ ಹಾಗೂ 85.6 ಕೋಟಿ ರೂಪಾಯಿಗಳ ವಿತರಣಾ ಕಾಲುವೆ ಕೆಲಸಗಳನ್ನು 212 ಅರ್ಹ ಗುತ್ತೇದಾರರಿಗೆ ವಹಿಸಿಕೊಡಲು ಪ್ರಸ್ತಾಪಿಸಿತ್ತು. ಅಂದರೆ ಒಟ್ಟು 285 ಕೋಟಿ ರೂಪಾಯಿಗಳ ಕೆಲಸವನ್ನು 119 ಗುತ್ತೇದಾರರಿಗೆ ಮತ್ತು 212 ಗುತ್ತೇದಾರರಿಗೆ ವಿತರಣಾ ಕಾಲುವೆ ಕೆಲಸಗಳಿಗೆ ತಾವು ನೇರವಾಗಿ ಕೊಟ್ಟಿದ್ದೀರಿ. ಏನು ಅವರ ಕ್ವಾಲಿಫಿಕೇಷನ್, ಅವರು ಯಾರು, ಅವರ ಅಡ್ರೆಸ್ ಏನು, ಅವರು ಎಷ್ಟು ಕೆಲಸ ಮಾಡಿದ್ದಾರೆ? ಏಕೆಂದರೆ, ದೊಡ್ಡ ದೊಡ್ಡ ಪ್ರಾಜೆಕ್ಟ್‌ನಲ್ಲಿ ಕೆಲಸ ಮಾಡುವವರು200-300 ಜನರಂತೂ ಇರುವುದಿಲ್ಲ. ಇವತ್ತು ನಿಮ್ಮ ಲೆಕ್ಕದ ಪ್ರಕಾರ ಸುಮಾರು ನೀವು ಕುಂತಲ್ಲೇ, ಒಂದೇ ರಾತ್ರಿಯಲ್ಲಿ ಇವೆರಡೂ ಆದೇಶಗಳನ್ನು ತಾವೇ ಹೊರಡಿಸಿದ್ದೀರಿ. ಸುಮಾರು330 ಜನರಿಗೆ ಸ್ವಲ್ಪ ಹೆಚ್ಚು ಕಡಿಮೆ ರಾತ್ರೋರಾತ್ರಿಯಲ್ಲಿ ಕಾಂಟ್ರಾಕ್ಟ್ ಕೊಟ್ಟು ಈ ಕೆಲಸ ಮಾಡಿಸುತ್ತಿದ್ದೀರಿ. ಇದಲ್ಲದೆ ಬೇರೆ ಬೇರೆ ಕೊಟ್ಟಿದ್ದೀರಿ, ಅದಕ್ಕೆ ನಾನು ಬರುತ್ತೇನೆ. ಇದಕ್ಕೆ ಲೋಕಾಯುಕ್ತ ಏಕೆ ಬೇಡ. ಏಕೆಂದರೆ, ನೀವು ಕಾನೂನುಬಾಹಿರವಾಗಿ ಕೊಟ್ಟಿದ್ದೀರಿ ಎಂದು ನಾವು ಹೇಳುತ್ತಿದ್ದೇವೆ. ಅವರಿಗೆ ರೇಟೂ ಕೂಡ ಇವತ್ತು ಡಿಫ್ರೆನ್ಷಿಯೇಟ್ ಮಾಡಿಕೊಡುತ್ತಿದ್ದೀರಿ ಎನ್ನತಕ್ಕ ಮಾತನ್ನೂ ಹೇಳುತ್ತಿದ್ದೇವೆ. ಅಂದರೆ 300 ಕೋಟಿ ರೂಪಾಯಿಗಳ ವ್ಯವಹಾರಗಳಿಗೆ ನ್ಯಾಯಾಂಗ ತನಿಖೆ ಬೇಡ ಎಂದು ಹೇಳುತ್ತೀರಿ, ಲೋಕಾಯುಕ್ತ ಬೇಡ ಎಂದು ಹೇಳುತ್ತೀರಿ. ನೀವು ಯಾವುದಕ್ಕೂ ಒಪ್ಪುವುದಿಲ್ಲ. ಕಾಪಿ ಪ್ರಕರಣಕ್ಕೆ ಮಾತ್ರ ನ್ಯಾಯಾಂಗ ತನಿಖೆಗೆ ಮುಖ್ಯ ಮಂತ್ರಿಗಳು ಒಪ್ಪಿಕೊಂಡರು. ಏಕೆಂದರೆ, ಅದರಲ್ಲಿ ನಿಮ್ಮದೇನೂ ಲುಕ್ಸಾನು ಇಲ್ಲವಲ್ಲ. ಯಾವುದೋ ಒಂದು ಕಾಪಿ ಪ್ರಕರಣಕ್ಕೆ ನಾವೆಲ್ಲರೂ ನ್ಯಾಯಾಂಗ ತನಿಖೆಗೆ ಕೇಳಿದೆವು, ಈ ಸದನವೂ ಒಪ್ಪಿತ್ತು. ಯುನಾನಿಮಿಟಿ ನಮ್ಮದು ಯಾವುದರಲ್ಲಿರುತ್ತೆ ಎಂದರೆ, ಎಲ್ಲಿ ಲುಕ್ಸಾನು ಇರುವುದಿಲ್ಲ ಅದಕ್ಕೆ ನಮ್ಮ ಯುನಾನಿಮಿಟಿ. ಆದರೆ, ಇಲ್ಲ ಕೋಟ್ಯಾಂತರ ರೂಪಾಯಿಗಳ ವ್ಯವಹಾರ ನಡೆದಾಗ, ಇದನ್ನು ಲೋಕಾಯುಕ್ತಕ್ಕೆ ಅಥವಾ ಸಿಬಿಐಗೆ ರೆಫರ್ ಮಾಡಿ ಎಂದು ನಾವು ಕಳಕಳಿಯಿಂದ ಕೇಳಿಕೊಂಡರೆ, ಅದನ್ನು ತಾವು ತಳ್ಳಿಹಾಕುತ್ತೀರಿ. ಇದು ಯಾವ ನ್ಯಾಯ. ಅದಕ್ಕೆ ನಾನು ಇವತ್ತೂ ಕೇಳುತ್ತೇನೆ. ತಾವು ಲೋಕಾಯುಕ್ತಕ್ಕೆ ಇದನ್ನು ಒಪ್ಪಿಸಲೇಬೇಕು. ನಾವು ಸಿ.ಬಿ.ಐ. ಎಂದು ಕೇಳಿದರೆ, ಮತ್ತೆ ನೀವು ಏಕೆ ಸಿ.ಬಿ.ಐ.ಗೆ ಎಂದು ಕೇಳಬಹುದು. ಅದಕ್ಕಾಗಿ ಲೋಕಾಯುಕ್ತಕ್ಕೇ ಒಪ್ಪಿಸಿ. ಇದಾದಮೇಲೆ ಜುಲೈ 1997ರಲ್ಲಿ ತಾವು ಕೊಟ್ಟಂಥ ಪಟ್ಟಿಯನ್ನು ನೋಡಬೇಕು. ಈ ಮಾತು ಏಕೆ ಹೇಳುತ್ತೇನೆಂದರೆ,2 ಸಾವಿರ ಇಸವಿಯೊಳಗಾಗಿ,

ಕೃಷ್ಣಾ ಬೇಸಿನ್‌ನಲ್ಲಿರತಕ್ಕ ಪ್ರಾಜೆಕ್ಟನ್ನು ಪೂರ್ಣಮಾಡತಕ್ಕ ಹಠ, ಛಲ ತೊಟ್ಟಿದ್ದೇವೆಂದು ಹೇಳುತ್ತಾರಲ್ಲ ಇವರ ನಡವಳಿಕೆ ಹೇಗಿದೆ, ಇದರ ಭೌತಿಕ ಗುರಿ ಹೇಗಿದೆ ಎಂಬುದರ ಬಗ್ಗೆ ಈ ಉದಾಹರಣೆಯನ್ನು ಕೊಡುತ್ತಿದ್ದೇನೆ. ತಾವು ನೋಡಬಹುದು ಪೇಜ್ ನಂ. 16ರಲ್ಲಿ ಹೇಳಿದ್ದೀರಿ. ಮುದ್ನಾಳ್ ಶಾಖಾ ಕಾಲುವೆ ಉದ್ದ 50 ಕಿಲೋಮೀಟರ್, ಇದರಲ್ಲಿ ಪ್ರಗತಿ ಸಾಧಿಸಿದ್ದು ಎನ್ನತಕ್ಕಂಥ ಕಾಲಂ ಇದೆ. ಕೆಲಸ ಜಾರಿಯಲ್ಲಿದ್ದು, 1996-97ರಲ್ಲಿ ಮುಗಿಸಲಾಗುವುದು ಮತ್ತು 38,613 ಹೆಕ್ಟೇರಿಗೆ ನೀರು ಕೊಡಲಾಗುವುದೆಂದು, ಮೊನ್ನೆ ಜೂನ್‌ನಲ್ಲಿ ಇದನ್ನು ಹೇಳಿದ್ದೀರಿ, ಅಂದರೆ ಎರಡು ತಿಂಗಳ ಹಿಂದೆ. ಅನಂತರ ನೀರಾವರಿ ಕ್ಷೇತ್ರದ ವಿತರಣಾ ಕಾಲುವೆ ಡಿಸ್ಟ್ರಿಬ್ಯೂಟರ್ ಅದರಲ್ಲಿ 35,802 ಹೆಕ್ಟೇರ್ ವಿತರಣಾ ನಾಲೆ 14 ರಿಂದ 24ರವರೆಗೆ ಕೆಲಸಗಳು ಪ್ರಗತಿಯಲ್ಲಿ ಇವೆ. ನಾಲೆ 25,26,27 ರವರೆಗೆ ಅನುಮೋದನೆಯಾಗಿದೆ. ಅಂದರೆ ಅದು ಇನ್ನು ಅಪ್ರೂವಲ್ ಸ್ಟೇಜ್‌ನಲ್ಲಿ ಇದೆ. ಅನಂತರ ಜೇವರ್ಗಿ ಶಾಖಾ ಕಾಲುವೆಯ ಉದ್ದ 85 ಕಿ.ಮೀ. ಮೊದಲನೆಯ 70 ಕಿ.ಮೀ. ಕೆಲಸ ಪ್ರಗತಿಯಲ್ಲಿದೆ. ಇನ್ನುಳಿದ ಕೆಲಸಗಳು ಸರ್ವೆ ಆಗಬೇಕು. ಅಂದರೆ ಇನ್ನು ಎರಡು ವರ್ಷಗಳಲ್ಲಿ ಸರ್ವೆ ಮಾಡಿ ಮುಗಿಸುವುದು. ಅನಂತರ ಡಿಸ್ಟ್ರಿಬ್ಯೂಟರ್ಸ್ ಅದರಲ್ಲಿ ನಾಲೆ 1 ರಿಂದ 4ರ ಕೆಲಸಗಳು ಮುಗಿದಿವೆ. 5 ರಿಂದ 11 ರವರೆಗೆ ಕೆಲಸಗಳು ಪ್ರಗತಿಯಲ್ಲಿವೆ. ಅನಂತರ ನಾರಾಯಣಪುರ ಬಲದಂಡೆ ಕಾಲುವೆಯ ಉದ್ಧ 95 ಕಿ.ಮೀ. ಇದರಲ್ಲಿ 1 ಕಿ.ಮೀ ರಿಂದ 40 ರವರೆಗ ಕೆಲಸಗಳು ಪ್ರಾರಂಭವಾಗಿವೆ. 27ರಿಂದ 30 ಕಿ.ಮೀ. ಅರಣ್ಯ ಪ್ರದೇಶವನ್ನು ಹೊರತುಪಡಿಸಿ ಮುಂದಿನ 40 ರಿಂದ 70 ಕಿ.ಮೀ. ಕೆಲಸಗಳನ್ನು ಹಾಗೂ ಕಿ.ಮೀ. 24 ರಿಂದ 27, 32 ರಿಂದ 35,ರವರೆಗೆ ಕೆಲಸಗಳನ್ನು ವಹಿಸಿಕೊಡಲಾಗಿದೆ. ಇನ್ನು 27 ರಿಂದ 35 ರವರೆಗಿನ ಅರಣ್ಯ ಪ್ರದೇಶಗಳು ಇದ್ದ ಕಾರಣ ಗೌರ್ನಮೆಂಟ್ ಆಫ್ ಇಂಡಿಯಾದಿಂದ ಅಪ್ರೂವಲ್ ಬಂದಿಲ್ಲ. ಇದರ ಬಗ್ಗೆ ಸರ್ವೆಯಾಗಿಲ್ಲ, ಇದರ ಬಗ್ಗೆ ಅಂದಾಜು ಆಗಿಲ್ಲ. ಅದರದ್ದೂ ಕೂಡ ಇದೆ, ನಾನು ಏಕೆ ಓದಿ ತೋರಿಸುತ್ತೇನೆಂದರೆ ಪೂರ್ತಿಯಾಗಿ ಓದುವುದಕ್ಕೆ ಹೋಗುವುದಿಲ್ಲ. ಇದೆಲ್ಲಾ ನೋಡಿದ ಮೇಲೆ ನೀವು 2,000 ಇಸವಿಯೊಳಗೆ ನೀರು ನಿಲ್ಲಿಸುವುದು ಮತ್ತು ಅದರ 50 ಪರ್ಸೆಂಟ್ ಉಪಯೋಗ ಮಾಡುವುದು ಸಾಧ್ಯವಿಲ್ಲ ಎನ್ನತಕ್ಕಂಥ ಮಾತನ್ನು ಹೇಳುತ್ತಿದ್ದೇನೆ. ಹಣ ಪೋಲಾಗಿರಬಹುದು, ಹಣ ಪೋಲಾಗಿದೆಯೇ ಹೊರತು ನಿಮ್ಮ ಭೌತಿಕ ಗುರಿ ಏನಿದೆ that to fiscal target ಅದು ಅಚೀವ್ ಆಗಿಲ್ಲ ಎನ್ನುವಂತಹ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದಕ್ಕಾಗಿ ನಾನು ಈ ದಿವಸ ನೇರವಾಗಿ ಆಪಾದನೆ ಮಾಡುತ್ತಿದ್ದೇನೆ. ಮತ್ತೊಂದು ವಿಷಯ ಏನೆಂದರೆ ಎಲ್ಲೆಲ್ಲಿ ಈ ವರ್ಷ ಎಷ್ಟೆಷ್ಟು ಖರ್ಚಾಗಿದೆ, ಈ ವರ್ಷದ ಆಯವ್ಯಯದಲ್ಲಿ ಎಷ್ಟು ಹಣ ಅವರು ಇಟ್ಟಿದ್ದರು ಎಷ್ಟು ಹಣ ಖರ್ಚು ಮಾಡಿದರು ಎನ್ನುವುದರ ಬಗ್ಗೆ ಅವರೆ ಅಂಕಿಅಂಶಗಳನ್ನು ಕೊಟ್ಟಿದ್ದಾರೆ. ಮಾನ್ಯ ನಾಗೇಗೌಡರ ಇಲಾಖೆಯ ವತಿಯಿಂದ ಪ್ರಕಟಣೆಯಾದ ಬುಕ್‌ಲೆಟ್‌ನಲ್ಲಿ ಆರ್ ಅಂಡ್ ಆರ್ ನಲ್ಲಿ 1997-98ನೇ ಸಾಲಿಗೆ 472 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ, ಅದರಲ್ಲಿ ಜುಲೈ ಎಂಡ್‌ವರೆಗೆ ಖರ್ಚಾಗಿರುವ ಹಣ 35 ಕೋಟಿ ರೂಪಾಯಿಗಳು ಮಾತ್ರ. ಅನಂತರ ಕಾಲುವೆ ವಲಯ (1)ರಲ್ಲಿ 1997-98ನೇ ಸಾಲಿಗೆ 160 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ ಅದರಲ್ಲಿ 45 ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಇನ್ನು ಕಾಲುವೆ ವಲಯ 2ರಲ್ಲಿ 140 ಕೋಟಿ ರೂಪಾಯಿಗಳ ಹಣವನ್ನು ಒದಗಿಸಿದ್ದಾರೆ

ಕೇವಲ 21 ಕೋಟಿ ರೂಪಾಯಿಗಳು ಮಾತ್ರ ಖರ್ಚು ಮಾಡಿದ್ದಾರೆ. ಅಂದರೆ ಹೆಚ್ಚು ಕಡಿಮೆ 6 ತಿಂಗಳು ಆಗಿ ಹೋಯಿತು, ಈ 6 ತಿಂಗಳಲ್ಲಿ 50 ಪರ್ಸೆಂಟ್ ಹಣವಾದರೂ ಖರ್ಚು ಮಾಡಬೇಕಾಗಿತ್ತು. ಏಕೆಂದರೆ ತಮಗೆ ಗೊತ್ತಿರುವ ಹಾಗೆ ಏಪ್ರಿಲ್, ಮೇ, ಜೂನ್, ಈ ಮೂರು ತಿಂಗಳಲ್ಲಿ ವರ್ಕಿಂಗ್ ಸೀಜನ್ ಇರುತ್ತದೆ. ಆದರೆ ಆ ಕಡೆ ಮಳೆ ಇಲ್ಲ ಪರ್ಟಿಕ್ಯುಲರ್ರಾಗಿ ಯುಕೆಪಿ ಭಾಗದಲ್ಲಿ ಕೊಯ್ನಾ ಡ್ಯಾಮ್‌ನಿಂದ ಅಥವಾ ಆ ಕಡೆ ಮಹಾರಾಷ್ಟ್ರದಲ್ಲಿ ಮಳೆ ಹೆಚ್ಚಾಗಿ ಆಗಿರುವುದರಿಂದ ಕೃಷ್ಣಾ ಮತ್ತು ಭೀಮಾ ನದಿಯಲ್ಲಿ ನೀರು ಹೆಚ್ಚಿಗೆ ಬಂದಿರಬಹುದು. ಆದರೆ ನಮ್ಮ ಭಾಗದಲ್ಲಿ ಸಂಪೂರ್ಣವಾಗಿ ಬರಗಾಲ ಇದೆ, ರಾಯಚೂರು, ಬಿಜಾಪುರ, ಗುಲ್ಬರ್ಗಾಗಳಲ್ಲಿ ಬರಗಾಲವಿದೆ. ಈ ಭಾಗಗಳಲ್ಲಿ ಕಾಲುವೆಗಳ ಕೆಲಸ ಮಾಡುವುದಕ್ಕೆ ಯಾವ ಅಡ್ಡಿ ಆತಂಕಗಳು ಇಲ್ಲ. 6 ತಿಂಗಳಲ್ಲಿ ನಿಮಗೆ ಎಷ್ಟು ಖರ್ಚು ಬಂತೆಂದರೆ 25 ಪರ್ಸೆಂಟ್ ಆಗಿಲ್ಲ. ಕೊನೆಗೆ ಬಿಲ್ ಎಷ್ಟು ಕೊಡುತ್ತೀರೊ ಅದು ಮುಖ್ಯವಲ್ಲ. ನೀವು ಫಿಸಿಕಲ್ ಅಚೀವ್‌ಮೆಂಟ್ ಏನು ಮಾಡ್ತಿರೋ ಅದು ಮುಖ್ಯ. ಮಾರ್ಚ್, ಏಪ್ರಿಲ್ ತಿಂಗಳಲ್ಲಿ ತರಾತುರಿಯಲ್ಲಿ ಎಲ್ಲರ ಪೇಮೆಂಟ್ ಮಾಡಿ ಹೆಚ್ಚಿನ ಎಸ್ಕ್‌ಲೇಷನ್ ಮಾಡಿಕೊಂಡು ಏನು ಕ್ಲೇಮುಗಳು ಹಾಕಿಕೊಳ್ಳುತ್ತಿರೋ ಅಥವಾ ಕ್ಲಾಸಿಫಿಕೇಷನ್ ಚೇಂಜ್ ಮಾಡಿಕೊಂಡು ಬಿಲ್ಲುಗಳನ್ನು ಬರೆದುಕೊಳ್ಳುತ್ತಾರೋ ಆ ಬಿಲ್ಲಿಗೆ ತಾವು ಸ್ಪಂದಿಸಿ ನೀವು ಹಣ ಬಿಡುಗಡೆ ಮಾಡುತ್ತಿರೋ ಆ ಹಣದ ಗುರಿಯನ್ನು ನಾನು ಹೇಳುತ್ತಿಲ್ಲ. ನಾನು ಹೇಳುವುದು ತಾವು ಫಿಸಿಕಲ್ ಟಾರ್ಗೆಟ್ ಅಚೀವ್ ಮಾಡತಕ್ಕಂಥದ್ದು ಈ ಹಣದ ಪ್ರಕಾರ ಅದನ್ನು ಮಾಡುತ್ತಿರೋ ಇಲ್ಲವೋ ಅದು ಮುಖ್ಯ. ಅದಕ್ಕಾಗಿ ಇವತ್ತು ಅಣೆಕಟ್ಟು ವಲಯಲ್ಲಿ ಕೂಡ 80 ಕೋಟಿ ರೂಪಾಯಿಗಳು ಇದ್ದರೆ ಕೇವಲ 16 ಕೋಟಿ ರೂಪಾಯಿಗಳು ಖರ್ಚಾಗಿದೆ. ಅದೇರೀತಿಯಾಗಿ ಆಪರೇಷನ್ ಅಂಡ್ ಮೈಂಟೆನೆನ್ಸ್ ಇದರಲ್ಲಿ ಮಾತ್ರ 58 ಕೋಟಿ ರೂಪಾಯಿಗಳು ಇದೆ. ಈಗ ಸುಮಾರು 7, 8 ಕೋಟಿ ರೂಪಾಯಿಗಳು ಖರ್ಚಾಗಿದೆ. ಆದರೆ 50 ಕೋಟಿ ರೂಪಾಯಿಗಳು ಬಹಳ ಬೇಗನೆ ಖರ್ಚು ಮಾಡುತ್ತಾರೆ. ಇದಕ್ಕೆ ನಿಮ್ಮದು ಪ್ರಯತ್ನವೂ ಬೇಕಾಗಿಲ್ಲ, ನಿಮ್ಮ ರಿವ್ಯೂ ಬೇಕಾಗಿಲ್ಲ, ನಿಮ್ಮ ಇನ್‌ಸ್ಟ್ರಕ್ಷನ್ಸ್ ಬೇಕಾಗಿಲ್ಲ. ಅವರು ತಾವಾಗಿಯೇ ಈ ಕೆಲಸವನ್ನು ಸಂಪೂರ್ಣವಾಗಿ ಮಾಡುತ್ತಾರೆ. ಇದು ಏಕೆಂದರೆ ಕಂಟ್ರಾಕ್ಟರ್‌ಗಳಿಗೆ ಅನುಕೂಲ, ಅಲ್ಲಿರತಕ್ಕಂಥ ಇಂಜಿನಿಯರುಗಳಿಗೆ ಅನುಕೂಲ ಮತ್ತು ಇದರ ಮೇಲೆ ಹೆಚ್ಚಿನ ಕಣ್ಣು ಇರತಕ್ಕ ಅನೇಕ ಪುಢಾರಿಗಳಿಗೆ ಅನುಕೂಲ. ಅದಕ್ಕಾಗಿ ನೀವು ಥರೋ ರಿವ್ಯೂ ಮಾಡಬೇಕು. ಅದಕ್ಕಾಗಿ ಇದನ್ನು ಕೂಡ ಲೋಕಾಯುಕ್ತಕ್ಕೆ ಒಪ್ಪಿಸಿ ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಕೆಲವು ಲೀಡರ್ಸ್ ಅಲ್ಲಿನ ಸಿಮೆಂಟ್, ಸ್ಟೀಲ್ ಸಹಿತ ಬಿಡುವುದಿಲ್ಲ. ಇದು ಯಾವ ರೀತಿ ಆಗಿದೆ ಎಂದರೆ ರಾಶಿ ಮಾಡಿಕೊಂಡು ಹೋಗುವಂತಹ ಜಾಗವಾಗಿದೆ. ಲೂಟಿ ಮಾಡತಕ್ಕಂಥ ಜಾಗವಾಗಿದೆ. ಅದಕ್ಕೆ ಇದರ ಕಡೆ ಕಣ್ಣು ತಾವು ಇಡಬೇಕಾಗುತ್ತದೆ. ನಾವು ನಿರ್ದಿಷ್ಟವಾಗಿ ಏಕೆ ಹೇಳುತ್ತೇನೆಂದರೆ ಇಷ್ಟು ಕೋಟ್ಯಾಂತರ ರೂಪಾಯಿಗಳ ಹಣವನ್ನು ಬಡವರಿಂದ ನಾವು ಟ್ಯಾಕ್ಸ್ ಕಲೆಕ್ಟ್ ಮಾಡಿ, ಇವತ್ತು ನಾವೆಲ್ಲರೂ ಇಲ್ಲಿ ಕುಳಿತು ಹತ್ತಾರು ಸಲ ಯೋಚನೆ ಮಾಡುವಾಗ, ಸಣ್ಣಪುಟ್ಟ ಎಲ್ಲೋ ಒಂದು ಕೋಟಿ 50 ಲಕ್ಷ, 10 ಲಕ್ಷ ಇವಕ್ಕೆಲ್ಲಾ ನಾವು ಇಲ್ಲಿ ಗಂಟೆಗಟ್ಟಲೆ ಸಮಯ ಕಳೆಯುತ್ತೇವೆ. ಆದರೆ ಇಲ್ಲಿ ನೂರಾರು ಕೋಟ್ಯಾಂತರ ರೂಪಾಯಿಗಳು ಪೋಲಾದಾಗ ಅದರ ಕಡೆ ನಾವು ಗಮನ ಹರಿಸುವುದಿಲ್ಲ, ಅದನ್ನು ತನಿಖೆ ಮಾಡುವುದಿಲ್ಲ,

ನಿಷ್ಪಕ್ಷಪಾತವಾಗಿ ತನಿಖೆ ಮಾಡಿ ಎಂದರೆ ನಿಮಗೆ ಪಕ್ಷ, ಪಾರ್ಟಿ, ಪಂಗಡಗಳು ಬರುತ್ತಿವೆ. ಅದಕ್ಕೆ ದಯಮಾಡಿ ಇದರ ಕಡೆ ತಾವು ಗಮನಹರಿಸಬೇಕು, ಇದಕ್ಕೆ ಏನಾದರೂ ಒಂದು ಔಷಧಿ ಕಂಡು ಹಿಡಿಯದಿದ್ದರೆ ಈ ಲೂಟಿ ಕಂಟಿನ್ಯೂ ಇರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇಲ್ಲದಿದ್ದರೆ ಇದನ್ನು ತಾವು ನಿಲ್ಲಿಸಿದ್ದರೆ ಹೀಗೆ ಮಾಡುವವರಿಗೆ ನೀವು ಬೆಂಬಲ ಕೊಡುತ್ತೀರೆಂದು ನನಗೆ ಸಂಶಯ ಬರುತ್ತಿದೆ. ತಾವು ನಿಲ್ಲಿಸದಿದರೆ ಪರವಾಗಿಲ್ಲ ಆ ಕೆಲಸ ಮಾಡಿದ್ದಾರೆಂದು ಹೇಳುತ್ತಾರೆ, ನಿಲ್ಲಿಸದೇ ಹೋದರೆ ಅಪ್ರತ್ಯಕ್ಷವಾಗಿ ನೀವು ಪ್ರೋತ್ಸಾಹ ನೀಡುತ್ತೀರಿ ಎನ್ನುವ ಸಂಶಯ ಬರುತ್ತಿದೆ.

ಶ್ರೀ ಕೆ.ಎನ್. ನಾಗೇಗೌಡ : ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಚಾರವನ್ನು ಕಳೆದ ಹಾಗೂ ಎರಡು ಅಧಿವೇಶನದಲ್ಲಿ ಆಪರೇಷನ್ ಅಂಡ್ ಮೈನ್‌ಟೆನೆನ್ಸ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಅವರಲ್ಲಿ ಕೇಳುವುದೇನೆಂದರೆ ಕಳೆದ 1991 ರಿಂದ ಇವತ್ತಿನವರೆಗೆ ಒ ಅಂಡ್ ಎಂ ಬಗ್ಗೆ ಅವರು ಹೇಳಿದ ಮೇಲೆ ಯಾವ ರೀತಿ ನಿಲ್ಲಿಸಿದೆಯೋ ಇಲ್ಲವೋ ಎನ್ನತಕ್ಕಂಥದ್ದನ್ನು ಲೇಟೆಸ್ಟ್ ಫಿಗರ್ಸ್ ತರಿಸಿಕೊಳ್ಳಬೇಕು. ಅವರು ಹೇಳಿರುವುದು ಒ ಅಂಡ್ ಎಂ ನಲ್ಲಿ ಸತ್ಯವಿದೆ. ಕಳೆದ ಆರೂವರೆ ತಿಂಗಳಲ್ಲಿ ಒ ಅಂಡ್ ಎಂ ನಲ್ಲಿ ಸಂಪೂರ್ಣವಾಗಿ ಕೆಲಸ ಮಾಡಕೂಡದು ಎಂದು ಆದೇಶ ಕೊಟ್ಟಿದ್ದೇವೆ ಮತ್ತು ಸಪ್ಲೈಗೆ ಸಂಬಂಧಪಟ್ಟಹಾಗೆ ಒಂದು ತಿಂಗಳು ಹೆಚ್ಚಿಗೆ ತೆಗೆದುಕೊಳ್ಳಬಾರದು ಎಂದು ಆದೇಶ ಕೊಟ್ಟಿದ್ದೇವೆ. ನಾನು ಇದಕ್ಕೆ ಬೇಕಾದರೆ ಫಿಗರ್ಸ್ ತಂದು ಉತ್ತರ ಕೊಡುವ ಸಂದರ್ಭದಲ್ಲಿ ಹೇಳುತ್ತೇನೆ, ಆದರೆ ಒಂದೇ ಒಂದು ಮನವಿ ಏನೆಂದರೆ ಅವರು ಹೇಳತಕ್ಕಂಥ ಪೂರ್ವಭಾವಿ ಒಳಗಡೆ ಈ ವರ್ಷ ಸ್ಟೋರ್ ಅಂಡ್ ಪರ್ಚೇಸ್‌ನಲ್ಲಿ ಕಡಿಮೆ ಮಾಡಿದ್ದೇವೆ. ಈ ವರ್ಷ ಒ ಅಂಡ್ ಎಂ ನಿಲ್ಲಿಸಿದ್ದೇವೆ ಎನ್ನುವ ಎರಡು ಮಾಹಿತಿಗಳನ್ನು ಹೇಳಿ ಈ ವರ್ಷದಲ್ಲಿ ಏನಾದರೂ ಆಗಿದ್ದರೆ ಆ ವಿವರ ಅದರಲ್ಲಿ ಏನಾದರೂ ಇದ್ದರೆ ನೀಡಲಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ನನ್ನ ಹತ್ತಿರ ಇರತಕ್ಕಂಥದ್ದು 30-6-97 ಇದೇ ವರ್ಷದ್ದು ತಾನೆ? 30-6-97 ಈ ವರ್ಷದ ತಮ್ಮ ಇಲಾಖೆಯವರು, ಕೊಟ್ಟಿರತಕ್ಕಂಥ, ತಮ್ಮ ಇಲಾಖೆಯವರು ಪ್ರಾವಿಜನ್ ಮಾಡಿರುವುದು, ತಮ್ಮ ಇಲಾಖೆಯವರು ಎಕ್ಸ್‌ಪೆಂಡಿಚರ್ ತೋರಿಸುತ್ತಿರುವುದು. ಇದಕ್ಕಿಂತ ಲೇಟೆಸ್ಟ್ ಮಾಹಿತಿ ಮಂತ್ರಿಗಳು ನಮಗೆ ಕೊಡಬೇಕು. ಇದೇ ಮಾಹಿತಿಯನ್ನು ತೆಗೆದುಕೊಳ್ಳಬೇಕಾದರೆ, ಈಗ ನಾವು ಏನು ಒಂದು ಜಿ.ಓ. ಕೇಳಿದರೂ ತಾನು ಬಿ.ಓ. ಕಳಿಸುತ್ತೀರಿ, ಆದರೆ, ಯಾವ ಇಲಾಖೆಗೆ ಪತ್ರ ಬರೆದರೆ ಅವರು ಜಿ.ಓ. ಕಳಿಸುವುದಿಲ್ಲ, ನಾವು ಎಕ್ಸ್‌ಪೆಂಡಿಚರ್ ಎಷ್ಟು ಇದಕ್ಕೆ ಅದನ್ನು ಕಳಿಸಿ ಎಂದರೆ ಅದಕ್ಕೆ ಒಂದು ನೋಟ್ ಕಳಿಸಿ ಮಿನಿಸ್ಟ್ರು ಅಪ್ರೂವಲ್ ಆಗಬೇಕು ಅನಂತರ ಕಳಿಸುತ್ತೇನೆ ಎನ್ನುತ್ತಾರೆ. ನಮ್ಮ ಪ್ರೈವೇಟ್ ಸೆಕ್ರೆಟರಿಯವರು ಯಾರಾದರೂ ಕೇಳಿದರೆ ಒಂದು ಪತ್ರ ಬರೆದು ಕೊಡಿ ಅದನ್ನು ಮಿನಿಸ್ಟ್ರು ಅಪ್ರೂವ್ ಮಾಡಿ ಕಳಿಸಿದರೆ ಅನಂತರ ತಮಗೆ ಅದನ್ನು ಕಳಿಸುತ್ತೇವೆ ಎನ್ನುವ ಉತ್ತರ ಬರುತ್ತದೆ. ಇದು ಹೌಸಿಂಗ್ ಮಂತ್ರಿಗಳಾಗಲಿ, ಸೋಷಿಯಲ್ ಮಂತ್ರಿಗಳಾಗಲಿ ಇದೇ ಉತ್ತರ ಬರುತ್ತದೆ. ಕ್ಷಮಿಸಿ ಯಾವ ಕಾರ್ಯದರ್ಶಿಯವರಿಗೆ ಬರೆದರೂ ಕೂಡ ಇದೇ ಉತ್ತರ ದೊರಕುತ್ತದೆ. ಸರ್ಕಾರದ ಆದೇಶ ಇರತಕ್ಕಂಥದ್ದು ಅದು ಹೊರಗಿನ

ಕಛೇರಿಗಳಿಗೆ ಹೋಗಿರುತ್ತದೆ ನಾವು ಕೇಳಿದರೆ ಮಾತ್ರ ಪ್ರಾಪರ್ ಚಾನಲ್ ಮುಖಾಂತರವಾಗಿ ಕಳಿಸಬೇಕು ಎಂದು ಹೇಳುತ್ತಾರೆ. ಏಕೆಂದರೆ ಮಿನಿಷ್ಟ್ರು ಅಪ್ರೂವಲ್ ಆಗಬೇಕು, ಇದಕ್ಕೆ ಏಕೆ ಮಿನಿಷ್ಟ್ರು ಅಪ್ರೂವಲ್ ಬೇಕು? ಜಿ.ಓ. ಅದು ಓಪನ್ ಯಾವುದಾದರೂ ಒಂದು ಸೀಕ್ರೆಟ್ ಇದ್ದು, ಕಾನ್ಫಿಡೆನ್‌ಷಿಯಲ್ ಇದು, ನಾಟ್ ಟು ಡಿಸ್‌ಕ್ಲೋಸ್ ಟು ಅದರ್ಸ್ ನಿಮ್ಮ ಬಿಸಿನೆಸ್ ಟ್ರಾನ್ಸಾಕ್ಷನ್ ರೂಲ್ಸ್ ಪ್ರಕಾರ, ಸೀಕ್ರೆಟ್ ಆ್ಯಕ್ಟ್‌ಪ್ರಕಾರ ಕೊಡಬಾರದು ಎನ್ನತಕ್ಕಂಥ ಕೋಡ್ ಆಫ್ ಕಂಡಕ್ಟ್ ಇದ್ದರೆ ಆ ಮಾತು ಬೇರೆ. ಸರ್ಕಾರಿ ಆದೇಶಗಳನ್ನು ಕೂಡ ಅನೇಕ ಜನರು ಕೊಡುವುದಿಲ್ಲ. ನಾನು ಹಳೆಯದು ಏನೂ ಓದುತ್ತಿಲ್ಲ. 30-6-97ರದ್ದು, ತಾವು ಏನು ಖರ್ಚು ತೋರಿಸುತ್ತಿದ್ದೀರಿ ಅದನ್ನು ಓದುತ್ತಿದ್ದೇನೆ. ಈಗ ಒಂದು ತಿಂಗಳ ಹಿಂದೆ ನಾನು ಸಾರ್ವಜನಿಕ ಲೆಕ್ಕಪತ್ರಗಳ ಸಮಿತಿ ಮುಖಾಂತರ ತರಿಸಿಕೊಂಡಿದ್ದು, ಅದನ್ನು ಸೇರಿಸಿಕೊಂಡು ನಾನು ಇದನ್ನು ಹೇಳುತ್ತಿದ್ದೇನೆ. ಇದು ಲೇಟೆಸ್ಟ್ ಇನ್‌ಫರ್‌ಮೇಶನ್ ಎನ್ನತಕ್ಕಂಥ ಮಾತನ್ನು ನಾನು ಅವರ ಗಮನಕ್ಕೂ ತರುತ್ತಿದ್ದೇನೆ. 58 ಕೋಟಿ ರೂಪಾಯಿಗಳಲ್ಲಿ ಈಗ ಖರ್ಚಾಗಿರುವುದು 8 ಕೋಟಿ ರೂಪಾಯಿಗಳು. ಪ್ರಾವಿಜನ್ ಮಾಡಿರುವುದು ಅವಶ್ಯಕತೆ ಇದೆ ಅಂತಲೇ ಮಾಡಿರುವುದು. ಖರ್ಚು ಮಾಡುವುದಕ್ಕೆ ತಾವು ಪ್ರಾವಿಜನ್ ಮಾಡಿದ್ದು ತಪ್ಪು ಎಂದು ನಾನು ಹೇಳುತ್ತಿಲ್ಲ. ಅವಶ್ಯಕ ಇದ್ದಂತಹ ವಸ್ತುಗಳನ್ನು ಮಾತ್ರ ತೆಗೆದುಕೊಳ್ಳಬೇಕು ಲೂಟಿ ಮಾಡತಕ್ಕಂಥವರ ಕೈಯಲ್ಲಿ ಕೊಡಬಾರದು. ಯಾರು ತಮ್ಮ ಮೇಲೆ ಪ್ರಭಾವ ಬೀರುತ್ತಾರೆ ಇಂತಹವರಿಗೆ ತಾವು ಆರ್ಡರ್ಸ್ ಕೊಡಿ ಎಂದು ಹೇಳಿ ಇದೇ ಕೆಲಸ ಇದೇ ಉದ್ಯೋಗವನ್ನು ಇಟ್ಟುಕೊಂಡು ಯಾರು ಇದ್ದಾರೆ ಅವರಿಗೆ ನೀವು ಬಲಿಯಾಗಬಾರದು ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಇದರಲ್ಲೇ ಇವತ್ತು ಹೆಚ್ಚು ಹಣ ಹೋಗುತ್ತಿದೆ. ಬಿ.ಟಿ.ಟಿ.ಡಿ. ಬಗ್ಗೆ ನಾವು ಕಳೆದ ಸಾರಿ ಪ್ರಶ್ನೆ ಎತ್ತಿದಾಗ ತಾವು ಹೇಳಿದಿರಿ, ಇದರಲ್ಲಿ ತಾವು 100 ಕೋಟಿ ರೂಪಾಯಿಗಳನ್ನು ಡೆವಲಪ್‌ಮೆಂಟ್‌ಗೆ ಇಟ್ಟಿದ್ದೀರಿ 100 ಕೋಟಿ ರೂಪಾಯಿಗಳಲ್ಲಿ ಕೇವಲ ಮೂರೂವರೆ ಕೋಟಿ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದೀರಿ. 6 ತಿಂಗಳಲ್ಲಿ ಮೂರೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಇನ್ನು ಉಳಿದ 6 ತಿಂಗಳಲ್ಲಿ 97 ಕೋಟಿ ರೂಪಾಯಿಗಳು ಖರ್ಚಾಗುತ್ತದೆ, ಅಂದರೆ ಎಷ್ಟು ಸ್ಪೀಡ್ ಆಗಿ ಮುಂದೆ ಹೋಗುತ್ತದೆ. ಮಾರ್ಚಿಯಿಂದ ಈ ಆಗಸ್ಟ್‌ವರೆಗೂ ಸ್ಪೀಡ್ ಎಷ್ಟು ಅಂದರೆ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಸೆಪ್ಟೆಂಬರ್‌ನಿಂದ ಮಾರ್ಚಿ ಕೊನೆಯವರೆಗೂ 97ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ. ಫೆಬ್ರವರಿ ಮತ್ತು ಮಾರ್ಚಿಯಲ್ಲಿ ಭಾರಿ ಸ್ಪೀಡ್‌ನಿಂದ ಮುಂದೆ ಹೋಗುತ್ತಾರೆ. ಆದರೆ, ಇದು ಏಕೆ ಈ ರೀತಿ ಆಗುತ್ತದೆ. ಇದಕ್ಕೆ ಕಾರಣ ಏನು ಎನ್ನುವುದನ್ನು ಕಂಡುಹಿಡಿಯದೇ ಹೋದರೆ ಯಾವ ರೀತಿಯಲ್ಲಿ ಪ್ರಗತಿ ಆಗುತ್ತದೆ. ನಾನು 6 ತಿಂಗಳ ಪ್ರಗತಿಯನ್ನು ಹೇಳುತ್ತಿದ್ದೇನೆ. ಇನ್ನು ಇತರೆ ಕೆಲಸಕ್ಕಾಗಿ 88ಕೋಟಿ ಇದೆ ಅದನ್ನು ಹೇಳುವುದಿಲ್ಲ. ಅದರಲ್ಲಿ ಸುಮಾರು ಎರಡೂವರೆ ಕೋಟಿ ಮಾತ್ರ ಖರ್ಚಾಗಿದೆ. ಇದು ಅಲ್ಲದೆ ಕಾಲುವೆಗಳ ಬಗ್ಗೆ ಏನು ಖರ್ಚು ಮಾಡಿದ್ದಾರೆ ತಾವು ಪ್ರತಿಯೊಂದು ಇಲಾಖೆಯಲ್ಲಿಯೂ ಇಷ್ಟು ಹಣ ಇಟ್ಟಿದ್ದೀರಿ ಎಂದು ಇದರಲ್ಲಿ ಹೇಳಿದ್ದೀರಿ. ಪುನರ್ವಸತಿಗೋಸ್ಕರ, ಅಥವಾ ಕೆನಾಲ್ ಜೋನ್ 1ಕೆನಾಲ್ ಜೋನ್ 2 ಪ್ರತ್ಯೇಕ್ಷವಾಗಿ ಫಿಜಿಕಲ್ ವರ್ಕ್ ಹೇಗೆ ನಡೆದಿದೆ ನಡೆದಿಲ್ಲ ಎನ್ನುವುದನ್ನು ಹೇಳಿದ ಮೇಲೆ ತಾವು ಸರಿ ಮಾಡಿಕೊಳ್ಳಬಹುದು. ನೀವು ಏನು ಈ

ಕೆಲಸಗಳನ್ನು ವಹಿಸಿಕೊಟ್ಟಿದ್ದೀರಿ ಅವರು ಎಷ್ಟರಮಟ್ಟಿಗೆ ಆ ಕೆಲಸಗಳನ್ನು ಟರ್ನ್ ಔಟ್ ಮಾಡಿದ್ದಾರೆ ಅವರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರಿ ಎನ್ನತಕ್ಕಂಥದ್ದರ ಮೇಲೆ ಅವಲಂಬಿಸಿರುತ್ತದೆ. ಅದನ್ನು ನಾವು ತೆಗೆದುಕೊಳ್ಳೋಣ.1997-98ರಲ್ಲಿ6 ತಿಂಗಳಲ್ಲಿ ಎನ್.ಆರ್.ಪಿ.ಐ. ಇದಕ್ಕೆ25 ಕೋಟಿ ರೂಪಾಯಿಗಳು ಖರ್ಚಾಗಿದೆ. ಬಿ.ಬಿ.ಸಿ ಇದಕ್ಕೆ 3 ಕೋಟಿ ರೂಪಾಯಿಗಳು ಖರ್ಚಾಗಿದೆ ಐ.ಬಿ.ಸಿ ಇದಕ್ಕೆ 5 ಕೋಟಿ 51 ಲಕ್ಷ ರೂಪಾಯಿಗಳು ಒಟ್ಟು 34 ಕೋಟಿ ರೂಪಾಯಿಗಳಷ್ಟು ಕೆಲಸ ಈ ಕೆನಾಲ್‌ನಲ್ಲಿ ಆಗತಕ್ಕಂಥಾದ್ದು. ಹೀಗೆ ನೀವು ಇವೆಲ್ಲವನ್ನೂ ಸಹ ತೆಗೆದುಕೊಂಡರೆ 6 ತಿಂಗಳಲ್ಲಿ ತಮ್ಮ ಫಿಜಿಕಲ್ ಅಚೀವ್‌ಮೆಂಟ್ ಏನು ಇರಬೇಕಾಗಿತ್ತು 50 ಪರ್ಸೆಂಟ್ ಅಥವಾ 40 ಪರ್ಸೆಂಟ್ ಅಥವಾ ನಿಮ್ಮ ಗುರಿಗಿಂತ 10 ಪರ್ಸೆಂಟ್ ಕಡಿಮೆ ಇದ್ದರೆ ಅದನ್ನು ನೀವು ಮಾರ್ಚಿ ತಿಂಗಳಲ್ಲಿ ಮಾಡಿಕೊಳ್ಳುತ್ತೀರಿ ಎಂದು ಒಪ್ಪಿಕೊಳ್ಳೋಣ. ನಿಮ್ಮ ಗುರಿಗಿಂತಲೂ 70 ಪರ್ಸೆಂಟ್ ಕಡಿಮೆ ಇದ್ದರೆ ಮಾರ್ಚಿ ಕೊನೆಯಷ್ಟರೊಳಗೆ ನೀವು ನಿಮ್ಮ ಗುರಿಯನ್ನು ಸಾಧನೆ ಮಾಡುತ್ತೀರಿ ಎಂದು ನಾವು ಹೇಗೆ ತಿಳಿದುಕೊಳ್ಳೋಣ. ತಾವು ಹಣ ಹಂಚಬಹುದು ಆದರೆ ಫಿಜಿಕಲ್ ಅಜೀವ್‌ಮೆಂಟ್ ಮಾಡುವುದಕ್ಕೆ ಆಗುವುದಿಲ್ಲ ಎನ್ನುವಂತಹ ಮಾತು ಇನ್ನೊಮ್ಮೆ ನಾನು ಅವರ ಗಮನಕ್ಕೆ ತರುತ್ತೇನೆ. ಇದು ನಡೆದಂಥಾದ್ದು ಯು.ಕೆ.ಪಿ.ಯಲ್ಲಿ. ಅದರ ಜೊತೆಗೆ ಅಲ್ಮಟ್ಟಿಯಲ್ಲಿ ನೀರು ಬಂದಿದೆ ಎಂದು ಕೆಲಸ ನಿಂತು ಹೋಗಿದೆ. ಮಳೆ ನಿಂತ ಮೇಲೆ ಅಥವಾ ನದಿ ಪ್ರವಾಹ ಕಡಿಮೆ ಆದ ಮೇಲೆ ಯಾವ ಮಟ್ಟದಲ್ಲಿ ಕೆಲಸ ನಡೆಯುತ್ತದೆ ಅದು ಒಂದು ಕಡೆ. ಕೆನಾಲ್ ಜೋನ್‌ನಲ್ಲಿ ಕೆಲಸ ನಿಲ್ಲಿಸತಕ್ಕಂಥ ಅವಶ್ಯಕತೆ ಏನು? ಅನೇಕ ಗುತ್ತಿಗೆದಾರರು ಮನವಿಗಳನ್ನು ಕಳುಹಿಸಿದ್ದಾರೆ. ಅವರಿಗೆ ಹಣ ಪಾವತಿ ಮಾಡಿಲ್ಲ ಎಂದು ಹೇಳಿ ಅವರು ಅದಕ್ಕೆ ಕೆಲಸ ನಿಲ್ಲಿಸಿದ್ದಾರೆ ಎನ್ನತಕ್ಕಂಥ ವರ್ತಮಾನ ನಮಗೆ ಸ್ಪಷ್ಟವಾಗಿ ಬಂದಿದೆ. ಏಕೆಂದರೆ ಕೊಡುವುದಕ್ಕೆ ಹಣ ಇಲ್ಲ. ಅದರ ಬಿಲ್‌ಗಳಿಗೆ ಪೇಮೆಂಟ್ ಆಗಿಲ್ಲ. ನಮಗೆ ಏನು ಕೆಲಸವನ್ನು ವಹಿಸಿಕೊಟ್ಟಿದ್ದರು ನಾವು ಆ ಕೆಲಸವನ್ನು ಮಾಡುತ್ತಿದ್ದರೂ ಕೂಡ ನಮಗೆ ಬರತಕ್ಕಂಥ ಹಣ ಬಂದಿಲ್ಲ ಇವತ್ತು ಸಂಪೂರ್ಣವಾಗಿ ಯು.ಕೆ.ಪಿ.ಯಲ್ಲಿ ಕೆಲಸ ನಿಂತು ಹೋಗಿದೆ. ಅಥವಾ 10-20 ಪರ್ಸೆಂಟ್ ಕೆಲಸ ಆಗುತ್ತಿದೆ. ಅಂದರೆ ಯಾರ ಹತ್ತಿರ ಮೆಷಿನ್ಸ್ ಇದೆ ಅವರು ಮೆಷನ್ಸ್ ಹಾಗೆಯೇ ಇರಬಾರದು ಎಂದೇ ಕೆಲಸ ಮಾಡುತ್ತಿದ್ದಾರೆ. ನೆಪ ಮಾತ್ರಕ್ಕೆ ಮಾತ್ರ ಅವರು ಕೆಲಸ ಮಾಡುತ್ತಿದ್ದಾರೆಯೇ ಹೊರತು ನಿಮ್ಮ ಪ್ರಯತ್ನದಿಂದ ನೀವು ಹಣ ಬಿಡುಗಡೆ ಮಾಡದೇ ಇರುವುದರಿಂದ ಎಲ್.ಓ.ಸಿ. ಬಿಡುಗಡೆ ಮಾಡದೇ ಇರುವುದರಿಂದ ಅವರಿಗೆ ಪಾವತಿಯಾಗಬೇಕಾದ ಹಣ ಪಾವತಿ ಮಾಡದೇ ಇರುವುದರಿಂದ ಇಷ್ಟು ದಿವಸ ಆ ಕೆಲಸಗಳು ನಿಂತು ಹೋಗಿವೆ. ಅದಕ್ಕೆ ಮಾನ್ಯ ಅಧ್ಯಕ್ಷರೇ, ನಾನು ಒಂದು ಮಾತನ್ನು ಹೇಳುತ್ತೇನೆ ನೀವು ಕೆಲವು ಒಳ್ಳೆಯ ಅಧಿಕಾರಿಗಳಿಗೆ ಹಾಕಿದ್ದೀರಿ ನಾನು ಇಲ್ಲ ಎಂದು ಹೇಳುವುದಿಲ್ಲ ಐ.ಎ.ಎಸ್. ಅಧಿಕಾರಿಗಳನ್ನು ನಾನು ದೂರುವುದಿಲ್ಲ. ನೀವು ಹಣ ಹಾಕಿ, ಹಣದ ದುರುಪಯೋಗ ಆಗಬಾರದು ಅದರ ಸದುಪಯೋಗ ಆಗಬೇಕು, ಒಳ್ಳೆಯ ರೀತಿಯಿಂದ ಕೆಲಸ ಆಗಬೇಕು, ಅದಕ್ಕೆ ತಕ್ಕಂತೆ ಹಣ ಖರ್ಚು ಆಗಬೇಕು, ಎನ್ನತಕ್ಕಂಥ ದೃಷ್ಟಿಯಿಂದ ತಾವು ಅವರನ್ನು ಹಾಕಿದಿರಿ. ಇಲ್ಲಿನ ಅಧಿಕಾರಿಗಳನ್ನು ಕಳುಹಿಸಿ ಕೆಲಸ ನಿಲ್ಲಿಸಿ ಎಂದು ಹೇಳಿದ್ದೀರೋ? ಅಧಿಕಾರಿಗಳನ್ನು ಕಳುಹಿಸಿದ್ದುದು ಏಕೆಂದರೆ ಹಣ ಉಳಿತಾಯ ಮಾಡುವುದರ ಜೊತೆಯಲ್ಲಿ ಕೆಲಸ ಆಗಬೇಕೆಂದು ಹೇಳಿ. ಆದರೆ, ಇವತ್ತು ಏನಾಗಿದೆ ಅಧಿಕಾರಿಗಳು ಹೋಗಿದ್ದಾರೆ ಪೇಮೆಂಟ್ ಇಲ್ಲ ಎಂದು ಹೇಳಿ. ಕೆಲಸ ನಿಂತು

ಹೋಗಿದೆ. ಅಂದರೆ ಸರ್ಕಾರದವರು ಒಂದು ಕಡೆ ಹೇಳುತ್ತಾರೆ ಹಣದ ಕೊರತೆ ಇಲ್ಲ ಎಂದು ಹೇಳಿ. ಇವತ್ತು ನಾವು ಕೃಷ್ಣ ಜಲಭಾಗ್ಯನಿಗಮದಿಂದ ಹಣ ಕೊಡಿಸುತ್ತಿದ್ದೇವೆ, ಮತ್ತು ಬಜೆಟ್ ಪ್ರಾವಿಜನ್ ಮಾಡಿದ್ದೇವೆ. ನಮ್ಮ ಹತ್ತಿರ ಹಣ ಇದೆ ಅದಕ್ಕೆ ನಾವು ಈ ವರ್ಷ ಕೂಡ 1,230 ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ನೀವು ಹೇಳುತ್ತಿದ್ದೀರಿ. ನೀವು ಹೇಳಬೇಕಾದರೆ, ಈ ಎರಡು ತಿಂಗಳಲ್ಲಿ ನಿಮ್ಮ ಪ್ರಗತಿ ಏನು? ತಮಗೆ ಗೊತ್ತಿದೆ ಬರಗಾಲಪೀಡಿತ ಪ್ರದೇಶ ಎಂದು ಘೋಷಣೆ ಮಾಡಿ ಎಂದು ಹೇಳಿ ಇದೇ ಸದನದಲ್ಲಿ ರಾಯಚೂರು ಶಾಸಕರು ಬಿಜಾಪುರ ಶಾಸಕರು ಗುಲ್ಬರ್ಗ ಶಾಸಕರು ಮತ್ತು ಬೇರೆ ಶಾಸಕರು ಕೂಡ ತಮ್ಮನ್ನು ಕೇಳಿಕೊಂಡಿದ್ದಾರೆ. ತಾವು ಅನಾವೃಷ್ಟಿ ಬಗ್ಗೆ ಕೂಡ ಇಲ್ಲಿ ಹೇಳಿಕೆ ಕೊಡುತ್ತೇನೆಂದು ಹೇಳಿದಿರಿ. ಯಾವಾಗ ಅನಾವೃಷ್ಟಿ ಇದೆ ಎಂದು ತಾವು ಒಪ್ಪಿಕೊಂಡ ಮೇಲೆ ನ್ಯಾಚುರಲ್ ಕಲಾಮೆಟಿ ಫಂಡನ್ನು ತಾವು ಖರ್ಚು ಮಾಡುವಾಗ ಈ ಕೆಲಸವನ್ನು ಏಕೆ ನಿಲ್ಲಿಸಿದ್ದೀರಿ. ಅದು ಇಂಡಿ ಬ್ರಾಂಚ್ ಕೆನಾಲ್ ಇರಬಹುದು ಜೇವರ್ಗಿದು ಇರಬಹುದು ಅಥವಾ ನಾರಾಯಣಪುರ ರೈಟ್ ಬ್ಯಾಂಕ್ ಕೆನಾಲ್ ಇರಬಹುದು. ಅಥವಾ ಶಹಪೂರ್ ಬ್ರಾಂಚ್ ಕೆನಾಲ್ ಇರಬಹುದು ಅಲ್ಮಟ್ಟಿ ಲೆಫ್ಟ್, ರೈಟ್ ಬ್ಯಾಂಕ್ ಕೆನಾಲ್ ಇರಬಹುದು, ಈ ಕೆಲಸಗಳನ್ನು ನಿಲ್ಲಿಸತಕ್ಕಂಥ ಪ್ರಮೇಯ ಏನು ಇತ್ತು. ಆಲ್ಮಟ್ಟಿ ಹರಿಯುತ್ತಿದೆ ಕೃಷ್ಣದಲ್ಲಿ ನೀರು ಹೋಗುತ್ತಿದೆ. ಕೆನಾಲ್‌ಗಳಲ್ಲಿ ಡಿಸ್ಟ್ರಿಬ್ಯೂಟರಿಗಳಲ್ಲಿ ಕೆಲಸ ನಿಲ್ಲಿಸತಕ್ಕಂಥಾದ್ದು ಏಕೆ? ಅಥವಾ ಸ್ಲೋಡೌನ್ ಮಾಡತಕ್ಕಂಥ ಅವಶ್ಯಕತೆ ಏಕೆ? ನನಗೆ ಗೊತ್ತಿದ್ದರ ಮಟ್ಟಿಗೆ ನಿಮ್ಮ ಹತ್ತಿರ ಹಣ ಇಲ್ಲ. ಹಣ ಫ್ಲೋ ಕಡಿಮೆ ಆಗಿರುವುದರಿಂದ ತಾವು ಕೆಲಸ ನಿಲ್ಲಿಸಿದ್ದೀರಿ. ಗುತ್ತಿಗೆದಾರರಿಗೆ ಹಣ ಕೊಡುವುದಿಲ್ಲ ಅಂದರೆ ಅವನು ಮುಂದಕ್ಕೆ ಹೋಗುವುದಿಲ್ಲ. ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ ತಾವು ಎರಡು ತಿಂಗಳಿಂದ ಇದರ ಬಗ್ಗೆ ಗಮನಹರಿಸಿಲ್ಲ ಎರಡು ತಿಂಗಳಿಂದ ಸ್ವಲ್ಪ ಕೆಲಸ ಕಡಿಮೆ ಆಗುತ್ತಿದೆ ಎನ್ನುವುದಕ್ಕೆ ನಾನು ಉದಾಹರಣೆಯನ್ನು ಹೇಳಿದ್ದೇನೆ. ನಿಮ್ಮ ಅಲೋಕೇಶನ್ ಖರ್ಚು ಏನು ಎನ್ನುವುದನ್ನು ನಾನು ಬಿಡಿಸಿ ಹೇಳಿದ್ದೇನೆ. ತಾವು ಏನು ಯು.ಕೆ.ಪಿ. ಬಗ್ಗೆ ಆರ್ಭಟದಿಂದ ಪತ್ರಿಕೆಯಲ್ಲಿ ಹೇಳಿಕೆ ಕೊಡುತ್ತಿದ್ದೀರಿ ಆ ಆರ್ಭಟ ಕೆಲಸದಲ್ಲಿ ಇಲ್ಲ. ಅಲ್ಲಿ ನಿಧಾನ ಆಗಿದೆ ಎನ್ನತಕ್ಕಂಥಾದ್ದು ತಾವು ಒಪ್ಪಿಕೊಳ್ಳಬೇಕು. ತಾವು ಉತ್ತರ ಹೇಳುತ್ತೀರಿ ನನಗೆ ಗೊತ್ತು. ಏಕೆಂದರೆ ಒಂದು ದಿವಸ ಆ ರೀತಿಯಲ್ಲಿ ಹೇಳಿದರು, ನಿಮ್ಮ ಮುಖ್ಯಮಂತ್ರಿಗಳು ನೀವು ಹೋಗಿ ಆಲ್ಮಟ್ಟಿಯನ್ನು ನೋಡಿದ್ದೀರಾ ಎಂದು ಕೇಳಿದರು. ಅದಕ್ಕೆ ನಾನು ನೀವು ಹೋಗಿದ್ದೀರಾ ಎಂದು ಕೇಳಿದೆ. ಅದಕ್ಕೆ ಅವರು ಅದರ ಎತ್ತರ 504 ಮೀಟರ್ ಇತ್ತು ಅದನ್ನು ಈಗ 509 ಮೀಟರ್ ಮಾಡುತ್ತಿದ್ದೇವೆಂದು ಹೇಳಿದರು. 504 ಮೀಟರ್ ಮೊದಲು ಯಾರು ಮಾಡಿದ್ದರು ಎಂದರೆ ಅದಕ್ಕೆ ಉತ್ತರ ಬರಲಿಲ್ಲ. ನೀವು ಹಿಂದಿನದ್ದು ಬಿಟ್ಟುಬಿಡುತ್ತೀರಿ ಯಾವುದೋ ಸ್ವಲ್ಪ ಆದರೆ ನಾನು ಅದಕ್ಕೆ ಇವತ್ತು ಅಂಕಿಅಂಶ ಕೊಟ್ಟಿದ್ದು. ಹಣ ಬಿಡುಗಡೆ ಆಗಿಲ್ಲ ಅಂದರೆ ಹಣ ಖರ್ಚು ಆಗಿಲ್ಲ ಅಂದರೆ ಅದಕ್ಕೆ ತಕ್ಕಂತೆ ಕೆಲಸ ಆಗುವುದಕ್ಕೆ ಸಾಧ್ಯವೇ ಇಲ್ಲ. ನಿಮ್ಮ ಸಮಾಧಾನಕ್ಕೋಸ್ಕರವಾಗಿ ನೀವು ಹೇಳಬೇಕೇ ಹೊರತು ಬೇರೆ ಯಾವುದೇ ರೀತಿಯಿಂದ ಆ ಭಾಗದ ಜನರಿಗೆ ಸಮಾಧಾನ ಮಾಡುವುದಕ್ಕೆ ಸಾಧ್ಯವಿಲ್ಲ. ಈ ನಿಮ್ಮ ಭೌತಿಕ ಗುರಿಯನ್ನು ಸಾಧನೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ.

1.00 ಪಿ.ಎಂ.

ಇವತ್ತು, ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಕೆಲಸಗಳು ಸ್ಥಗಿತಗೊಂಡಿವೆ. ಈ ಪ್ರಾಜೆಕ್ಟ್‌ಗೆ ತಮ್ಮ ಕೈಯಿಂದಲೇ ಇವರು ವಿಷ ಕೊಡುತ್ತಿದ್ದರೋ ಎಂದು ಗೊತ್ತಿಲ್ಲ. ಹಣ ಹೆಚ್ಚಿಗೆ ಬಿಡುಗಡೆ ಮಾಡದೇ ಇರುವುದರಿಂದ ಕೆಲಸಗಳು ನಿಂತಿವೆ. ಇನ್ನು ಆರ್.ಅಂಡ್.ಆರ್. ವಿಷಯದ ಬಗ್ಗೆ ನಾವು ಮೊದಲೇ ಪ್ರಸ್ತಾಪ ಮಾಡಿರುವುದರಿಂದ ಪುನಃ ಅದನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಬಾಗಲಕೋಟೆ ಟೌನ್‌ಷಿಪ್ ಮಾಡುವಂಥ ಸಂದರ್ಭದಲ್ಲಿ ಎಷ್ಟು ಹಳ್ಳಿಗಳು ಮುಳುಗಡೆಯಾಗುತ್ತವೆ ಮತ್ತು ಯಾವ ರೀತಿ ಕಳಪೆ ದರ್ಜೆಯ ಕೆಲಸಗಳು ನಡೆಯುತ್ತಿವೆಯೆಂದು ಅದನ್ನು ನೋಡಿಕೊಳ್ಳುತ್ತಿರುವ ಅಧಿಕಾರಿಯಾದ ಮಾನ್ಯ ಜಾಮ್‌ದಾರ್‌ರವರೇ ಹೇಳಿದ್ದಾರೆ. ಆ ವಿಷಯವನ್ನು ಲೋಕಾಯುಕ್ತಕ್ಕೆ ರೆಫರ್ ಮಾಡುತ್ತೇವೆಂದು ಇವರು ಹೇಳಿದ್ದಾರೆ. ಆ ಅಧಿಕಾರಿಯವರು, ಡೈರೆಕ್ಟ್ ಆಗಿ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ, ಅಲ್ಲಿರತಕ್ಕಂಥ ಅನೇಕ ಅಧಿಕಾರಿಗಳು ಸರಿಯಿಲ್ಲವೆಂದು ಸರ್ಕಾರದ ಗಮನಕ್ಕೆ ತಂದರೂ ಕೂಡಾ ಒಂದಲ್ಲ ಒಂದು ರೀತಿಯಲ್ಲಿ ಅವರು ಪುನಃ ಅಲ್ಲೇ ಬರುತ್ತಿದ್ದಾರೆ, ಅದಕ್ಕೆ ನಾನು ಏನು ಮಾಡಲಿ ಎನ್ನುವ ವ್ಯಥೆಯನ್ನು ಅವರು ಪಟ್ಟಿದ್ದಾರೆ. ಅವರು ಹೇಳಿರುವ ಸ್ಟೇಟ್‌ಮೆಂಟ್‌ನ್ನು ಓದಿ ಎಂದರೆ ಅದನ್ನು ಓದಿ ಹೇಳುತ್ತೇನೆ. ಅದಕ್ಕೆ ಏನಾಗಿದೆ ಎಂದರೆ, ಇವತ್ತು ಆರ್.ಅಂಡ್.ಆರ್. ನಲ್ಲೂ ಗುರಿಯನ್ನು ಸಾಧನೆ ಮಾಡಿಲ್ಲ ಮತ್ತು ಕಳಪೆ ಕೆಲಸ ನಡೆಯುವುದನ್ನು ನಿಲ್ಲಿಸತಕ್ಕಂಥ ಒಂದು ಪ್ರಾಮಾಣಿಕ ಪ್ರಯತ್ನವನ್ನು ಸರ್ಕಾರ ಮಾಡುತ್ತಿಲ್ಲ. ಆ ರೀತಿಯ ಕಳಪೆ ಕೆಲಸಗಳು ರೋಡ್ ಮಾಡುವುದರಲ್ಲಿ ಇರಬಹುದು, ಡ್ರೈನೇಜ್ ಮಾಡಿರುವುದರಲ್ಲಿ ಇರಬಹುದು, ಟೌನ್‌ಷಿಪ್ ಕನ್‌ಸ್ಟ್ರಕ್ಷನ್‌ನಲ್ಲಿ ಇರಬಹುದು, ಲೆವೆಲಿಂಗ್ ಕೆಲಸ ಇರಬಹುದು ಆಗಿದ್ದರೆ ಅದರ ಬಗ್ಗೆ ತನಿಖೆಯಾಗಬೇಕು. ಆ ತನಿಖೆಯು ಲೋಕಾಯುಕ್ತದಿಂದಲೇ ಆಗಬೇಕು. ಆ ರೀತಿ ಮಾಡಿದರೆ ಅಧಿಕಾರಿಗಳು ಎಚ್ಚರಿಕೆ ವಹಿಸಿ ಕೆಲಸ ಮಾಡುತ್ತಾರೆ. ಇಲ್ಲದೇ ಇದ್ದರೆ, ವಿರೋಧ ಪಕ್ಷದವರು ವಿಷಯವನ್ನು ಎತ್ತುತ್ತಾರೆ ಅದಕ್ಕೆ ನಮ್ಮ ಇಲಾಖೆ ಮಂತ್ರಿಗಳು ಉತ್ತರ ಕೊಡುತ್ತಾರೆ, ಅಲ್ಲಿಗೆ ಅದು ಮುಗಿಯುತ್ತದೆ, ಅನಂತರ ನಮ್ಮ ಮನಸ್ಸಿಗೆ ಬಂದ ಹಾಗೆ ಕೆಲಸ ಮಾಡೋಣವೆಂದು ಅಧಿಕಾರಿಗಳು ಇರುತ್ತಾರೆ. ಕಳಪೆ ಕೆಲಸ ಮಾಡಿಸಿರುವಂಥ ಅಧಿಕಾರಿಗಳನ್ನು ಬರೀ ಸಸ್ಪೆಂಡ್ ಮಾಡಿದರೆ ಏನೂ ಪ್ರಯೋಜನವಿರುವುದಿಲ್ಲ ನಾಲ್ಕು ಜನ ಅಧಿಕಾರಿಗಳನ್ನು ಕೆಲಸದಿಂದ ಡಿಸ್ಮಿಸ್ ಮಾಡಿದರೆ ಆಗ ಎಲ್ಲಾ ಸರಿಹೋಗುತ್ತದೆ. ಒಂದು ಕಿಲೋಮೀಟರ್ ರಸ್ತೆಗೆ ಟಾರ್ ಹಾಕುವ ಕೆಲಸವನ್ನು ಪಿ.ಡಬ್ಲ್ಯೂ.ಡಿ. ಇಲಾಖೆಯವರು ಮಾಡುತ್ತಿರುವಾಗ ಅವರು ಬೇಕಾದರೆ 5 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿ. ಅದುಬಿಟ್ಟು ಒಂದು ಕಿಲೋಮೀಟರ್‌ಗೆ 50 ಲಕ್ಷ, 60 ಲಕ್ಷ 85 ಲಕ್ಷ ರೂಪಾಯಿಗಳವರೆಗೆ ಖರ್ಚು ಮಾಡಿದ್ದಾರೆ. ಈ ಕೆಲಸಗಳು ಹತ್ತು ವರ್ಷಗಳ ಹಿಂದೆ ಮಾಡಿರುವಂಥಾದ್ದಲ್ಲ. ಎರಡು ವರ್ಷಗಳಿಂದೀಚೆಗೆ ನಿಮ್ಮ ಕಣ್ಣೆದುರೇ ಈ ಕೆಲಸಗಳು ಆಗಿವೆ. ಈ ಕಳಪೆ ಕೆಲಸ ನಡೆದಿರುವ ಬಗ್ಗೆ ಎನ್‌ಕ್ವೈಯರಿ ಮಾಡುವ ಬಗ್ಗೆ ಹಿಂದು ಮುಂದು ನೋಡುವುದು ಏತಕ್ಕೆ? ಇದರ ಬಗ್ಗೆ ನಾವು ಹೇಳಿದಾಗ, ಹಿಂದೆ ಯಾವ ರೀತಿ ನಡೆದಿತ್ತು? ಮುಂದೆ ಯಾವ ರೀತಿ ನಡೆಯುತ್ತದೆ? ಎಂದು ಒಂದು ತರಹ ಸ್ಟೈಲ್ ಆಗಿ ಮಾನ್ಯ ಮುಖ್ಯ ಮಂತ್ರಿಗಳು ಕೇಳುತ್ತಾರೆ? ಯಾವ ವ್ಯಕ್ತಿ ತಪ್ಪು ಮಾಡುತ್ತಾನೋ ಅವನಿಗೆ ಶಿಕ್ಷೆಯಾಗಲೇಬೇಕು. ನಾನು ತಪ್ಪು ಮಾಡಿದರೆ ನನಗೂ

ಶಿಕ್ಷೆಯಾಗಲೇಬೇಕು. ಅದೇ ರೀತಿ ಇವರು ಯಾವ ರೀತಿ ಅಥಾರಿಟಿಯನ್ನು ಮಿಸ್‌ಯೂಸ್ ಮಾಡಿಕೊಳ್ಳುತ್ತಾರೋ ಅದಕ್ಕೆ ಇವರೂ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ. ಇವರು ಮಾಡಿರುವ ತಪ್ಪು ಎತ್ತಿ ಕಾಣುತ್ತಿರುವಾಗ ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಕ್ಕಾಗುವುದಿಲ್ಲ. ಆ ಶಿಕ್ಷೆಗೆ ಇವರೇ ಗುರಿಯಾಗಬೇಕು. ಅದಕ್ಕಾಗಿ ಇದರಲ್ಲಿ ಯಾರು ತಪ್ಪು ಮಾಡಿದ್ದಾರೋ ಅವರನ್ನು ಕಂಡುಹಿಡಿಯಲೇಬೇಕು, ಕಂಡುಹಿಡಿಯದೇ ಇದ್ದರೆ ಇವರ ಆಶೀರ್ವಾದ ಅವರ ಮೇಲಿದೆ ಎನ್ನುವ ಮಾತು ಪುನಃ ಬರುತ್ತದೆ. ಅದಕ್ಕಾಗಿ ಈ ಕೆಲಸ ಆಗಬಾರದು. ಆದ್ದರಿಂದ, ಸರ್ಕಾರ ಒಂದು ಸ್ಪಷ್ಟವಾದ ನಿಲುವನ್ನು ತೆಗೆದುಕೊಂಡು ಇದರಲ್ಲಿ ಎಷ್ಟೇ ದೊಡ್ಡ ವ್ಯಕ್ತಿಗಳು ಇರಲಿ, ಯಾರೇ ಪುಢಾರಿಗಳು ಇರಲಿ ಅವರ ಮೇಲೆ ಕ್ರಮ ತೆಗೆದು ಕೊಳ್ಳಬೇಕು. ಇದರಲ್ಲಿ ಅನೇಕ ಜನ ನಮ್ಮ ಪಕ್ಷದ ಜನರು, ನಮ್ಮ ಪಕ್ಷದ ಮುಖಂಡರು ಇದ್ದಾರೆ, ಇವರ ಮೇಲೆ ಆ್ಯಕ್ಷನ್ ತೆಗೆದುಕೊಂಡರೆ ನನ್ನ ಮೇಲೆ ರೀ-ಬೌಂಡ್ ಆಗುತ್ತದೆಂದು ಮಾನ್ಯ ಮುಖ್ಯ ಮಂತ್ರಿಗಳು ಹೇಳಿದ ಹಾಗೆ ಇವರೂ ಹೇಳುವುದಕ್ಕೆ ಹೋದರೆ ತಪ್ಪಾಗುತ್ತದೆ. ಅದಕ್ಕಾಗಿ ದಯವಿಟ್ಟು ಇವರು ಈ ಮಾತನ್ನು ಹೇಳಬಾರದೆಂದು ಹೇಳುತ್ತೇನೆ. ಆಮೇಲೆ, ಕೃಷ್ಣ ಜಲ ಭಾಗ್ಯ ನಿಗಮದಿಂದ ರಿಪೇರಿ ಕೆಲಸಕ್ಕಾಗಿ ಕೊಟ್ಟಿರುವ ಸುಮಾರು 26 ಕೋಟಿ ರೂಪಾಯಿಗಳನ್ನು ಯಾವ ರೀತಿ ಅವ್ಯವಹಾರಕ್ಕೆ ಬಳಸಲಾಗಿದೆ ಎಂಬ ಬಗ್ಗೆ ಒಂದು ದೊಡ್ಡ ಪಟ್ಟಿಯೇ ಇದೆ. ಈ ಪಟ್ಟಿಯನ್ನು ತಮಗೆ ಕೊಡುತ್ತೇನೆ, ಅದರ ಬಗ್ಗೆ ಸಂಪೂರ್ಣವಾದ ಎನ್‌ಕ್ವೈರಿಯನ್ನು ಮಾಡಿಸಬೇಕು. ಭೀಮರಾಯನಗುಡಿಯಿಂದ ಹಿಡಿದುಕೊಂಡು ಒಡೆಗೇರಿಯವರೆಗೆ ಮಾಡಿರತಕ್ಕಂಥ ಕಾಲುವೆ ಕೆಲಸದಲ್ಲಿ ಯಾವ ರೀತಿ ಕಳಪೆ ಕೆಲಸವನ್ನು ಮಾಡಿ ಹಣವನ್ನು ಹೊಡೆಯಲಾಗಿದೆಯೆಂಬ ಬಗ್ಗೆ ವಿವರಗಳನ್ನು ಕೊಟ್ಟಿರುವುದರ ಜೊತೆಗೆ ಅವ್ಯವಹಾರ ಮಾಡಿರತಕ್ಕಂಥ ಅಧಿಕಾರಿಗಳ ಹೆಸರುಗಳನ್ನೂ ಈ ಪತ್ರದಲ್ಲಿ ಕೊಟ್ಟಿದ್ದೇನೆ. ಇದರ ಬಗ್ಗೆ ಕಾನೂನಿನ ಪ್ರಕಾರ ಕ್ರಮ ಜರುಗಿಸಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಆಮೇಲೆ ಕಾವೇರಿ ನೀರಿನ ವಿಷಯದಲ್ಲಿ ಈ ಸದನದಲ್ಲಿ ನಾವೆಲ್ಲರೂ ಪ್ರಸ್ತಾಪ ಮಾಡಿದ್ದೇವೆ. ಕಾವೇರಿ ರಿವರ್ ಅಥಾರಿಟಿ ಮಾಡುವ ಬಗ್ಗೆ ಕೇಂದ್ರ ಸರ್ಕಾರದವರು ಒತ್ತಾಯದಿಂದ ನೋಟಿಫಿಕೇಷನ್ ಜಾರಿ ಮಾಡಿದ್ದಾರೆ. ಆ ಒಂದು ಅಥಾರಿಟಿ ರಚನೆಗೆ ಒಪ್ಪಿಕೊಳ್ಳಬಾರದೆಂದು ನಮ್ಮೆಲ್ಲರ ಸ್ಪಷ್ಟವಾದ ನಿಲುವಾಗಿದೆ. ಇದರ ಬಗ್ಗೆ ಯಾವ ರೀತಿ ಮನವಿಯನ್ನು ಕೇಂದ್ರ ಸರ್ಕಾರಕ್ಕೆ ಮಾಡಲಾಗುತ್ತದೆಂಬ ಬಗ್ಗೆ ಅವರಿಗೇ ಬಿಟ್ಟಿದ್ದು. ಮೀಟಿಂಗ್‌ನಲ್ಲಿ ಎಲ್ಲಾ ವಿಷಯವನ್ನೂ ಚರ್ಚೆ ಮಾಡುವುದಕ್ಕಾಗುವುದಿಲ್ಲ, ಇದರ ಬಗ್ಗೆ ಅಡ್ವೊಕೇಟ್ಸ್ ಒಂದು ರೀತಿಯ ಒಪಿನಿಯನ್ ಕೊಡುತ್ತಾರೆ, ಇಲಾಖೆಯವರೇ ಒಂದು ರೀತಿಯ ಒಪಿನಿಯನ್ ಕೊಡುತ್ತಾರೆ, ಜನರ ಒಪಿನಿಯನ್ನೇ ಒಂದು ತರಹ ಇರುತ್ತದೆ. ಇದನ್ನು ಯಾವುದೇ ಕಾರಣಕ್ಕೂ ಒಪ್ಪಿಕೊಳ್ಳುವುದು ಬೇಡ, ಅದನ್ನು ತಿರಸ್ಕಾರ ಮಾಡಿ ಎಂದು ಜನರು ಹೇಳುತ್ತಾರೆ. ಅದರಂತೆ, ಇಡೀ ಸದನ ಆ ನೋಟಿಫಿಕೇಷನ್ ಅನ್ನು ತಿರಸ್ಕಾರ ಮಾಡಿದೆ, ಮತ್ತು ದಿನಾಂಕ : 26 ಜೂನ್ 1991 ರಲ್ಲಿ ಟ್ರಿಬ್ಯೂನಲ್‌ನವರು ಹೊರಡಿಸಿದ್ದ ಇಂಟೆರಿಂ ಆರ್ಡರನ್ನು ನಾವು ಒಪ್ಪಿಕೊಳ್ಳುವುದಿಲ್ಲವೆಂದು ಈ ಸದನದಲ್ಲಿ ರೆಸಲ್ಯೂಷನ್ ಮಾಡಿದ್ದೆವು. ಇದೆಲ್ಲಾ ಆಗಿರುವಾಗ ಇದನ್ನೂ ಇವರು ಗಮನದಲ್ಲಿ ಇಟ್ಟುಕೊಳ್ಳಬೇಕು. ಜನ ಏನು ಹೇಳುತ್ತಾರೆ? ಸದನ ಏನು ಹೇಳುತ್ತದೆ? ಮತ್ತು ಕಾನೂನು ಚೌಕಟ್ಟಿನಲ್ಲಿ ಯಾವುದನ್ನು ಒಪ್ಪಿಕೊಳ್ಳಬೇಕು, ಯಾವುದನ್ನು ಒಪ್ಪಿಕೊಳ್ಳಬಾರದೆಂಬ

ಬಗ್ಗೆ ಅವರು ಆಳವಾಗಿ ಅಭ್ಯಾಸ ಮಾಡಿ ಅದರ ಬಗ್ಗೆ ಹೇಳಿಕೆ ಅಥವಾ ಅಬ್ಜಕ್ಷನ್ ಫೈಲ್ ಮಾಡಬೇಕೆ ಹೊರತಾಗಿ ತರಾತುರಿಯಿಂದ ಏನೋ ಫೈಲ್ ಮಾಡುವುದು ಬೇಡ. ಇದರ ಬಗ್ಗೆ, ನಮ್ಮ ವಕೀಲರ ಮೂಲಕ ಸುಪ್ರೀಮ್ ಕೋರ್ಟ್‌ನಲ್ಲಿ ಒಂದು ತಿಂಗಳು ಟೈಮ್ ಕೇಳಿ ಇದರ ಬಗ್ಗೆ ವಿವರವಾಗಿ ವಿಚಾರ ಮಾಡಿ ಸ್ಪಷ್ಟವಾದ ನಿಲುವನ್ನು ತಿಳಿಸಬೇಕು. ಅನೇಕ ವಿಷಯಗಳಲ್ಲಿ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿದ್ದರೂ ರಾಜ್ಯದ ಹಿತದೃಷ್ಟಿಯಿಂದ ಮತ್ತು ರೈತರುಗಳ ಹಿತದೃಷ್ಟಿಯಿಂದ ನಾವುಗಳು ಅನೇಕ ಸಲಹೆಗಳನ್ನು ಕೊಟ್ಟು ಅವರ ಅಭಿಪ್ರಾಯವನ್ನು ಒಪ್ಪಿಕೊಂಡಿರುತ್ತೇವೆ. ಕೆಸರಿನಲ್ಲಿ ಬಿದ್ದವರಿಗೆ ಮೇಲೆ ಎತ್ತಿ ಹಿಡಿಯಬೇಕೆಂಬ ಉದ್ದೇಶದಿಂದ ನಾವು ಆ ಸಂದರ್ಭದಲ್ಲಿ ಸಹಕಾರ ಕೊಟ್ಟಿರುತ್ತೇವೆ. ಆ ದಿವಸ ಗೌರ್ನಮೆಂಟ್ ಆಫ್ ಇಂಡಿಯಾದ ಅಟಾರ್ನಿ ಜನರಲ್ ಅವರು ಹೇಳಿದಂಥ ಅಭಿಪ್ರಾಯಕ್ಕೆ ನಮ್ಮ ರಾಜ್ಯದ ಪರವಾಗಿ ವಾದಿಸುವ ವಕೀಲರುಗಳು ಒಪ್ಪಿದ್ದರಿಂದ ಈ ರೀತಿ ಆಯಿತು. ಅಟಾರ್ನಿ ಜನರಲ್ ಅವರು ಹೇಳಿದಂಥ ಅಭಿಪ್ರಾಯಕ್ಕೆ ಅವರು ಒಪ್ಪಿಕೊಳ್ಳದೇ ಇದ್ದಿದ್ದರೆ ಈ ಪರಿಸ್ಥಿತಿ ಬರುತ್ತಿರಲಿಲ್ಲವೆಂದು ನಾನು ಈ ಮೊದಲೇ ಪ್ರಸ್ತಾಪ ಮಾಡಿದಂಥ ಸಂದರ್ಭದಲ್ಲಿ ಹೇಳಿದ್ದೆ. ನಮ್ಮ ರಾಜ್ಯದ ಅಡ್ವೊಕೇಟ್ ಆದ ಅನಿಲ್‌ಧವನ್ ಅವರು ಗೌರ್ನಮೆಂಟ್ ಆಫ್ ಇಂಡಿಯಾದ ಅಟಾರ್ನಿ ಜನರಲ್ ಅಶೋಕ್ ದೇಸಾಯಿಯವರು ಹೇಳಿದ ಮಾತಿಗೆ ಸಹಮತ ಮಾಡಿದ್ದರು. ಏನೆಂದರೆ, ಒಂದು ಡ್ರಾಫ್ಟ್ ಸ್ಕೀಮ್‌ನ್ನು ಇಂಟರಿಂ ಆರ್ಡರ್ ಪ್ರಕಾರ ಮಾಡಿ ಕೇಂದ್ರ ಸರ್ಕಾರದ ಒಪ್ಪಿಗೆ ಮೇರೆಗೆ ತಂದು ಕೊಡುತ್ತೇವೆಂದು ಏನು ಹೇಳಿದ್ದರು? ಆ ಮಾತಿಗೆ ನಮ್ಮ ವಕೀಲರು ಒಪ್ಪಿಗೆ ಕೊಟ್ಟ ಮೇಲೆ ಈ ಪ್ರಶ್ನೆ ಬಂತು. ಒಂದು ವೇಳೆ ನಾನು ಇದಕ್ಕೆ ಒಪ್ಪದಿದ್ದರೆ ಬಹುಶಃ ಇನ್ನು 2-3 ತಿಂಗಳು ಮುಂದಕ್ಕೆ ಹೋಗುತ್ತಿತ್ತೇನೋ ಗೊತ್ತಿಲ್ಲ. ಇದಕ್ಕೆ ಎಲ್ಲರೂ ಕಾರಣಕರ್ತರಾಗಿದ್ದೀರಿ ಎಂದು ಹೇಳುತ್ತೇನೆ. ಈ ಒಂದು ಡ್ರಾಫ್ಟ್ ನೋಟಿಫಿಕೇಷನ್ ಜಾರಿಯಲ್ಲಿ ಬರಬೇಕಾದರೆ, ಈ ಒಂದು ಕರಾಳ ನೋಟಿಫಿಕೇಷನ್ ಹೊರಗಡೆ ಬರಬೇಕಾದರೆ, ಇದು ತಮಿಳುನಾಡಿನ ಸರ್ಕಾರವೇ ಡ್ರಾಫ್ಟ್ ಮಾಡಿದಂಥ ಈ ನೋಟಿಫಿಕೇಷನ್ ಅವರ ಪರವಾಗಿ ಇವತ್ತೇನು ಹೊರಬಿದ್ದಿದೆ, ಅದಕ್ಕೆ ಸಂಪೂರ್ಣವಾದಂಥ ಜವಾಬ್ದಾರಿ ಅವರದು ಇದ್ದರೂ ಕೂಡ, ಇವತ್ತು ಏಕೆ ನಿಮ್ಮ ಜೊತೆ ಸಹಕರಿಸುತ್ತಿದ್ದೇವೆ ಮತ್ತು ಪ್ರತಿಯೊಂದು ಮೀಟಿಂಗ್ ಸಹ ಹೋಗುತ್ತಿದ್ದೇವೆಂದರೆ, ರಾಜ್ಯದ ಹಿತದೃಷ್ಟಿಯಿಂದ ಸ್ವಲ್ಪವಾದರೂ ಒಳ್ಳೆಯದು ಆಗಬಹುದೇನೋ ಮತ್ತು ಈಗಲಾದರೂ ಸ್ವಲ್ಪ ತಡೆಹಿಡಿಯತಕ್ಕಂಥ ಕೆಲಸ ಆಗಬಹುದೇನೋ ಅಥವಾ ನಮಗೆ ಆಗಿರತಕ್ಕಂಥ ತೊಂದರೆ ಸ್ವಲ್ಪವಾದರೂ ಕಡಿಮೆ ಆಗಬಹುದೇನೋ ಎನ್ನತಕ್ಕಂಥ ದೃಷ್ಟಿಯಿಂದ ಇವತ್ತು ನಾವು ಸಹಕಾರವನ್ನು ಕೊಡುತ್ತಿದ್ದೇವೆ. ನಾಳೆ ದಿವಸ ನಿಮ್ಮೆಲ್ಲರ ಸಹಕಾರವನ್ನು ಕೇಳಿಕೊಂಡು ಅಬ್ಜಕ್ಷನ್ ಫೈಲ್ ಮಾಡಿದ್ದೇವೆ ಎನ್ನತಕ್ಕಂಥ ವಾದವನ್ನು ದಯವಿಟ್ಟು ಅವರು ಮಂಡಿಸಬಾರದು. ಅವರು ಮಂಡಿಸಿದ್ದರೂ ಕೂಡ ನಾವು ಅದನ್ನು ಮತ್ತೆ ಖಂಡಿಸಬೇಕಾಗುತ್ತದೆ. ಈ ವಿಷಯದ ಬಗ್ಗೆ ಈಗಾಗಲೇ ಚರ್ಚೆ ನಡೆದಿದೆ, ಮತ್ತೆ ಇದನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇದು ಯಾರಿಗೋಸ್ಕರ ಆಯಿತು, ಮತ್ತು ಆಗ ಯಾರು ಪ್ರಧಾನಮಂತ್ರಿಗಳಿದ್ದರು, ಯಾರ ಕಾಲದಲ್ಲಿ ಆಯಿತು ಎನ್ನತಕ್ಕಂಥದ್ದನ್ನು ನಾನು ಪುನಃ ವಾದಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಅವೆಲ್ಲವೂ ಅವರಿಗೆ ಗೊತ್ತಿದೆ. ಅಟಾರ್ನಿ ಜನರಲ್‌ರವರು ಒಪ್ಪಿ ಕೊಂಡಂತಹ ಸಮಯದಲ್ಲಿ ಯಾರು ಪ್ರಧಾನಮಂತ್ರಿಗಳು ಇದ್ದರು

ಎನ್ನುವುದು ಸಹ ಅವರಿಗೆ ಗೊತ್ತಿದೆ. ಅಲ್ಲಿ ನಮ್ಮವರೆ ಇದ್ದು ನಮಗೆ ರಕ್ಷಣೆ ಮಾಡದೆ ಇದ್ದಾಗ, ಆದರೆ, ಈಗ ಮಾನ್ಯ ಗುಜ್ರಾಲ್‌ರವರಿಂದ ಅಥವಾ ಇನ್ನೊಬ್ಬರಿಂದ ನಮಗೆ ರಕ್ಷಣೆ ಆಗುತ್ತದೆಂದು ನಾವು ಅಪೇಕ್ಷಣೆ ಪಡತಕ್ಕಂಥದ್ದು ಸಾಧ್ಯವಿಲ್ಲದ ಮಾತು. ಆದುದರಿಂದ, ಅದರ ಬಗ್ಗೆ ಪುನರ್ ಪರಿಶೀಲನೆ ಮಾಡಿ ಮತ್ತು ಸಮಯಬೇಕಾದರೆ ತೆಗೆದುಕೊಳ್ಳಿ ಏಕೆಂದರೆ, ಅದನ್ನು ಚಿಂತನೆ ಮಾಡಿ ನಾವು ಸರಿಯಾದಂಥ ರೀತಿಯಲ್ಲಿ ಅಬ್ಜಕ್ಷನ್ ಫೈಲ್ ಮಾಡದೆ ಹೋದರೆ ಇದೊಂದು ದೊಡ್ಡ ಗಂಡಾತರವಾಗುತ್ತದೆ. ನಮ್ಮ ರಾಜ್ಯದ ಕಾವೇರಿ ಬೇಸಿನ್ ಇರತಕ್ಕಂಥ ರೈತರಿಗೆ ನಾವಾಗಿಯೇ ಅವರ ಕುತ್ತಿಗೆಯನ್ನು ಕೊಯ್ದಂಗೆ ಆಗುತ್ತದೆ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ತಾವು ಆ ಭಾಗದಲ್ಲಿ ಒಂದು ಪ್ರಮುಖವಾದಂಥ ಕೆಲಸವನ್ನು ತೆಗೆದುಕೊಂಡಿದ್ದೀರಿ, ಇದನ್ನು ಹೋದ ಸಲ ಗಮನ ಸೆಳೆಯುವ ಸೂಚನೆಯಲ್ಲಿ ವಿಶ್ವೇಶ್ವರಯ್ಯ ಕೆನಾಲ್ ರಿಪೇರಿ ಬಗ್ಗೆ ಪ್ರಸ್ತಾಪ ಮಾಡಿದ್ದೆ, ಇಲ್ಲಿ ತಾವು ಆಸಕ್ತಿ ವಹಿಸಿ ಕೆಲಸ ಮಾಡಿಕೊಂಡಿದ್ದೀರಿ, ಏಕೆಂದರೆ ಅದು ನಿಮ್ಮ ಭಾಗದಲ್ಲಿ ಇದೆ ಮತ್ತು ನಿಮ್ಮ ಮತಕ್ಷೇತ್ರಕ್ಕೆ ಅನುಕೂಲವಾಗಲಿ ಎನ್ನತಕ್ಕಂಥ ದೃಷ್ಟಿಯಿಂದ ಮಾಡಿಕೊಂಡಿದ್ದೀರಿ. ಸುಮಾರು 55 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಇವತ್ತು ಹೆಚ್ಚುಕಡಿಮೆ 250 ಕೋಟಿ ರೂಪಾಯಿವರೆಗೆ ರಿವೈಸ್ಡ್ ಎಸ್ಟಿಮೇಟ್ ಆಗಿದೆ ಎನ್ನತಕ್ಕಂಥದ್ದು ಗೊತ್ತಾಗುತ್ತದೆ.1995-96ರಲ್ಲಿ ಅದರ ಎಸ್ಟಿಮೇಟ್ 170 ಕೋಟಿ ರೂಪಾಯಿಗಳು, ಆದರೆ ಈಗ ಸುಮಾರು 255 ಕೋಟಿ ರೂಪಾಯಿಗಳ ಸಮೀಪ ಹೆಚ್ಚುಕಡಿಮೆ ಬಂದಿದೆ. ಇದರಲ್ಲಿ ಸಾಕಷ್ಟು ಕಳಪೆ ಕೆಲಸಗಳು ನಡೆದಿವೆ ಎನ್ನುವುದರ ಬಗ್ಗೆ ಅವರ ಗಮನಕ್ಕೆ ನಾವು ತಂದಿದ್ದೇವೆ. ಅದರ ಬಗ್ಗೆ ಪತ್ರ ಕೂಡ ಬರೆದಿದ್ದೇವೆ. ಈ ಕೆಲಸಕ್ಕಾಗಿ 40 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ ಪ್ರಾವಿಜನ್ ಮಾಡಿದ್ದರು, ಇವರು ಸುಮಾರು80-85 ಕೋಟಿ ರೂಪಾಯಿಗಳವರೆಗೆ ಖರ್ಚುಮಾಡಿದ್ದಾರೆ. ಈ ಒಂದು ವಿ.ಸಿ. ಕೆನಾಲ್‌ಗೆ ಇಷ್ಟೊಂದು ಹಣವನ್ನು ಖರ್ಚು ಮಾಡುವುದಕ್ಕೆ ಮಾನ್ಯ ಸಿದ್ಧರಾಮಯ್ಯನವರು ಹೇಗೆ ಅಲೋ ಮಾಡಿದರು ಗೊತ್ತಿಲ್ಲ. ಬಜೆಟ್‌ನಲ್ಲಿ 40 ಕೋಟಿ ರೂಪಾಯಿಗಳ ಪ್ರಾವಿಜನ್ ಇದ್ದರೂ ಸುಮಾರು 80 ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಉದಾರತೆಯಿಂದ ಇವರು ಪರ್ಮಿಷನ್ ಕೊಟ್ಟಿದ್ದರು.

ಶ್ರೀ ಸಿದ್ಧರಾಮಯ್ಯ : ಮಾನ್ಯ ಉಪಾಧ್ಯಕ್ಷರೆ, ಮಾಡ್ರನೈಸೇಷನ್ ಆಫ್ ವಿಶ್ವೇಶ್ವರಯ್ಯ ಕೆನಾಲ್‌ದು ಏನೆಂದರೆ ಅದರ ಅಚ್ಚುಕಟ್ಟು ಪ್ರದೇಶದಲ್ಲಿ ಒಂದು ಬೆಳೆಯನ್ನು ಮಾತ್ರ ಬೆಳೆಯಬೇಕೆಂದು, ಬೇಸಿಗೆ ಬೆಳೆಯನ್ನು ಬೆಳೆಯಬಾರದೆಂದು ಹಾಗೂ ಈ ಕೆನಾಲ್ ಕೆಲಸವನ್ನು ಆದಷ್ಟು ಬೇಗ ಮುಗಿಸುತ್ತೇವೆಂದು ಬಜೆಟ್‌ನಲ್ಲಿ40 ಕೋಟಿ ರೂಪಾಯಿಗಳ ಪ್ರಾವಿಜನ್ ಮಾಡಿದ್ದೆವು. ಆ40ಕೋಟಿ ರೂಪಾಯಿಗಳಲ್ಲಿ ಇದುವರೆಗೆ 35 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಅಲ್ಲಿ ಕೆಲಸವು ಕೂಡ ಜಾಸ್ತಿಯಾಗಿದೆ. ಇದರಿಂದ ರೈತರುಗಳಿಗೆ ಸುಮಾರು 500-600 ಕೋಟಿ ರೂಪಾಯಿಗಳ ಬೆಳೆ ನಷ್ಟವಾಗಿದೆ ಎಂದು ಗಲಾಟೆ ಮಾಡಿರುವುದರಿಂದ ಕೆಲಸವನ್ನು ತ್ವರಿತವಾಗಿ ಮಾಡಿಸಿದ್ದೇವೆ. ಆದರೆ, ಇದುವರೆಗೆ ಬಜೆಟ್‌ನಲ್ಲಿ ಏನು ಪ್ರಾವಿಜನ್ ಇದೆಯೋ ಅದರೊಳಗೆ ಹಣವನ್ನು ಬಿಡುಗಡೆ ಮಾಡಿದ್ದೇವೆ. ಇನ್ನೂ ಹೆಚ್ಚಿಗೆ ಹಣ ಬೇಕಾದಲ್ಲಿ ರೀ-ಅಪ್ರೋಪ್ರಿಯೇಟ್ ಮಾಡಿಕೊಂಡು ಬಿಡುಗಡೆ ಮಾಡಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷರೆ, ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ನನ್ನ ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ:2571ಕ್ಕೆ, the quantity of steel and cement supplied from the Government for Vishveshwaraiah Canal modernisation from 1.1.97, the quantity of steel and cement used for modernisation works from 1.1.97 to 30.6.97 is as follows: Cement about 6,19,097 bags or 30,954 metric tonnes, steel 641.90 metric tonnes. ಈ ಸಿಮೆಂಟ್ ಮತ್ತು ಸ್ಟೀಲ್‌ನ್ನು ಬೇರೆ ಪ್ರಾಜೆಕ್ಟ್‌ನಿಂದ ಡೈವರ್ಟ್ ಮಾಡಿ ಇಲ್ಲಿ ತಂದಿದೆಯೋ? ಅಥವಾ ಇದು ಆ 55 ಕೋಟಿ ರೂಪಾಯಿಗಳ ಒಳಗೆ ಬರುತ್ತದೆಯೋ? ಆಮೇಲೆ 6 ಲಕ್ಷದ 19 ಸಾವಿರದ 97 ಚೀಲ ಸಿಮೆಂಟ್ ಹಾಗೂ 641 ಮೆಟ್ರಿಕ್ ಟನ್ ಸ್ಟೀಲಿನ ಬೆಲೆ ಮತ್ತು ಕಲ್ಲು, ಮಣ್ಣು ಎಲ್ಲಾ ಸೇರಿ ಈ 55 ಕೋಟಿ ರೂಪಾಯಿಯೊಳಗೆ ಬರುತ್ತದೆಯೋ ಅಥವಾ ಈ ಸಿಮೆಂಟ್ ಮತ್ತು ಸ್ಟೀಲ್‌ನ್ನು ಬೇರೆ ಪ್ರಾಜೆಕ್ಟ್‌ನಿಂದ ಡೈವರ್ಟ್ ಮಾಡಿ ಬರೀ ಕೆಲಸ ಮಾಡಿಸುವುದಕ್ಕಾಗಿ 55 ಕೋಟಿ ರೂಪಾಯಿಗಳನ್ನು ಕೊಡಲಾಗಿದೆಯೋ ಎಂಬ ಬಗ್ಗೆ ಸ್ಪಷ್ಟೀಕರಣವನ್ನು ಆಮೇಲೆ ನನಗೆ ಒದಗಿಸಿಕೊಡಬೇಕು. ಆಮೇಲೆ ನನ್ನ ಪ್ರಶ್ನೆಯಲ್ಲಿ ಎಷ್ಟು ಜನ ಕಂಟ್ರಾಕ್ಟರ್‌ಗಳು ಕೆಲಸ ಮಾಡಿದ್ದಾರೆಂದು ಕೇಳಿದ್ದೇನೆ. 'No. of contractors engaged, out of which number of state contractors and outside the state contractors working there with their full address.' ಎಂದು ಕೇಳಿದ್ದೇನೆ. ಆದರೆ ಅವರ ಅಡ್ರೆಸ್ ಸಿಗಲಿಲ್ಲ, ಬರೀ ನಂಬರ್ಸ್ ಸಿಕ್ಕಿತು. ಒಟ್ಟು 721 ಕಂಟ್ರಾಕ್ಟ್‌ರುಗಳು ಈ ಮಾಡರ್ನೈಸೆಷನ್ ಕೆಲಸವನ್ನು 6 ತಿಂಗಳಲ್ಲಿ ತರಾತುರಿಯಿಂದ ಮುಗಿಸತಕ್ಕಂಥ ಪ್ರಯತ್ನವನ್ನು ಮಾಡಿದ್ದಾರೆ. ಅದರಲ್ಲಿ 341 ಕಂಟ್ರಾಕ್ಟರ್‌ಗಳು ಮಾತ್ರ ತಮ್ಮ ಕೆಲಸವನ್ನು ಪೂರ್ಣವಾಗಿ ಮಾಡಿದ್ದಾರೆ. ಇನ್ನು ಉಳಿದ 400 ಜನ ಕಂಟ್ರಾಕ್ಟರ್ಸ್ ಅವರ ಕೆಲಸವನ್ನು ಇನ್ನೂ ಮುಗಿಸಿಲ್ಲ. ಅಂದರೆ ಈ ಮಾಡ್ರರ್ನೈಸೇಷನ್ ಕೆಲಸ ಇನ್ನು ಪೂರ್ಣವಾಗಿಲ್ಲ, ಅದ್ದರಿಂದ ಇನ್ ಟೈಮ್‌ನಲ್ಲಿ ನೀರು ಕೊಡುತ್ತೇವೆಂದು ರೈತರುಗಳಿಗೆ ಏನು ವಾಗ್ದಾನ ಮಾಡಿದ್ದರೋ ಅದು ಫುಲ್‌ಫಿಲ್ ಮಾಡಿಲ್ಲ. ಇಷ್ಟು ತರಾತುರಿಯಿಂದ ಒಂದಕ್ಕೆ ಎರಡರಷ್ಟು ಹಣ ಕೊಟ್ಟು ಕೆಲಸ ಮಾಡಿಸಿದ್ದರೂ ಕೂಡ ಮತ್ತು ಎಸ್ಕಲೇಷನ್ ಕಾಸ್ಟ್ 100 ಪರ್ಸೆಂಟ್ ಜಾಸ್ತಿ ಮಾಡಿದರೂ ಕೂಡ ಇನ್ನೂವರೆಗೆ ರೈತರಿಗೆ ನೀರು ಕೊಡುವುದಕ್ಕೆ ಆಗುತ್ತಿಲ್ಲ. ಎಷ್ಟು ಕಿ.ಮೀವರೆಗೆ ಇನ್ನೂ ನೀರು ಬಂದಿಲ್ಲ ಎನ್ನುವ ಬಗ್ಗೆ ಮಾಹಿತಿ ಬೇಕಾದರೆ ನಾನು ಕೊಡುತ್ತೇನೆ. ಇನ್ನು 400 ಜನ ಕಂಟ್ರಾಕ್ಟರ್ಸ್ ತಮ್ಮ ಕೆಲಸವನ್ನು ಮುಗಿಸಿಲ್ಲವೆಂದು ಅವರೇ ಹೇಳಿದ್ದಾರೆ. ಅದು ನಾವು ಹೇಳಿದ ಮಾತಲ್ಲ. ಇದು ತಮ್ಮ ಸ್ಟೇಟ್‌ಮೆಂಟ್‌ನಲ್ಲಿ ಇದೆ. ಇದಕ್ಕೆ ಟೋಟಲ್ ಹಣ ಎಷ್ಟು ಖರ್ಚು ಮಾಡಿದ್ದೀರಿ ಎಂದು ನಾನು ಕೇಳುತ್ತಿದ್ದೇನೆ.

(ಈ ಹಂತದಲ್ಲಿ ಸಭಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

From commencement of the modernisation to the date of commencement of the law i.e, Rs. 96.58 crores. From 20.1.97 Rs 55.50 crores, ಅಂದರೆ 20.1.1997 ರಿಂದ 30.6.1997ರವರೆಗೆ 55 ಕೋಟಿ 50 ಲಕ್ಷ ರೂಪಾಯಿ ನಾವು ಖರ್ಚು ಮಾಡಿದ್ದೇವೆಂದು

ಹೇಳಿದ್ದೀರಿ, ಅದರಲ್ಲಿ ಸುಮಾರು ಬ್ಯಾಲೆನ್ಸ್ ಇರತಕ್ಕಂಥ ಹಣ ಎಷ್ಟು ಎಂದರೆ 19 ಕೋಟಿ 50 ಲಕ್ಷ ರೂಪಾಯಿಗಳು. ಈ ಹಣವನ್ನು ತಾವು ರೀ-ಅಪ್ರೋಪ್ರಿಯೇಟ್ ಮಾಡಿ ಕೊಡತಕ್ಕಂಥದ್ದು, ಆದರೆ ಈಗ ಕೊಟ್ಟಿಲ್ಲ.

ಶ್ರೀ ಸಿದ್ಧರಾಮಯ್ಯ : ಇದು ಯಾವಾಗಿನಿಂದ ಪೆಂಡಿಂಗ್ ಇತ್ತು ನನಗೆ ಗೊತ್ತಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸ್ವಾಮಿ, ದಿನಾಂಕ 5.8.90ರಂದು ಈ ವಿಷಯದ ಬಗ್ಗೆ ಅಂದರೆ ಚುಕ್ಕೆ ಗುರ್ತಿನ ಪ್ರಶ್ನೆಗೆ ತಾವೇ ಉತ್ತರ ಕೊಟ್ಟಿದ್ದೀರಿ. ನೀವು ಉತ್ತರ ಕೊಟ್ಟು ಬಹಳ ಸಮಯ ಆಗಿಲ್ಲ, ಅದಕ್ಕಾಗಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ಈಗ ನಾನು ಕೇಳುವುದೇನೆಂದರೆ ಎಲ್ಲಿ ಪ್ರಾವಿಜನ್ 40 ಕೋಟಿ ರೂಪಾಯಿಗಳು ಇರುತ್ತದೆ, ಅಂಥ ಕಡೆ ಹೆಚ್ಚಿನ ಕೆಲಸವನ್ನು ಮಾಡುವುದಕ್ಕೆ 10-50 ಕೋಟಿ ರೂಪಾಯಿಗಳಷ್ಟು ಹಣವನ್ನು ಒದಗಿಸಿಕೊಡುವುದನ್ನು ತಾವು ಮಾಡುತ್ತೀರಿ. ಆಮೇಲೆ ನಾವು ಈಗಾಗಲೇ ಆರೂವರೆ ಲಕ್ಷ ಸಿಮೆಂಟ್ ಬ್ಯಾಗ್ ಏನು ಪರ್ಚೇಸ್ ಮಾಡಿದ್ದೀರಿ. ಅದು out of this fund or outside this fund or is it transported from other projects? ಎನ್ನತಕ್ಕಂಥದ್ದು ಮತ್ತು 640 ಮೆಟ್ರಿಕ್ ಟನ್ ಇವತ್ತು ಏನು ಸ್ಟೀಲ್ ಪರ್ಚೇಸ್ ಮಾಡಿದ್ದೀರಿ ಅದು ಯಾವುದರಿಂದ ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ಸ್ಪಷ್ಟಪಡಿಸಬೇಕೆಂದು ಹೇಳುತ್ತೇನೆ. ಇಲ್ಲಿ ಕಳಪೆ ಕೆಲಸ ನಡೆದಿದೆ ಎನ್ನತಕ್ಕಂಥದ್ದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ ನಾನು ಸುಮಾರು 92 ಕಿ.ಮೀ ಉದ್ದದ ಕೆಲಸವನ್ನು ಕಣ್ಣಾರೆ ನೋಡಿದ್ದೇನೆ. ಅದು ಪಿಚ್ಚಿಂಗ್ ಕೆಲಸವೇ ಇರಬಹುದು, ಡೀಸಿಲ್ಟ್ ಮಾಡತಕ್ಕಂಥ ಕೆಲಸವೇ ಇರಬಹುದು. ಮತ್ತು ಈ ಬುದುವಿಗೆ ಡೀಸಿಲ್ಟ್ ಮಾಡಿದಂಥ ಮಣ್ಣನ್ನು ಅಲ್ಲಿಯೇ ಹಾಕಿ ಅಲ್ಲಿಯೇ ಸಮಮಾಡಿ ಹಣವನ್ನು ದೋಚಿಕೊಂಡು ಹೋಗಿದ್ದೇ ಇರಬಹುದು. ಮತ್ತು ಇನ್ನೂ 400 ಜನ ಕಂಟ್ರಾಕ್ಟರ್ಸ್ ತಮ್ಮ ಕೆಲಸವನ್ನು ಮುಗಿಸದೇ ಇವೊತ್ತು ಹೋಗುತ್ತಾ ಇದ್ದಾರೆ, ಅವರನ್ನು ಹಿಡಿಯತಕ್ಕಂಥ ಶಕ್ತಿ ನಿಮ್ಮಲ್ಲಿ ಇಲ್ಲ, ಏಕೆಂದರೆ ಈ ಕೆಲಸವನ್ನು ಕರ್ನಾಟಕ ಕನ್ಸ್ಟ್ರಕ್ಷನ್ ಕಾರ್ಪೋರೇಷನ್ ವತಿಯಿಂದ ಅವರಿಗೆ ವಹಿಸಿಕೊಟ್ಟಿದ್ದೀರಿ. ಅವರು ನೇರ ಕಂಟ್ರಾಕ್ಟ್‌ನ್ನು ತೆಗೆದುಕೊಂಡಿಲ್ಲ. ಅವರಿಗೆ ಕೆಲಸವನ್ನು ಯಾರ ಮುಖಾಂತರ ವಹಿಸಿಕೊಟ್ಟಿದ್ದಾರೆ ಅಂದರೆ, ಕೆಸಿಸಿ ಮುಖಾಂತರ ವಹಿಸಿಕೊಟ್ಟಿದ್ದಾರೆ. ಕೋಟ್ಯಾಂತರ ರೂಪಾಯಿಗಳ ಕೆಲಸವನ್ನು ಕನ್ಸ್ಟ್ರಕ್ಷನ್ ಕಾರ್ಪೋರೇಷನ್‌ಗೆ ಏಕೆ ವಹಿಸಿಕೊಟ್ಟಿದ್ದೀರಿ? ಒಂದು ಕಡೆ ಪೀಸ್ ವರ್ಕ್ ಎಂದು ಯುಕೆಪಿಯಲ್ಲಿ ರಾತ್ರೋರಾತ್ರಿ ಮುನ್ನೂರು ಕೋಟಿ ರೂಪಾಯಿಗಳ ಕೆಲಸವನ್ನು ಕೊಟ್ಟಿದ್ದೀರಿ. ಇನ್ನೊಂದು ಕಡೆ ಕನ್ಸ್ಟ್ರನ್ ಕಾರ್ಪೋರೇಷನ್‌ಗೆ ಕೊಟ್ಟು ಅದರ ಮುಖಾಂತರ ಪೀಸ್‌ವರ್ಕನ್ನು ಇಲ್ಲಿ 700 ಜನರಿಗೆ ಕೊಡುತ್ತೀರಿ. ಈ 700 ಜನ ಕಂಟ್ರಾಕ್ಟರ್ಸ್ ಎಲ್ಲರೂ ಕ್ವಾಲಿಫೈಡ್ ಆಗಿದ್ದಾರೋ? ಅದಕ್ಕಾಗಿ ಇವರ ಕ್ವಾಲಿಫಿಕೇಶನ್ ಏನು? ಇವರು ಈ ಕೆಲಸಗಳಲ್ಲಿ ಏನಾದರೂ ಅನುಭವವನ್ನು ಪಡೆದಿದ್ದಾರೋ? ಇಂಥ ಟೆನಲ್ ಕೆಲಸ ಮಾಡತಕ್ಕಂಥಾದ್ದರಲ್ಲಿ ಇವರಿಗೆ ಅನುಭವ ಇದೆಯೇ? 6 ತಿಂಗಳಲ್ಲಿ ಕೆಲಸವನ್ನು ಮುಗಿಸಿ ರೈತರಿಗೆ ನೀರು ಕೊಡಬೇಕೆನ್ನುವಂಥ ತಮ್ಮ ಸದುದ್ದೇಶವಿರಬಹುದು. ಆದರೆ ಇಲ್ಲಿ ಹಣದ ವ್ಯವಹಾರವನ್ನು ನೋಡಿದಾಗ ಮತ್ತು ಭೌತಿಕ ಸಾಧನೆಯನ್ನು ನೋಡಿದಾಗ, ಫಿಜಿಕಲ್ ಅಚೀವ್‌ಮೆಂಟನ್ನು ನೋಡಿದಾಗ, ಅದರಲ್ಲಿ ಸಾಕಷ್ಟು

ವ್ಯತ್ಯಾಸವಿದೆ. ಇಷ್ಟೊಂದು ತರಾತುರಿಯಲ್ಲಿ, ಮತ್ತು ಇಷ್ಟೊಂದು ಕಂಟ್ರಾಕ್ಟರ್ಸ್‌ನ್ನು ಇನ್‌ವಾಲ್ವ್ ಮಾಡಿ ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮೂಲಕ ಕೆಲಸ ಎಲ್ಲಿಯೂ ನಡೆದಿಲ್ಲ. ಅದಕ್ಕಾಗಿ ನಾನು ಹೇಳಿದೆ, ಈ ಬಗ್ಗೆ ತನಿಖೆಯಾಗಬೇಕು. ಇದರಲ್ಲಿ ನೀವಂತೂ ಇನ್‌ವಾಲ್ವ್ ಇಲ್ಲ. ನಿಮ್ಮ ಬೆಂಬಲ ಯಾರಿಗೂ ಇಲ್ಲ. ಅಂದಾಗ ನೇರವಾಗಿ ನಾನು ಪದೇ ಪದೇ ಕೇಳುತ್ತಾ ಇದ್ದೇನೆ, ಇದನ್ನು ನೀವು ಲೋಕಾಯುಕ್ತಕ್ಕೆ ರೆಫರ್ ಮಾಡಿ. ಅದು ನಡೆಯಲಿ. ನಿಮಗೆ ಕೆಲಸವನ್ನು ನಿಲ್ಲಿಸಿ ಎಂದು ನಾನು ಹೇಳುವುದಿಲ್ಲ. ಕೆಲಸವನ್ನು ಇಟ್ಟುಕೊಂಡು ಬೇಕಾದರೆ ರೆಕಾರ್ಡ್ ಮಾಡಿಕೊಂಡು ಕೆಲಸ ಅರ್ಜಂಟ್ ಇದೆ, ಅಲ್ಲಿನ ರೈತರಿಗೆ ತೊಂದರೆಯಾಗುತ್ತದೆ ಎಂದು ಮಾಡಿ. ಆದರೆ ಇದು ಇಲ್ಲೀಗಲ್ ಇಲ್ಲವೆಂದಾಗ ಕೆಸಿಸಿಯವರು ಮಾಡಿದ್ದು ಸರಿ, ಅವರು ಸಣ್ಣಪುಟ್ಟ ಕಂಟ್ರಾಕ್ಟರ್ಸ್‌ಗೆ ಕೆಲಸವನ್ನು ವಹಿಸಿಕೊಟ್ಟಿದ್ದು ಸರಿ ಎಂದು ಹೇಳಿದರೆ, ಇವರ ಕೆಸಿಸಿ ಯವರೇ ಏಜೆಂಟ್ ಆಗಿ ಕೆಲಸವನ್ನು ಮಾಡಿದವರು. ಯಾವರೀತಿಯಲ್ಲಿ ಕಮೀಶನ್ ಏಜೆಂಟ್ಸ್ ರೈತರ ಮಾಲನ್ನು ತೆಗೆದುಕೊಂಡು ಹೋಗಿ ಅವರು ಬೇರೆಯವರಿಗೆ ಮಾರಿಕೊಂಡು ಏನೂ ಕೆಲಸವನ್ನು ಮಾಡದೆ ಯಾವರೀತಿಯಾಗಿ ಕಮೀಶನ್ ತೆಗೆದುಕೊಳ್ಳುತ್ತಾರೆ ಅದೇ ರೀತಿಯಾಗಿ ಕಮೀಶನ್ ನೇರವಾಗಿ ತೆಗೆದುಕೊಳ್ಳತಕ್ಕಂಥ ಸಂಸ್ಥೆ ಕೆಸಿಸಿ. ಏಕೆಂದರೆ ಅದರಲ್ಲಿ ಮೆಶಿನರಿ ಇರುವುದಿಲ್ಲ, ಇಂಜಿನಿಯರ್ಸ್ ಇಲ್ಲ. ಎಲ್ಲಾ ಇಂಜಿನಿಯರ್ಸ್ ಕೆಲಸವನ್ನು ತೆಗೆದುಕೊಳ್ಳತಕ್ಕಂಥವರು ಡಿಪಾರ್ಟ್‌ಮೆಂಟ್‌ನವರೇ, ಎಲ್ಲಾ ಮೆಶಿನರಿ ಹೆಚ್ಚು ಕಡಿಮೆ ಕಂಟ್ರಾಕ್ಟರ್ಸ್‌ಗಳದ್ದೇ. ಅಂದ ಹಾಗೆ ಇವರದ್ದು ಏನು ಕೆಲಸ? ಆ 10-15 ಪರ್‌ಸೆಂಟ್ ಹಣವಾದರೂ ಇಲಾಖೆಗೆ ಉಳಿಯುತ್ತಿತ್ತಲ್ಲ? 55 ಕೋಟಿ ಅಂದರೆ ಕನಿಷ್ಟಪಕ್ಷ ಐದಾರು ಕೋಟಿರೂಪಾಯಿಗಳಾದರೂ ಉಳಿಯುತ್ತಿತ್ತು. ನೀವು ಆ ಕೆಲಸವನ್ನು ಏಕೆ ಮಾಡಿಲ್ಲ? ಅದಕ್ಕೆ ನಾನು ಏನು ಹೇಳಬೇಕಾಗುತ್ತದೆ ಅಂದರೆ, ಈ 700 ಜನ ಕಂಟ್ರಾಕ್ಟರ್ಸ್ ಯಾರು ಅನ್‌ಕ್ವಾಲಿಫೈಡ್ ಇದ್ದಾರೋ, ಯಾರಿಗೆ ಕ್ವಾಲಿಫಿಕೇಶನ್ಸ್ ಇಲ್ಲವೋ ಅಥವಾ ಇದರಲ್ಲಿ ಎಷ್ಟು ಜನರು ಕ್ವಾಲಿಫೈಡ್ ಇದ್ದಾರೋ, ಯಾರಿಗೆ ಕ್ವಾಲಿಫಿಕೋಷನ್ಸ್ ಇಲ್ಲವೋ ಅಥವಾ ಇದರಲ್ಲಿ ಎಷ್ಟು ಜನರು ಕ್ವಾಲಿಫೈಡ್ ಇದ್ದಾರೆ ಎನ್ನತಕ್ಕಂಥಾದ್ದನ್ನು ತಾವು ಸ್ಪಷ್ಟವಾಗಿ ಹೇಳಬೇಕು. ಮತ್ತು ಇದರಲ್ಲಿ ಯಾವ ಇನ್‌ವಾಲ್ವ್‌ಮೆಂಟ್ ಇಲ್ಲವೆಂದರೆ ನೇರವಾಗಿ ಇದನ್ನು ಲೋಕಾಯುಕ್ತಕ್ಕೆ ಒಪ್ಪಿಸಿ, ಏಕೆಂದರೆ ಮಾಡತಕ್ಕಂಥ ಕೆಸಿಸಿಯವರಿಗೆ ಹೆದರಿಕೆ ಬರುತ್ತದೆ, ಆ ಕಂಟ್ರಾಕ್ಟರ್ಸ್‌ಗೆ ಹೆದರಿಕೆ ಬರುತ್ತದೆ, ಮತ್ತು ತರಾತುರಿಯಲ್ಲಿ ಬಿಲ್‌ನ್ನು ಮಾಡಿದಂಥ ಇಂಜಿನಿಯರ್‌ಗಳಿಗೂ ಕೂಡ ಹೆದರಿಕೆ ಬರುತ್ತದೆ. ಆದ್ದರಿಂದ ದಯಮಾಡಿ ಇದನ್ನು ಒಪ್ಪಿಸಬೇಕು. ನಾನು ಈಗಾಗಲೇ ಹೇಳಿದ್ದೇನೆ. ಈ ವಿ.ಸಿ. ಕೆನಾಲ್ ಮಾಡ್ರನೈಸೇಶನ್ ವರ್ಕನ್ನು ಒಪ್ಪಿಸಿದರೆ ನಿಚ್ಚಳವಾದಂಥ ರಿಪೋರ್ಟ್ ನಮಗೆ ಬರುತ್ತದೆ. ಮುಂದೆ ಯಾರು ತಪ್ಪಿತಸ್ಥರು ಇದ್ದಾರೋ ಅವರಿಗೆ ಶಿಕ್ಷೆ ಕೊಡಲು ಕೂಡ ಅನುಕೂಲವಾಗುತ್ತದೆ. ಇಲ್ಲವಾದಲ್ಲಿ ಇದರಲ್ಲಿ ಏನೋ ನಡೆದಿದೆ ಎಂಬ ಸಂಶಯ ಬರುತ್ತದೆ. ಆ ಸಂಶಯವನ್ನು ದಯಮಾಡಿ ತಾವು ಉಳಿಸಿಕೊಳ್ಳಬೇಡಿ. ವಿಚಾರಣೆಗೆ ಅನುಕೂಲ ಮಾಡಿಕೊಡಿ ಮತ್ತು ಇದರ ಪ್ರಕಾರ ಒಂದು ಡೈರೆಕ್ಷನ್‌ನ್ನು ಕೊಟ್ಟು ಲೋಕಾಯುಕ್ತಕ್ಕೆ ಒಪ್ಪಿಸಬೇಕೆಂದು ಪುನಃ ಒಮ್ಮೆ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಉಳಿದಂಥ ವಿಷಯಗಳನ್ನು ನಾನು ಪ್ರಸ್ತಾಪ ಮಾಡುವುದಿಲ್ಲ. ಹೋದ ಸಲ ಪ್ರಶ್ನೋತ್ತರ ಮುಖಾಂತರ ನಾವು ಈ ವಿಚಾರವನ್ನು ಕೇಳಿದ್ದೇವೆ. ಆದ್ದರಿಂದ ಇದನ್ನು ದಯಮಾಡಿ ಲೋಕಾಯುಕ್ತಕ್ಕೆ ಒಪ್ಪಿಸಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಕಾವೇರಿ ಬೇಸಿನ್‌ನಲ್ಲಿರತಕ್ಕಂಥ ಕೆಲವು ಪ್ರಾಜೆಕ್ಟ್‌ಗಳಿಗೆ

ತಾವು ಹಣವನ್ನು ಒದಗಿಸಿದ್ದೀರಿ. ಆದರೆ, ವಿಶೇಷತಃ ತುಮಕೂರು ಬ್ರಾಂಚ್‌ನಲ್ಲಿ ಎಷ್ಟು ತ್ವರಿತಗತಿಯಿಂದ ಕೆಲಸ ನಡೆಯಬೇಕೆಂದು ತಾವು ವಾಗ್ದಾನ ಮಾಡಿದ್ದೀರಿ, ಆ ರೀತಿಯಲ್ಲಿ ಅದು ನಡೆಯುತ್ತಾ ಇಲ್ಲ. ಅಲ್ಲಿಯ ಜನರು ಕೂಡ ತಮಗೆ ರೆಪ್ರಸೆಂಟೇಶನ್ ಕೊಟ್ಟಿದ್ದಾರೆ. ಅವರು ತಮ್ಮನ್ನು ಭೇಟಿ ಕೂಡ ಮಾಡಿದ್ದಾರೆ. ನೀವು ಅವರಿಗೆ ಏನು ಪ್ರಾಮಿಸ್ ಮಾಡಿದ್ದೀರಿ ಅದರ ಪ್ರಕಾರ ಹಣ ಬಿಡುಗಡೆಯಾಗಿಲ್ಲ ಎನ್ನತಕ್ಕಂಥದ್ದು ಕೂಡ ಆ ಮೆಮೊರ್ಯಾಂಡಂನಲ್ಲಿದೆ. ಆದ್ದರಿಂದ, ದಯಮಾಡಿ ಅಲ್ಲಿಯೂ ಕೂಡ ಹಣವನ್ನು ಬಿಡುಗಡೆ ಮಾಡಿ ತತ್‌ಕ್ಷಣ ಆ ಕೆಲಸವನ್ನು ಮುಗಿಸತಕ್ಕಂಥ ಕಾರ್ಯವನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಬಿಡುಗಡೆಯಾದ ಹಣವನ್ನು ಎಲ್‌ಒಸಿಯಲ್ಲಿ ಹೇಗೆ ಕೊಡುತ್ತಾರೆಂದು ತಾವು ಪ್ರಸ್ತಾಪ ಮಾಡಬೇಕಾಗಿತ್ತು. ಕಿಬ್ನಳ್ಳಿ, ತುಮಕೂರಿನಲ್ಲಿ ರಾತ್ರಿ ಎರಡು ಗಂಟೆಗೆ ಎಲ್‌ಒಸಿ ಯನ್ನು ಪೇಮೆಂಟ್ ಮಾಡುತ್ತಾರೆ. ಯಾರ್‍ಯಾರದ್ದು ಪ್ರೆಜರ್ ಇದೆ, ಯಾರ್‍ಯಾರಿಗೆ ಇನ್‌ಫ್ಲೂಯೆನ್ಸ್ ಇದೆ, ಅವರಿಗೆ ಎಲ್‌ಒಸಿ ಹೋಗುತ್ತಾ ಇದೆ. ಅದಕ್ಕೆ ಲೆಕ್ಕ ಇಲ್ಲ, ಪತ್ರ ಇಲ್ಲ. ಯಾವ ಕೆಲಸ ಸೆನ್ಸಿಟೀವ್ ಆಗಿದೆ, ಯಾವ ಕೆಲಸಕ್ಕೆ ಸೀನಿಯಾರಿಟಿ ಇದೆ ಎಂಬುದು ಏನೂ ಇಲ್ಲ. ನೀವು ಹಣವನ್ನು ಬಿಡುಗಡೆ ಮಾಡಿದ್ದೀರಿ. ಅದನ್ನು ಕೊಡುವುದಕ್ಕೆ ಏನು ಆಧಾರ ಮಾಡಿದ್ದೀರಿ ಎಂಬುದನ್ನು ತಾವು ಸ್ವಲ್ಪ ಕೇಳಬೇಕಾಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೀಗೆ ಕೊಟ್ಟಿದ್ದನ್ನು ಸದುಪಯೋಗ ಮಾಡಬೇಕೆಂದು ನಾವು ಇದುವರೆಗೆ ಎರಡೂವರೆ ತಾಸು ಮಾತನಾಡಿದ್ದೇವೆ. ಇದರಲ್ಲಿ ಏನಾಗುತ್ತಿದೆ ಅಂದರೆ, ಯಾವುದೇ ಪ್ರಾಜೆಕ್ಟ್, ಯಾವುದೇ ಕೆಲಸಕ್ಕೆ ತೆಗೆದುಕೊಳ್ಳಿ ಏನಾಗಿದೆ? ಎಲ್‌ಒಸಿ ಬಿಡುಗಡೆ ಆದಾಗಲೂ ದುಡ್ಡು, ಕಂಟ್ರಾಕ್ಟರ್ ಬಿಲ್ ರೆಕಾರ್ಡ್ ಮಾಡುವಾಗಲೂ ದುಡ್ಡು, ಆಮೇಲೆ ಇಲ್ಲಿ ಎಲ್‌ಓಸಿ ತೆಗೆದುಕೊಂಡು ಹೋಗುವಾಗಲೂ ಅದಕ್ಕೆ ಪ್ರಯತ್ನವಾಗಬೇಕು. ಅದು ಯಾರ್‍ಯಾರಿಗೆ ಇನ್‌ಫ್ಲೂಯೆನ್ಸ್ ಇರುತ್ತದೋ, ಯಾರ್‍ಯಾರಿಗೆ ಹೇಳುತ್ತಾರೋ ಅವರಿಗೆ ಮಾತ್ರ ಹಣ ಸಿಗುತ್ತದೆ. ಮಾನ್ಯ ಮಧುಸ್ವಾಮಿಯವರು ಹೇಳಿದ ಹಾಗೆ ಒಂದು ಸೀನಿಯಾರಿಟಿ ಮೈನ್‌ಟೈನ್ ಮಾಡಿ ಅಥವಾ ಕೆಲಸದ ಪ್ರಿಯಾರಿಟಿ ನೋಡಿಕೊಂಡು ಮುಂತಾಗಿ ಏನಾದರೂ ಒಂದು ಇತಿಮಿತಿಯನ್ನು ಮಾಡಿಕೊಳ್ಳಬೇಕಲ್ಲ? ರೂಲ್ಸ್, ಕೋಡ್ ಆಫ್ ಕಾಂಡಕ್ಟ್ ಆದರೂ ಫಾಲೋ ಮಾಡಬೇಕಲ್ಲ? ಅದನ್ನು ಮಾಡುವುದಿಲ್ಲ, ಯಾರಿಗೆ ಬೇಕೋ ಅವರಿಗೆ ಕೊಡುತ್ತಾರೆ. ಬೇಡವಾದವರಿಗೆ ಬಿಟ್ಟುಬಿಡುತ್ತಾರೆ. ಇದರಿಂದಾಗಿ ಕೆಲವು ಸಲ ಮಹತ್ವವಾದಂಥ ಕೆಲಸಗಳು ನಿಂತು ಹೋಗುತ್ತವೆ. ಏಕೆಂದರೆ ಯಾವ ಮನುಷ್ಯನಿಗೆ ನೀವು ಬಿಲ್ ಕೊಡಬೇಕೋ ಅವನಿಗೆ ಕೊಡುವುದಿಲ್ಲ. ಯಾರು ಇನ್ನೂ ನಾಲ್ಕು ದಿವಸ ತಡೆಯಬಹುದು, ಯಾರಿಗೆ ಬೇಕಾಗಿಲ್ಲವೋ ಅವರಿಗೆ ಕೊಡುತ್ತೀರಿ. ಹೀಗಾಗಿ ಇವೊತ್ತಿನ ದಿವಸ ಸಾಕಷ್ಟು ಅವ್ಯವಹಾರಗಳು ನಡೆದಿವೆ. ಅದಕ್ಕಾಗಿ ನಾನು ಹೇಳುವುದು.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ತುಮಕೂರು, ಯಡಿಯೂರು, ಕಿಬ್ನಳ್ಳಿ ಗಳಲ್ಲಿ ಎಲ್‌ಒಸಿ ಬಗ್ಗೆ ಪ್ರೈಯಾರಿಟಿ ಇಲ್ಲ, ಸೀನಿಯಾರಿಟಿ ಇಲ್ಲ ಎಂದು ಹೇಳಿದರು. ದಯಮಾಡಿ ಆ ಫಿಗರ್ಸ್‌ನ್ನು ಇಲ್ಲಿ ಮಂಡಿಸಿದರೆ, ಎಷ್ಟು ಜನರಿಗೆ ಪ್ರೈಯಾರಿಟಿ ಇಲ್ಲದೇ, ಸೀನಿಯಾರಿಟಿ ಇಲ್ಲದೇ, ಬಿಲ್

ಕೊಟ್ಟಿದ್ದಾರೆ, I want the actual figures as to who have taken the bill with out seniority, what is the percentage they have taken.

ಶ್ರೀ ಜೆ. ಸಿ. ಮಾಧುಸ್ವಾಮಿ : ನಾನು ಫಿಗರ್ಸ್ ಕೊಡುತ್ತೇನೆ. ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ?

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅವರಿಗೆ ಬಂದ ಕೆಲವು ಮಾಹಿತಿಗಳು ತಪ್ಪು ಬಂದಿರಬಹುದು. ವಿರೋಧಿಪಕ್ಷದ ನಾಯಕರು ಎಲ್ಲವನ್ನೂ ನೋಡುವುದಕ್ಕಾಗುವುದಿಲ್ಲ. ಇಡೀ ರಾಜ್ಯದಲ್ಲಿ ನಾವೀಗ ಎಲ್‌ಒಸಿ ಕೊಡಕ್ಕಂಥಾದ್ದನ್ನು ಸೀನಿಯಾರಿಟಿಯನ್ನು ಬಹಳ ಸ್ಟ್ರಿಕ್ಟ್ ಮಾಡಿದ್ದೇವೆ. ಕೇವಲ 10 ಪರ್‌ಸೆಂಟ್ ಮಾತ್ರ ಮದುವೆ ಮಾಡಿಕೊಳ್ಳುವವರಿಗೆ, ಖಾಯಿಲೆ ಬರತಕ್ಕಂಥವರಿಗೆ, ಸಣ್ಣ ಕಂಟ್ರಾಕ್ಟ್‌ರುಗಳಿಗೆ ಸ್ಥಳದಲ್ಲಿರತಕ್ಕಂಥವರಿಗೆ 10 ಪರ್‌ಸೆಂಟ್ ಮಾತ್ರ ಬಿಟ್ಟು 90 ಪರ್‌ಸೆಂಟ್‌ನಲ್ಲಿ ಎಲ್‌ಒಸಿ ಯಲ್ಲಿ ಯಾರಾದರೂ ವೈಲೆಟ್ ಮಾಡಿದರೆ ಅಂಥ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ. ಅವರ ಮೇಲೆ ಆ್ಯಕ್ಷನ್ ತೆಗೆದು ಕೊಂಡಿದ್ದೇವೆ. ಮಾನ್ಯ ಖರ್ಗೆಯವರಲ್ಲಿ ಮತ್ತು ಮಾಧುಸ್ವಾಮಿಯವರಲ್ಲಿ ನಾನು ಕೇಳುವುದೇನೆಂದರೆ, ಯಾರಿಗೆ10 ಪರ್‌ಸೆಂಟನ್ನು ಬಿಟ್ಟು ಯಾರ ಜ್ಯುರಿಸ್‌ಡಿಕ್ಷನ್‌ನಲ್ಲಿ ಎಲ್‌ಒಸಿಯನ್ನು ಕೊಟ್ಟಿದ್ದಾರೆ ಎಂಬುದನ್ನು ಹೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು, ಒದಗಿಸಿಕೊಡೋಣ. ಎಷ್ಟು ಒದಗಿಸಿಕೊಟ್ಟಿದ್ದೇವೆ ಅದಕ್ಕೆ ಉತ್ತರಗಳು ಬರಲಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಕಿಬ್ಬಳ್ಳಿಯದ್ದು ಅವರು ತರಿಸಿಕೊಳ್ಳಲಿ. ಇವರು ಸೀನಿಯಾರಿಟಿ ಮೇಲೆ ಕೊಟ್ಟಿದ್ದಾರೋ, ಪ್ರೈಯಾರಿಟಿ ಮೇಲೆ ಕೊಟ್ಟಿದ್ದಾರೋ ಎಂಬುದು ಅವರ ಇಂಜಿನಿಯರ್ ಹೇಳುತ್ತಾರೆ. ಕಾಗದ ಕೊಡುತ್ತೇನೆ.

SRI K. N. NAGEGOWDA : Engineer might have told him. Whether it is right or wrong that is to be made known.

ಶ್ರೀ ಜೆ. ಸಿ. ಮಾಧುಸ್ವಾಮಿ : ರಾತ್ರಿ ಎರಡು ಗಂಟೆಯಲ್ಲಿ ಪೋಲೀಸ್ ಪ್ರೊಟೆಕ್ಷನ್‌ನಲ್ಲಿ ಎಲ್‌ಒಸಿ ಕೊಡುತ್ತಾನೆ. ತಿಪಟೂರು ಪೋಲೀಸರನ್ನು ಕರೆದು ಪ್ರೊಟೆಕ್ಷನ್ ತೆಗೆದುಕೊಂಡರಲ್ಲ? ಏಕೆ ತೆಗೆದುಕೊಂಡರು ? ರಾತ್ರಿ ಎರಡು ಗಂಟೆಯಲ್ಲಿ ಎಲ್‌ಒಸಿ ಕೊಡುವ ಆತುರ ಏನಿದೆ ? was he not oobeying the law of the land.

SRI K. N. NAGEGOWDA : I will place it before the House, while I am replying.

ಅಧ್ಯಕ್ಷರು : ಅವರೇ ವಿವರವಾದ ಸ್ಟೇಟ್‌ಮೆಂಟ್ ಮಾಡಿಬಿಡುತ್ತಾರೆ. ಎಷ್ಟು ಹಣವನ್ನು ರಿಲೀಸ್ ಮಾಡಿದ್ದಾರೆ, ಸೀನಿಯಾರಿಟಿ ಇತ್ಯಾದಿ ಅವರೇ ಹೇಳಿಬಿಡುತ್ತಾರೆ. ನಿಮ್ಮ ಹತ್ತಿರ ಯಾವ ಡೀಟೈಲ್ಸ್ ಇರುವುದಿಲ್ಲ. ಅವರ ಕಡೆಯಲ್ಲಿ ಇರುವುದರಿಂದ ಅವರೇ ಸ್ಟೇಟ್‌ಮೆಂಟ್ ಮಾಡುತ್ತಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಈಗ ಆರುತಿಂಗಳಲ್ಲಿ ಕೊಟ್ಟಿರುವ ಸ್ಟೇಟ್‌ಮೆಂಟ್ ತರಿಸಿ. Let him produce that document.

ಶ್ರೀ ಕೆ. ಎನ್. ನಾಗೇಗೌಡ : ನಾನು ಸೀನಿಯಾರಿಟಿ ಪ್ರಕಾರ ಎಂದು ಹೇಳಿರತಕ್ಕಂಥಾದ್ದನ್ನು ನಾನು ಇಲ್ಲಿ ಮಂಡಿಸುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಕಿಬ್ನಳ್ಳಿ ಡಿವಿಜನ್‌ನಲ್ಲಿ ಆರುತಿಂಗಳಿಂದ ಆಗಿರುವ ಪೇಮೆಂಟ್‌ನದ್ದು ಪೆಂಡಿಗ್ ಬಿಲ್ ಎಷ್ಟಿತ್ತು, ನೋಟೀಸ್ ಬೋರ್ಡ್‌ಗೆ ಹಾಕಿಯೂ ಯಾರ್‍ಯಾರಿಗೆ ಕೊಟ್ಟಿಲ್ಲ ಎಂಬ ವಿವರವನ್ನು ನಾನು ತಂದುಕೊಡುತ್ತೇನೆ. ನೋಟೀಸ್ ಬೋಡ್‌ನಲ್ಲಿ ನಾಳೆ ಬಂದು ತೆಗೆದುಕೊಳ್ಳಿ ಎಂದು ಅನೌನ್ಸ್ ಮಾಡುತ್ತಾರೆ. ಆದರೆ ಮಾರನೆಯ ದಿವಸ ಅವರಿಗೆ ಬಿಲ್ ಕೊಡುವುದಿಲ್ಲ. ಆ ಮಾಹಿತಿಯನ್ನು ಈ ಸಭೆಗೆ ನಾನು ತಂದುಕೊಡುತ್ತೇನೆ. ನಾನು ತಂದುಕೊಡುತ್ತೇನೆ ಎಂದಾಗ ನೀವು ಏನು ಹೇಳುತ್ತೀರಿ ಎಂಬುದನ್ನು ಹೇಳಬೇಕು.

1.30 ಪಿ.ಎಂ.

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೆ, ತಾವೂ ಕೂಡ ಬಹಳಷ್ಟು ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ಇದ್ದೀರಿ ತಾವೂ ಬಹಳಷ್ಟು ನೋಡಿದ್ದೀರಿ.

ಅಧ್ಯಕ್ಷರು : ನಾನೇನು ನೋಡಿದ್ದೇನೆ. ನೀವು ನೋಡಿದ್ದೆಲ್ಲ ನಾನು ನೋಡಿದ್ದೇನೆಂದು ತಿಳಿದುಕೊಂಡರೇನೋ ಎಂದು.

ಶ್ರೀ ಕೆ. ಎನ್. ನಾಗೇಗೌಡ : ತಾವು ಎಲ್.ಓ.ಸಿ. ನೋಡದೇ ಇರಬಹುದು. ತಾವು ಸಿಸ್ಟಂ ನೋಡಿಲ್ಲವೇ? ತುಮಕೂರು ಜಿಲ್ಲೆಯ ಶಾಸಕರುಗಳು ನನ್ನನ್ನು ಅಪ್ರಿಷಿಯೇಟ್ ಮಾಡುತ್ತಾರೆಂದು ನಾನು ತಿಳಿದಿದ್ದೆ. ನಾವು ಎಷ್ಟು ಬಿಗಿ ಮಾಡಿದ್ದೇವೆಂದು ಅವರಿಗೆ ಗೊತ್ತಿದೆ. 10 ಪರ್ಸೆಂಟ್ ಡಿಸ್ಕ್ರಿಷನರಿ ಪವರ್ ಕೊಟ್ಟಿದ್ದೀರಿ ಆ 10 ಪರ್ಸೆಂಟ್‌ನಲ್ಲಿ ಎಲ್ಲಿಯಾದರೂ ಮಿಸ್‌ಯೂಸ್ ಮಾಡಿಕೊಂಡಿದ್ದರೆ ಅದನ್ನು ನನ್ನ ಗಮನಕ್ಕೆ ತರಲಿ. ಎಕ್ಸಿಕ್ಯುಟೀವ್ ಇಂಜಿನಿಯರ್ ಅನ್ನು ಕೂಡ ಸಸ್ಪೆಂಡ್ ಮಾಡಿದ್ದೇನೆ. ತುಂಬಾ ಸೀರಿಯಸ್ ಆಗಿ ಸ್ಕ್ವಾಡ್‌ಗಳನ್ನು, ವಿಜಲೆನ್ಸ್ ಅಧಿಕಾರಿಗಳನ್ನು ಕಳಿಸಿದ್ದೇನೆ ತುಮಕೂರು ಶಾಸಕರಿಗೆಲ್ಲ ಗೊತ್ತಿದೆ. ನಾವು ಸೀನಿಯಾರಿಟಿ ಬಿಟ್ಟು ಕೊಡುವುದಿಲ್ಲವೆಂದು ಅವರಿಗೆ ಗೊತ್ತಿದೆ. 10 ಪರ್ಸೆಂಟಿನಲ್ಲಿ ಮಿಸ್‌ಯೂಸ್ ಮಾಡಿಕೊಂಡಿದ್ದರೆ ನಾನು ಉತ್ತರ ಕೊಡುವಾಗ ವಿವರವನ್ನು ಕೊಡುತ್ತೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಎಲ್.ಓ.ಸಿ. ತೆಗೆದುಕೊಂಡು ಗುಬ್ಬಿಯಲ್ಲಿದ್ದ ಎಕ್ಸಿಕ್ಯುಟೀವ್ ಅಧಿಕಾರಿ ಕದ್ದು ಹೋದ. He absconded.

SRI. K.N. NAGEGOWDA : One or two cases might have happened. Immediately I telephoned the Chief Engineer to take disciplinary action against him. He has told me sir. Regarding LOC I am very very strict.

ಶ್ರೀ ಜೆ. ಸಿ. ಮಾಧುಸ್ವಾಮಿ : ಎಕ್ಸಿಕ್ಯುಟಿವ್ ಇಂಜಿನಿಯರ್ ಅಬ್‌ಸ್ಕ್ಯಾಂಡೆಡ್ ವಿತ್ ಎಲ್.ಓ.ಸಿ. ಕಿಬ್ಬನಹಳ್ಳಿ ಕ್ರಾಸ್‌ನವರನ್ನು ಅಲ್ಲಿಗೆ ಆಗ ತಂದು ಹಾಕಿದರು. ರಾತ್ರಿ 2 ಗಂಟೆಗೆ ನನ್ನ ಮನ ಮುಂದೆ ಕಂಟ್ರಾಕ್ಟರ್ಸ್ ಬಂದು ಧರಣಿ ಮಾಡಿದರು. ಅಲ್ಲಿ ಏನೂ ಮಾಡುತ್ತಿಲ್ಲ ನೀವು ಬನ್ನಿ ಎಂದು ಹೇಳಿದರು. I refused to go. ನಾನು ದೂರವಾಣಿಮಾಡಿ ಕೇಳಿದರೆ ತಿಪಟೂರಿನಿಂದ ಪೋಲೀಸಿನವರನ್ನು ತಂದು ಇಟ್ಟುಕೊಂಡು ಬೇಕಾದವರಿಗೆ ಎಲ್.ಓ.ಸಿ. ಕೊಟ್ಟರೆ ಹೇಗೆ? ನಾನು ಮಾನ್ಯ ಸಚಿವರಿಗೆ ಕೇಳಿದೆ. What is the affair going on in my constituency? ಎಂದು. ನನಗೆ ಇದರಲ್ಲಿ ಆಸಕ್ತಿ ಇಲ್ಲ. ಕಿಬ್ಬನ ಹಳ್ಳಿ ನನ್ನ ಕ್ಷೇತ್ರ ಕಂಟ್ರಾಕ್ಟರ್‌ಗಳು ರಾತ್ರಿ 2 ಗಂಟೆಗೆ ಬಂದು ನನ್ನ ಮುಂದೆ ಧರಣಿ ಮಾಡುವ ಸ್ಥಿತಿ ನಿರ್ಮಾಣವಾಗಿದೆ. Call him. ಎಂದು ಹೇಳಿದೆ. Nothing has taken place. ಇವತ್ತೂ ಈಗ 5-6 ದಿವಸದಲ್ಲಿ ಎಲ್.ಓ.ಸಿ. ಕೊಟ್ಟಿದ್ದಾರೆ. ಅವರ ಇಚ್ಛಾನುಸಾರ ಆ ಇಂಜಿನಿಯರ್ ಕೊಡುತ್ತಿದ್ದಾರೆ. ಸಣ್ಣ ಪುಟ್ಟ ಕೆಲಸ ಮಾಡಿದಂತಹ ಲೋಕಲ್ ಕಂಟ್ರಾಕ್ಟರ್ ಸಾಯುತ್ತಿದ್ದಾರೆ. ಬೇಕಾ ಇಷ್ಟು ಪರ್ಸೆಂಟ್ ಕೊಡು ಇಲ್ಲವಾದಲ್ಲಿ ಹೊರಗೆ ಹೋಗು ನೀನೇನು ನನಗೆ ಹೇಳುವುದು ಎಂದು ಆತ ಹೇಳುತ್ತಾನೆ. ಸೀನಿಯಾರಿಟಿ ಮಾಡಿ ಎಂದು ಹೇಳಿ ಇಂತಿಂತಹ ಕೆಲಸವನ್ನು ಸ್ಪೆಸಿಫೈ ಮಾಡಿ ಪ್ರೆಯಾರಿಟಿ ಕೊಡಿ ಎಂದು ತಾವು ಸಹಕಾರ ಹೇಳಿ.

ಅಧ್ಯಕ್ಷರು : ಪರ್ಸೆಂಟೇಜ್ ಮೊದಲಿನಿಂದ ಇತ್ತಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹಿಂದೆ ಯಾರೋ ಮಾಡುತ್ತಾರೆಂದು ನೀವು ಮಾಡಬೇಕೆಂದು ಹೇಳುತ್ತೀರೇನು? ಮೊದಲು ಮಾಡಿದವರನ್ನು ಶೂಲಕ್ಕೆ ಏರಿಸಿ. ಪದೇ ಪದೇ ನೀವು ಅದೇ ಹೇಳಿಕೊಂಡು ಬದುಕುವುದಕ್ಕಾಗುವುದಿಲ್ಲ. ನಾನು ತಪ್ಪು ಮಾಡಿದ್ದರೆ ನನಗೆ ಶಿಕ್ಷೆಯಾಗಬೇಕು ನೀವು ತಪ್ಪು ಮಾಡಿದ್ದರೆ ನಿಮಗೆ ಶಿಕ್ಷೆಯಾಗಬೇಕು. ಅದನ್ನೇ ಹೇಳಿಕೊಂಡು ಬದುಕುವುದಕ್ಕೆ100 ದಿವಸ ಆಗುವುದಿಲ್ಲ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ವಿರೋಧ ಪಕ್ಷದ ನಾಯಕರೆ, ತಾವು ಒಂದು ನಿಮಿಷ ಈಲ್ಡ್ ಆಗಿ. ಎಲ್.ಓ.ಸಿ ಬಗ್ಗೆ ಇಷ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಿ. ರಾಜ್ಯದ ಸರಕಾರಿ ಸಂಸ್ಥೆ ಬಗ್ಗೆ ಮಾತನಾಡುವಾಗ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ವಿ.ಸಿ. ಚಾನಲ್ ವಿಚಾರದಲ್ಲಿ 96 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ721 ಕಂಟ್ರಾಕ್ಟರ್‌ಗೆ ಕೊಟ್ಟಿದ್ದಾರೆ. ಎಲ್ಲ ಕೆ.ಎಸ್.ಎಫ್.ಸಿ ಮುಖಾಂತರ ಕೊಟ್ಟಿದ್ದಾರೆಂದು ಆರೋಪ ಮಾಡಿದಿರಿ. ತಾವು ಸರಿಯಾದ ಮಾಹಿತಿ ತರಿಸಿಕೊಳ್ಳಿ. ಕೆ.ಎಸ್.ಸಿ.ಸಿ.ಗೆ ಎಷ್ಟು ಕೆಲಸ ಕೊಟ್ಟಿದ್ದಾರೆಂದು ಮಾಹಿತಿ ತರಿಸಿಕೊಳ್ಳಿ. ಎಷ್ಟು ಜನ ಕಂಟ್ರಾಕ್ಟ್‌ರಿಗೆ ಕೊಟ್ಟಿದ್ದಾರೆಂದು ವಿಚಾರ ಮಾಡಿ. ಇದೊಂದು ಸರಕಾರಿ ಸಂಸ್ಥೆ ನಾಳೆ ಇದರ ಬಗ್ಗೆ ವಿಚಾರಣೆ ಮಾಡಿಸಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಒಂದು ಸರ್ಕಾರಿ ಸಂಸ್ಥೆ ನೀವು ಅಲ್ಲಿ ಕೆಲಸ ಮಾಡಿದ್ದೀರಿ. ಅದು ಅಲ್ಲ. ಇಲ್ಲಿ 722 ಜನ ಕಂಟ್ರಾಕ್ಟರ್‌ಗಳನ್ನು ಹುಟ್ಟಿಸಿದ್ದೀರಲ್ಲ. ಅವರು ಯಾರು? ಅದಕ್ಕೆ ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ.

ಶ್ರೀ ಎ. ಕೃಷ್ಣಪ್ಪ : ತಾವು ಮಾತನಾಡುವ ಸಂದರ್ಭದಲ್ಲಿ ಒಂದು ಸರಕಾರಿ ಸಂಸ್ಥೆ ಬಗ್ಗೆ ವಕ್ರ ದೃಷ್ಟಿ ಇಟ್ಟುಕೊಂಡು ಹೇಳುವುದು ಸರಿಯಲ್ಲ. ಸರಕಾರ ಕೊಟ್ಟಿರತ್ತಕಂತಹ ಕೇವಲ 10 ಕೋಟಿ ರೂಪಾಯಿ ಕೆಲಸಕ್ಕೆ721 ಕಂಟ್ರಾಕ್ಟರ್‌ಗಳು ಅವರ ಮುಖಾಂತರ ಹೋಗಿದ್ದಾರಾ? ತಾವು ಸ್ಪಾಟ್ ನೋಡಿದ್ದೇನೆಂದು ಹೇಳಿದ್ದೀರಲ್ಲನೀವೇ ಬಂದು ವಿಚಾರಣೆ ಮಾಡಿ. ಆ ಸರಕಾರಿ ಸಂಸ್ಥೆಯ ಬಗ್ಗೆ ವಿಚಾರಣೆ ಮಾಡಿ. ಅದರ ಬದಲು ಅದನ್ನು ಏಕೆ ವಕ್ರ ದೃಷ್ಟಿಯಿಂದ ನೋಡಿ ಆ ಸಂಸ್ಥೆಯನ್ನು ಹಾಳು ಮಾಡುವುದಕ್ಕೆ ಹೋಗುತ್ತಿದ್ದೀರಿ.

ಅಧ್ಯಕ್ಷರು : ನಾನು ತಮಾಷೆಯಾಗಿ ಪರ್ಸೆಂಟ್‌ಗಳು ಎಲ್ಲವೂ ಹಿಂದಿನಿಂದಲೂ ಇದೆ ಎಂದು ಹೇಳಿದ್ದು ನೀವು ಇದ್ದಾಗ ಇತ್ತೆಂದು ಹೇಳಿದ್ದಲ್ಲ, ನಾವು ನೀವು ಇಲ್ಲಿಗೆ ಬರುವುದಕ್ಕಿಂತಲೂ ಮೊದಲಿಂದ ಇತ್ತು.

(ಗೊಂದಲ)

ಶ್ರೀ ಎ. ಕೃಷ್ಣಪ್ಪ : ಕಾಂಗ್ರೆಸ್ ಸರಕಾರವಿದ್ದಾಗಲೂ ಇದೇ ರೀತಿ ಆಗುತ್ತಿತ್ತು.

(ಗೊಂದಲ)

ಶ್ರೀ ಕೆ. ಪ್ರತಾಪ ಚಂದ್ರಶೆಟ್ಟಿ : ನಮಗೆಲ್ಲಾ ಗೊತ್ತಿದೆ ಆ ಸಂಸ್ಥೆಯ ಅಧ್ಯಕ್ಷರು?

ಶ್ರೀ ಎ. ಕೃಷ್ಣಪ್ಪ : ಕಾಂಗ್ರೆಸ್ ಸರಕಾರವಿದ್ದಾಗ ಕೊಟ್ಟಿರಲಿಲ್ಲವೇ? ತಮ್ಮ ಕ್ಷೇತ್ರದಲ್ಲಿ ಕೊಟ್ಟಿರಲಿಲ್ಲವೇ?

ಅಧ್ಯಕ್ಷರು : ಇರಿಗೇಷನ್ ಅಂದರೆ ನೀರು ನೀರು ತಣ್ಣಗೆ ಇರಬೇಕು. ಹೀಗೆ ಬಿಸಿಯಾಗಬಾರದು. ಹೋಮ್ ಇಲಾಖೆ ಬಗ್ಗೆ ಮಾತನಾಡುವಾಗ ಫೈರಿಂಗ್ ಇರುತ್ತದೆ ಆಗ ಬಿಸಿಯಾಗಬಹುದು.

ಶ್ರೀ ಜೆ. ಸಿ. ಮಾಧುಸ್ವಾಮಿ : ಟೆಂಡರ್ ಕರೆದರೆ ಬೇಕಾದವರಿಗೆ ಗುತ್ತಿಗೆ ಸಿಗುವುದಿಲ್ಲವೆಂದು ಈ ಸಂಸ್ಥೆಯನ್ನು ನಡೆಸುತ್ತಿರುವುದು.

ಶ್ರೀ ಕೆ.ಪ್ರತಾಪ ಚಂದ್ರ ಶೆಟ್ಟಿ : ಆ ಸಂಸ್ಥೆಯ ಉದ್ದೇಶವೇನು ಯಾರಿಗೋಸ್ಕರ ಆ ಸಂಸ್ಥೆಯಾಗಿದೆ ಇದರ ಕಾರ್ಯಕ್ರಮವೇನು? ಪರ್ಸೆಂಟೇಜ್ ತೆಗೆದುಕೊಳ್ಳಲಿಕ್ಕೆ ಅವರ‍್ಯಾಕೆ ಇರಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರು ಹೇಳುತ್ತಾರೆ. ಮಾನ್ಯ ಕೃಷ್ಣಪ್ಪನವರೇ ಮಾನ್ಯ ಮಂತ್ರಿಗಳು ಡಿಫೆಂಡ್ ಮಾಡಿಕೊಳ್ಳುತ್ತಾರೆ. ನೀವೇಕೆ ಹೇಳುತ್ತೀರಿ. He is capable to defend himself.

ಶ್ರೀ ಎ. ಕೃಷ್ಣಪ್ಪ : ಅವರು ಕೇಪಬಲ್ ಇದ್ದಾರೆ. ತಾವು ಮಾಹಿತಿ ಕೊಡುವಾಗ ಸರಿಯಾಗಿ ಕೊಟ್ಟರೆ ಒಳ್ಳೆಯದು. ಜನರಿಗೆ ತಪ್ಪು ಮಾಹಿತಿ ಹೋಗುವುದು ಬೇಡ. ನಮ್ಮ ಸಂಸ್ಥೆಗೇನು ಕೊಟ್ಟಿದ್ದಾರೆ ಏನು ಅಲಿಗೇಷನ್ ಆಗಿದೆ ಇದರ ಬಗ್ಗೆ ತಪ್ಪು ಮಾಹಿತಿ ಜನರಿಗೆ ಹೋಗುವುದು ಬೇಡ.

ಶ್ರೀ ಸಿ. ಆರ್. ಸಗೀರ್ ಅಹಮದ್ : ಕೆಲಸ ಕೊಡುವುದು ನಿಲ್ಲಿಸಬೇಡಿ ಅವರಿಗೆ ಲುಕ್ಸಾನಾಗುತ್ತದೆ ಎನ್ನುವ ಅಭಿಪ್ರಾಯ ಅವರದ್ದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರಿಗೆ ಕೆಲಸ ಕೊಡಬೇಡಿ ಎಂದು ನಾನು ಹೇಳಲಿಲ್ಲವಲ್ಲ.

ಶ್ರೀ ಎಂ. ಕೃಷ್ಣಪ್ಪ : ಆ ಸಂಸ್ಥೆ ಇರುವುದು ಕೆಲಸ ಮಾಡುವುದಕ್ಕೆ.

ಮಾನ್ಯ ಸದಸ್ಯರು : ನೀವು ಒಂದು ರೀತಿಯಲ್ಲಿ ವ್ಯಂಗ್ಯವಾಗಿ ಮಾತನಾಡಿದಿರಲ್ಲ ಆ ರೀತಿ ಮಾತನಾಡುವುದನ್ನು ಬಿಟ್ಟು ಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೆಚ್ಚಿಗೆ ಪುನಃ ಅದರ ಮೇಲೆ ಪ್ರಸ್ತಾಪ ಮಾಡುವುದಿಲ್ಲ. ನಾನು 2-3 ಪ್ರಮುಖವಾದ ವಿಚಾರಗಳನ್ನು ಸರಕಾರದ ಗಮನಕ್ಕೆ ತಂದಿದ್ದೇನೆ ಮಾನ್ಯ ಮುಖ್ಯ ಮಂತ್ರಿಗಳು ಕೂಡ ಇಲ್ಲಿ ಇದ್ದರು ಅದರ ಬಗ್ಗೆ ನಾನು ಹೇಳಿದ್ದೇನೆ. ಈ ಮೂರು ಪ್ರಮುಖವಾದ ವಿಚಾರಗಳನ್ನು ನಾನು ಪ್ರಸ್ತಾಪ ಮಾಡಿದ್ದೆ. ತುಂಡು ಗುತ್ತಿಗೆ ಯುಕೆಪಿಯಲ್ಲಿ 300 ಕೋಟಿ ರೂಪಾಯಿಯದ್ದು 1-2 ದಿವಸದಲ್ಲಿ ಹೆಚ್ಚೂ ಕಡಿಮೆ ಏನು ಕೊಟ್ಟಿದ್ದಾರೆ ಅದರ ಬಗ್ಗೆ ತನಿಖೆ ನಡೆಸಬೇಕು. ಲೋಕಾಯುಕ್ತ ವಿಚಾರಣೆಯನ್ನಾದರೂ ಮಾಡಿ ಇಲ್ಲದೇ ತಾವು ಯಾವಾಗಲೂ ಹೇಳುತ್ತಿರುವ ಸಿ.ಬಿ.ಐ. ಗಾದರೂ ಕಳಿಸಿ. ವಿ.ಸಿ. ಕೆನಾಲ್ ಮಾಡ್ರನೈಸೇಷನ್ ಬಗ್ಗೆ ಏನು ಮಾನ್ಯ ಕೃಷ್ಣಪ್ಪನವರು ಡಿಫೆಂಡ್ ಮಾಡುತ್ತಿದ್ದಾರೆ. ಅದೇ ರೀತಿ ಮಾನ್ಯ ನಾಗೇಗೌಡರವರು ಕೂಡ ಮಾಡೇ ಮಾಡುತ್ತಾರೆ. ಅಲ್ಲಿ ಹಣವೇನು ಖರ್ಚಾಗಿದೆ ಅದಕ್ಕೆ ತಕ್ಕಂತೆ ಕೆಲಸವಾಗಿಲ್ಲ.6 ತಿಂಗಳಿನಿಂದ ಸಮರ್ಪಕವಾದ ಕೆಲಸ ನಡೆದಿಲ್ಲ. ಬೇರೆ ಪ್ರಾಜೆಕ್ಟ್‌ನಿಂದ ಡೈವರ್ಟ್ ಆಗತಕ್ಕಂತಹ ಸ್ಟೀಲ್ ಸಿಮೆಂಟ್ ಆಗಲೀ, ಮೆಷಿನರಿ ಡೈವರ್ಟ್ ಆಗತಕ್ಕಂಥಾದ್ದು ಕೆಲಸ ಕೂಡ ಆಗಿದೆ. ಅದಕ್ಕಾಗಿ ಲೋಕಾಯುಕ್ತದಿಂದ ತನಿಖೆ ಮಾಡಿಸಿ ಎಂದು ಕೇಳುತ್ತಿದ್ದೇನೆ. ನಮಗೆ ಕೊಟ್ಟಂತಹ ಪುಸ್ತಕದಲ್ಲಿ ಈ 44 ಟಿ.ಎಂ.ಸಿ ನೀರಿಗೆ ಯಾವ ಯೋಜನೆಯನ್ನೂ ಹಾಕಿಲ್ಲ. ನಿಮ್ಮ ತಲೆಯಲ್ಲಿ ಇಲ್ಲದೇ ಬೇರೆ ಪುಸ್ತಕದಲ್ಲಿ ಇದ್ದರೆ ಗೊತ್ತಿಲ್ಲ. ಸದನಕ್ಕೆ ಕೊಟ್ಟ ಪುಸ್ತಕದಲ್ಲಿ 44.95 ಟಿ.ಎಂ.ಸಿಗೆ ಯಾವುದೇ ಯೋಜನೆ ಇಲ್ಲ. ಕೃಷ್ಣ ಬೇಸಿನ್‌ನಲ್ಲಿ ತಾವು ಹಾಕಿದ್ದೀರಿ 2,000ದ ಇಸ್ವಿ ಒಳಗಾಗಿ ಬಚಾವತ್ ಅವಾರ್ಡ್ ಪ್ರಕಾರ ಕೃಷ್ಣ ಬೇಸಿನ್‌ನಲ್ಲಿ ನಮಗೆ ಅಲೋಕೇಷನ್ ಆದಂತಹ ನೀರನ್ನು ನಾವು ಉಪಯೋಗಮಾಡಬೇಕೆಂಬ ಕಂಡೀಷನ್ ಇದೆ. ಅದಕ್ಕೆ ಯಾವ ಕಾರ್ಯಕ್ರಮ ಹಾಕಿಲ್ಲ.2,000 ಇಸವಿಗೆ ಮುಗಿಸಬೇಕೆಂದರೆ ಎಷ್ಟು ಹಣ ಖರ್ಚು ಮಾಡಬೇಕು ಅದಕ್ಕೆ ತಕ್ಕಂತೆ ನಮ್ಮ ಫಿಸಿಕಲ್ ಅಚೀವ್‌ಮೆಂಟ್ ಟಾರ್ಗೆಟ್ ನಾವು ಅಚೀವ್ ಮಾಡಿಲ್ಲ. ಇದನ್ನು ಬಿಡಿಸಿ ಬಿಡಿಸಿ ತಮ್ಮ ಮುಂದಿಟ್ಟಿದ್ದೇನೆ. ಇದಕ್ಕೆ ತಾವು ದಯವಿಟ್ಟು ಉತ್ತರ ಕೊಡಬೇಕು. ಎಲ್ಲೆಲ್ಲಿ ಅವ್ಯವಹಾರ ನಡೆದಿದೆ ಇಲ್ಲವೇ ಎಲ್ಲೆಲ್ಲಿ ಈ ಆಪರೇಷನ್ ಮೈನ್‌ಟೇನೆನ್ಸ್‌ನಲ್ಲಿ ಏನು ಅವ್ಯವಹಾರ ನಡೆದಿದೆ ಅದೆಲ್ಲವನ್ನೂ ಲೋಕಾಯುಕ್ತಕ್ಕೆ ಹಾಕಬೇಕು. ಅದರಿಂದ ವರದಿ ಬಂದ ಮೇಲೆ ನಮಗೆಲ್ಲರಿಗೂ ತಿಳಿಯುತ್ತದೆ. ಇರಿಗೇಷನ್ ಇಲಾಖೆಯಲ್ಲಿ ಏನು ಕೆಲಸ ನಡೆದಿದೆ ಏನು ನಡೆದಿಲ್ಲ ಎಷ್ಟರ ಮಟ್ಟಿಗೆ ಯುಟಿಲೈಸ್ ಮಿಸ್‌ಯೂಸ್ ಆಗುತ್ತಿದೆ ಎಂದು ಹೊರಗೆ ಬರುತ್ತದೆ. ಈ ಕೆಲಸವನ್ನು ಮಾಡಬೇಕೆಂದು ತಮ್ಮ ಮುಖಾಂತರ ಮಂತ್ರಿಗಳನ್ನು ಸರಕಾರವನ್ನು ಕೇಳಿಕೊಳ್ಳುತ್ತೇನೆ. ಅವರು ತಕ್ಷಣ ಒಪ್ಪಿ ಈ 3-4

ವಿಚಾರಗಳನ್ನು ಲೋಕಾಯುಕ್ತಕ್ಕೆ ರೆಕಮೆಂಡ್ ಮಾಡುತ್ತಾರೆಂದು ತಿಳಿದಿದ್ದೇನೆ. ಕಾವೇರಿ ಡ್ರಾಫ್ಟ್ ನೋಟಿಫಿಕೇಷನ್ ಬಗ್ಗೆ ಹೇಳಿದ್ದೇನೆ ಇದನ್ನು ಸಂಪೂರ್ಣವಾಗಿ ತಿರಸ್ಕರಿಸಬೇಕು. ಸುಪ್ರೀಂ ಕೋರ್ಟಿನಲ್ಲಿ ಇನ್ನು 1-2 ತಿಂಗಳ ಸಮಯ ಕೇಳಿ ಪ್ರೋಸ್ ಅಂಡ್ ಕಾನ್ಸ್ ಎರಡೂ ನೋಡಿಕೊಂಡು ನಂತರ ನಿರ್ಣಯ ತೆಗೆದು ಕೊಳ್ಳುವುದು ಒಳ್ಳೆಯದೆಂದು ಹೇಳಿ ಇರಿಗೇಷನ್ ಬಗ್ಗೆ ಇಷ್ಟು ಮಾತ್ರ ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಎನ್. ನಾಗೇಗೌಡ : ನಾಳೆ ಕಾವೇರಿ ವಿಚಾರದಲ್ಲಿ ಸುಪ್ರೀಂ ಕೋರ್ಟ ಆದೇಶದ ಮೇಲೆಯೇ ಕ್ಲಾಸ್ ಬೈ ಕ್ಲಾಸ್‌ಗೆ ರಾಜ್ಯ ಸರಕಾರ ಕಾಮೆಂಟ್ಸ್ ಕೊಡಬೇಕು. 2 ವಾರದಲ್ಲಿ ಕೊಡ ಬೇಕೆಂದು ಸುಪ್ರೀಂ ಕೋರ್ಟಿನವರು ಕೇಂದ್ರ ಸರಕಾರಕ್ಕೆ ಡೈರೆಕ್ಷನ್ ಮಾಡಿದ್ದಾರೆ. ಬಹುಶಃ 3ನೇ ತಾರೀಖು ಕೊನೆಯ ದಿವಸ. ಇವತ್ತು ನಾವು 3,4, ನೇ ಸಭೆ ವಿವಿಧ ರಾಜಕೀಯ ಪಕ್ಷಗಳ ಮುಖಂಡರ ಸಭೆ ಸೇರುತ್ತಿದ್ದೇವೆ. ಸುಪ್ರೀಮ್ ಕೋರ್ಟಿಗೆ ಒಂದು ತಿಂಗಳ ಟೈಮ್ ಒಳಗಡೆ ನಾವು File ಮಾಡದೆ ಹೋದರೆ, if we do not file our comments by tomorrow, they will pass an exparte decision.

ಶ್ರೀ ಕಾಗೋಡು ತಿಮ್ಮಪ್ಪ : ಜವಾಬ್ದಾರಿಯಿಂದ ಚರ್ಚೆಯನ್ನು ಮಾಡಬೇಕಲ್ಲ, ಎಲ್ಲಿ ಮಾಡುತ್ತಿದ್ದೀರಿ ?

ಶ್ರೀ ಕೆ. ಎನ್. ನಾಗೇಗೌಡ : ಚರ್ಚೆ ಮಾಡುತ್ತಿದ್ದೇವೆ. ಈಗ 4 ದಿವಸವಾಯಿತು ಚರ್ಚೆ ಮಾಡುತ್ತಿದ್ದೇವೆ. ಯಾವುದೇ ವಿಚಾರವನ್ನು ಖರ್ಗೆಯವರು ಹೇಳಲಿ, ಯಡಿಯೂರಪ್ಪನವರು ಇದ್ದಾರೆ ನಾವು ಯಾವ ವಿಚಾರದಲ್ಲಿ ಮುಚ್ಚುಮರೆ ಇಲ್ಲ. ಪ್ರಾಧಿಕಾರದ ವಿವಾದ ಇದೆ ಎಂದು ನಾವು ಸ್ಪಷ್ಟಪಡಿಸಿಕೊಂಡು ಬಂದಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಪ್ರೀಂ ಕೋರ್ಟಿನಲ್ಲಿ ಅಂಡರ್ ಟೇಕಿಂಗ್ ತೆಗೆದುಕೊಂಡರಲ್ಲಾ ಅದನ್ನು ನಮ್ಮನ್ನು ಕೇಳಿ ತೆಗೆದುಕೊಂಡರೇ? ಅಟಾರ್ನಿ ಜನರಲ್ ಅಡ್ವೋಕೇಟ್ ಜನರಲ್ ಮಾತಿಗೆ ಒಪ್ಪಿಗೆ ಕೊಟ್ಟಿರಿ ನಮ್ಮನ್ನು ಕೇಳಿ ತೆಗೆದುಕೊಂಡಿರಾ? ಸ್ಕೀಮ್ ತಯಾರು ಮಾಡುವಾಗ ಪ್ರಧಾನ ಮಂತ್ರಿಗಳಿಗೆ ಅಂದಿನ ಪ್ರಧಾನ ಮಂತ್ರಿಗಳಿಗೆ ನಮ್ಮನ್ನು ಕೇಳಿ ಮಾಡಿದಿರಾ? ಇಡೀ ಜನರ ಕಣ್ಣಲ್ಲಿ ಇಡೀ ರಾಜ್ಯದ ಶಾಸಕರು ಒಂದಾಗಿದ್ದಾರೆ, ವಿಧಾನಸಭೆ ಬಂದಿದೆ. ರೈತರ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಹೇಳಿ ಈ ಅಭಿಪ್ರಾಯ ಬರಬೇಕು, ಬೇರೆ ರಾಜ್ಯಗಳಿಗೆ ಭಿನ್ನಾಭಿಪ್ರಾಯ ಇಲ್ಲಾ ಎಂದು ಗೊತ್ತಾಗಬಾರದೆನ್ನುವ ದೃಷ್ಟಿಯಿಂದ ನಾವು ಸಹಕಾರ ಕೊಡುತ್ತಿದ್ದೇವೆ. ಅದನ್ನು ಬಿಟ್ಟು ನೀವೆಲ್ಲದಕ್ಕೂ ಜವಾಬ್ದಾರಿ ಇದ್ದೀರಿ? ನಿಮ್ಮನ್ನು ಕೇಳಲಿಲ್ಲವೇನು ಬಾಕಿದಕ್ಕೆ ನಮ್ಮನ್ನು ಏಕೆ ಕೇಳಲಿಲ್ಲ? ಯಾವ ದಿವಸ ಸುಪ್ರೀಮ್ ಕೋರ್ಟ್ ಮುಂದೆ ನಿಮ್ಮ ಅಡ್ವೋಕೇಟ್ ಹೋದರು, ಅಟಾರ್ನಿ ಜನರಲ್ ಮಾತಿಗೆ ಒಪ್ಪಿಗೆಯನ್ನು ಕೊಟ್ಟರು ಆ ದಿವಸ ಕೇಳಿಬರುತ್ತೇನೆಂದು ಹೇಳಿ ಬರಬೇಕಾಗಿತ್ತು ನಿಮ್ಮ ಅಡ್ವೋಕೇಟ್.

ಶ್ರೀ ಬಿ. ಎಸ್. ಯಡಿಯೂರಪ್ಪ : ತಾವು ಡ್ರಾಫ್ಟ್ ನೋಟಿಫಿಕೇಷನ್‌ಗೆ ಟೈಮ್ ಒಳಗಡೆ ಕ್ಲಾಜ್ ಬೈ ಕ್ಲಾಜ್ ರಿಪ್ಲೈ ಕೊಡಬೇಕು ರಿಪ್ಲೈ ರೆಡಿಮಾಡಿದ್ದಾರಾ? ನಾವು ಕೆಲವು ಸಲಹೆಗಳನ್ನು ಕೊಟ್ಟಿದ್ದೇವು.

ನಾನು ನಿಮ್ಮನ್ನು ಕೇಳುವಂಥದ್ದು ಅಟಾರ್ನಿ ಜನರಲ್ ಯಾವಾಗ ಸುಪ್ರೀಮ್ ಕೋರ್ಟ್ ಮುಂದೆ ಈ ಡ್ರಾಫ್ಟ್ ನೋಟಿಫಿಕೇಷನ್ ತರುವ ಪ್ರಯತ್ನ ಮಾಡಿದರು ಆಗ ನಾವು ಯಾವುದೇ ಕಾರಣಕ್ಕೆ ರಾಷ್ಟ್ರೀಯ ಜಲ ನೀತಿ ಮಾರ್ಗಸೂಚಿ ರಚನೆ ಆಗುವವರೆಗೆ ಇದಕ್ಕೆ ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ನಾವು ಈಗಾಗಲೇ ಟ್ರಿಬ್ಯುನಲ್ ಇಂಟ್ರಿಮ್ ಆರ್ಡರ್‌ನ್ನು ಮಾಡುವುದನ್ನು ಪ್ರಶ್ನೆ ಮಾಡಿದ್ದೇವೆ ಅದು ಇನ್ನು ತೀರ್ಮಾನವಾಗಿಲ್ಲ. ಆದ್ದರಿಂದ ಈ ಪ್ರಸ್ತಾಪ ಖಾತ್ರಿ ಇಲ್ಲವೆಂದು ತಾವೇನಾದರೂ ನಮ್ಮ ಆಡ್ವೋಕೇಟ್ಸ್ ಅಬ್ಜಕ್ಷನ್ ಫೈಲ್ ಮಾಡಿದ್ದರೆ ಇವತ್ತು ಈ ದುಃಸ್ಥಿತಿ ಬರುತ್ತಿರಲಿಲ್ಲ. ತಾವು ಈ ಸದನಕ್ಕೆ ಆಶ್ವಾಸನೆ ಕೊಡುತ್ತೀರಾ? ತಾವು ಏನು ಹೇಳುತ್ತೀರಿ ಅದಕ್ಕೆ ನಾವು ಕಣ್ಣು ಮುಚ್ಚಿಕೊಂಡು ಸಹಿ ಮಾಡುತ್ತೇವೆ. ಆದರೆ ಈ ಒಂದು ಡ್ರಾಫ್ಟ್ ನೋಟಿಫಿಕೇಷನ್ ಜಾರಿಗೆ ಬರದಂತೆ ನೋಡಿಕೊಳ್ಳುವುದಕ್ಕೆ ಸಾಧ್ಯನಾ? ಸುಪ್ರೀಮ್ ಕೋರ್ಟ್ ಡೈರೆಕ್ಷನ್ ಏನು ಅಧ್ಯಕ್ಷರೆ, ಕಾವೇರಿ ಟ್ರಿಬ್ಯುನಲ್ ಇಂಟ್ರಿಮ್ ಆರ್ಡರ್, ಇಂಪ್ಲಿಮೆಂಟ್ ಮಾಡಬೇಕು. ಆ ಕಾರಣಕ್ಕೋಸ್ಕರ ಮಾಡಿದ್ದೇವೆ ನೀವು ಏನೇ ಅಬ್ಜಕ್ಷನ್ ಮಾಡಿದರು ನಾವು ಕ್ಲಾಜ್ ಬೈ ಕ್ಲಾಜ್ ಅಬ್ಜಕ್ಷನ್ ಹಾಕಿದರು ಅದು ಎಲ್ಲಿಗೆ ಹೋಗುತ್ತದೆ ಸೆಂಟ್ರಲ್ ಗೌರ್ನಮೆಂಟ್‌ಗೆ ಹೋಗುತ್ತದೆ. Among ಅದರ ಸ್ಟೇಟ್ ಅವರು ಸರ್ಕ್ಯುಲೇಟ್ ಮಾಡುತ್ತಾರೆ, ಅವರು ಸಲಹೆ ಕೊಡುತ್ತಾರೆ ಅಲ್ಟಿಮೇಟಾಗಿ ಇಂಟ್ರಿಮ್ ಆರ್ಡರ್ ಇಂಪ್ಲಿಮೆಂಟ್ ಮಾಡಬೇಕು ಅದಕ್ಕೋಸ್ಕರ ಒಂದು ಶರತ್ತಿಗೆ ನೀವು ಬದ್ಧರಾಗಬೇಕಾಗುತ್ತದೆ. ಹೆಜ್ಜೆ ಹೆಜ್ಜೆಗೂ ನಾವು ತಪ್ಪು ಹೆಜ್ಜೆ ಇಟ್ಟುಕೊಂಡುಬಂದು ನಾವು ಪ್ರಧಾನ ಮಂತ್ರಿಗಳನ್ನು ನೋಡುವುದಕ್ಕೆ ಹೋಗಿದ್ದು ಅವರು ಆಶ್ವಾಸನೆ ಕೊಟ್ಟಿದ್ದು ಕ್ಲಾಜ್ ಬೈ ಕ್ಲಾಜ್ ಅಬ್ಜಕ್ಷನ್ ಹಾಕುತ್ತೇವೆಂದು ಇದೆಲ್ಲವೂ ಬೂಟಾಟಿಕೆ ಇದು ಎಲ್ಲವು ನಾವು ಜನರಿಗೆ ಅನ್ಯಾಯ ಮಾಡುವಂಥದ್ದು. ಇದು ಯಾವ ಕಾರಣಕ್ಕೂ ಈ ಸದನದಲ್ಲಿ ನಾನು ರೆಕಾರ್ಡಿನಲ್ಲಿ ಹೇಳುತ್ತೇನೆ ಯಾವ ಕಾರಣಕ್ಕೂ ಇಂಟ್ರಿಮ್ ಆರ್ಡರನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ತಡೆಯುವುದಕ್ಕಾಗುವುದಿಲ್ಲ. ಆ ಕಾಲ ಮೀರಿ ಹೋಗಿದೆ ಅದನ್ನು ವಿಳಂಬವಾದರೂ ಮಾಡಬಹುದಾಗಿತ್ತು. ಅದಕ್ಕೆ ಸುಪ್ರೀಮ್ ಕೋರ್ಟ್ ಮುಂದೆ ಒಪ್ಪಿಗೆ ಕೊಡದಿದ್ದರೆ ಅದಕ್ಕೆ ಶಹಬಾಷ್‌ಗಿರಿಯನ್ನು ಕೊಡುತ್ತಿದ್ದೆವು. ನಿಮ್ಮ ಕರ್ನಾಟಕ ಭವನದಲ್ಲಿ ಎಲ್ಲಾ ವ್ಯವಸ್ಥೆ ಇದೆ ನಿಮ್ಮ ಲೀಗಲ್ ಅಡ್ವೈಜರ್ ಅಲ್ಲಿದ್ದಾರೆ. ಕ್ಷಣಕ್ಷಣಕ್ಕೂ ಏನು ಅವರು ಮಾರ್ಗದರ್ಶನ ಮಾಡಬೇಕಾಗಿತ್ತು ನಮ್ಮ ಪರವಾಗಿ ಅಪಿಯರ್ ಆಗುವ ಅಡ್ವೊಕೇಟ್‌ಗೆ ನೀವು ಮಾಡಲಿಲ್ಲ, ಅಲ್ಲಿ ಒಪ್ಪಿಕೊಂಡು ಬರದಿದ್ದರೆ ಈ ಸಮಸ್ಯೆ ಉದ್ಭವ ಆಗುತ್ತಿತ್ತಾ? ಇವತ್ತು ನಮ್ಮನ್ನು ಏಕೆ ಕರೆಯುತ್ತೀರಿ ಆ ಪೇಚಿಗೆ ಕ್ಲಾಜ್ ಬೈ ಕ್ಲಾಜ್ ಅಬ್ಜಕ್ಷನ್ ಹಾಕುವುದು ನಿಮ್ಮ ಡ್ಯೂಟಿ ಹಿಂದೆಯೂ ನಮ್ಮನ್ನು ಕೇಳಲಿಲ್ಲ. ಸುಪ್ರೀಮ್ ಕೋರ್ಟ್ ಮುಂದೆ ಏನು ಮಾಡಬೇಕು ಈ ನೋಟಿಫಿಕೇಷನ್‌ನ್ನು ಜಾರಿಗೆ ತರುವುದಕ್ಕೆ ಮುಂಚೆ ಹಾಕುತ್ತೇವೆಂದಾಗ ನಮ್ಮ ಸಲಹೆಯನ್ನು ಏಕೆ ಕೇಳಲಿಲ್ಲ? ಅವತ್ತಿನಿಂದ ನಾವು ಇಲ್ಲಿ ಎಲ್ಲಾ ಕಡೆ ಕುಳಿತುಕೊಂಡು ಬಂದಿದ್ದೇವೆ ಇದು ಒಂದು ವಿಷಯದಲ್ಲಿ ತಾವು ಎಡವಿದ್ದೀರಾ? ನಿಮ್ಮ ಕರ್ತವ್ಯವನ್ನು ನಿರ್ವಹಿಸಿಲ್ಲ. ನಮ್ಮ ರೈತರು ಸಂಕಷ್ಟಕ್ಕೆ ಸಿಕ್ಕಿಕೊಳ್ಳುತ್ತಾರೆ. ಯಾವುದೇ ಕಾರಣಕ್ಕೂ ನಾವು ಸುಪ್ರೀಮ್ ಕೋರ್ಟ್ ಮುಂದೆಯೂ ನಾವು ಕೈ ಕಟ್ಟಿಸಿಕೊಂಡಿದ್ದೇವೆ. ಪ್ರಧಾನ ಮಂತ್ರಿಯವರು ಹೇಳಿದಂತೆ ಸಂಬಂಧಪಟ್ಟ ಮುಖ್ಯಮಂತ್ರಿಯವರ ಜೊತೆ ಮಾತುಕತೆಯೂ ಆಡಲಿಲ್ಲ. ಅಟಾರ್ನಿ ಜನರಲ್‌ರಿಂದ ಈಗ ನೋಟಿಫಿಕೇಷನ್ ಅಗತ್ಯವಿಲ್ಲವೆಂದು ಒಂದು ಅಪ್ಲಿಕೇಷನ್

ಹಾಕಿಸಿ ಎಂದು ಹೇಳಿದೆವು ಅದರಲ್ಲಿ ನೀವು ಯಶಸ್ವಿಯಾಗಲಿಲ್ಲ. ನಮ್ಮನ್ನು ಎಲ್ಲಿಗೆ ಯಾವ ಸ್ಥಿತಿಗೆ ತೆಗೆದುಕೊಂಡು ಹೋಗುತ್ತೀರೋ ಗೊತ್ತಿಲ್ಲ ನಾಗೇಗೌಡರೇ? ಖಂಡಿತವಾಗಿ ಹೇಳಿ ನೀವು ಈ ಸದನದಲ್ಲಿ ಯಡಿಯೂರಪ್ಪನವರೇ ಇಂಪ್ಲಿಮೆಂಟ್ ಆಗದಂತೆ ನಾವು ನೋಡಿಕೊಳ್ಳುತ್ತೇವೆ ಇಂಟ್ರೀಮ್ ಆರ್ಡರ್, ಪಡೆಯಲು ನೀವು ನಮ್ಮ ಜೊತಗೆ ಬನ್ನಿ ಎಂದು ಹೇಳಿ ನಾವು ನಿಮ್ಮ ಜೊತೆ ಬರುವುದಕ್ಕೆ ಸಿದ್ಧರಾಗಿದ್ದೇವೆ. ಅದಕ್ಕೆ ನೀವು ಎಡವಿದ್ದೀರಿ ತಪ್ಪು ಮಾಡಿದ್ದೀರಿ ಯಾವ ಸಮಯದಲ್ಲಿ ನೀವು ಜಾಗೃತರಾಗಿರಬೇಕು ಆ ಸಮಯದಲ್ಲಿ ಜಾಗೃತರಾಗಿದ್ದು ಆ ಕೆಲಸವನ್ನು ನೀವು ಮಾಡಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೆ, ಈಗ ನೀರಾವರಿ ಇಲಾಖೆಯ ಬಗ್ಗೆ ನನ್ನ ಮಾತನ್ನು ಅಷ್ಟಕ್ಕೆ ಹೇಳಿ ಮುಗಿಸುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಅಬಕಾರಿ ಇಲಾಖೆಯನ್ನು ವಹಿಸಿಕೊಂಡಿದ್ದಾರೆ. ಅದಕ್ಕೆ ಹೆಚ್ಚಿನ ಜವಾಬ್ಧಾರಿ ಅವರ ಮೇಲೆ ಇದೆ ಮತ್ತು ಇದರ ಆದಾಯ ಸೋರಿ ಹೋಗದ ರೀತಿಯಲ್ಲಿ ಅವರು ಕೆಲಸ ಮಾಡತಕ್ಕಂಥದ್ದು ಅವರ ಪ್ರಮುಖವಾದಂಥ ಜವಾಬ್ದಾರಿ ಇದೆ. ಅಬಕಾರಿ ಇಲಾಖೆಯಲ್ಲಿ ಬರತಕ್ಕಂಥ ರೆವಿನ್ಯೂ ಬಹುಶಃ ಇದು ಎರಡನೆಯ ರೆವಿನ್ಯೂ ಅಂದರೆ ಪ್ರಮುವಾದಂಥದ್ದು, ಸೇಲ್ಸ್‌ಟ್ಯಾಕ್ಸ್ ಬಿಟ್ಟರೆ ಎರಡನೆಯದು ರೆವಿನ್ಯೂ ನಮಗೆ ಅಬಕಾರಿ ಇಲಾಖೆಯಿಂದ ಬರುತ್ತದೆ. ಈಗ ಎರಡನೆ ರೆವಿನ್ಯೂ ನಮಗೆ ಏನು ಬರುತ್ತಾ ಇದೆ, ಇದರಲ್ಲಿ ಏನು ನಡೆದಿದೆ ಎನ್ನತಕ್ಕಂಥದ್ದು ನಾವು ಸ್ವಲ್ಪ ಯೋಚನೆ ಮಾಡಬೇಕಾದಂಥದ್ದು ಒಳ್ಳೆಯದು. ಪ್ರಕಾಶ್‌ಅವರು ನೋಡಿಕೊಳ್ಳುತ್ತಾರೋ ಯಾರು ನೋಡಿಕೊಳ್ಳುತ್ತಾರೋ? ಏಕೆಂದರೆ ನೀರಿನವರು ಹೋದರು. ಇದರಲ್ಲಿ ಏನು ಅಂದರೆ ಅಧ್ಯಕ್ಷರೆ, ನೀವು ಒಬ್ಬೊಬ್ಬರಿಗೆ ಒಂದೊಂದು ಪೋರ್ಟ್ ಫೋಲಿಯೋ ಕೊಡುತ್ತೀರಾ, ಬಹುಶಃ ನೀವು ಮುಖ್ಯ ಮಂತ್ರಿಯಾದ ಮೇಲೆ ಅವರವರಿಗೆತಕ್ಕಂತೆ ಪೋರ್ಟ್‌ಫೋಲಿಯೋವನ್ನು ಚ್ಯೂಸ್ ಮಾಡುತ್ತೀರಿ. ಇದರಲ್ಲಿ ಏನಾಗಿದೆ ಅಂದರೆ ಅಬಕಾರಿ ಇಲಾಖೆ ಇದು ಅತ್ಯಂತ ಮಹತ್ವದ ಖಾತೆ ರೆವಿನ್ಯೂ ದೃಷ್ಟಿಯಿಂದ. ಆದರೆ, ಇಲ್ಲಿ ಸರ್ಕಾರದವರು ಈ ಇಲಾಖೆ ಬಗ್ಗೆ ಪ್ರತಿ ವರ್ಷ ಒಂದೊಂದು ಧೋರಣೆಯನ್ನು ತಾಳುತ್ತಿದ್ದಾರೆ. ಹೋದ ಚುನಾವಣೆಯನ್ನು ಗೆದ್ದ ಮೇಲೆ ತಕ್ಷಣ ಪ್ರಾಹಿಬಿಷನ್ ಇಂಟ್ರಡ್ಯೂಸ್ ಮಾಡುತ್ತೇವೆಂದು ಹೇಳಿದರು. ಆಮೇಲೆ ಇದು ಮಾಡತಕ್ಕಂಥದ್ದು ಸಾಧ್ಯವಾಗುವುದಿಲ್ಲ ಎಂದರು ಅದಕ್ಕೆ ಕೆಲವು ತಾಲ್ಲೂಕು ಮಟ್ಟದಲ್ಲಿ ಇದನ್ನು ಅರ್‍ಯಾಕ್ ಆಕ್ಷನ್ ಮಾಡುವುದನ್ನು ನಿಲ್ಲಿಸುತ್ತೇವೆಂದು ಹೇಳಿದರು. ಹಂತ ಹಂತವಾಗಿ ಕಡಿಮೆ ಮಾಡುತ್ತೇವೆಂದು ಹೀಗೆ ಯಾವುದೇ ಒಂದು ನೆಪದಲ್ಲಿ ಈ ಒಂದು ಇಲಾಖೆಗೆ ಬರತಕ್ಕಂಥ ಹಣವನ್ನು ಸೋರಿಸತಕ್ಕಂಥದ್ದು ಮತ್ತು ಈ ಅಬಕಾರಿ ಲಾಬಿಗೆ ಕುಮ್ಮಕ್ಕು ಕೊಡತಕ್ಕಂಥ ರೀತಿಯಲ್ಲಿ ಕಾನೂನುಗಳನ್ನು ಮಾಡತಕ್ಕಂಥದ್ದು ಇದು ನಿಜವಾಗಿಯೂ ಅವರ ಹೇಳಿಕೆಗೆ ಮತ್ತು ಅವರು ಮಾಡುವುದು ನೋಡಿದರೆ ತದ್ವಿರುದ್ಧವಾಗಿದೆ. ನಮ್ಮ ರಾಜ್ಯದಲ್ಲಿ 20 ಡಿಸ್ಟಿಲರೀಸ್ ಮ್ಯಾನ್ಯುಫ್ಯಾಕ್ಚರಿಂಗ್ ರೆಕ್ಟಿಫೈಡ್ ಸ್ಪಿರಿಟ್ 61 ಡಿಸ್ಟಿಲ್‌ರೀಸ್ ಐ.ಎಂ.ಎಫ್.ಎಲ್. ಮಾಡುತ್ತಾರೆ. ಸುಮಾರು 20 ಡಿಸ್ಟಿಲರೀಸ್‌ದವರು ಎಣ್ಣೆಯನ್ನು ತಯಾರು ಮಾಡುತ್ತಾರೆ. 29 ರಲ್ಲಿ ಇವು ಪ್ರೈಮರಿ ಡಿಸ್ಟಿಲರೀಸ್ 7 ಬೇರೆ ಡಿಸ್ಟಿಲರೀಸ್ ಕೂಡ ಐ.ಎಂ.ಎಫ್.ಎಲ್ ನಲ್ಲಿ ಇನ್‌ವಾಲ್ವ್ ಆಗಿದ್ದಾರೆ. ಹೀಗೆ ಸುಮಾರು ಇಂಡಸ್ಟ್ರೀಸ್‌ಗಳು, ಡಿಸ್ಟಿಲ್‌ರಿಗಳು ಇವತ್ತಿನ ದಿವಸ ನಮ್ಮಲ್ಲಿ ಈ ಒಂದು ಐ.ಎಂ.ಎಫ್.ಎಲ್ ಮತ್ತು ಅರಾಕ್ ಮ್ಯಾನ್ಯುಫ್ಯಾಕ್ಚರಿಂಗ್ ಮಾಡುವುದು ಇದೆ. ಇದರಲ್ಲಿ ಏನಾಗಿದೆ

ಇವತ್ತಿನ ದಿವಸ ನಮ್ಮಲ್ಲಿ ಸಾಕಷ್ಟು ಮೊಲಾಸೀಸ್ ನಮ್ಮ ರಾಜ್ಯದಲ್ಲಿ ಇದೆ. ಏಕೆಂದರೆ ಸಕ್ಕರೆ ಕಾರ್ಖಾನೆಗಳು ಜಾಸ್ತಿ ಇದೆ. ಅದು ಅಲ್ಲದೆ ಹೊರಗಡೆಯಿಂದ ತರತಕ್ಕಂಥ ವ್ಯವಸ್ಥೆ ಕೂಡ ನಡೆದಿದೆ. ಇಷ್ಟೊಂದು ಹೆಚ್ಚಿನ ಪ್ರಮಾಣದಲ್ಲಿ ಇದರ ಪ್ರೊಡಕ್ಷನ್ ಇದ್ದರೂ ಕೂಡ ಇದರ ಕನ್‌ಸಂಷನ್ ಮತ್ತು ಇದಕ್ಕೆ ತಕ್ಕಂತೆ ಆದಾಯ ಸರ್ಕಾರಕ್ಕೆ ಬರುತ್ತಾ ಇದೆಯೇ ಹೇಗೆ? ಏಕೆ ಇವತ್ತಿನ ದಿವಸ ಸರ್ಕಾರಕ್ಕೆ ಆದಾಯ ಬರುತ್ತಾ ಇಲ್ಲ? ಎಲ್ಲಿ ಸೋರಿ ಹೋಗುತ್ತಿದೆ? ಈಗ ತಮ್ಮ ಗಮನಕ್ಕೆ ನಾನು ತರುತ್ತೇನೆ. ಪ್ರತಿ ವರ್ಷ ಈ ಇಲಾಖೆಯಲ್ಲಿ ಎಷ್ಟು ಆದಾಯ ಬರುತ್ತಾ ಇದೆ ಎನ್ನತಕ್ಕಂಥದ್ದನ್ನು ನಾನು ಹೇಳುತ್ತೇನೆ. 1995-96ರಲ್ಲಿ 820 ಕೋಟಿ ರೂಪಾಯಿಗಳು ಇದರ ರೆವಿನ್ಯೂ ಅಬಕಾರಿ ಇಲಾಖೆಯಿಂದ. ಆಮೇಲೆ 1996-97 ರಲ್ಲಿ 846 ಕೋಟಿ ರೂಪಾಯಿಗಳು ಅಂದರೆ ಕೇವಲ 26 ಕೋಟಿ ರೂಪಾಯಿ ಮಾತ್ರ ಹೆಚ್ಚಿಗೆ ಇದೆ. ನೀವು ಹಿಂದಿನ ಇತಿಹಾಸ ಯಾವುದನ್ನೇ ತೆಗೆದುಕೊಳ್ಳಿ 1990-91ರಲ್ಲಿ 429 ಇದ್ದರೆ 1991-92ರಲ್ಲಿ 510 ಇದೆ, 1992-93 ರಲ್ಲಿ 515 ಇದ್ದರೆ. 1993-94ರಲ್ಲಿ 639 ಇದೆ ಏಕೆ ಹೇಳುತ್ತಿದ್ದೇನೆಂದರೆ 20 ಪರ್ಸೆಂಟು 30 ಪರ್ಸೆಂಟು ಮಿನಿಮಮ್ 20 ಪರ್ಸೆಂಟ್ ಇನ್‌ಕ್ರೀಜ್ ಆಗುತ್ತದೆ. ಆದರೆ ಈ ಮೂರು ವರ್ಷಗಳಲ್ಲಿ ತಾವು ಲೆಕ್ಕ ತೆಗೆದುಕೊಂಡರೆ 820 ಕೋಟಿ ರೂಪಾಯಿಗಳಿಂದ 846 ಕೋಟಿ ರೂಪಾಯಿಗಳು ಈಗ ಏನೋ 900 ಕೋಟಿ ರೂಪಾಯಿಗಳು ಮಾಡುತ್ತೇವೆಂದು ನಿಮ್ಮ ಬಜೆಟ್‌ನಲ್ಲಿ ಅವರು ಹೇಳಿದ್ದಾರೆ. ಇದು ಏನು ತೋರಿಸುತ್ತದೆ ಎಲ್ಲೋ ಲೂಪ್ ಹೋಲ್ಸ್ ಇದೆ. ಆ ಲೂಪ್ ಹೋಲ್ಸ್‌ಕ್ಕೆ ಕಾರಣಕರ್ತರು ಯಾರು? ನಾನು ಹೇಳಬೇಕಾಗುತ್ತದೆ. ಆ ಜವಾಬ್ದಾರಿಯನ್ನು ನೇರವಾಗಿ ಸರ್ಕಾರ ಹೊತ್ತು ಕೊಳ್ಳಬೇಕಾಗುತ್ತದೆ. ಏಕೆಂದರೆ ಇವರು ಕಾನೂನಿನಲ್ಲಿ ತಿದ್ದುಪಡಿ ತಂದು ಎಂ.ಎಸ್.ಐ.ಎಲ್ ನಂತಹ ಸಂಸ್ಥೆ ಯಾವುದು ಸೋಲ್ ಏಜೆಂಟ್ ಆಗಿ ಕೆಲಸ ಮಾಡುತ್ತದೆ ಅದನ್ನು ತಪ್ಪಿಸಿ ಪ್ರೈವೇಟ್ ಕಂಟ್ರಾಕ್ಟರುಗಳಿಗೂ ಕೂಡ ನೇರವಾಗಿ ಹೋಲ್‌ಸೇಲ್ ಏಜೆನ್ಸಿ ಕೊಡಬೇಕೆಂದು ಹೇಳಿ ಕಾನೂನು ಮಾಡಿದಂಥವರು. ಹಿಂದೆ ಇದರಿಂದ ಸೆಕೆಂಡ್ಸ್ ಬಹಳಷ್ಟು ಹೋಗುತ್ತದೆ. ಇವತ್ತಂತೂ ಸೆಕೆಂಡ್ಸ್ ಥರ್ಡ್ಸ್ ಎಲ್ಲವೂ ಇದೆ ಇದಕ್ಕೆ ಕಡಿವಾಣ ಹಾಕಬೇಕು ಎಂದು ಹೇಳಿ 1989ರಲ್ಲಿ ಇದಕ್ಕೆ ತಿದ್ದುಪಡಿ ತಂದಿದ್ದು. ಅದಕ್ಕಿಂತ ಹಿಂದೆ ನಾನು ಅಂದಿನ ಗೌರ್ನರ್‌ರವರಿಗೆ ನಾವು ಮೆಚ್ಚುಗೆಯನ್ನು ವ್ಯಕ್ತಪಡಿಸಬೇಕಾಗುತ್ತದೆ. ಏಕೆಂದರೆ ಅವರೇ ಈ ಒಂದು ಎಕ್ಸೈಜ್ ಆಕ್ಟ್‌ಗೆ, ರೂಲ್ಸ್‌ಗೆ ತಿದ್ದುಪಡಿಯನ್ನು ತಂದಿದ್ದು. ಅವರೇನು ತಿದ್ದುಪಡಿ ತಂದರು ಎಂದರೆ 13ನೇ ಸೆಪ್ಟೆಂಬರ್ 1989ರಲ್ಲಿ ಅದಕ್ಕೆ ತಿದ್ದುಪಡಿ ತಂದಿದ್ದು : Amendment of Rule 3:

In Rule 3 of the Karnatka Excise, Sale of Indian and Foreign Liquor Rules, 1968, hereinafter referred to as the said Rules for Clauses.. the following clauses shall be substituted, namely :

Distributors Licence : Licence shall be granted by Excise Commissioner for the whole of the State or any part thereon to deal in the products of all distilleries or breweries or wineries in the State or to import liquor from outside the State for the purpose of districtuion or sale within the State or as the case may be or part thereof or to export liquor outside the State. The licence shall have not

less than one depot in each district within the State or as the case may be within the part of the State as the Excise Commissioner may specify in this behalf. The licence under this clause shall be issued only to such company owned or controlled by the State Government as the State Government may specify. ಮುಂದೆ ಓದುವುದಕ್ಕೆ ಹೋಗುವುದಿಲ್ಲ. ಅಂದರೆ ರಾಜ್ಯಸರ್ಕಾರದ licence under this clause shall be issued only to such companies owned or controlled by the State Government ಅಂದರೆ ಅದು ಯಾವುದು? ಎಂಎಸ್‌ಐಎಲ್‌ದು ಇತ್ತು. ಅದಕ್ಕೊಂದು ನೋಟಿಫಿಕೇಷನ್ ಇಶ್ಯೂ ಮಾಡಿಕೊಂಡು ಸರ್ಕಾರ ಸಂಪೂರ್ಣವಾದ ಹೋಲ್‌ಸೇಲ್ ಏಜೆನ್ಸಿಯನ್ನು ಆ ಒಂದು ಸಂಸ್ಥೆಗೆ ಕೊಟ್ಟರು. ಇದು ಸರಿಯಿಲ್ಲ ಎಂದು ಹೇಳಿ ಕಂಟ್ರಾಕ್ಟರ್ಸ್ ನಮಗೂ ಕೂಡ ಕೊಡಬೇಕು ಎಂದು ಹೇಳಿ ಅವರು ಛಾಲೆಂಜ್ ಮಾಡಿ ಹೈಕೋರ್ಟಿಗೆ ಹೋದರು. ಹೈಕೋರ್ಟಿನಲ್ಲಿ ಸರ್ಕಾರದ ಪರ ಆಯಿತು. ಪುನಃ ಸುಪ್ರೀಂಕೋರ್ಟಿಗೆ ಹೋದರು. ಸುಪ್ರೀಂ ಕೋರ್ಟಿನಲ್ಲೂ ಕೂಡ ಅದು ನಮ್ಮ ಪರವಾಯಿತು. ಅಂದರೆ ಸರ್ಕಾರದ ಪರವಾಯಿತು ಸುಪ್ರೀಂ ಕೋರ್ಟು ಮತ್ತು ಹೈಕೋರ್ಟ್‌ನಲ್ಲೂ ಕೂಡ ಎಂಎಸ್‌ಐಎಲ್‌ನ್ನು ಸೋಲ್ ಏಜೆಂಟ್ ಮಾಡಿದ್ದು ಸರಿ ಎಂದು ಹೇಳಿ ಒಂದು ವಾದವನ್ನು ಮಾಡಿದಮೇಲೆ ಅಥವಾ ಒಂದು ತೀರ್ಮಾನ ತಂದಮೇಲೆ ಬದಲಾವಣೆ ಮಾಡುವ ಅವಶ್ಯಕತೆ ಏನಿತ್ತು? ನಾನು ಹೇಳಬೇಕಾಗುತ್ತದೆ ಏಕ್ಸೈಸ್ ಲಾಬಿಗೆ ತಾವು ಮಣಿದು ಬೇರೆಯವರಿಗೂ ಕೂಡ ಹೋಲ್‌ಸೇಲ್ ಏಜೆಂಟ್ ಮಾಡಬೇಕು ಎಂದು ಹೇಳಿ ತಾವು ಪುನಃ ರೂಲ್ 3ಕ್ಕೆ ಅಮೆಂಡ್‌ಮೆಂಟ್ ತಂದು ಇವತ್ತಿನ ದಿವಸ ಖಾಸಗಿಯವರಿಗೂ ಕೂಡ ಹೋಲ್‌ಸೇಲ್ ಏಜೆಂಟ್ ಮಾಡುವ ಕೆಲಸವನ್ನು ಮಾಡಿದ್ದೀರಿ. ಅದಕ್ಕೆ ನಾನು ಹೇಳಬೇಕಾಗುತ್ತದೆ. ತಾವು ಎಕ್ಸೈಜ್ ಲಾಬಿಗೆ ಮಣಿದಿದ್ದೀರಿ. ಅವರ ಒತ್ತಡಕ್ಕೆ ಒಳಗಾಗಿದ್ದೀರಿ. ಈ ಒತ್ತಡಕ್ಕೆ ಒಳಗಾಗದೆ ಹೋಗಿದ್ದರೆ ಈ ರೂಲ್‌ನ್ನು ಅಮೆಂಡ್‌ಮೆಂಟ್‌ಮಾಡುವ ಅವಶ್ಯಕತೆ ಏನು ಬಂತು ಎನ್ನುವ ಮಾತನ್ನು ನಾನು ಕೇಳುತ್ತೇನೆ. ಯಾವಾಗ ಮಾಡಿದ್ದು? ಸುಪ್ರೀಂ ಕೋರ್ಟಿನಲ್ಲಿ ನಿಮ್ಮ ಪರವಾದ ಮೇಲೂ, ಸರ್ಕಾರದ ಪರ ಆದಮೇಲೂ ಕೂಡ ಇವತ್ತು ನೀವು ತಿದ್ದುಪಡಿ ಮಾಡುತ್ತೀರಿ ಎಂದರೆ ನಾನೇನು ಹೇಳಬೇಕು? ಖಂಡಿತವಾಗಿ ಈ ಎಕ್ಸೈಜ್ ಡಿಪಾರ್ಟ್‌ಮೆಂಟಿನಲ್ಲಿ ಬರುವ ರೆವಿನ್ಯೂ ಬಗ್ಗೆ ಆದಾಯದ ಬಗ್ಗೆ ನಿಮಗೆ ಮನಸ್ಸು ಇಲ್ಲ. ಕೇವಲ ಹೊರಗಿನ ಏನು ಎಕ್ಸ್‌ಟ್ರಾ ಕಾನ್ಸ್‌ಟಿಟ್ಯೂಷನ್ ಅಥಾರಿಟೀಸ್ ಇವತ್ತು ನಿಮ್ಮ ಮೇಲೆ ಒತ್ತಡ ತಂದು ಅವರೇನು ರೂಲ್ ಮಾಡಬೇಕೆನ್ನುತ್ತಾರೋ ಅವರಿಗೆ ನೀವು ಮಣಿದಿದ್ದೀರಿ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಅದಕ್ಕೆ ಇದನ್ನು ಯಾವ ಸರ್‌ಕಮ್‌ಸ್ಟೆನ್ಸಸ್‌ನಲ್ಲಿ ಈ ರೂಲ್ 3 ನ್ನು ಅಮೆಂಡ್‌ಮೆಂಟ್ ಮಾಡಿದಿರಿ? ರೂಲ್ 3 (11) ನ್ನು ಅಮೆಂಡ್‌ಮೆಂಟ್ ಮಾಡುವ ಅವಶ್ಯಕತೆ ಏನು ನೀವು ಹೇಳುತ್ತೀರಿ ಎಂದರೆ ಲಿಬರಲೈಜ್ ಪಾಲಿಸಿ. ಲಿಬರ್‌ಲೈಜ್ ಪಾಲಿಸಿಯಿಂದ ನಿಮಗೆ ಆದಾಯ ಹೆಚ್ಚಿಗೆ ಬರಬೇಕೇ ಹೊರತಾಗಿ ಆದಾಯ ಕಡಿಮೆ ಮಾಡುವುದಕ್ಕೋಸ್ಕರ ಲಿಬರಲೈಜ್ ಪಾಲಿಸಿ ಇಲ್ಲ. ಇವರು ಹೋಲ್‌ಸೇಲ್ ಡಿಸ್ಟಿಲರಿಗೆ ಲಿಬರಲೈಜ್ ಪಾಲಿಸಿಗೆ ಹೋಲಿಸುತ್ತಾರೆ. ನಾನು ಮೊನ್ನೆ ಕೇಳಿದೆ, ಅವರು ಏನು ಹೇಳಿದರು ಎಂದರೆ ಮಾನ್ಯ ಮುಖ್ಯಮಂತ್ರಿಗಳು ಈಗ ಎಲ್ಲಾ ಇಡೀ ಜಗತ್ತೇ ಲಿಬರ್‌ಲೈಜ್ ಪಾಲಿಸಿಯಲ್ಲಿ ನಂಬಿಕೆ ಇಟ್ಟಾಗ ನಮ್ಮ ರಾಜ್ಯದಲ್ಲೂ ಕೂಡ ಇದನ್ನು

ಎಕ್ಸೈಜ್ ಡಿಪಾರ್ಟ್‌ಮೆಂಟ್‌ಗೆ ಅನ್ವಯಿಸಬೇಕು ಎಂದು ಹೇಳಿ ನಾವು ಆ ಕಾನೂನನ್ನು ಸಡಿಲಗೊಳಿಸಿ ಇವತ್ತು ಅದಕ್ಕೆ ತಿದ್ದುಪಡಿ ತಂದಿದ್ದೇವೆ, ತಪ್ಪೇನಿದೆ ಎನ್ನುವ ಮಾತನ್ನು ಇವತ್ತು ಸರ್ಕಾರದವರು ನಮ್ಮ ಮುಂದೆ ಇಡುತ್ತಿದ್ದಾರೆ. ಅದಕ್ಕೆ ನಾನು ಸರ್ಕಾರಕ್ಕೆ ಸ್ಪಷ್ಟವಾಗಿ ಹೇಳಬೇಕಾಗಿದೆ. ಲಿಬರಲೈಜ್ ಪಾಲಿಸಿಯಿಂದ ರಾಜ್ಯಕ್ಕೆ, ರಾಜ್ಯದ ಬೊಕ್ಕಸಕ್ಕೆ ಟ್ರೆಜರಿಗೆ ತುಂಬಬೇಕು ಎಂದು ಹೇಳಿ ನೀವೇನು ತಿದ್ದುಪಡಿಯನ್ನು ತಂದಿಲ್ಲ. ಕೇವಲ ಕೆಲವು ಕಂಟ್ರಾಕ್ಟರ್‌ಗಳಿಗೆ ಅನುಕೂಲವಾಗಬೇಕು ಎನ್ನುವ ದೃಷ್ಟಿಯಿಂದ ತಂದಿದ್ದೀರಿ ಎನ್ನುವ ಮಾತನ್ನು ಇವತ್ತಿನ ದಿವಸ ನಾನು ಸ್ಪಷ್ಟವಾಗಿ ಹೇಳುತ್ತಿದ್ದೇನೆ. ಅದಲ್ಲದೆ ಇನ್ನೊಂದು ವಿಶೇಷ ಏನೆಂದರೆ ಈ ಸೆಕೆಂಡ್ ಥರ್ಡ್ ಹಾವಳಿಯಂತೂ ಇಷ್ಟು ಜಾಸ್ತಿಯಾಗಿದೆ.

ಅಧ್ಯಕ್ಷರು : ಸೆಕೆಂಡ್ ಅಂಡ್ ಥರ್ಡ್ ಇದರ ಡಿಫರೆನ್ಸ್ ಏನು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಮಗೆ ಕೊಟ್ಟಿರುವ ಮಾಹಿತಿ ಪ್ರಕಾರ ಸೆಕೆಂಡ್ಸ್ ಅಂಡ್ ಥರ್ಡ್ಸ್ ಏನು ಎಂದರೆ ಸೆಕೆಂಡ್ಸ್‌ದು ತಮಗೆ ಗೊತ್ತಿದೆ. ಎಕ್ಸೈಜ್ ಡ್ಯೂಟಿ ಇಲ್ಲ. ಸೇಲ್ಸ್ ಟ್ಯಾಕ್ಸ್ ಇಲ್ಲದೆಯೇ ಅದೇ ಲೇಬಲ್ ಹಚ್ಚಿಕೊಂಡು ಮಾರುವುದು, ಥರ್ಡ್ ಎಂದರೆ ಲೇಬಲ್‌ಗಳನ್ನು ಬರೀ ಹಚ್ಚುವುದು, ಅವರು ಒರಿಜಿನಲ್ ಮ್ಯಾನ್ಯುಫ್ಯಾಕ್ಚರರ್. ಸೆಕೆಂಡ್ಸ್ ಮಾಡುವವರು ಯಾರು ಎಂದರೆ ಒರಿಜಿನಲ್ ಮ್ಯಾನ್ಯುಫ್ಯಾಕ್ಚರರ್. ಥರ್ಡ್ಸ್ ಮಾಡುವವರು ಯಾರೆಂದರೆ ಅವರು ಮ್ಯಾನ್ಯುಫ್ಯಾಕ್ಚರರ್ ಅಲ್ಲ ಬರೀ ಬಣ್ಣಕೂಡಿಸುವುದು, ಅವರು ಖೋಡೆ ಎಂದರೆ ಖೋಡೆ ಸೀಲನ್ನು ಹಚ್ಚುವುದು, ಅಥವಾ ಮಧ್ಯೆ ಯಾರೋ ಬೇರೆಯವರು ಹೋದರೆ ಇನ್ನೊಬ್ಬರ ಸೀಲು. ಇಂಥ ಬೇರೆ ಕಂಪನಿಗಳ ಬರೀ ಸೀಲುಗಳನ್ನು ಹಾಕಿಕೊಂಡು ನಕಲಿ ವಿಸ್ಕಿಯನ್ನು ಅಥವಾ ರಮ್‌ನ್ನು ತಯಾರು ಮಾಡಿಕೊಡುವವರದ್ದು ಥರ್ಡ್. ಅವರು ಯಾವುದಕ್ಕೂ ಸಂಬಂಧಪಟ್ಟವರಲ್ಲ. ಸೆಕೆಂಡ್ ಅಟ್‌ಲೀಸ್ಟ್ ನೀವು ಅಲ್ಲಿ ನಿಮ್ಮ ಎಕ್ಸೈಜ್ ಡಿಪಾರ್ಟ್‌ಮೆಂಟ್‌ನವರು, ಅಧಿಕಾರಿಗಳನ್ನು ಹಾಕಿದರೆ ಸ್ವಲ್ಪವಾದರೂ ಕಂಟ್ರೋಲ್ ಮಾಡಬಹುದು. ಇವರಿಗೇನು ಕಂಟ್ರೋಲ್ ಮಾಡುವ ಹಾಗೆ ಇಲ್ಲ ಏಕೆಂದರೆ ಇವರು ಮನೆ ಮನೆಗಳಲ್ಲಿ ಮ್ಯಾನ್ಯುಫ್ಯಾಕ್ಚರ್ ಮಾಡಿಕೊಂಡು ಯಾರ ಬ್ರಾಂಡ್ ನಡೆಯುತ್ತದೆಯೋ ಆ ಸೀಲನ್ನು ಹಾಕಿ ಮಾರುವುದು. ಅವರಿಗೆ ಸೇಲ್ಸ್ ಟ್ಯಾಕ್ಸ್ ಇಲ್ಲ. ಇನ್‌ಕಂ ಟ್ಯಾಕ್ಸ್ ಅಥವಾ ಎಕ್ಸೈಜ್ ಡ್ಯೂಟಿ ಇಲ್ಲ. ಮ್ಯಾನ್ಯುಫ್ಯಾಕ್ಚರಿಂಗ್ ತೋರಿಸಬೇಕಾಗಿಲ್ಲ. ಕಳ್ಳತನದಿಂದ ಇವೆಲ್ಲಾ ಕೂಡ ಮಾಡತಕ್ಕಂಥದ್ದು. ಅದಕ್ಕೆ ಅವರದು ಒಂದು ಕಡೆ ಹಾವಳಿ. ಸೆಕೆಂಡ್ಸ್ ಮಾರುವವರು ಯಾರಿಗೆ ನೀವು ಲೈಸೆನ್ಸ್‌ನ್ನು ಕೊಟ್ಟಿದ್ದೀರಿ, ಅವರ ಹಾವಳಿ, ಇದರ ಮೇಲೆ ಪುನಃ ನೀವು ರೂಲ್ಸ್‌ನ್ನು ಸಡಿಲಗೊಳಿಸಿ ಹೋಲ್‌ಸೇಲ್ ಏಜೆಂಟ್ ಅವರನ್ನೇ ಮಾಡುವುದು. ಅಂದರೆ ಕಳ್ಳರ ಕೈಗೇ ಕೊಡುವುದು. ಮನೆಯನ್ನು ನೀವು ಕಾಯಿರಿ ಎಂದು ಇವತ್ತಿನ ದಿವಸ ಆ ಕೆಲಸವನ್ನು ಸರ್ಕಾರದವರು ಮಾಡಿದ್ದಾರೆ. ಅದಕ್ಕಾಗಿ ಸರ್ಕಾರದ ಬೊಕ್ಕಸಕ್ಕೆ ಪರ್ ಡೇ ಮಿನಿಮಮ್ ಎಂದರೆ 4 ರಿಂದ 5 ಕೋಟಿ ರೂಪಾಯಿಗಳು ಹೋಗುತ್ತಿದೆ. ಇದು ಹೇಗೆ ಹೋಗುತ್ತಿದೆ ಎಂದರೆ ಅವರು ಎಂ.ಎಸ್.ಐ.ಎಲ್.ನಲ್ಲಿ ಸಪ್ಲೈ ಮಾಡತಕ್ಕಂಥದ್ದು ಎಷ್ಟು ಕೇಸಸ್ ಎಂದರೆ ಅದರ ಆದಾಯ ಅವರು ಹಿಂದೆ ತೋರಿಸಿದ್ದಾರೆ. ಸುಮಾರು ಅವರಲ್ಲಿ ಹೋಗುವುದು 1.75 ಲ್ಯಾಕ್ಸ್ ಕೇಸಸ್. ಅಷ್ಟಕ್ಕೆ ಅವರಿಗೆ ಹತ್ತು ಕೋಟಿ ರೂಪಾಯಿಗಳು ಆದಾಯ ಬರುತ್ತದೆ ಎಲ್ಲಾ ಹೋಗಿ.

ಅಂದಾಗ ಇವತ್ತು ಒಂದು ಸಂಸ್ಥೆಯಿಂದ ಅಷ್ಟು ಮಾಡಬಹುದು. ಬೇರೆಯವರಿಗೆ ಬಿಟ್ಟು ಪ್ರೈವೇಟ್‌ನವರಿಗೆ ಎಂದರೆ ನೀವು ಲೆಕ್ಕಹಾಕಿ. ಮಿನಿಮಮ್ ಇವತ್ತಿನ ದಿವಸ ಒಂದು ಎಂಟು, ಹತ್ತು ಲಕ್ಷವಾದರೂ ಕೂಡ ಹಿಡಿದರೆ 50-60 ಕೋಟಿ ಎಂಎಸ್‌ಐಎಲ್‌ಗೆ ಬರುವ ಪ್ರಾಫಿಟ್ ಹೋಯಿತು. ಮತ್ತು ಇವರಿಗೆ ಸೇಲ್ಸ್‌ಟ್ಯಾಕ್ಸ್ ಮತ್ತು ಎಕ್ಸೈಜ್ ಡ್ಯೂಟಿ ಏನು ಪರ್ ಬಾಟ್ಲಿಂಗ್ ಬರಬೇಕು, ಅದೂ ಕೂಡ ಹೋಯಿತು. ಅದು ಸುಮಾರು4 ರಿಂದ 5 ಕೋಟಿ ರೂಪಾಯಿಗಳಾಗುತ್ತದೆ. ಅಂದರೆ ವರ್ಷಕ್ಕೆ,1250 ಕೋಟಿ ರೂಪಾಯಿ ಇದರಲ್ಲಿ ಸೋರಿಹೋಗುತ್ತಿದೆ. ಅಷ್ಟೊಂದು ಕಟ್ಟುನಿಟ್ಟಾಗಿ ಯಾರಿಗೂ ಸಂಪಾದನೆ ಮಾಡುವುದಕ್ಕಾಗುವುದಿಲ್ಲ. ಈ ಹಿಂದೆ ಕೂಡ ಮಾಡಿಲ್ಲ ಮುಂದೂ ಕೂಡ ನೂರು ಪರ್ಸೆಂಟ್ ಮಾಡುವುದಕ್ಕಾಗುವುದಿಲ್ಲ ಎಂದು ತಿಳಿದುಕೊಳ್ಳಿ. ಕನಿಷ್ಟಪಕ್ಷ50 ಪರ್ಸೆಂಟಾದರೂ ನಾವು ಕಂಟ್ರೋಲ್ ಮಾಡಬಹುದು. ಅದಕ್ಕಾಗಿಯೇ ಈ ಕಾನೂನುಗಳ ತಿದ್ದುಪಡಿ ತಂದಿದ್ದುದು. ಈ ಕಾನೂನನ್ನು ಸಡಿಲಗೊಳಿಸುವ ವ್ಯವಸ್ಥೆ ಏಕಾಯಿತು ? ಯಾರ ಹೇಳಿಕೆ ಮೇರೆಗೆ ನೀವು ಮಾಡಿದಿರಿ ? ಯಾವುದಾದರೂ ನಾವು ಇಲ್ಲಿ ಪ್ರಸ್ತಾಪ ಮಾಡಿದಾಗ ಮೆಡಿಕಲ್ ಸೀಟಿನ ಬಗ್ಗೆ ಸುಪ್ರೀಮ್‌ಕೋರ್ಟಿನ ತೀರ್ಪಿದೆ ಅದರ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ರೂಲ್ಸ್‌ಗೆ ತಿದ್ದುಪಡಿ ತರುವ ಬಗ್ಗೆ ಚಿಂತನೆ ಮಾಡಿ ಅಂದರೆ ಇಲ್ಲ ಆದರೆ ಎಲ್ಲಿ ಆದಾಯ ಸಿಗುತ್ತದೆ ಅಲ್ಲಿ ನಿಮ್ಮ ಸರ್ಕಾರಿ ಆಜ್ಞೆಯನ್ನೇ ಎತ್ತಿಹಿಡಿದರೆ ಅದಕ್ಕೆ ತಿದ್ದುಪಡಿ ತರುವ ಪ್ರಯತ್ನ ನೀವು ನಡೆಸಿದಿರಿ ಅಂದರೆ ಎಷ್ಟರಮಟ್ಟಿಗೆ ನೀವು ಆ ಅಬ್ಕಾರಿ ಲಾಬಿಗೆ ಮಣಿದಿದ್ದೀರಿ ಎಂದು ಗೊತ್ತಾಗುತ್ತದೆ.

ಅಧ್ಯಕ್ಷರು : ಈಗ ಸಭೆಯನ್ನು ಮುಂದೂಡಲಾಗಿದೆ. ಸಭೆ ಪುನಃ3 ಗಂಟೆಗೆ ಸಮಾವೇಶಗೊಳ್ಳುವುದು.

(ಸದನವು 3 ಗಂಟೆ 10 ನಿಮಿಷಕ್ಕೆ ಸಮಾವೇಶಗೊಂಡಿತು.)

MR. SPEAKER : After lunch, we will now discuuss on Excise Department.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಒಬ್ಬ ಕ್ಯಾಬಿನೆಟ್ ಸಚಿವರು ಇಲ್ಲಿ ಇಲ್ಲ ಅಂದರೆ ನಾವು ಮಾತನಾಡಿ ಯಾವುದೇ ಉಪಯೋಗ ಇಲ್ಲ.

ಅಧ್ಯಕ್ಷರು : ನಿಮಗೋಸ್ಕರ ವೈಜನಾಥ ಪಾಟೀಲ್‌ರವರು ಬಂದು ಕುಳಿತಿದ್ದಾರೆ,

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ವಿರೋಧಪಕ್ಷದ ನಾಯಕರು ಮಾತನಾಡುವಾಗ ಕ್ಯಾಬಿನೆಟ್ ಮಿನಿಸ್ಟರ್‌ಗಳು ಇಲ್ಲ ಅಂದರೆ ಹೇಗೆ?

ಅಧ್ಯಕ್ಷರು : ಬೆಲ್ ಹಾಕಿದ ತಕ್ಷಣ ಬರುವುದಕ್ಕೆ ಆಗುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವೇ ಮಾತನಾಡಿಕೊಂಡು ನಾವೇ ಪರಿಹಾರ ಕಂಡುಕೊಳ್ಳುವುದಾದರೆ ಅದಕ್ಕೆ ಏನೂ ಅಡ್ಡಿ ಇಲ್ಲ. ನೀವೇ ನಮಗೆ ಅಧಿಕಾರ ಕೊಟ್ಟರೆ ನಾವೇ ಮಾತನಾಡಿ ನಾವೇ ಪರಿಹಾರ ಕಂಡು ಹಿಡಿದುಕೊಳ್ಳುತ್ತೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ಸರ್ಕಾರಕ್ಕೆ ತೃಪ್ತಿ ಆಗಿದೆಯೇ? 5 ವರ್ಷಗಳಲ್ಲಿ ಮಾಡುವುದನ್ನು ಮೂರೇ ವರ್ಷಗಳಲ್ಲಿ ಮಾಡಿ ಮುಗಿಸಿದ್ದೇವೆ ಎಂದರೆ ನಮಗೆ ಈ ಅಧಿವೇಶನದ

ಅಗತ್ಯವೇ ಇಲ್ಲ ಇಲ್ಲಿ ಕುಳಿತುಕೊಳ್ಳುವುದರ ಅಗತ್ಯ ಇಲ್ಲ ಎನ್ನುವುದು ಅವರ ಮನಸ್ಸಿಗೆ ಬಂದಿದೆಯೋ? ಇದು ಆ ಕಡೆ ಇರಲಿ, ಈ ಕಡೆ ಇರಲಿ ತಾವು ನೊಂದು ಎಲ್ಲಾ ರೀತಿಯಲ್ಲೂ ಹೇಳಿದ್ದೀರಿ ಇದು ನಾಚಿಕೆಯಿಂದ ತಲೆ ತಗ್ಗಿಸಬೇಕಾದ ವಿಷಯ. ಊಟದ ವ್ಯವಸ್ಥೆ ಎಲ್ಲಾ ಇಲ್ಲೇ ಆಗಿದೆ, ಅವರು ಬೆಲ್ ಹಾಕಿದ ತಕ್ಷಣ ಬರಬೇಕು,

ಅಧ್ಯಕ್ಷರು : ಎಲ್ಲಾ ಎಲ್ಲಿ ಆಗಿದೆ, ಬರೀ ಊಟದ ವ್ಯವಸ್ಥೆ ಅಷ್ಟೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಮುಖ್ಯಮಂತ್ರಿಗಳಿಗೆ ಆರೋಗ್ಯ ಸರಿ ಇಲ್ಲ ಅವರು ಬೇಡ, ಯಾರು ಡಿಮ್ಯಾಂಡ್ ಮಾವ್ ಮಾಡಿದ್ದಾರೆ ಅವರಾದರೂ ಇರಬೇಕಲ್ಲ,

ಶ್ರೀ ಬಿ. ಎಸ್. ಯಡಿಯೂರಪ್ಪ : ಸರ್, ಇನ್ನು ಒಂದು ತಿಂಗಳು ಅಧಿವೇಶನ ನಡೆದರೂ ಕೂಡ ಅನೇಕ ವಿಷಯಗಳು ಪ್ರಸ್ತಾಪ ಮಾಡಲಿಕ್ಕೆ ಉಳಿಯುತ್ತವೆ, ಎಲ್ಲಾ ವ್ಯವಸ್ಥೆಗಳು ಕುಸಿದು ಹೋಗಿದೆ ಸರ್, ಹೇಳುವವರು ಕೇಳುವವರು ಯಾರೂ ಇಲ್ಲ. ಹಳ್ಳಿಗಳಿಗೆ ಹೋದೆ ಅಲ್ಲಿನ ಜನಕ್ಕೆ ಏನು ಉತ್ತರವನ್ನು ಕೊಡಬೇಕು ಎನ್ನುವ ಸ್ಥಿತಿಯಲ್ಲಿ ಇವತ್ತು ನಾವಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಮಾರು 20 ಡಿಮ್ಯಾಂಡ್‌ಗಳನ್ನು ಮೂವ್ ಮಾಡಿದ್ದಾರೆ ಆದರೆ ಅದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇಲ್ಲ. ಸದಸ್ಯರನ್ನು ಬಿಟ್ಟರೂ ಮಂತ್ರಿಗಳಾದರೂ ಇರಬೇಕಲ್ಲ? ಹೀಗಾದರೆ ನಾವು ಯಾರಿಗೆ ಹೇಳುವುದು? ಸುಮಾರು 47 ಡಿಮ್ಯಾಂಡ್‌ಗಳನ್ನು ಮೂವ್ ಮಾಡಿ ಇದರಲ್ಲಿ, ಸಂಬಂಧಪಟ್ಟ20 ಮಂತ್ರಿಗಳಲ್ಲಿ ಒಬ್ಬರೂ ಇಲ್ಲ ಅಂದರೆ ಇವರಿಗೆ ಯಾವ ಭಾಷೆಯಲ್ಲಿ ಹೇಳಬೇಕು.

ಅಧ್ಯಕ್ಷರು : ಹಿಂದುಳಿದ ವರ್ಗಗಳ ಮಂತ್ರಿ ಅಲ್ಲಿ ಊಟ ಅರೇಂಜ್ ಮಾಡಿದ್ದಾರೆ, ಬಹುಶಃ ಲಾಸ್ಟ್ ಬ್ಯಾಚ್ ಊಟ ನೋಡಿಕೊಂಡು ಬರಬಹುದು, ದೇಶಪಾಂಡೆಯವರದು ಮಾತ್ರ ಸಬ್ಜೆಕ್ಟ್ ಅಲ್ಲಿ ಡಿಸ್‌ಕಷನ್ ಆಗುತ್ತಿದೆ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸರ್, ಈಗ 20 ಜನರಲ್ಲಿ 2-3 ಜನ ಅಲ್ಲಿ ಹೋಗಿದ್ದಾರೆ ಅಂದರೆ ಪರವಾಗಿಲ್ಲ, ಅದು ಡಿಮ್ಯಾಂಡ್ ಮೂವ್ ಮಾಡಿರುವಾಗ ಅವರ ಸಬ್ಜೆಕ್ಟ್ ಇರುವಾಗ ಹೋಗಬಾರದು. ಅಲ್ಲಿ ಅವರೇನಾದರೂ ಕೇಳಿಕೊಳ್ಳಬೇಕೆ ಹೊರತು ಇಲ್ಲಿ ಕೇಳಿಕೊಳ್ಳುವಂತಹ ಅವಶ್ಯಕತೆ ಇಲ್ಲ.

(INTERRUPTIONS)

MR. SPEAKER : So far as I am concerned, it does not make any difference. ಇಲ್ಲಿಗೆ ಯಾರು ಬರಬೇಡಿ ಅಷ್ಟೇ, ನನ್ನನ್ನು ಇಲ್ಲಿ ಬಿಟ್ಟು ನೀವು ಎಲ್ಲಿ ಬೇಕಾದರೂ ಕುಳಿತುಕೊಳ್ಳಿ. please see that this arrangement is continued. (laughter) ನೋಡಿ ಅದಕ್ಕೆ ಉತ್ತರ ಹೇಳಲಿಲ್ಲ ನೀವು ಬೇರೆ ಏನೋ ಉತ್ತರ ಹೇಳುತ್ತೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ತಂಟೆಗೆ ಯಾರು ಬರುವುದಿಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈ ವಿಷಯವನ್ನು ಇಷ್ಟು ಹಗುರವಾಗಿ ತೆಗೆದುಕೊಂಡರೆ, ನಾವು ಹೇಳುವ ಮಾತುಗಳು ಹಗುರವಾಗುತ್ತವೆ, ಅಧಿಕಾರಿಗಳು ಹಗುರವಾಗಿ ತೆಗೆದುಕೊಳ್ಳುತ್ತಾರೆ ಮತ್ತು ಈ ಚರ್ಚೆಯಿಂದ ಯಾವುದೇ ರೀತಿಯ ಪ್ರಯೋಜನ ಆಗುವುದಿಲ್ಲ. ಒಂದು ಸಲ ಎರಡು ಸಲ ನಾವು ಹೇಳಬಹುದು, ನೀವು ಹೇಳಬಹುದು, ಇನ್ನೇನು ಮಾಡಲಿಕ್ಕೆ ಆಗುತ್ತದೆ ಇದನ್ನು ಪ್ರತಿಭಟನೆ ಮಾಡಿ ವಾಕ್‌ಔಟ್ ಮಾಡಬೇಕಾಗುತ್ತದೆ ಅಷ್ಟೆ.

ಅಧ್ಯಕ್ಷರು : ಈ ರೀತಿ ಎಲ್ಲಾ ಖಾಲಿ ಇರುವಾಗ ವಿರೋಧ ಪಕ್ಷದನಾಯಕರು ಭಾಷಣ ಮಾಡುವುದು ನನಗಂತೂ ಸಮಧಾನ ಇಲ್ಲ. ತಾವು ಒಪ್ಪಿಕೊಳ್ಳುವುದಾದರೆ ಅವರು ರಿಯಲೈಸ್ ಮಾಡಿಕೊಂಡರೆ ಮಾಡಿಕೊಳ್ಳಲಿ ಬಿಟ್ಟರೆ ಬಿಡಲಿ, ಒಂದು ಅರ್ಧ ಗಂಟೆ ಮುಂದೆ ಹಾಕೋಣ.

ಶ್ರೀ ಎಸ್. ಸಿ. ಮುದ್ದಹನುಮೇಗೌಡ : ಈ ಸದನದಲ್ಲಿ ಕೋರಮ್ ಇಲ್ಲದೇನೇ ಆಗುತ್ತಿರುವ ಅವ್ಯವಸ್ಥೆ ಬಗ್ಗೆ ಹೊರಗಡೆನೂ ಸಹಿತ ಚರ್ಚೆ ಆಗಿದೆ. ಆದುದರಿಂದ ತಾವು ದಯಮಾಡಿ ನಾಯಕರ ಜೊತೆ ಸಮಾಲೋಚಿಸಿ ಒಂದು ಕಾನೂನನ್ನು ತರಬೇಕಾಗುತ್ತದೆ.

ಅಧ್ಯಕ್ಷರು : ಮುದ್ದಹನುಮೇಗೌಡರೇ, ನಾನು ಏನು ಹೇಳುತ್ತೇನೆಂದರೆ Just not with regard to House. ಏಕೆಂದರೆ ಟೈಮ್ ಬಗ್ಗೆ ನಮಗೆ ಕಾಳಜಿ ಇಲ್ಲದಿದ್ದರೆ We take, we are adjourning at 2PM and meeting at 3 PM.

SRI S.P. MUDDAHANUMEGOWDA : The very purpose for which we have been elected is going to be defeated if we fail to conduct the proceedings of the House properly.

MR. SPEAKER : Alright. I think he will come back.

ಶ್ರೀ ಬಿ. ಎಸ್. ಯಡಿಯೂರಪ್ಪ : ಅಧ್ಯಕ್ಷರೇ, ಇದರ ಬಗ್ಗೆ ರೆಕಾರ್ಡ್ ಆಗಲಿ. ಸದನದಲ್ಲಿ ಯಾರೊಬ್ಬ ಕ್ಯಾಬಿನೆಟ್ ಸಚಿವರು ಇಲ್ಲದೇ ಇದ್ದಂಥ ಸಮಯದಲ್ಲಿ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದರು ಎಂದು ದಾಖಲೆಗೆ ಹೋಗಲಿ. ಹೀಗಿರುವಾಗ ಅವರು ಮಾತನಾಡುವಾಗ ಅದರ ಬಗ್ಗೆ ಸೀರಿಯಸ್ ಆಗಿ ತೆಗೆದುಕೊಳ್ಳುತ್ತಾರೆ ಸರ್ಕಾರದವರು ಎನ್ನುವ ಬಗ್ಗೆ ನಮಗೇನೋ ವಿಶ್ವಾಸವಿಲ್ಲ. ನಮ್ಮ ಡ್ಯೂಟಿ ನಾವು ಮಾಡಬೇಕು, ಅದಕ್ಕೋಸ್ಕರ ನಾವು ಡ್ಯೂಟಿ ಮಾಡುತ್ತಿದ್ದೇವೆ. ನಾವು ಮೂರು ಗಂಟೆಗೆ ಸೇರಬೇಕಾಗಿತ್ತು, ಈಗಾಗಲೇ 3-30 ಗಂಟೆಯಾಗಿದೆ. ಇನ್ನೂ ಮತ್ತೆ 15 ನಿಮಿಷ ಎಂದರೆ ಮತ್ತೆ ಕೆಲವರಿಗೆ ಮಾತನಾಡುವ ಅವಕಾಶ ತಪ್ಪಿಹೋಗುತ್ತದೆ. ಇದರಿಂದೇನೂ ಉಪಯೋಗವಾಗುವುದಿಲ್ಲ. ಈಗ ನಾಗೇಗೌಡರು ಬಂದರು, ಮುಂದುವರೆಯಲಿ.

ಶ್ರೀ ಬಿ. ಶಿವರಾಮು : ವರ್ಷದಲ್ಲಿ ಸದನ 100 ದಿವಸಗಳ ಕಾಲ ನಡೆಯಬೇಕು ಎಂಬ ಬೇಡಿಕೆ ಏನು ಇದೆ ಅದನ್ನು ತಿಳಿದುಕೊಳ್ಳುವುದಕ್ಕೆ ಇದೊಂದು ಅವಕಾಶವಾಗುತ್ತದೆ.

ಶ್ರೀ ಕೆ. ಎನ್. ನಾಗೇಗೌಡ : ಅವರು ಶುರು ಮಾಡಲಿ, ಇನ್ನು 5 ನಿಮಿಷದಲ್ಲಿ ಮಂತ್ರಿಗಳನ್ನು ಕರೆಸುತ್ತೇನೆ.

ಅಧ್ಯಕ್ಷರು : ಕೆ. ಎನ್. ನಾಗೇಗೌಡರಿಗೆ ಜನರಲ್ ಪವರ್ ಆಫ್ ಅಟಾರ್ನಿ ಕೊಟ್ಟ ಹಾಗಿದೆ. ಆದುದರಿಂದ, ಶುರು ಮಾಡಿ ಎಂದು ಹೇಳಿತ್ತಿದ್ದಾರೇನೋ.

ಶ್ರೀ ಕೆ. ಎನ್. ನಾಗೇಗೌಡ : ಶುರು ಮಾಡಲಿ ಅಧ್ಯಕ್ಷರೇ, ಭಾರಿ ನೀರಾವರಿಗೆ ಸಂಬಂಧಪಟ್ಟಂತೆ ಮಾತನಾಡುತ್ತಿರಲಿ, ನಾನು ಬೇರೆ ಮಂತ್ರಿಗಳನ್ನೂ ಕರೆಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಸುಮಾರು 47 ಬೇಡಿಕೆಗಳಿವೆ 18 ರಿಂದ 20 ಮಂತ್ರಿಗಳು ಯಾರೂ ಇಲ್ಲ. ಕಡೇ ಪಕ್ಷ ಡಿಮ್ಯಾಂಡ್ ಮೂವ್ ಮಾಡಿದ ಮಂತ್ರಿಗಳಾದರೂ ಇರಬೇಕು. ಅವರೂ ಕೂಡ ಇಲ್ಲದಿರುವಾಗ ನಾನು ಹೇಗೆ ಮಾತನಾಡುವುದು.

ಶ್ರೀ ಕೆ.ಎನ್. ನಾಗೇಗೌಡ : ರೆಕಾರ್ಡ್‌ಗೆ ಹೋಗುತ್ತದೆ ಮಾತನಾಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ರೆಕಾರ್ಡ್‌ಗೋಸ್ಕರ ಮಾತನಾಡಬೇಕೇ? ಆ ರೀತಿ ಮಾಡುವ ಹಾಗಿದ್ದರೆ ನಾವು ಸ್ಪೀಕರ್‌ಗೆ ರಿಕ್ವೆಸ್ಟ್ ಮಾಡಿಕೊಂಡು ನಮ್ಮ ಪಕ್ಕದಲ್ಲೇ ಮೀಟಿಂಗ್ ಹಾಲ್ ಇದೆಯಲ್ಲಾ ಅಲ್ಲಿಯೇ ಮಾತನಾಡಬಹುದು. ಅದಕ್ಕೋಸ್ಕರ ನಾವೇಕೇ ಇಲ್ಲಿಗೆ ಬಂದು ಮಾತನಾಡಬೇಕು?

ಶ್ರೀ ಕೆ. ಎನ್. ನಾಗೇಗೌಡ : ಇಲ್ಲಿ ರೆಕಾರ್ಡ್ ಆಗುವುದಕ್ಕೂ ಮತ್ತು ಅಲ್ಲಿ ರೆಕಾರ್ಡ್ ಆಗುವುದಕ್ಕೂ ವ್ಯತ್ಯಾಸವಿಲ್ಲವೇ? How it is valued there?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಅವರೆಲ್ಲರೂ ಬರುವ ತನಕ ಗೃಹ ಮಂತ್ರಿಗಳ ಕಡೆಯಿಂದ ಒಂದು ಸ್ಟೇಟ್‌ಮೆಂಟ್ ಮಾಡಿಸಬೇಕಾಗಿದೆ, ಕಡೇ ಪಕ್ಷ ಅದನ್ನಾದರೂ ಮಾಡಿಸಿ.

ಶ್ರೀ ಕೆ. ಎನ್. ನಾಗೇಗೌಡ : ಇನ್ನು ಹತ್ತು ನಿಮಿಷದಲ್ಲಿ ಎಲ್ಲರೂ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಗೃಹಮಂತ್ರಿಗಳಾದರೂ ಬರುತ್ತಾರೆ ತಾನೆ?

ಶ್ರೀ ಕೆ. ಎನ್. ನಾಗೇಗೌಡ : ಎಲ್ಲರೂ ಇನ್ನು ಹತ್ತು ನಿಮಿಷಗಳಲ್ಲಿ ಬರುತ್ತಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾವು ಅವರಿಗೋಸ್ಕರ ಕಾಯಬೇಕೇನು? ಒಂದು ಸಾರಿ ಎರಡು ಸಾರಿ, ಸರಿ ನಿಮಗೆ ಮಾತ್ರ ಕೆಲಸ ಇದೆ, ನಮಗೆ ಕೆಲಸವಿಲ್ಲವೇ? ಏನೋ ಒಂದು ರೀತಿ ನಿರುದ್ಯೋಗಿಗಳ ತರಹ ಇಲ್ಲಿಗೆ ಬಂದು ಭಾಷಣ ಕೇಳುವ ರೀತಿಯಾಗಿದೆ ಇಲ್ಲಿ. ಅಧ್ಯಕ್ಷರೇ, ಕಡೇ ಪಕ್ಷ ಸ್ಟೇಟ್‌ಮೆಂಟನ್ನಾದರೂ ಮಾಡಿಸಿ.

ಅಧ್ಯಕ್ಷರು : ಅದೂ ಕೂಡ ಟೈಪಿಂಗ್‌ನಲ್ಲಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದೂ ಸೈಕ್ಲೋಸ್ಟೈಲ್ ಆಗಿ ಬರಬೇಕಂತೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೇ, ನಿನ್ನೆ ನಡೆದ ಘಟನೆ ಬಗ್ಗೆ ಮಾತನಾಡುವುದಕ್ಕೆ ನನಗೆ 5 ನಿಮಿಷ ಕಾಲಾವಕಾಶ ಕೊಡಿ. ಅಷ್ಟರೊಳಗೆ ಟೈಪಿಂಗ್ ಆಗಿ ಸ್ಟೇಟ್‌ಮೆಂಟ್ ಬರಬಹುದು.

MR. SPEAKER : Mr. Sriram Reddy, it is an insult to conduct the House like that. We have prepared the business to be conducted which is before us. Hon'ble Leader of Opposition is on his legs, debating on the demands.

(INTERRUPTIONS)

ಅವರು ಇಲ್ಲ ಎನ್ನುವ ಕಾರಣಕ್ಕೆ ಟೈಮ್ ಪಾಸ್‌ಗಾಗಿ ನೀವು ಅದನ್ನು ಮಾಡಿ, ಇದನ್ನು ಮಾಡಿ ಎಂದು ಹೇಳುವುದು ಸರಿಯಲ್ಲ. Atleast, I as presiding Officer, don't think I would endorse such a thing. I cannot do it.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಕೇಳಿದ್ದನ್ನು ದಯವಿಟ್ಟು ತಪ್ಪಾಗಿ ತಿಳಿದುಕೊಳ್ಳಬೇಡಿ.

MR. SPEAKER : I understood it. In good sense you said it. I am not trying to attribute motives to you. I feel probably,..

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಾನು ಏಕೆ ಹೇಳಿದೆನೆಂದರೆ ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಕನಿಷ್ಟ ಕ್ಯಾಬಿನೆಟ್ ಸಚಿವರು ಇಲ್ಲದೇ ಇದ್ದರೆ ಹೇಗೆ?

ಅಧ್ಯಕ್ಷರು : ನನಗೆ ಅರ್ಥವಾಗುತ್ತದೆ. ನಾಗೇಗೌಡರೇ, ಮಂತ್ರಿಗಳು ಯಾರೂ ಇಲ್ಲ ಎನ್ನುವ ಕಾರಣಕ್ಕೆ, ಪತ್ರಿಕೆಯವರು ನಾಳೆ ಪತ್ರಿಕೆಯಲ್ಲಿ ಅಧ್ಯಕ್ಷರು ಮತ್ತು ಅವರೂ ಇವರೂ ಎಲ್ಲರೂ ಕೈಕಟ್ಟಿಕೊಂಡು ಕುಳಿತಿದ್ದರು ಎಂದು ಬರೆದರೆ ನಾವು ಜನರಿಗೆ ಯಾವ ರೀತಿಯಲ್ಲಿ ಮುಖ ತೋರಿಸುವುದಕ್ಕೆ ಆಗುತ್ತದೆ Is this is the way the things are happening?

ಶ್ರೀ ಕೆ. ಎನ್. ನಾಗೇಗೌಡ : ಅದಕ್ಕಾಗಿ ನಾನು ಕ್ಷಮೆ ಕೇಳುತ್ತೇನೆ. ಇನ್ನು 5 ನಿಮಿಷದಲ್ಲಿ ನಾನು ಎಲ್ಲರನ್ನೂ ಕರೆಸುತ್ತೇನೆ.

(ಗೊಂದಲ)

MR. SPEAKER : Please let me know is anybody doing any charitable service here? Everyone of us are paid for what we are doing.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅಧ್ಯಕ್ಷರೇ, ಸದನದ ಸಮಯದ ಪ್ರಕಾರ ಬರದೇ ಇರುವುದಕ್ಕೆ ಕಾರಣವೇನೆಂದರೆ, ನಾವು ಎಲ್ಲರೂ ಒಪ್ಪಿಕೊಂಡು ಸದನವನ್ನು ನಡೆಸುತ್ತಿದ್ದೇವೆ ಅದಕ್ಕೆ ಮರ್ಯಾದೆ ಕೊಡಬೇಕೆಂದು ಸರ್ಕಾರದ ಇಚ್ಛೆಯಾಗಿಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ, ಅವರೇನಾದರೂ ಮಾತನಾಡಿಕೊಂಡು ಹೋಗಲಿ, ಆಮೇಲೆ ಉತ್ತರ ಕೊಡುವುದು ಇದ್ದೇ ಇದೆ ಎನ್ನುವ ಧೋರಣೆ ಇದ್ದರೂ ಇರಬಹುದು. ಕಡೇಪಕ್ಷ ಸ್ಪೀಕರ್‌ಗೂ ಗೌರವ ಕೊಡಬಾರದೆ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಖಂಡಿತ ವಿರೋಧ ಪಕ್ಷದ ನಾಯಕರ ಬಗ್ಗೆ ಆ ಭಾವನೆ ಇಲ್ಲ. ಅಧ್ಯಕ್ಷರ ಬಗ್ಗೆ ಮತ್ತು ವಿರೋಧ ಪಕ್ಷದ ನಾಯಕರ ಬಗ್ಗೆಯೂ ನಮಗೆ ಗೌರವವಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ವಿರೋಧ ಪಕ್ಷದ ಮುಖಂಡರು ಮಾತನಾಡುತ್ತಾರೆ ಎಂದಿರುವಾಗ ಅದನ್ನು ಕೇಳುವುದಕ್ಕೆ ನಿಮ್ಮ ಕಡೆ ನಾಲ್ಕು ಜನರಿಗೆ ಸೌಜನ್ಯವಿಲ್ಲವೆಂದರೆ ಹೇಗೆ? ಇದರರ್ಥ ಏನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಸೌಜನ್ಯವಿದೆ, ಎಲ್ಲರೂ ಬರುತ್ತಿದ್ದಾರೆ, ನಿಮ್ಮ ಬಗ್ಗೆ ಗೌರವವಿದೆ.

ಅಧ್ಯಕ್ಷರು : ಈಗ ಒಂದು ಕೆಲಸ ಮಾಡೋಣ, ಯಡಿಯೂರಪ್ಪನವರು ಹೇಳಿದರು ಟೈಮ್ ವೇಸ್ಟ್ ಆಗುತ್ತದೆ ಎಂದು ಆತ್ಮಗೌರವಕ್ಕಿಂತ ಟೈಮ್ ಏನೂ ಬಹಳ ಮುಖ್ಯವಾದುದಲ್ಲ. We will come back at 3-45 PM.

SRI. M. MALLIKARJUNA KHARGE : You please adjourn the House for 10-15 minutes and let's see. If they do not come, then I myself alone will speak, even if they are not there. With this protest, I want the House to be adjourned now.

Mr. SPEAKER : Now the House stands adjourned and we are meeting at 3-45 PM.

(ಸದನ 3.25ಕ್ಕೆ ಮುಂದೂಡಿ ಮತ್ತೆ 3.45ಕ್ಕೆ ಸಮಾವೇಶಗೊಳ್ಳುವುದು.)

(ಸಭೆಯು ಪುನಃ 4.00ಕ್ಕೆ ಸಮಾವೇಶಗೊಂಡಿತು.)

ಅಧ್ಯಕ್ಷ ಪೀಠದಲ್ಲಿ ಶ್ರೀ ರಮೇಶ್‌ಕುಮಾರ್‌ರವರು ಉಪಸ್ಥಿತರಿದ್ದರು.

ಶ್ರೀ ಬಿ. ಎಸ್. ಯಡಿಯೂರಪ್ಪ : ಅರ್ಧಗಂಟೆ, ಮುಕ್ಕಾಲು ಗಂಟೆಯಾದರೂ ಅವರು ಯಾರಿಗೂ ಬಿಡುವಾಗಿಲ್ಲ, ಮೊದಲನೆಯ ಸಾಲಿನಲ್ಲಿ ಯಾರೂ ಮಂತ್ರಿಗಳಿಲ್ಲ. ಬಹಳ ಹಗುರವಾಗಿ ಮುಖ್ಯಮಂತ್ರಿಗಳು ಟೀಕೆ ಮಾಡುತ್ತಿದ್ದರು, ಧರಣಿ, ಉಪವಾಸ, ಸತ್ಯಾಗ್ರಹ ಬಿಟ್ಟು ನಿಮಗೆ ಕಳಕಳಿ ಇಲ್ಲ ಎಂದು ಹೇಳುತ್ತಿದ್ದರು ಈಗ ಏನು ಉತ್ತರವನ್ನು ಅವರು ಕೊಡುತ್ತಾರೆ? ಈಗ ಯಾವ ಅಂಶದ ಬಗ್ಗೆ ಅವರಿಗೆ ಕಳಕಳಿ ಇದೆ? ಅದಕ್ಕಾಗಿ ಅಧಿವೇಶನವನ್ನು ನಾವು ಮುಂದೂಡಿದೆವೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಕೆಲವು ಮಂತ್ರಿಗಳು ಕೌನ್ಸಿಲ್‌ನಲ್ಲಿದ್ದಾರೆ, ಇನ್ನು ಕೆಲವರು ಬಂದಿದ್ದೇವಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ : ಹತ್ತು ಗಂಟೆಗೆ ಸೇರೋಣ ಎಂದೆವು. ಬೆಳಿಗ್ಗೆಯಿಂದ ಇಷ್ಟೊತ್ತಿನವರೆಗೂ ಇದೇ ಪರಿಸ್ಥಿತಿ. ಬಹಳ ಹಗುರವಾಗಿ ಮುಖ್ಯಮಂತ್ರಿಗಳು ಹಾಗೂ ಸಚಿವರುಗಳು

ಪ್ರತಿಪಕ್ಷಗಳ ಬಗ್ಗೆ ಮಾತನಾಡಿದರು. ನಮಗೇನು ಬೇರೆ ಕೆಲಸ ಇಲ್ಲ, ಇವರು ಬಹಳ ಜವಾಬ್ದಾರಿ ಇರುವಂಥ ಸರ್ಕಾರ ಎಂದುಕೊಂಡಿದ್ದರು. ಈಗ ಏನು ಹೇಳುತ್ತಾರೆ.

ಅಧ್ಯಕ್ಷರು : ಇಂತಹ ಸಂದರ್ಭದಲ್ಲಿ ನಾನು ಏನು ಮಾಡಬೇಕೆಂಬುದರ ಬಗ್ಗೆ ಈ ಸದನವೇ ನನಗೆ ಗೈಡ್ ಮಾಡಬೇಕು.

ಶ್ರೀ ಬಿ. ಎಸ್. ಯಡಿಯೂರಪ್ಪ : ನನಗೆ ಇಂತಹ ಚರ್ಚೆ ಅಗತ್ಯ ಇಲ್ಲ ಎಂದು ಹೇಳುತ್ತೇನೆ. ನನ್ನ ಸ್ಪಷ್ಟವಾದ ಅಭಿಪ್ರಾಯ ಯಾವ ಸರ್ಕಾರಕ್ಕೆ, ಇಲ್ಲಿ ಮಾತನಾಡುವಂತಹದ್ದರ ಬಗ್ಗೆ ಸೀರಿಯಸ್ಸಾಗಿ ತೆಗೆದುಕೊಂಡು ಅದನ್ನು ಇಂಪ್ಲಿಮೆಂಟ್ ಮಾಡಬೇಕೆನ್ನುವ ಕಳಕಳಿ ಇಲ್ಲ, ಕಾಟಾಚಾರಕ್ಕೆ ಇರುವಷ್ಟು ದಿವಸ ಕಾಲಹರಣ ಮಾಡುವುದು ಸರಿಯೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವು ಮಂತ್ರಿಗಳು ಇದ್ದೇವಲ್ಲ ಇಲ್ಲ ಎಂದು ಹೇಳಿದರೆ ಏನು ಹೇಳುವುದು.

(ಗೊಂದಲ)

ಮಾನ್ಯ ಸಚಿವರು : ಹದಿನೈದು ಜನ ಮಂತ್ರಿಗಳು ಇದ್ದೇವೆ.

ಶ್ರೀ ಬಿ. ಎಸ್. ಯಡಿಯೂರಪ್ಪ : ಈಗಿರುವ ಹದಿನೈದು ಜನ ಅವರ ತಾಲ್ಲೂಕು, ಅವರ ಜಿಲ್ಲೆಗೆ ಸೀಮಿತವಾಗಿರುವವರು, ಅದರಲ್ಲಿ ಒಬ್ಬಿಬ್ಬರನ್ನು ಬಿಟ್ಟರೆ. ಅವರ ಟೂರ್ ಪ್ರೋಗ್ರಾಂ ತೆಗೆಸಿನೋಡಿ, ಇಡೀ ರಾಜ್ಯ ಸುತ್ತಿಬಂದಿರುವ ಯಾರಾದರೂ ಮಂತ್ರಿಗಳು ಇದ್ದಾರಾ ಕೇಳಿ. ನಾನು ನೇರವಾಗಿ ಚಾರ್ಜ್ ಮಾಡುತ್ತಿದ್ದೇನೆ. ನಾನು ಅದರ ಕುರಿತು ಇಲಾಖೆ ಬಗ್ಗೆ ಚರ್ಚೆಯಾಗಬೇಕಾದರೆ ಹೇಳುತ್ತೇನೆ. ನಾನು ನೇರವಾಗಿ ಚಾರ್ಜ್ ಮಾಡುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ನಾವೆಲ್ಲ ತಾಲ್ಲೂಕು ಮಂತ್ರಿಗಳೆ! ದಯವಿಟ್ಟು ಕ್ಷಮಿಸಬೇಕು. ಸನ್ಮಾನ್ಯ ಅಧ್ಯಕ್ಷರೆ, ನಾವೆಲ್ಲ ತಾಲ್ಲೂಕು ಮಂತ್ರಿಗಳು ಅಂದರೆ ಅರ್ಥ ಏನು? ಹಿರಿಯರು, ಅನುಭವಿಗಳು ಈ ರೀತಿ ಹೇಳಿದರೆ ಹೇಗೆ?

ಶ್ರೀ ಬಿ. ಎಸ್ . ಯಡಿಯೂರಪ್ಪ : ನಾನು ಚಾರ್ಜ್ ಮಾಡಿದ್ದೇನಲ್ಲ, ನಿಮ್ಮ ಟೂರ್ ಪ್ರೋಗ್ರಾಂ ಕೊಡಿ, ಯಾರು ಇಡೀ ರಾಜ್ಯ ನನ್ನದು ಎಂದು ಪ್ರವಾಸ ಮಾಡುತ್ತಿದ್ದೀರಿ ತಾವು ಹೇಳಿ, ನನಗೆ ಕೇಳುವುದಕ್ಕೆ ಅಧಿಕಾರ ಇದೆ ಅದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ತಿದ್ದಿಕೊಳ್ಳುವುದಿದ್ದರೆ ತಿದ್ದಿಕೊಳ್ಳಿ. ನಿಮಗೆ ಸಮಾಧಾನವಾದರೆ ನನ್ನದೇನೂ ಅಭ್ಯಂತರ ಇಲ್ಲ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಇಡೀ ರಾಜ್ಯಾದ್ಯಂತ ಟೂರ್ ಮಾಡಿದ್ದನ್ನು ತೋರಿಸುತ್ತೇವೆ.

(ಗೊಂದಲ)

ಶ್ರೀ ಸಿ. ಆರ್. ಸಗೀರ್ ಅಹಮದ್ : ಅಧ್ಯಕ್ಷರೆ, ಮುದ್ದಪ್ಪ ಮುನಿಯಪ್ಪನವರು ಯಾವ ತಾಲ್ಲೂಕಿಗೆ ಬಂದಿದ್ದಾರೆ? ಏನಾದರೂ ಗೊತ್ತಾ.

(ಗೊಂದಲ)

ಶ್ರೀ ಕೆ. ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಇರಿಗೇಷನ್, ಪವರ್, ಫಾರೆಸ್ಟ್, ಬ್ಯಾಕ್‌ವರ್ಡ್ ಕ್ಲಾಸ್, ಫಿಷರೀಸ್, ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್, ಮೈನರ್ ಇರಿಗೇಷನ್ ಖಾತೆಗಳಿಗೆ ಸಂಬಂಧಪಟ್ಟಂತೆ ಬೇಡಿಕೆಗಳನ್ನು ಮಂಡಿಸಲಾಗಿದ್ದು, ಆ ಸಂಬಂಧಪಟ್ಟ ಇಲಾಖೆಗಳಿಗೆ ಸೇರಿದ ಮಾನ್ಯ ಮಂತ್ರಿಗಳು ಸದನದಲ್ಲಿದ್ದಾರೆ.

ಶ್ರೀ ಯು. ಆರ್. ಸಭಾಪತಿ : ಮಾನ್ಯ ವಿರೋಧ ಪಕ್ಷದ ನಾಯಕರು ಅಬ್ಕಾರಿ ಬಗ್ಗೆ ಮಾತನಾಡುವಾಗ ಮಾನ್ಯ ಉಪ ಮುಖ್ಯಮಂತ್ರಿಗಳು ಸದನದಲ್ಲಿ ಇರಬೇಕಾಗಿತ್ತು. ಈ ಬಗ್ಗೆ ನಿಮ್ಮ ವಿದ್ಯುತ್ ಮಂತ್ರಿಗಳು ನೋಟ್ ಮಾಡಿಕೊಳ್ಳುವುದಕ್ಕಾಗುವುದಿಲ್ಲ. ಇದು ನೀವು ಮಾನ್ಯ ವಿರೋಧ ಪಕ್ಷದ ನಾಯಕರಿಗೆ ಹಾಗೂ ಸದನಕ್ಕೆ ಮಾಡಿದ ಅಪಮಾನವಾಗಿದೆ ಎಂದು ನಾನು ಹೇಳುತ್ತಿದ್ದೇನೆ.

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ : ಮಾನ್ಯ ಉಪ ಮುಖ್ಯಮಂತ್ರಿಗಳ ಪ್ರಕೃತಿ ಸರಿಯಿಲ್ಲ, ಅದಕ್ಕಾಗಿ ಅವರು ಸದನಕ್ಕೆ ಬಂದಿಲ್ಲ. ಇದು ನಿಮಗೆ ಗೊತ್ತಿಲ್ಲವೇ? ನಾವೆಲ್ಲಾ ಮಂತ್ರಿಗಳು ಇಲ್ಲಿ ಇದ್ದೇವಲ್ಲಾ?

ಶ್ರೀ ಹೆಚ್. ಎನ್. ನಂಜೇಗೌಡ : ಮಾನ್ಯ ಅಧ್ಯಕ್ಷರೇ, ನಾನು ಪದೇ ಪದೇ ಹೇಳುತ್ತಿರುತ್ತೇನೆ, ಇದೊಂದು ರೀತಿ ರಿಚರಿಸ್ಟಿಕ್ ಆಗುತ್ತಿದೆ. ನೀವು 45-50 ಬೇಡಿಕೆಗಳನ್ನು ಚರ್ಚೆಗೆ ತೆಗೆದುಕೊಂಡು ಮಂತ್ರಿಗಳೇ ಇಲ್ಲದಿದ್ದರೆ ಆ ಚರ್ಚೆಗೆ ಅರ್ಥ ಬರುವುದಿಲ್ಲ. ಈಗ ನಾವು ಮಾತನಾಡಿದರೂ, ನಾವು ಯಾವ ಬೇಡಿಕೆ ಮೇಲೆ ಮಾತನಾಡುತ್ತಿದ್ದೇವೆ ಎನ್ನುವುದು ಮಂತ್ರಿಗಳಿಗೆ ಗೊತ್ತೇ ಇರುವುದಿಲ್ಲ. ಹಿಂದೆ ಸೀಮಿತವಾಗಿ ಒಂದು ಸಚಿವ ಖಾತೆಗೆ ಸಂಬಂಧಪಟ್ಟ ಬೇಡಿಕೆಗಳ ಬಗ್ಗೆ ಚರ್ಚೆಯಾಗುತ್ತಿತ್ತು. ಆಗ ಮಂತ್ರಿಗಳು ಸದನದಲ್ಲೇ ಕುಳಿತುಕೊಳ್ಳಬೇಕಾಗುತ್ತಿತ್ತು, ನೋಟ್ ಮಾಡಿಕೊಳ್ಳಬೇಕಾಗುತ್ತಿತ್ತು, ಪಾಯಿಂಟ್ ಬೈ ಪಾಯಿಂಟ್ ಉತ್ತರ ಕೊಡಬೇಕಾಗುತ್ತಿತ್ತು. ಈಗ ಏನಾಗಿದೆ ಎಂದರೆ ನಾವು ಎಲ್ಲವನ್ನೂ ಲಘುವಾಗಿ ತೆಗೆದುಕೊಳ್ಳುತ್ತಿದ್ದೇವೆ. ಬೇಡಿಕೆಗಳ ಮೇಲೆ ಚರ್ಚೆ ನಡೆಸುವುದೆಂದರೆ ಈಗ ಹುಡುಗಾಟದ ವ್ಯವಹಾರವಾಗುತ್ತಿದೆ. ಈಗ ಇಲ್ಲಿ 45-46 ಬೇಡಿಕೆಗಳನ್ನು ಮಂಡಿಸಲಾಗಿದೆ. ಸಂಬಂಧಪಟ್ಟ ಮಂತ್ರಿಗಳು ಇಲ್ಲದಿರುವಾಗ ಸದಸ್ಯರು ಯಾವ ಬೇಡಿಕೆ ಮೇಲೆ ಎಂದು ಚರ್ಚೆ ಮಾಡಬೇಕು? ನನ್ನನ್ನು ಈಗ ಬೇಡಿಕೆಗಳ ಮೇಲೆ ಮಾತನಾಡಿ ಅಂದರು, ನಾನು ಮಾತನಾಡುವುದಿಲ್ಲ ಎಂದು ಹೇಳಿದೆ. ಈಗ ನಾವು ಯಾವುದೋ ಒಂದು ಸಬ್ಜೆಕ್ಟ್ ಮೇಲೆ ಮಾತನಾಡೋಣ ಎಂದರೆ, ಅದಕ್ಕೆ ಸಂಬಂಧಪಟ್ಟ ಮಂತ್ರಿಗಳೇ ಇರುವುದಿಲ್ಲ. ಮಾನ್ಯ ಖರ್ಗೆಯವರೇ, ಈ ಸದನದ ಸದಸ್ಯರಾದ ನಾವೆಲ್ಲಾ ಸೇರಿ ಇದಕ್ಕೆ ಏನಾದರೂ ಒಂದು ಮಾರ್ಗ ಕಂಡುಹಿಡಿಯಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಮಂತ್ರಿಗಳಿಗೂ ಕೂಡ ಕಷ್ಟ ಇರುತ್ತದೆ, ನಾನು ಇಲ್ಲ ಎಂದು ಹೇಳುವುದಿಲ್ಲ. ಅವರು ಆ ಸದನಕ್ಕೂ ಕೂಡ ಹೋಗಬೇಕಗುತ್ತದೆ.

ಶ್ರೀ ಬಿ. ಎ. ಮೊಯಿದ್ದೀನ್ : ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನೀತಿ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆಯಾಗುತ್ತಿರುವುದರಿಂದ, ನಾವು ಮಂತ್ರಿಗಳು ಅಲ್ಲೂ ಕೂಡ ಹೋಗಬೇಕಾಗುತ್ತದೆ.

ಶ್ರೀ ಹೆಚ್. ಎನ್. ನಂಜೇಗೌಡ : ಆಯಿತು, ಗೊತ್ತಾಯಿತು ಬಿಡಿ. ಆದುದರಿಂದ, ಇದರ ಬಗ್ಗೆ ಸ್ವಲ್ಪ ಪುನರ್ ಚಿಂತನೆ ಮಾಡಬೇಕು. ಬೇಡಿಕೆಗಳ ಮೇಲೆ ನಾವು ಯಾವ ರೀತಿ ಚರ್ಚೆ ಮಾಡಬೇಕು ಎಂಬ ವಿಚಾರದ ಬಗ್ಗೆ ಪುನರ್ ಚಿಂತನೆ ಮಾಡಬೇಕಾಗಿದೆ. ಮಾನ್ಯ ವಿರೋಧ ಪಕ್ಷದ ನಾಯಕರು ಅಥವಾ ಇತರ ಪ್ರಮುಖ ಧುರೀಣರು ಮಾತನಾಡತಕ್ಕ ಕಾಲದಲ್ಲಿ ಸರ್ಕಾರದ ಹಿತದೃಷ್ಟಿಯಿಂದ ಮಾನ್ಯ ಮುಖ್ಯಮಂತ್ರಿಗಳು ಅಥವಾ ಹಿರಿಯ ಪ್ರಮುಖ ಮಂತ್ರಿಗಳು ಸದನದಲ್ಲಿ ಇರಬೇಕಾದುದು ಬಹಳ ಪ್ರಾಮುಖ್ಯವಾದುದು. ಇಲ್ಲದಿದ್ದರೆ ಏನಾಗುತ್ತದೆ, ನಾವು ಹೇಳಿದ್ದೆಲ್ಲಾ ರೆಕಾರ್ಡ್‌ಗೆ ಹೋಗುತ್ತದೆ, ಪತ್ರಿಕೆಯಲ್ಲಿ ಬರುತ್ತದೆ, ಉತ್ತರ ಹೇಳುವುದಕ್ಕೆ ನಿಮಗೆ ಮಾಹಿತಿಯೇ ಇರುವುದಿಲ್ಲ. ಎಂಥೆಂಥ ದೊಡ್ಡ ದೊಡ್ಡ ವಿಚಾರಗಳು ಕೈ ತಪ್ಪಿ ಬಿಟ್ಟುಹೋಗುತ್ತವೆ. ಸರ್ಕಾರದ ಹಿತದೃಷ್ಟಿಯಿಂದಲೂ ಕೂಡ ಸರ್ಕಾರದ ಪ್ರಮುಖ ಮಂತ್ರಿಗಳು ಸದನದಲ್ಲಿರಬೇಕು. ಒಂದು ಪಕ್ಷ ಮಾನ್ಯ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಂತಹ ವಿಚಾರ ಮಾತನಾಡುವಾಗ ಅವರು ಸದನದಲ್ಲಿ ಇಲ್ಲದೇ ಹೋದರೆ, ಮಾನ್ಯ ಸದಸ್ಯರು ಮಾನ್ಯ ಮುಖ್ಯಮಂತ್ರಿಗಳ ಖಾತೆಗೆ ಸಂಬಂಧಪಟ್ಟಂತೆ ಏನೇನು ಮಾತನಾಡಿರುತ್ತಾರೋ ಅವುಗಳನ್ನು ಬೇರೆ ಮಂತ್ರಿಗಳು ಗುರುತು ಮಾಡಿಕೊಂಡು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬೇಕಾಗುತ್ತದೆ. ಅಧಿಕಾರಿಗಳು ಇವನ್ನೆಲ್ಲಾ ನೋಟ್ ಮಾಡಿಕೊಂಡು ಅವರು ಉತ್ತರ ಕೊಡುವಂತೆ ಮಾಡಬೇಕಾಗುತ್ತದೆ. ಬೇಡಿಕೆಗಳ ಮೇಲೆ ನಡೆಸುವ ಚರ್ಚೆ ಬಗ್ಗೆ ನಾವು ಪುನರ್ ವಿಮರ್ಶೆ ಮಾಡಿ ಬಹುಶಃ ಮುಂದಿನ ಅಧಿವೇಶನದಿಂದಲಾದರೂ ಒಟ್ಟಿಗೇ ಇಷ್ಟೊಂದು ಬೇಡಿಕೆಗಳನ್ನು ಮಂಡಿಸುವ ಮಾರ್ಗ ಬಿಟ್ಟು ಬಿಡೋಣ. ಕೇವಲ ನಾಲ್ಕೇ ಬೇಡಿಕೆಗಳ ಮೇಲೆ ಚರ್ಚೆ ಇಟ್ಟುಕೊಳ್ಳೋಣ, 46 ಬೇಡಿಕೆಗಳ ಮೇಲೆ ಬೇಡ. ಆಯಾ ಖಾತೆಯ ಮಂತ್ರಿಗಳಿರುವಾಗ ಮಾತ್ರ ಅವರ ಬೇಡಿಕೆಗಳ ಬಗ್ಗೆ ಚರ್ಚೆಯಾಗಬೇಕು, ಮಾನ್ಯ ಮಂತ್ರಿಗಳು ಆ ಚರ್ಚೆಗೆ ಉತ್ತರ ಕೊಡುವಂತಾಗಬೇಕು. 45-50 ಬೇಡಿಕೆಗಳನ್ನೂ ಒಟ್ಟಿಗೇ ಮಂಡಿಸಿ, ಸಂತೆಯಲ್ಲಿ ಭಾಷಣ ಮಾಡಿದಂತಾಗಬಾರದು. ಈಗ ನಾವು ಎಷ್ಟೊಂದು ವಿಷಯಗಳ ಬಗ್ಗೆ ಮಾತನಾಡಿದೆವು. ಇದರಿಂದ ಏನು ಅನುಕೂಲವಾಯಿತು? ಮಂತ್ರಿಗಳು ಯಾವುದಕ್ಕೆ ಅಂತ ಉತ್ತರ ಕೊಡುತ್ತಾರೆ? ನಾವು ಯಾವುದಕ್ಕೆ ಎಂದು ಪಿನ್‌ಪಾಯಿಂಟ್ ಮಾಡಿ ಮಾತನಾಡಬೇಕು? ಇದರ ಬಗ್ಗೆ ಸ್ವಲ್ಪ ಪುನರ್ ವಿಮರ್ಶೆ ಮಾಡಬೇಕಾಗುತ್ತದೆ. ಸದನಕ್ಕೆ ನಾನು ವಿನಂತಿಸಿಕೊಳ್ಳುತ್ತೇನೆ, ನಾವು ಸ್ವಲ್ಪ ಈ ಫರಿಹಾಠವನ್ನು ಬದಲಾವಣೆ ಮಾಡಿಕೊಂಡು, ಹಿಂದೆ ಯಾವ ರೀತಿ ನಡೆಯುತ್ತಿತ್ತೋ, ನಾವು ಅನೇಕ ಸಾರಿ ನೋಡಿದ್ದೇವೆ, ಆ ರೀತಿ ಬೇಡಿಕೆಗಳ ಬಗ್ಗೆ ಚರ್ಚೆಯಾಗತಕ್ಕಂಥದ್ದು ಆಗಬೇಕು ಎಂದು ನಾನು ವಿನಂತಿಸಿಕೊಳ್ಳುತ್ತೇನೆ. ಇವತ್ತು ಸದನದಲ್ಲಿರತಕ್ಕ ಉಳಿದ ಮಂತ್ರಿಗಳು ಬೇಕಾದರೆ ಬರೆದುಕೊಳ್ಳಿ ಅಥವಾ ಬಿಡಿ. ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಾರೆ, ಮಾನ್ಯ ಯಡಿಯೂರಪ್ಪನವರು ಮಾತನಾಡುತ್ತಾರೆ, ಅದು ರೆಕಾರ್ಡ್‌ಗೆ ಹೋಗುತ್ತದೆ, ಜನರಿಗಾದರೂ ಗೊತ್ತಾಗುತ್ತದೆ. ನಾವು ಇನ್ನೇನು ಮಾಡಲು ಸಾಧ್ಯ? ಇನ್ನೇನೂ ಮಾಡಲು ಇಲ್ಲಿ ಅವಕಾಶವೇ ಇಲ್ಲವೇ? ಆದುದರಿಂದ, ತಾವು ನನ್ನ ವಿನಂತಿಯನ್ನು ಪರಿಗಣಿಸಿ ಏನಾದರೂ ಒಂದು ಕ್ರಮ ತೆಗೆದುಕೊಳ್ಳಬೇಕೆಂದು ನಾನು ಮಾನ್ಯ ಸಭಾಧ್ಯಕ್ಷರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೇ, ಮಾನ್ಯ ನಂಜೇಗೌಡರು ಪ್ರಸ್ತಾಪಿಸಿರುವುದಕ್ಕೆ ನೂರಕ್ಕೆ ನೂರರಷ್ಟು ಸರ್ಕಾರದ ವತಿಯಿಂದ ಸಹಮತಿ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರು

ಮತ್ತು ಇನ್ನೂ ಅನೇಕ ಪ್ರಮುಖ ಸದಸ್ಯರು ಈ ವಿಚಾರಗಳಲ್ಲಿ ಪ್ರಸ್ತಾಪ ಮಾಡುವಂತಹ ಸಂದರ್ಭಗಳಲ್ಲಿ ನಾವಿರಬೇಕು ಎನ್ನುವುದನ್ನೂ ಕೂಡ ನಾನು ಒಪ್ಪಿಕೊಳ್ಳುತ್ತೇನೆ. ಅದೂ ಅಲ್ಲದೇ ತಾವೇ ಹೇಳಿದಂತೆ ವಿಧಾನ ಪರಿಷತ್‌ನಲ್ಲಿ ಕೂಡ ಚರ್ಚೆ ನಡೆಯುತ್ತಿದೆ. ಮಾನ್ಯ ಸದಸ್ಯರು ಪ್ರಸ್ತಾಪ ಮಾಡುವಾಗ ಯಾವ್ಯಾವ ಇಲಾಖೆಗಳ ವಿಚಾರ ಬರುತ್ತದೆ ಎಂಬ ಬಗ್ಗೆ ನಮಗೆ ಪೂರ್ವಭಾವಿಯಾಗಿ ನಮಗೆ ಗೊತ್ತಾಗುವುದಿಲ್ಲ. ಮಾನ್ಯ ಸದಸ್ಯರು ಯಾವ್ಯಾವ ವಿಚಾರಗಳ ಬಗ್ಗೆ ಮಾತನಾಡುತ್ತಾರೆ ಎನ್ನತಕ್ಕಂಥದ್ದರಲ್ಲಿ ಸ್ವಲ್ಪ ಮಟ್ಟಿಗೆ ತೊಂದರೆ ಮತ್ತು ಗೊಂದಲ ಉಂಟಾಗಿದ್ದರಿಂದ ಈ ತಪ್ಪಾಗಿದೆ. ಮುಂದೆ ಇದು ಪುನರಪಿ ಆಗಲಾರದಂತೆ ನೋಡಿಕೊಳ್ಳುತ್ತೇವೆ. ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯದಲ್ಲಿ ಪ್ರಸ್ತಾಪ ಮಾಡಿದಂತಹ ಎಲ್ಲವನ್ನೂ ಕೂಡ ನಾನು ಮಧ್ಯಾಹ್ನವೇ, ಈ ಸದನ ಮುಗಿದ ತಕ್ಷಣವೇ ಮಾನ್ಯ ಮುಖ್ಯಮಂತ್ರಿಗಳ ಬಳಿಗೆ ಹೋಗಿ, ಅವರು ಸೆಕ್ಷನ್ 3 ಪ್ರಾವಿಷನ್ 11ರ ಕೆಳಗೆ ಎಕ್ಸೈಜ್ ಆಕ್ಟ್‌ನಲ್ಲಿ ಮಾಡಿದಂತಹ ತಿದ್ದುಪಡಿ ವಿಚಾರದಲ್ಲಿ, ಇದರಿಂದ ತೊಂದರೆಯಾಗಿದೆ ಎನ್ನುವಂತಹ ವಿಷಯ, ಮಾನ್ಯ ಖರ್ಗೆಯವರು ಎಕ್ಸೈಜ್ ಕುರಿತಾಗ ಏನೆಲ್ಲಾ, ಮಾತುಗಳನ್ನು ಹೇಳಿರುತ್ತಾರೆ, ಅವೆಲ್ಲವುಗಳ ಬಗ್ಗೆ ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಮಾಹಿತಿಕೊಟ್ಟಿರುತ್ತೇನೆ. ಅದಲ್ಲದೇ, 3 ಗಂಟೆಗೆ ಏನು ಕಾವೇರಿ ವಿಚಾರದಲ್ಲಿ ಪ್ರಸ್ತಾಪ ಮಾಡಬೇಕಾಗಿತ್ತು, ಅದನ್ನು 5.30 ಗಂಟೆಗೆ ಇಟ್ಟರೆ, ಇಲ್ಲಿ ಎಲ್ಲಾ ಮಾತನಾಡತಕ್ಕ ಸಂದರ್ಭ ಸರಿ ಹೋಗುತ್ತದೆ ಎಂದು ಹೇಳಿ, ಅದನ್ನೂ ಕೂಡ ಪೋಸ್ಟ್ ಪೋನ್ ಮಾಡಿ ಎನ್ನತಕ್ಕಂತಹ ವಿಷಯ ತಿಳಿಸಿ ನಾನು ಬಂದಿದ್ದೇನೆ. ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಬೇರೆಯವರು ಏನೇನೆಲ್ಲಾ ಮಾತನಾಡುತ್ತಾರೋ ಅವೆಲ್ಲವನ್ನೂ ನಾವು ಖಂಡಿತವಾಗಿಯೂ ಬರೆದುಕೊಳ್ಳುತ್ತೇವೆ ಎಂದು ನಾನು ಈ ಸದನಕ್ಕೆ ಅರಿಕೆ ಮಾಡಿಕೊಳ್ಳುತ್ತೇನೆ.

ವಿತ್ತೀಯ ಕಾರ್ಯಕಲಾಪ

1997-98ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಮುಂದುವರಿದ ಚರ್ಚೆ

+ಶ್ರೀ ಎಂ. ಮಲ್ಲಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಈ ಸಭೆ ಪ್ರಾರಂಭವಾಗುವುದಕ್ಕಿಂತ ಮುಂಚೆ ಅಂದರೆ ಭೋಜನ ವಿರಾಮದ ನಂತರ ಮಧ್ಯಾಹ್ನ 3.15ಕ್ಕೆ ಸೇರಿದ್ದಾಗ ಆಗ ಸದನದಲ್ಲಿ ಒಬ್ಬಿಬ್ಬರು ಮಂತ್ರಿಗಳು ಮತ್ತು 4-5 ಸದಸ್ಯರು ಬಿಟ್ಟರೆ ಆ ಕಡೆ ಬೇರೆ ಯಾರೂ ಇರಲಿಲ್ಲ. ನನ್ನ ಕಳಕಳಿಯ ಒಂದು ಮನವಿ ಏನೆಂದರೆ, ಯಾವ ಸರ್ಕಾರ ತನ್ನದೇ ಆದಂತಹ ಒಂದು ಕೋರಂ ಅನ್ನು ಕೂಡ ಮಾಡಲಿಕ್ಕೆ ಸಾಧ್ಯವಿಲ್ಲವೆಂದರೆ ಆ ಸರ್ಕಾರಕ್ಕೆ ಆಳತಕ್ಕಂಥ ನೈತಿಕ ಹಕ್ಕು ಕೂಡ ಇಲ್ಲ. ನಿಮ್ಮ ಕೋರಂ ಅನ್ನು ನೀವು ಮಾಡಿಕೊಳ್ಳುವಷ್ಟು ಶಕ್ತಿ ನಿಮಗೆ ಇಲ್ಲ ಎಂದಾಗ, ಅದಕ್ಕೂ ಪದೇ ಪದೇ ನಾವು ಬೆನ್ನು ಹತ್ತಿ, ಬೇಡಿ, ಕಾಡಿ, ಮಂತ್ರಿಗಳೆಲ್ಲಿದ್ದಾರೆ, ಸದಸ್ಯರೆಲ್ಲಿದ್ದಾರೆ ಎಂದು ಹೇಳಿ ಜಮಾಯಿಸಿಕೊಂಡು ನಾವು ಮಾತನಾಡತಕ್ಕ ಒಂದು ಪ್ರಸಂಗ ಬರಬೇಕು ಅಂತೆಂದರೆ ಎಷ್ಟರಮಟ್ಟಿಗೆ ಆಡಳಿತದಲ್ಲಿ ನಿಮಗೆ ಸೀರಿಯೆಸ್‌ನೆಸ್ ಇದೆ ಎಂದು ತಾವೇ ಇದನ್ನು ಅರ್ಥಮಾಡಿಕೊಳ್ಳಬೇಕು. ಈಗಾಗಲೇ ತಾವೂ ಕೂಡ ಇದರ ಬಗ್ಗೆ ಸಾಕಷ್ಟು ಹೇಳಿದ್ದೀರಿ. ನನ್ನ ಮನವಿ ಇಷ್ಟೇ, ಸಂಬಂಧಪಟ್ಟಂತಹ ವಿಷಯದ ಮಂತ್ರಿಗಳಿದ್ದರೆ, ಸುಮಾರು 47 ಡಿಮ್ಯಾಂಡ್ಸ್ ಇವೆ, 47

ಡಿಮ್ಯಾಂಡ್ಸ್ ಅಂದರೆ 17-18 ಮಂತ್ರಿಗಳು ಸದನದಲ್ಲಿ ಇರಬೇಕಾಗುತ್ತದೆ. ಆ 17-18 ಮಂತ್ರಿಗಳಲ್ಲಿ ಯಾರು ಬೇಡಿಕೆ ಮೂವ್ ಮಾಡುತ್ತಾರೋ ಅವರೇ ಇವತ್ತು ಸದನದಲ್ಲಿ ಇರುವುದಿಲ್ಲ. ನಮಗೆ ಮೇಲ್ಮನೆಯಲ್ಲಿ ಕೆಲಸ ಇದೆ ಎಂದು ಹೇಳಿದರೆ ಹೇಗೆ? ನಿಮ್ಮ ಡಿಮ್ಯಾಂಡ್ ಯಾವ ದಿವಸ ನೀವು ಮೂವ್ ಮಾಡುತ್ತೀರೋ, ಯಾವ ದಿವಸ ಆ ಡಿಮ್ಯಾಂಡ್ ಮೇಲೆ ಚರ್ಚೆಯಾಗುತ್ತದೋ ಆ ದಿವಸ ಸದನದಲ್ಲಿ ಹಾಜರಿರಬೇಕಾದುದು ನಿಮ್ಮ ಕರ್ತವ್ಯವಾಗಿದೆ. ತಾವು ಇರಲಿಲ್ಲವೆಂದರೂ ಪರವಾಗಿಲ್ಲ, ತಾವು ಸ್ವಲ್ಪ ಹೊರಗೆ ಹೋಗಬೇಕಾದರೆ, ಇಂತಹ ನನ್ನ ಡಿಮ್ಯಾಂಡ್ ಮೇಲೆ ಯಾರಾದರೂ ಮಾನ್ಯ ಸದಸ್ಯರು ಮಾತನಾಡಿದರೆ ತಾವು ಬರೆದುಕೊಳ್ಳಿ ಎಂದು ತಮ್ಮ ಸಹೋದ್ಯೋಗಿಗಳಿಗೆ ಹೇಳಬೇಕು. ಡಿಮ್ಯಾಂಡ್ಸ್‌ಗಳು 10-20 ಆಗಬಹುದು, ಅದು ಒಂದೇ ಡಿಮ್ಯಾಂಡ್ ಇರಬೇಕೆಂದೇನೂ ಇಲ್ಲ. ಅನೇಕ ಸಾರಿ ಕೇವಲ ಒಂದು ಬೇಡಿಕೆ ಬಗ್ಗೆಯೂ ಮಾತನಾಡಿದ್ದಾರೆ, ಒಟ್ಟಿಗೇ 10 ಡಿಮ್ಯಾಂಡ್‌ಗಳ ಬಗ್ಗೆಯೂ ಮಾತನಾಡಿದ್ದಾರೆ. ಏಕೆಂದರೆ ಈ ಸಂಪ್ರದಾಯವನ್ನು ನಾವೇ ಅಳವಡಿಸಿಕೊಂಡಿದ್ದೇವೆ. ನಾವು ಸುಮಾರು ಕಳೆದ ಒಂದು ತಿಂಗಳಿನಿಂದ ಈ ಸದನದಲ್ಲಿ ಚರ್ಚೆ ಮಾಡುವುದರಿಂದ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಆದ್ದರಿಂದ ಕೊನೆಗೆ ಇದಕ್ಕೂ ಕೂಡ ಸಮಯ ಸಿಗದೇ ಈ ರೀತಿಯಲ್ಲಿ ಇವತ್ತು ಆಗಿದೆ. ಏನೇ ಆಗಲಿ, ಒಂದು ಮಾತನ್ನು ಎಲ್ಲರೂ ನೆನಪಿನಲ್ಲಿಡಬೇಕು. ದಯವಿಟ್ಟು ಯಾವಾಗ ಮಾನ್ಯ ಸದಸ್ಯರುಗಳು ಬೇಡಿಕೆಗಳ ಬಗ್ಗೆ ಚರ್ಚೆ ಮಾಡುತ್ತಾರೆ, ಅದಕ್ಕೆ ಸರ್ಕಾರದವರು ಉತ್ತರ ಕೊಡಬೇಕು. ಈ ಬಗ್ಗೆ ಸೀರಿಯೆಸ್‌ನೆಸ್ ಇಟ್ಟುಕೊಂಡು ಮಂತ್ರಿಗಳು ಸದನಕ್ಕೆ ಬರದೇ ಹೋದರೆ, ಇದರಲ್ಲಿ ಬೇಜಾರಾಗುವ ಪ್ರಶ್ನೆ ಏನಿಲ್ಲ, ನಮಗೆ ಗೊತ್ತಿದೆ, ನಾವು ಎಷ್ಟೋ ಸಲ ಸಲಹೆಗಳನ್ನು ಕೊಟ್ಟಿದ್ದರೂ ಕೂಡ ಅದನ್ನು ಎಷ್ಟರಮಟ್ಟಿಗೆ ಸೀರಿಯೆಸ್ ಆಗಿ ತೆಗೆದುಕೊಳ್ಳುತ್ತೀರಿ ಎಂದು ಆದರೆ ಕನಿಷ್ಟ ಪಕ್ಷ ನಾವು ಇಲ್ಲಿಗೆ ಆರಿಸಿ ಬಂದ ಮೇಲೆ ನಮ್ಮ ಪ್ರಾಮಾಣಿಕವಾದಂತಹ ನಮ್ಮ ಕರ್ತವ್ಯ, ಸರ್ಕಾರದ ಗಮನಕ್ಕೆ ತಂದಿದ್ದೇವೆ, ಸದನದ ಗಮನಕ್ಕೆ ವಿಷಯಗಳನ್ನು ತಂದಿದ್ದೇವೆ ಎನ್ನತಕ್ಕಂಥ ತೃಪ್ತಿಯಾದರೂ ನಮಗೆ ಇರಲಿ ಅನ್ನತಕ್ಕಂಥ ದೃಷ್ಟಿಯಿಂದ ನಾವು ಇವತ್ತು ಮಾತನಾಡುತ್ತಿದ್ದೇವೆ. ನಾವು ಮಾತನಾಡಿದ್ದಕ್ಕೆ ಎಲ್ಲಕ್ಕೂ ಇವರು ಉಪಾಯ ಹುಡುಕಿಕೊಡುತ್ತಾರೆ ಅಥವಾ ನಮ್ಮ ಗ್ರಿವೆನ್ಸ್‌ಸ್ ಸಾಲ್ವ್ ಮಾಡುತ್ತಾರೆ ಅನ್ನತಕ್ಕಂಥ ನಂಬಿಕೆಯಂತೂ ನಮಗೆ ಇಲ್ಲವೇ ಇಲ್ಲ. ಏಕೆಂದರೆ, ಕೇಳುವ ಸೌಜನ್ಯವಿಲ್ಲ ಅಂದರೆ ಅದಕ್ಕೆ ಬಿಡಿಸತಕ್ಕಂಥದ್ದು, ಅದಕ್ಕೆ ಉಪಾಯ ಹುಡುಕತಕ್ಕಂಥ ಪ್ರಶ್ನೆಯೇ ಉದ್ಭವಿಸುವುದಿಲ್ಲ. ನಾನು ಈ ಬಗ್ಗೆ ಹೆಚ್ಚಿಗೆ ಮಾತನ್ನು ಬೆಳೆಸದೇ ಇಷ್ಟು ಮಾತ್ರ ಹೇಳುತ್ತೇನೆ, ಇನ್ನು ಮೇಲಾದರೂ ಕೂಡ ಮಂತ್ರಿಗಳು ಬರುತ್ತಾರೆ ಎಂದು ಆಶಿಸುತ್ತೇನೆ. ಮಾನ್ಯ ಯಡಿಯೂರಪ್ಪನವರು ಹೇಳಿದಂತೆ ನಾವು ಧರಣಿ ಮಾಡಿದಾಗ ಮತ್ತು ಬೇರೆ ರೀತಿಯಿಂದ ಪ್ರೊಟೆಸ್ಟ್ ಮಾಡಿದಾಗ ನಮಗೆ ಸಾಕಷ್ಟು ಟೀಕೆಗಳು ಬಂದವು, ಅದನ್ನು ಅವಾಯ್ಡ್ ಮಾಡುವುದಕ್ಕೋಸ್ಕರವೇ ನಾವು ಒಂದು ಚೂರೂ ಕೂಡ ಈ ಸದನದ ಸಮಯ ಹಾಳು ಮಾಡಬಾರದು ಎಂದು ಪ್ರಶ್ನೋತ್ತರ ಕಾಲವನ್ನೂ ಕೂಡಿ ನಾವು ಅನೇಕ ಸಾರಿ ಬದಿಗಿಟ್ಟಿದ್ದೇವೆ, ಶೂನ್ಯ ವೇಳೆಯಲ್ಲಿ ನಡೆಸುವ ಚರ್ಚೆಯ ಹಕ್ಕನ್ನೂ ಬಿಟ್ಟು ಕೊಟ್ಟಿದ್ದೇವೆ, ಈ ಡಿಮ್ಯಾಂಡ್ ಮೇಲೆ ಚರ್ಚೆಯಾಗಲೀ ಎಂದು 3-4 ದಿವಸಗಳಿಂದ ನಾವೆಲ್ಲರೂ ಕೂಡ ಸಹಕಾರ ಕೊಟ್ಟುಕೊಂಡು ಬರುತ್ತಿದ್ದೇವೆ. ಇಷ್ಟು ಸಹಕಾರವನ್ನು ನಾವು ಕೊಟ್ಟ ಮೇಲೂ ಕೂಡ, ಇವತ್ತು ನಾವು

ಧರಣಿ ಮಾಡಿ ಸದನದ ಸಮಯ ಹಾಳು ಮಾಡುತ್ತೇವೆ ಎಂದು ಹೊರಗಡೆ ಹೇಳಿಕೊಂಡು ಅಡ್ಡಾಡತಕ್ಕಂಥ ಮಾನ್ಯ ಮುಖ್ಯಮಂತ್ರಿಗಳು, ಕೆಲವು ಮಂತ್ರಿ ಮಂಡಲದ ಸದಸ್ಯರು, ಈಗ ಏನು ಹೇಳುತ್ತಾರೆ? ನಾನು ಕೇಳುತ್ತೇನೆ, ಕೋರಂ ಇಲ್ಲವೆಂದು ಹೇಳಿ ಇವತ್ತು ನಮ್ಮ ಸದನ ಅಡ್ಜ್ಯೂರ್ನ್ ಆಯಿತಲ್ಲಾ, ಇದಕ್ಕೆ ಯಾರು ಹೊಣೆಗಾರರು? ಇದಕ್ಕೆ ಯಾರು ಜವಾಬ್ಧಾರಿ ಹೊತ್ತುಕೊಳ್ಳುತ್ತಾರೆ? ನಾವೇನಾದರೂ ಒಂದು ವೇಳೆ ತಪ್ಪು ಮಾಡಿದರೂ ನಡೆಯುತ್ತದೆ. ಏಕೆಂದರೆ, ಧರಣಿ ಮಾಡತಕ್ಕದ್ದು ಮತ್ತು ವಾಕೌಟ್ ಮಾಡತಕ್ಕದ್ದು ನಮ್ಮ ಹಕ್ಕು ಆಗಿದೆ. ನಿಮ್ಮ ಮನವೊಲಿಸಬೇಕು, ನಿಮಗೆ ಏನಾದರೂ ಸಾಧ್ಯವಾದಷ್ಟು ಮಟ್ಟಿಗೆ ಕನ್‌ವಿನ್ಸ್ ಮಾಡಬೇಕು, ಎನ್ನುವ ದೃಷ್ಟಿಯಿಂದ ನಾವು ಧರಣಿ, ವಾಕೌಟ್ ಮಾಡುತ್ತೇವೆ. ನಿಮಗೆ ಸದನದಲ್ಲಿ ಹಾಜರಿರುವುದಕ್ಕೆ ಏನು ತೊಂದರೆ? ಕನಿಷ್ಟ ಇನ್ನು ಮೇಲಾದರೂ ಈ ಪಾಠವನ್ನು ತಮ್ಮಿಂದ ಕಲಿಯುತ್ತಾರೆ ಎಂದು ನಾನು ನಿರೀಕ್ಷಣೆ ಮಾಡಿ ನನ್ನ ಮಾತನ್ನು ಮುಂದುವರೆಸುತ್ತೇನೆ ಮತ್ತು ಬೇಗನೆ ಮುಗಿಸುತ್ತೇನೆ. ಎಕ್ಸೈಜ್ ಮೇಲೆ ನಾನು ಮಾತನಾಡುವಾಗ ಈ ಸರ್ಕಾರ ಅಬ್ಕಾರಿ ಲಾಬಿಗೆ ಮಣಿದಿದೆ ಎನ್ನತಕ್ಕಂಥ ಮಾತನ್ನು ಸ್ಪಷ್ಟವಾಗಿ ಹೇಳುತ್ತಿದ್ದೆ. ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ಯಾವ ತಿದ್ದುಪಡಿಯನ್ನು ದಿನಾಂಕ 13.9.1989ರಲ್ಲಿ ತಂದು ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್‌ಗೆ ಹೋಲ್‌ಸೇಲ್ ಏಜೆನ್ಸಿಯನ್ನು ಕೊಟ್ಟು, ಪ್ರತಿ ಜಿಲ್ಲೆಗಳಲ್ಲಿ ಅವರದೇ ಆದಂತಹ ಹೋಲ್‌ಸೇಲ್ ಡಿಸ್ಟ್ರಿಬ್ಯೂಟರಿಗಳನ್ನು ಇಟ್ಟುಕೊಂಡು, ಈ ಐ.ಎಂ.ಎಫ್.ಎಲ್. ಅನ್ನು ಅವರ ಮುಖಾಂತರವೇ ವಿತರಣೆ ಮಾಡತಕ್ಕದ್ದು ಏನಿತ್ತು, ಅದನ್ನು ಸಡಿಲಗೊಳಿಸತಕ್ಕಂಥ ಪ್ರಯತ್ನವನ್ನು ಮಾಡಿ, ಬುಡಮೇಲು ಮಾಡತಕ್ಕಂಥ ಪ್ರಯತ್ನವನ್ನು ತಾವು ಮಾಡಿದ್ದೀರಿ. ಸುಪ್ರೀಂ ಕೋರ್ಟಿನಲ್ಲಿ ತಾವು ಏನು ಅಫಿಡೆವಿಟ್ ಕೊಟ್ಟಿದ್ದೀರಿ ಎಂದರೆ ಈ ರೂಲ್‌ನಲ್ಲಿ ಸಬ್ ಕ್ಲಾಸ್ 3 ತಿದ್ದುಪಡಿ ಆಗಿ ಏನು ಹೇಳಿದಿರಿ ಎಂದರೆ - ನಮ್ಮ ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ ಹೆಚ್ಚಿಗೆ ಸೆಕೆಂಡ್ಸ್ ಹೋಗುತ್ತಿದೆ, ಆದ್ದರಿಂದ ಸರ್ಕಾರಕ್ಕೆ ಬರತಕ್ಕಂಥ ಆದಾಯ ಬರುತ್ತಿಲ್ಲ, ನಮ್ಮ ಬೊಕ್ಕಸಕ್ಕೆ ತೊಂದರೆ ಆಗುತ್ತಿದೆ, ಸರ್ಕಾರಕ್ಕೆ ಬರತಕ್ಕಂಥ ಹಣ ಸೋರಿ ಹೋಗುತ್ತಿದೆ, ಅದಕ್ಕಾಗಿ ನಾವು ಒಂದೇ ಏಜೆನ್ಸಿಯನ್ನು ಕ್ರಿಯೇಟ್ ಮಾಡಿ ಎಂ.ಎಸ್.ಐ.ಎಲ್. ಮುಖಾಂತರ ಅಥವಾ ಗೌರ್ನಮೆಂಟ್ ಏಜೆನ್ಸಿ ಮುಖಾಂತರ ಅಥವಾ Government controlled authority ಮುಖಾಂತರ ಕೊಡುತ್ತೇವೆ ಎನ್ನತಕ್ಕಂಥ ಅಫಿಡೆವಿಟ್ಟನ್ನು ಸುಪ್ರೀಂ ಕೋರ್ಟಿಗೆ ಕೊಟ್ಟಿದ್ದೀರಿ. ನೀವು ಸುಪ್ರೀಂ ಕೋರ್ಟಿಗೆ ಅಫಿಡೆವಿಟ್ ಕೊಟ್ಟನಂತರ ಆ ಕೇಸನ್ನು ಸರ್ಕಾರದ ಪರವಾಗಿಯೇ ಎತ್ತಿಹಿಡಿದ ಮೇಲೆ, ಇಲ್ಲಿ ಬಂದು ಪುನಃ ಆ ಒಂದು ಸರ್ಕಾರಿ ಆಜ್ಞೆಯನ್ನು ಅಥವಾ ರೂಲ್ಸನ್ನು ತಿದ್ದುಪಡಿ ಮಾಡತಕ್ಕಂಥ ಪ್ರಮೇಯ ಏನಿತ್ತು? ಇದಕ್ಕೆ ತಿದ್ದುಪಡಿ ಮಾಡುವಂಥ ಪ್ರಮೇಯ ಏನು ಇತ್ತು ಎಂದರೆ - ಬಹುಶಃ ನಿಮಗೆ ಪ್ರೀತಿಪಾತ್ರರಾದಂಥ ಕೆಲವು ಅಬಕಾರಿ ಕಂಟ್ರಾಕ್ಟರುಗಳು ಏನು ಇದ್ದರು, ಅವರಿಗೆ ಹೋಲ್‌ಸೇಲ್ ಏಜೆನ್ಸಿಗಳನ್ನು ಕೊಡಬೇಕು, ಎಂ.ಎಸ್.ಐ.ಎಲ್.ಗೆ ಬಿಸಿನೆಸ್ ತಪ್ಪಿಸಬೇಕು ಎನ್ನತಕ್ಕಂಥ ದೃಷ್ಟಿಯಿಂದ ಕೊಟ್ಟಿದ್ದೀರಿ ಎನ್ನತಕ್ಕಂಥ ನೇರ ಆಪಾದನೆಯನ್ನು ನಾನು ಮಾಡುತ್ತೇನೆ. ಇಲ್ಲದಿದ್ದರೆ ಆ ರೂಲ್‌ನ್ನು ಅಮೆಂಡ್‌ಮೆಂಟ್ ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಆದಾಯ ಹೆಚ್ಚಿಗೆ ಬರುತ್ತದೆಂದು ನೀವು ಒಂದು ಕಡೆ ಹೇಳಿಕೊಂಡು, ಅದು ಸೋರಿಹೋಗತಕ್ಕಂಥ ರೀತಿಯಲ್ಲಿ ಇವತ್ತು ಕಾನೂನಿಗೆ ತಿದ್ದುಪಡಿ ತಂದು ಆ ಕೆಲಸವನ್ನು ಮಾಡುತ್ತಿದ್ದೀರಿ. ಮಾನ್ಯ ಮುಖ್ಯಮಂತ್ರಿಗಳು ಮೊನ್ನೆ ಒಂದು ಸಲ ಭಾಷಣ

ಮಾಡುತ್ತಾ, ಹಿಂದೂ ಪತ್ರಿಕೆಯ ಬಗ್ಗೆ ಮಾತನಾಡುವಾಗ ಇವರು ಬಹಳ ಚೆನ್ನಾಗಿ ಬರೆಯುತ್ತಾರೆ, ಇದರಲ್ಲಿ ಬರತಕ್ಕಂಥ ವರದಿ, ಆರ್ಟಿಕಲ್ ಮೇಲೆ ವಿಶ್ವಾಸವಿಟ್ಟು ಕೆಲಸ ಮಾಡುತ್ತೇವೆಂದು ಹೇಳಿದ್ದಾರೆ. ಇತರೆ ಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸಪ್ರೆಸ್, ಕನ್ನಡ ಪ್ರಭ, ಪ್ರಜಾವಾಣಿ, ಸಂಯುಕ್ತ ಕರ್ನಾಟಕ ಈ ಪತ್ರಿಕೆಗಳಲ್ಲಿ ಕೆಲವರು ರಾಜಕೀಯ ಮಾಡುತ್ತಾರೆ, ಹಿಂದೂ ಪತ್ರಿಕೆಯವರು ಪರವಾಗಿಲ್ಲ ಎಂದು ಹೇಳಿದರು. ನಮ್ಮ ರಾಜ್ಯದಲ್ಲಿ ಇರತಕ್ಕಂಥ ಇಂಡಿಯನ್ ಎಕ್ಸ್‌ಪ್ರೆಸ್, ಸಂಯುಕ್ತ ಕರ್ನಾಟಕ, ಟೈಮ್ಸ್ ಆಫ್ ಇಂಡಿಯಾ, ಪ್ರಜಾವಾಣಿ, ಹಿಂದೂ ಪತ್ರಿಕೆ ಇವರೆಲ್ಲರೂ ಕೂಡ -'ಈ ಸರ್ಕಾರದವರು ಮಾಡತಕ್ಕಂಥದ್ದು ಸರಿಯಲ್ಲ' ಎಂದು ಇದರ ಮೇಲೆ ಆರ್ಟಿಕಲ್ ಬರೆದಿದ್ದಾರೆ. ಹಿಂದೂ ಪತ್ರಿಕೆ ಮೇಲೆ ಮಾನ್ಯ ಮುಖ್ಯಮಂತ್ರಿಗಳಿಗೆ ಬಹಳ ನಂಬಿಕೆ ಇತ್ತು, ಗೌರವ ಇತ್ತು. ಆ ಪತ್ರಿಕೆಯಲ್ಲಿ ಬರುವ ವರದಿಗಳು, ಆರ್ಟಿಕಲ್‌ಗಳ ಮೇಲೆ ವಿಶ್ವಾಸವಿಟ್ಟು ಕೆಲಸ ಮಾಡುತ್ತೇನೆಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್‌ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ಬರೀ ಹಿಂದೂ ಪತ್ರಿಕೆ ಒಂದನ್ನೆ ಹೇಳಿಲ್ಲ. ಹಿಂದೂ ಒಂದು ಬಹಳ ಒಳ್ಳೆಯ ಪತ್ರಿಕೆ. ಬೇರೆ ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್, ಟೈಮ್ಸ್ ಆಫ್ ಇಂಡಿಯಾ ಹೀಗೆ ಎಲ್ಲಾ ಒಳ್ಳೆಯ ಪತ್ರಿಕೆಗಳು ಇವೆ. ಯಾವ ಪತ್ರಿಕೆಯಲ್ಲೂ ಟೀಕೆಟಿಪ್ಪಣಿ ಬಂದರೆ ನಾವು ಅದಕ್ಕೆ ಗೌರವ ಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಎಲ್ಲಾ ಪತ್ರಿಕೆಗಳಲ್ಲಿ ಬರುವಂಥ ಟೀಕೆಟಿಪ್ಪಣೆಗಳಿಗೆ ಗೌರವ ಕೊಡುತ್ತೀರಾ?

ಶ್ರೀ ಎಂ. ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಹೌದು, ನಾವು ಗೌರವ ಕೊಡುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಲವು ಪತ್ರಿಕೆಗೆ ಹೆಚ್ಚಿನ ಗೌರವವನ್ನು ಕೊಡುತ್ತೇವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ.

ಶ್ರೀ ಎಂ. ಪಿ. ಪ್ರಕಾಶ್ : ಗೌರವ ಎಂದು ಹೇಳುವಂಥದ್ದು ಹೆಚ್ಚಿನದು ಕಡಿಮೆಯದು ಎಂದು ಏನೂ ಇಲ್ಲ. ಗೌರವ ಮಾತ್ರ ಒಂದೇ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪರಿಭಾಷೆ ಯಾವುದು ಇದೆ ಅದು ಡೆಫನಿಷನ್ ನನಗೆ ಗೊತ್ತಿಲ್ಲ.

ಶ್ರೀ ಎಂ.ಪಿ. ಪ್ರಕಾಶ್ : ಗೌರವ ಎಂದರೆ ಗೌರವವೇ. ಅದಕ್ಕೆ ಹೆಚ್ಚಿನ ಗೌರವ ಕಡಿಮೆ ಗೌರವ ಎಂದು ಇರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಒಪ್ಪುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್ : ಆದ್ದರಿಂದ, ನಾವು ಎಲ್ಲಾ ಪತ್ರಿಕೆಗಳನ್ನೂ ಗೌರವದಿಂದ ಕಾಣುತ್ತೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅದೇ ವಿ.ವಿ.ಐ.ಪಿ. ವಿ.ಐ.ಪಿ. ಎಂದು ಅದಕ್ಕೆ ಏನು ಮಾಡಿದ್ದಾರೆ, ಹಾಗೇನಾದರೂ ಇದ್ದರೂ ಇರಬಹುದು. ಇನ್ನು "Duty Evasion rampant in Liquor Trade" ಇದು ಎಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಹಿಂದೂ ಪತ್ರಿಕೆ, ಡೆಕ್ಕನ್ ಹೆರಾಲ್ಡ್, ಇಂಡಿಯನ್ ಎಕ್ಸ್‌ಪ್ರೆಸ್ ಟೈಮ್ಸ್ ಆಫ್ ಇಂಡಿಯಾ, ಕನ್ನಡ ಪತ್ರಿಕೆಗಳಲ್ಲಿ ಕೂಡ ಬಂದಿದೆ. ನಾನು ಒಂದೇ ಒಂದು ಹೇಳುತ್ತೇನೆ. ಅದೇನೆಂದರೆ "The multi point tax system followed by the State Government in the Excise Department instead of increasing revenue to the State Exchequer, has inadvertently allowed the traders to indulge in tax evasion and in sale of seconds of Indian made Foreign Liquor. According to one estimate, the loss to the Exchequer from flooding the market with seconds was to the tune of Rs. 1 crore to Rs. 1.5 crore every day. ಇದು ಇರುವುದು ಐ.ಎಂ.ಎಫ್.ಎಲ್‌ನಲ್ಲಿ. ಈಗ ಅರಾಕ್ ಬಗ್ಗೆ ಮಾತನಾಡುವುದಿಲ್ಲ. ಅದಕ್ಕೆ ಅನಂತರ ಬರುತ್ತೇನೆ. ಇಂಡಿಯನ್ ಮೇಡ್ ಫಾರಿನ್ ಲಿಕ್ಕರ್‌ನಲ್ಲಿಯೇ ಯಾವ ರೀತಿಯಾಗಿ ನಡೆದಿದೆ ಎನ್ನತಕ್ಕಂಥದ್ದು, ಪ್ರತಿದಿವಸ ಒಂದರಿಂದ ಒಂದೂವರೆ ಕೋಟಿ ರೂಪಾಯಿವರೆಗೆ ಲೂಕ್ಸಾನು ಆಗುತ್ತಿದೆ ಎನ್ನತಕ್ಕಂಥದ್ದನ್ನು ಇವತ್ತು ನಾನು ತಮ್ಮ ಮುಂದಿಡುತ್ತಿದ್ದೇನೆ. ಕೊನೆಗೆ ಇದು ಎಲ್ಲಿಯವರೆಗೆ ಹೋಗಿದೆ ಎಂದರೆ - "The seconds liquors in Karnataka or in any other city other than Bangalore but the volume of the second sale was only marginal compared to such sale in Bangalore." ಅವರು ಹೇಳತಕ್ಕಂಥ ತಾತ್ಪರ್ಯ ಏನೆಂದರೆ, ಗುಲ್ಬರ್ಗಾ ಆಗಲಿ, ರಾಯಚೂರು ಆಗಲಿ, ಬಿಜಾಪುರ ಆಗಲಿ ಇಂಥ ನಗರಗಳಲ್ಲಿ ಅಥವಾ ಜಿಲ್ಲೆಗಳಲ್ಲಿ ಸೆಕೆಂಡ್ಸ್ ಕಡಿಮೆ. ಬೆಂಗಳೂರಿನಲ್ಲಿ ಸೆಕೆಂಡ್ಸ್ ಜಾಸ್ತಿ ಇದೆ. ಏಕೆಂದರೆ ನಿಮ್ಮ ಕನ್ಸಂಪಷನ್ ಬಗ್ಗೆ ಇವತ್ತು ಅವರು ಲೆಕ್ಕ ಹಾಕಿದ್ದಾರೆ, ಇವತ್ತಿನ ದಿವಸ ತಮಿಳುನಾಡಿನಲ್ಲಿ ಎಷ್ಟು ಕನ್ಸ್‌ಂಪಷನ್ ಆಗುತ್ತದೆ? ಕರ್ನಾಟಕ ರಾಜ್ಯದಲ್ಲಿ ಎಷ್ಟು ಕನ್ಸಂಪ್‌ಷನ್ ಆಗುತ್ತದೆ? ಕೇರಳದಲ್ಲಿ ಎಷ್ಟು ಕನ್ಸಂಪಷನ್‌ಆಗುತ್ತದೆ? ಮತ್ತು ನಮ್ಮ ಕರ್ನಾಟಕದಲ್ಲಿ ಇವತ್ತಿನ ದಿವಸ ಇಷ್ಟು ಕಡಿಮೆ ಕನ್ಸಂನ್ ಏಕೆ ತೋರಿಸಿದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ಇವತ್ತು ಬಯಲಿಗೆ ತಂದಿದ್ದಾರೆ. ಈಗ ಉದಾಹರಣೆಗೆ "The average consumption of IMFL in Andhra Pradesh and Tamil Nadu is in the range of 6.5 lakh to 7 lakh cases per month and in Kerala the consumption is around 1.25 lakh cases every month. Karnataka consumption of IMFL is less than 1 lakh cases a month. "ತಮಿಳುನಾಡಿಲ್ಲಿ, ಆಂಧ್ರಪ್ರದೇಶದಲ್ಲಿ ಪ್ರತಿ ತಿಂಗಳು 7 ಲಕ್ಷ ಕೇಸಸ್ ಆದರೆ ಕರ್ನಾಟಕ ರಾಜ್ಯದಲ್ಲಿ 1 ಲಕ್ಷ ಕೇಸಸ್ ಅಂದರೆ ಎಷ್ಟರಮಟ್ಟಿಗೆ ಕರ್ನಾಟಕದಲ್ಲಿ ಸೆಕೆಂಡ್ಸ್ ಹೋಗುತ್ತಿದೆ ಎನ್ನತಕ್ಕಂಥದ್ದನ್ನು ತಾವೇ ಯೋಚನೆ ಮಾಡಿ.

ಅಧ್ಯಕ್ಷರು : ಇಲ್ಲಿ ಎಲ್ಲಾ ಒಳ್ಳೆಯ ಜನ ಇದ್ದಾರೆ, ಯಾರೂ ಕುಡಿಯುವುದಿಲ್ಲ ಎಂದು ಕೂಡ ಯೋಚನೆ ಮಾಡಬಹುದಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ತಾವು ಹೇಳಿದ ಹಾಗೆ ಯೋಚನೆ ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಜಾಸ್ತಿ ಕ್ವಾಂಟಿಟಿ ಸೆಕೆಂಡ್ಸ್‌ನಲ್ಲಿ ಹೋಗುತ್ತಿದೆ. ಆ ಸೆಕೆಂಡ್ಸ್‌ನಲ್ಲಿ ಹೋಗದಿದ್ದರೆ ಒಳ್ಳೆಯ ಜನ ಕುಡಿಯುವುದು ಬಿಟ್ಟಿದ್ದಾರೆ, ಎಲ್ಲರೂ ಕೂಡ ಒಳ್ಳೆಯ ತತ್ವ ಹೇಳುತ್ತಿದ್ದಾರೆ ಎನ್ನತಕ್ಕಂಥದ್ದನ್ನು ನಾವು ನಂಬಬಹುದು. ಈಗ ಉದಾಹರಣೆಗಾಗಿ ಅರ್ರ್ಯಾಕ್ ಕನ್ಸ್‌ಂಷನ್ ಅಬಕಾರಿ ಇಲಾಖೆಯವರ ಲೆಕ್ಕಾಚಾರದ ಪ್ರಕಾರ ಬೆಂಗಳೂರಿನಲ್ಲಿ ಪ್ರತಿ ತಿಂಗಳು 6 ರಿಂದ 7 ಲಕ್ಷ ಲೀಟರ್ ಖರ್ಚು ಆಗುತ್ತಿದೆ. ಆದರೆ, ನಿಜವಾಗಿ ಇಲ್ಲಿ ಕನ್ಸ್‌ಂಷನ್ ಆಗತಕ್ಕಂಥದ್ದು ಸುಮಾರು 24ಲಕ್ಷ ಮೀಟರ್ ಆಗಿದೆ. 24 ಲಕ್ಷ ಲೀಟರ್ ಅರ್ರ್ಯಾಕ್ ಖರ್ಚು ಆಗುತ್ತದೆಂದು ಅವರು ತೋರಿಸಿದರೆ ಅದಕ್ಕೆ ಟ್ಯಾಕ್ಸ್ ಕೊಡಬೇಕು, ಇವರಿಂದಲೇ ನೇರವಾಗಿ ಅರ್ರ್ಯಾಕ್‌ನ್ನು ಪರ್‌ಚೇಸ್ ಮಾಡಿಕೊಳ್ಳಬೇಕು. ಅದಕ್ಕೋಸ್ಕರ ಅವರು ಅರ್ರ್ಯಾಕ್ ಕನ್ಸ್‌ಂನ್ ಕಡಿಮೆ ತೋರಿಸುತ್ತಾರೆ. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ 1980-81ರಲ್ಲಿ ನಮ್ಮ ರಾಜ್ಯದಲ್ಲಿ ಸುಮಾರು 14 ಲಕ್ಷ ಲೀಟರ್ ಅರ್ರ್ಯಾಕ್ ಕನ್ಸ್‌ಂಷನ್ ಇತ್ತು. ಈಗ ಇದು ಹೇಗೆ 7-8 ಲಕ್ಷ ಲೀಟರ್‌ನಷ್ಟು ಕಡಿಮೆಗೆ ಬರುತ್ತದೆ? ಅದರ ಅರ್ಥ ಏನೆಂದರೆ - ಇವತ್ತಿನ ದಿವಸ ಅರ್ರ್ಯಾಕ್‌ನ್ನು ಕೂಡ ಹೊರಗಡೆಯಿಂದ ಭಾರೀ ಪ್ರಮಾಣದಲ್ಲಿ ತಂದು ಮಾರಾಟ ಮಾಡಿ ಸರ್ಕಾರಕ್ಕೆ ಮೋಸ ಮಾಡತಕ್ಕಂಥ ಕೆಲಸ ನಡೆದಿದೆ. ಇದಕ್ಕೆ ಆದಷ್ಟು ಬಿಗಿ ಮಾಡುವುದನ್ನು ಬಿಟ್ಟು ಆ ಕಾನೂನುಗಳನ್ನು ಸಡಿಲ ಮಾಡತಕ್ಕಂಥದ್ದನ್ನು ಮಾಡಿದರೆ ನಾವು ಇದರ ಬಗ್ಗೆ ಸಂಶಯ ಪಡಬೇಕೋ ಅಥವಾ ಸರ್ಕಾರದವರು ಒಳ್ಳೆಯವರು ಇದ್ದಾರೆಂದು ಸರ್ಟಿಫಿಕೇಟ್ ಕೊಡಬೇಕೋ ಎನ್ನುವುದರ ಬಗ್ಗೆ ಮಾನ್ಯ ಅಧ್ಯಕ್ಷರೆ ತಾವೇ ಹೇಳಬೇಕು. ಆದ್ದರಿಂದ ಇವತ್ತಿನ ದಿವಸ ಇದರಲ್ಲಿ ಏಕೆ ವ್ಯತ್ಯಾಸಗಳು ಆಗಿವೆ? ಎನ್ನತಕ್ಕಂಥದ್ದನ್ನು ಕಂಡುಹಿಡಿದು, "ನೀವು ಇದಕ್ಕೆ ಕಡಿವಾಣ ಹಾಕದೇ ಹೋದರೆ, ಪುನಃ ಇದಕ್ಕೆ ತಿದ್ದುಪಡಿ ತರದೇ ಹೋದರೆ 400 ರಿಂದ 500 ಕೋಟಿ ರೂಪಾಯಿ ಸರ್ಕಾರಕ್ಕೆ ಬರತಕ್ಕಂಥ ಹಣ ಸೋರಿ ಹೋಗುತ್ತದೆ". ಎಂದು ನಾನು ಸರ್ಕಾರಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ. ಒಂದು ಕಡೆ ಬಿಗಿ ಮಾಡಬೇಕು ಎನ್ನತಕ್ಕಂಥ ಪ್ರಯತ್ನ, ಇನ್ನೊಂದು ಕಡೆ ನೀವೇ ಸಡಿಲ ಮಾಡಬೇಕು ಎಂದು ಕಾನೂನನ್ನು ಸಡಿಲ ಮಾಡುತ್ತಿದ್ದೀರಿ. ಅದಕ್ಕೋಸ್ಕರ ಇದನ್ನು ತಿದ್ದುಪಡಿ ಮಾಡಬೇಕು. ಇಲ್ಲದಿದ್ದರೆ ನಾನು ನೇರವಾಗಿ ಸರ್ಕಾರದ ಮೇಲೆ ಆಪಾದನೆ ಮಾಡುವುದೇನೆಂದರೆ - ಇದರಲ್ಲಿ ಸರ್ಕಾರದ ಇನ್‌ವಾಲ್ವ್‌ಮೆಂಟ್ ಇದೆ, ಆ ಎಕ್ಸೈಜ್ ಲಾಬಿಗೆ ನೀವು, ನಿಮ್ಮ ಸರ್ಕಾರ ನೇರವಾಗಿ ಶರಣು ಹೋಗಿದೆ, ಆದ್ದರಿಂದ ಅದಕ್ಕೆ ತಿದ್ದುಪಡಿ ಮಾಡಿ ಪ್ರೈವೇಟ್ ಕಂಟ್ರಾಕ್ಟರ್ಸ್‌ಗೆ ಕೂಡ ಎಂ.ಎಸ್.ಐ.ಎಲ್. ರೀತಿಯಲ್ಲಿಯೇ ನೀವೂ ಕೂಡ ಮಾಡಿಕೊಳ್ಳಿ ಎಂದು ಹೇಳಿದಿರಿ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟಪಡಿಸುತ್ತೇನೆ. ಎರಡನೆಯದಾಗಿ, ಗಮನ ಸೆಳೆಯುವ ಸೂಚನೆಯಲ್ಲಿ ಮಾತನಾಡುವುದಕ್ಕೆ ಮಾನ್ಯ ವೈಜನಾಥ ಪಾಟೀಲರಿಗೆ ಮಾನ್ಯ ಅಧ್ಯಕ್ಷರು ಅವಕಾಶ ಮಾಡಿಕೊಟ್ಟಿದ್ದರು. ಮಾನ್ಯ ವೈಜನಾಥ ಪಾಟೀಲರು ಆ ಪ್ರಶ್ನೆಯನ್ನು ಇಲ್ಲಿ ಪ್ರಸ್ತಾಪ ಮಾಡಿದಾಗ ಅದಕ್ಕೆ ಉತ್ತರವನ್ನು ಮಾನ್ಯ ಮುಖ್ಯಮಂತ್ರಿಗಳೇ ಕೊಟ್ಟಿದ್ದಾರೆ. ಸರ್ಕಾರ ಎಲ್ಲಿ ಎಡವಿದೆ ಇತ್ಯಾದಿಯನ್ನು ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದಾರೆ. ಇದರಲ್ಲಿ ಹೇಳಿರತಕ್ಕಂಥದ್ದು ಹೆಚ್ಚುಕಡಿಮೆ ಮಾನ್ಯ ಎಂ.ಪಿ. ಪ್ರಕಾಶ್‌ರವರ ಕೊಟೇಷನ್ ಇದ್ದ ಹಾಗೆಯೇ ಇದೆ. ಆ ಕೊಟೇಷನ್‌ನಲ್ಲಿ ಕೋಟ್ ಮಾಡಿ ಹೇಳಿದ್ದಾರೆ.

4.30 ಪಿ.ಎಂ.

ಬಹುಶಃ ಪ್ರಕಾಶ್‌ರವರದೇ ಇರಬೇಕು ನ್ಯಾಚುರಲಿ ಮಾನ್ಯ ಮುಖ್ಯಮಂತ್ರಿಗಳ ಬಾಯಿಯಿಂದ ಎಲ್ಲ ಬಂದು ಬಿಟ್ಟಿದೆ. "Which would convert the State ಸ್ವಾಭಿಮಾನಿ, ಸಮೃದ್ಧ, ಸ್ವಾವಲಂಭಿ, ಕರ್ನಾಟಕTaking such progressive measures including the legislation of prohibition in the State. ಎಂದು ಹೇಳಿ ರಾಜ್ಯಪಾಲರ ಭಾಷಣದಲ್ಲಿ ಬಂದಿದೆ. ಸ್ವಾಭಿಮಾನಿ, ಸಮೃದ್ಧ, ಸ್ವಾವಲಂಭಿ ಎಲ್ಲವನ್ನು ತಾವು ಮಾಡಿ. ಸ್ವಾಮಿ ಇಲ್ಲಿ ಯಾವುದು ಸ್ವಾಭಿಮಾನ? ಒಂದು ಕಡೆ ತಡೆ ಹಿಡಿಯಬೇಕೆಂದು ಮಾಡುತ್ತೀರಿ, ಇನ್ನೊಂದು ಕಡೆ ಕಾನೂನು ತಿದ್ದುಪಡಿಯನ್ನು ಮಾಡುತ್ತೀರಿ. ಆಮೇಲೆ ಅಬಕಾರಿ ಪಾಲಿಸಿಯನ್ನು ಚೇಂಜ್ ಮಾಡಿ ಏನು ಮಾಡಿದ್ದೀರಾ ಎಂದರೆ ಅಕ್ಟೋಬರ್‌ವರೆಗೆ 8 ಪರ್ಸೆಂಟ್ ಜಾಸ್ತಿ ಮಾಡಿ ಅರ್‍ರ್ಯಾಕ್ ಕಂಟ್ರಾಕ್ಟ್‌ನ್ನು ಹಳೆಯ ಕಾಂಟ್ರ್ಯಾಕ್ಟರ್‌ಗೆ ಕೊಡುವಂಥದ್ದು ಒಂದು ರೀತಿಯಲ್ಲಿ ಮಾಡಿದ್ದೀರಿ. ಅನೇಕ ಕಡೆ 8 ಪರ್ಸೆಂಟ್ ಹೆಚ್ಚಿಗೆ ಕೊಡುವುದಕ್ಕೆ ಬರಲಿಲ್ಲ. ಅದರಿಂದ ನಿಮಗೆ ಆದಂತಹ ನಷ್ಟ, ತದನಂತರ ಅದೇ ಪಾಲಿಸಿಯನ್ನು ಮುಂದಿನ ವರ್ಷವು ಸಹ ಕಂಟಿನ್ಯೂ ಮಾಡಿದ್ದೀರಿ. ಆದುದರಿಂದ, ತಮ್ಮ ಗಮನಕ್ಕೆ ತರುವುದೇನೆಂದರೆ, ರಾಜ್ಯದಲ್ಲಿ ಪಾನ ನಿಷೇಧ ಪುನಃ ಜಾರಿಗೆ ತರುವುದನ್ನು ಕುರಿತು ಸರ್ಕಾರ ಪರಿಶೀಲಿಸಲು ಸರ್ಕಾರ ಉಪ ಸಮಿತಿಯನ್ನು ರಚಿಸಿದೆ. ಉಪ ಸಮಿತಿಯ ಶಿಫಾರಸ್ಸುಗಳನ್ನು ಕಾಯ್ದಿರಿಸಿ 1996-97ರ ಅಬಕಾರಿ ವರ್ಷದಲ್ಲಿ ಜುಲೈನಿಂದ ಅಕ್ಟೋಬರ್ ವರೆಗೆ ಹಿಂದಿನ ವರ್ಷದ ಗುತ್ತಿಗೆದಾರರಿಗೆ ಆ ವರ್ಷದ ಬಾಡಿಗೆಗಿಂತ ಶೇಕಡ 8ರಷ್ಟು ಹೆಚ್ಚಿಗೆ ಬಾಡಿಗೆ ಮೊತ್ತದ ಮೇಲೆ ಗುತ್ತಿಗೆ ಆಧಾರದ ಮೇಲೆ ನಡೆಸಲು ಸರ್ಕಾರ ಅನುಮತಿಯನ್ನು ನೀಡಿತ್ತು. ತದನಂತರ ಸದರಿ ವ್ಯವಸ್ಥೆಯನ್ನು ದಿನಾಂಕ 30.11.1996ರ ವರೆಗೆ ಸರ್ಕಾರ ವಿಸ್ತರಿಸಿತು. ಆದರೆ ಈ ತಾತ್ಕಾಲಿಕ ವ್ಯವಸ್ಥೆಯಲ್ಲಿ ಕೇವಲ 68 ತಾಲ್ಲೂಕಿನ ಗುತ್ತಿಗೆದಾರರು ಶೇಕಡ 8ರಷ್ಟು ಹೆಚ್ಚಿಗೆ ನೀಡಿ, ಸಾರಾಯಿ ವ್ಯಾಪಾರವನ್ನು ಮುಂದುವರೆಸುತ್ತಾರೆ. 67 ತಾಲ್ಲೂಕುಗಳಲ್ಲಿ 1995-96ರ ಗುತ್ತಿಗೆ ಹಣದಲ್ಲಿ ಸಾರಾಯಿ ವ್ಯಾಪಾರವನ್ನು ಮುಂದುವರೆಸುತ್ತಾರೆ. ಮತ್ತು 38 ತಾಲ್ಲೂಕುಗಳ ಬಗ್ಗೆ ಯಾವ ಗುತ್ತಿಗೆದಾರರು ಮುಂದೆಬಾರದ ಪ್ರಯುಕ್ತ ಇಲಾಖೆಯ ಮುಖಾಂತರ ಸಾರಾಯಿ ವ್ಯವಹಾರವನ್ನು ಮುಂದುವರೆಸಲಾಗುವುದು. ತಾವು 38 ತಾಲ್ಲೂಕುಗಳಲ್ಲಿ ಕೈ ಹಾಕುವುದಕ್ಕೆ ಆಗಲಿಲ್ಲ, ಅಲ್ಲಿ ಯಾರು ಸಹ ಇದರ ಬಗ್ಗೆ ಮುಂದೆ ಬರಲಿಲ್ಲ. ಏಕೆಂದರೆ ಅಲ್ಲಿರತಕ್ಕಂತಹ ಕಂಟ್ರಾಕ್ಟರ್ಸ್ ಭಾರಿ ಬಿಗು ನಾನು ಆ ಮಾತನ್ನು ಹೇಳಿದಾಗ ಅಧ್ಯಕ್ಷರು ಹೇಳಿದರು ಅವನೇನು ಇವತ್ತೇನು ಇರಲಿಲ್ಲ. ಹಿಂದೆಯು ಇದ್ದರು ಎಂದು. ಯಾರು ಎಂದರೆ, ದಾಸಪ್ಪ ಅಂಡ್ ಕಂಪನಿಯವರು 38 ತಾಲ್ಲೂಕಿನಲ್ಲಿ ಕೈ ಹಾಕಿದರು. ಆದರೆ, ಯಾರಾದರೂ ಆದಾಯ ಹೆಚ್ಚಿಗೆ ಆಗಬೇಕೆಂದು ಹೇಳಿ ನೀವು ಬೇಕಾದರೆ, ಕೆಲವು ಜನರಿಗೆ 8 ಪರ್ಸೆಂಟ್ ಜಾಸ್ತಿ ಮಾಡಿ 68 ತಾಲ್ಲೂಕುಗಳಲ್ಲಿ ಕೊಟ್ಟಿದ್ದರೆ ಅದನ್ನು ಒಪ್ಪಬಹುದಾಗಿತ್ತು. 67ಕ್ಕೆ ಅದೇ ರೇಟ್‌ನಲ್ಲಿ ಕೊಡತಕ್ಕಂತಹ ಅವಶ್ಯಕತೆ ಏನಾಗಿತ್ತು? ಆಕ್ಷನ್ ಮಾಡಬೇಕಾಗಿತ್ತು. ತಿರುಗಿ 38ರಲ್ಲಿ ನಿಮ್ಮ ಪರವಾಗಿ ಅವರಿಗೆ ಮುಂದುವರೆಸುವುದಕ್ಕೆ ಏನು ಅನುಮತಿಯನ್ನು ಕೊಟ್ಟಿರುತ್ತೀರಲ್ಲಾ ಅದು ಓಲ್ಡ್ ವೈನ್ ಇನ್ ಎ ನ್ಯೂ ಬಾಟಲ್ ಎಂದು ಹೇಳುತ್ತಾರಲ್ಲಾ ಆ ರೀತಿಯಾಗಿ ಬರೀ ಲೇಬಲ್ ಚೇಂಜ್ ಮಾಡಿ, ಒಳಗಡೆ ಇರತಕ್ಕಂಥದ್ದು ಅದೇ

ಎಂದು ಹೇಳಿ ಇವತ್ತು ಹೆಸರಿಗೆ ಸರ್ಕಾರ ಮಾಡಿದ್ದು 38 ತಾಲ್ಲೂಕುಗಳಲ್ಲಿ ಎಲ್ಲಾ ಗುತ್ತಿಗೆದಾರರ ಕೆಲಸವನ್ನು ಅವರೇ ಮಾಡಿರುವುದು. ನೀವು ಇವತ್ತಿನ ದಿವಸ ಹಣ ಹೆಚ್ಚಿಗೆ ಬೇಕೆಂದರೆ ನೇರವಾಗಿ ಆ್ಯಕ್ಷನ್ ಮಾಡಿ ತಾಲ್ಲೂಕು ಮಟ್ಟದಲ್ಲಿ ಮಾಡಿ ಯಾರು ಬರಲಿಲ್ಲ ಎಂದರೆ ಶಾಪ್ ವೈಸ್, ಆ್ಯಕ್ಷನ್ ಮಾಡಿ, ಅಥವಾ ಗ್ರೂಪ್ ವೈಸ್ ಆ್ಯಕ್ಷನ್ ಮಾಡಿ, ಹೋಬಳಿ ಮಟ್ಟದಲ್ಲಿ ಆ್ಯಕ್ಷನ್ ಮಾಡಿ, ಯಾವ ರೀತಿಯಾಗಿ ಹಣ ಹೆಚ್ಚಿಗೆ ಬರುತ್ತದೆಯೋ ಆ ರೀತಿಯಲ್ಲಿ ಮಾಡಿ. ಅದನ್ನು ಬಿಟ್ಟು ಕೆಲವು ಜನರಿಗೆ ಸಹಾಯ ಮಾಡಬೇಕೆಂದು ಆ ಗುತ್ತಿಗೆಯನ್ನು ಮುಂದುವರೆಸುವಂತೆ ಮಾಡಿದ್ದೀರಿ ಅದಕ್ಕೆ ನಾನು ಏನು ಹೇಳಬೇಕಾಗುತ್ತದೆಂದರೆ ತಮ್ಮ ಅಬಕಾರಿ ಪಾಲಿಸಿ ಸರಿಯಾಗಿ ಇಲ್ಲದ್ದೇ ಇರುವ ಕಾರಣ ಸರ್ಕಾರದ ಬೊಕ್ಕಸಕ್ಕೆ ಸುಮಾರು 400-500 ಕೋಟಿ ರೂಪಾಯಿಗಳು ಲುಕ್ಸಾನು ಆಗಿದೆ. ಅದಕ್ಕೆ ಕಾರಣಕರ್ತರು ಯಾರು ? ನೀವು ಮಾರ್ಜಿನಲ್‌ನಲ್ಲಿ 26 ಕೋಟಿ ರೂಪಾಯಿಗಳನ್ನು ಲುಕ್ಸಾನು ತೋರಿಸುತ್ತೀರಿ. 826 ಕೋಟಿ ರೂಪಾಯಿಗಳನ್ನು ತೋರಿಸಿರುತ್ತೀರಿ, ಹಿಂದಕ್ಕೆ ಇನ್ನು 800 ಕೋಟಿ ರೂಪಾಯಿಗಳು ಈಗ 900 ಕೋಟಿ ರೂಪಾಯಿಗಳನ್ನು ಮಾಡುತ್ತೇವೆಂದು ಹೇಳಿರುತ್ತೀರಿ. ಅದನ್ನು ಮುಟ್ಟುವುದಕ್ಕೆ ಆಗುವುದೇ ಇಲ್ಲ. ಏಕೆಂದರೆ ಕೆಲವು ತಾಲ್ಲೂಕುಗಳಲ್ಲಿ ಇದನ್ನು ನಿಲ್ಲಿಸಬೇಕೆಂದು ಮಾಡಿದ್ದೇವೆಂದು ಸಹ ಹೇಳಿರುತ್ತೀರಿ, ಬಾಟಲಿಂಗ್ ಸಿಸ್ಟಂನ್ನು ತರಬೇಕೆಂದು ಮಾಡಿದ್ದೇವೆಂದು ಹೇಳಿದ್ದೀರಿ, ಅದಕ್ಕಾಗಿ ಸ್ವಲ್ಪ ಖೋತ ಬರಬಹುದೆಂದು ಹೇಳಿದ್ದೀರಿ. ಆದರೆ ಖೋತ ನಿಜವಾಗಿಯೂ ಏಕೆ ಬರುತ್ತಿದೆ ಎಂದರೆ ನಿಮ್ಮ ಅಬಕಾರಿ ಪಾಲಿಸಿಯಿಂದ ನಿಮ್ಮ ಈ ಒಂದು ಅಬಕಾರಿ ರೂಲ್ಸ್‌ನಲ್ಲಿ ತಿದ್ದುಪಡಿಯನ್ನು ತಂದಿದ್ದಕ್ಕಾಗಿ ಮತ್ತು ಅದೇ ರೀತಿಯಾಗಿ ಏನು ಹಿಂದಿನ ಕಂಟ್ರ್ಯಾಕ್ಟರ್‌ಗಳಿಗೆ ಮುಂದುವರೆಸಿಕೊಂಡು ಬಂದರಲ್ಲಾ ಅದರಿಂದಾಗಿ. ಈಗ ಆ್ಯಕ್ಷನ್ ಮಾಡಿ, ಕೊನೆಯದಾಗಿ ಈಗ ಏನು ಹೇಳಿರುತ್ತೀರಿ ಬಾಟಲಿಂಗ್ ತರುವಂತಹ ಇನ್ನೊಂದು ಪ್ರಯತ್ನ ಆಮೇಲೆ ಮೊನ್ನೆಯ ದಿವಸ ಡೆಪ್ಯೂಟಿ ಚೀಫ್ ಮಿನಿಸ್ಟರ್ ಏನು ಘೋಷಣೆಯನ್ನು ಮಾಡಿದ್ದಾರೆಂದರೆ, ನಾನು 1ನೇ ನವೆಂಬರ್‌ನಿಂದ ಹೊಸ ಅಬಕಾರಿ ನೀತಿಯನ್ನು ಜಾರಿಗೆ ತರುತ್ತೇವೆಂದು ಗುಲ್ಬರ್ಗದಲ್ಲಿ ಹೇಳಿದ್ದಾರೆ. ಅದೆಲ್ಲಾ ಪತ್ರಿಕೆಗಳಲ್ಲಿ ಬಂದಿದೆ. ಅಂದರೆ ಇವರದು ಅಬಕಾರಿಯಲ್ಲಿ ಮೂರು ತಿಂಗಳಿಗೆ ಒಂದು ನೀತಿ. ಹೊಸ ನೀತಿಗಳನ್ನು ಜಾರಿಗೆ ತರುವುದರಿಂದ ಯಾವ ಅಧಿಕಾರಿಗಳಿಗೆ ಹಿಡಿತ ಇಲ್ಲ. ಏನು ಮಾಡಬೇಕು, ಯಾವ ನೀತಿಯ ಮೇಲೆ ಹೋಗಬೇಕು, ಇವರೇನಾದರೂ ಅವರಿಗೆ ಬಿಗಿಯನ್ನು ಮಾಡಿದರೆ ಅವನಿಗೆ ಇವರು ಇನ್ನು ಮೂರು ತಿಂಗಳು ಎಕ್ಸ್‌ಟೆಂಡ್ ಮಾಡುತ್ತಾರೆ. ಅನೇಕ ಕಡೆ ಅವರು ಸುಮ್ಮನೆ ಇದ್ದರೆ ರೆಕವರಿ ಬರಲಿಲ್ಲ, ಅಥವಾ ಸೆಕೆಂಡ್ಸ್ ಹೆಚ್ಚಿಗೆ ನಡೆದಿದೆ ಎಂದು ಸಹ ಒಂದು ಕಡೆಯಲ್ಲಿ ಹೇಳುತ್ತೀರಿ. ಅದಕ್ಕೆ ಈ ಸರ್ಕಾರ ಹೆಚ್ಚಿನ ಪ್ರೋತ್ಸಾಹ ಥರ್ಡ್ಸ್ ಏನು ಬರುತ್ತಿದೆ. ಬೋಗಸ್ ಮಾಡತಕ್ಕಂಥವರು ತಮ್ಮದೇ ಆದಂತಹ ಒಂದು ಐಎಂಎಫ್‌ಎಲ್ ರೀತಿ ತಯಾರು ಮಾಡಿ ಅದಕ್ಕೆ ತಮ್ಮದೇ ಫಾಲ್ಸ್ ಲೇಬಲನ್ನು ಹಚ್ಚಿ ಇವತ್ತಿನ ದಿವಸ ಏನು ಕೊಡುತ್ತಿದ್ದಾರೆ ಅದಕ್ಕೆ ನಿಮ್ಮಿಂದ ಕಡಿವಾಣವನ್ನು ಹಾಕುವುದಕ್ಕೆ ಸಾಧ್ಯವಿಲ್ಲ. ಅದನ್ನು ಮಾಡಬೇಕು ಎಂದರೆ ಸ್ಪೆಷಲ್ ಡ್ರೈವ್ ಮಾಡಬೇಕು, ಸ್ಪೆಷಲ್ ಸ್ಕ್ವಾಡ್‌ಗಳನ್ನು ಇಡಬೇಕು, ಇದು ಕೇವಲ ಅಬಕಾರಿ ಇಲಾಖೆಯವರಿಗೆ ವಹಿಸಿದರೆ ಮಾತ್ರ ಸಾಧ್ಯವಾಗುವುದಿಲ್ಲ. ಆದುದರಿಂದ, ಈ ಕೆಲಸವನ್ನು ಪೋಲೀಸ್ ಇಲಾಖೆಯವರಿಗೂ ಸಹ ವಹಿಸಬೇಕು. ಒಂದು ಸಾರಿ ಈ ತರಹ ಆಗತಕ್ಕಂತಹ ಕೆಟ್ಟದ್ದನ್ನು

ನಿಲ್ಲಿಸಬೇಕು? ಮತ್ತೆ ಇಂತಹ ಸೆಕೆಂಡ್ಸ್, ಫರ್ಸ್ಟ್ಸ್ ಏನು ಮಾರಾಟ ಮಾಡುತ್ತಿದ್ದಾರೆ ಅವರ ಹತ್ತಿರ ಹಣ ಹೆಚ್ಚಿಗೆ ಆಗಿ ಅವರು ಕೂಡ ಬೊಂಬಾಯಿಯಲ್ಲಿರತಕ್ಕಂತಹ ಅಂಡರ್‌ಗ್ರೌಂಡ್ ವರ್ಲ್ಡ್‌ನಲ್ಲಿ ಕೆಲಸ ಮಾಡತಕ್ಕಂತಹ ದಾವೂದ್ ಇಬ್ರಾಹಿಂ ಜನ ಇದ್ದಾರೆ, ಆ ರೀತಿಯಲ್ಲಿ ಕೆಲಸವನ್ನೇ ಇಲ್ಲಿ ಮಾಡುತ್ತಿದ್ದಾರೆ. ಏಕೆಂದರೆ ಇನ್‌ಕಮ್ ಟ್ಯಾಕ್ಸ್ ಇಲ್ಲ, ಸೇಲ್ಸ್ ಟ್ಯಾಕ್ಸ್ ಇಲ್ಲ. ಇಚ್ಚೆ ಬಂದಂತೆ ಮಾರುವುದು, ದುಡ್ಡನ್ನು ಗಳಿಸುವುದು. ಯಾವುದರ ಬಗ್ಗೆಯೂ ಅವರಿಗೆ ಚಿಂತೆ ಇಲ್ಲ. ಅವರು ಪ್ರತಿಯೊಂದು ಕಡೆಯೂ ಬೆಳೆಯುತ್ತಿದ್ದಾರೆ ಅದಕ್ಕೆ ಕಡಿವಾಣವನ್ನು ಹಾಕತಕ್ಕಂಥದ್ದಕ್ಕೆ ಏನು ಮಾಡಿದ್ದೀರಿ? ಎಷ್ಟು ಕೇಸ್‌ಗಳನ್ನು ತಾವು ಹಿಡಿದಿರುತ್ತೀರಿ? ಒಂದು ಲಕ್ಷ ಕೇಸ್‌ಗಳನ್ನು ಪ್ರತಿ ತಿಂಗಳು ಕಾನೂನು ಪ್ರಕಾರವಾಗಿ ಮಾರಿಕೊಳ್ಳುವುದು. ಸುಮಾರು 10-12 ಲಕ್ಷ ಕೇಸ್‌ಗಳನ್ನು ಬ್ಲಾಕ್‌ನಲ್ಲಿ ಕಳುಹಿಸತಕ್ಕಂಥದ್ದು ಎಂದರೆ ನೀವು ಕಂಪೇರ್ ಮಾಡಿಕೊಳ್ಳಿ, ಇವತ್ತು 1000 ಕೋಟಿ ರೂಪಾಯಿಗಳು ಲಾಸ್ ಎಂದು ಹೇಳುತ್ತೇವೆ, 500 ಕೋಟಿ ರೂಪಾಯಿಗಳು ಇಲ್ಲ ಎಂದರೆ 200 ಕೋಟಿ ರೂಪಾಯಿಗಳು ಇಟ್ಟುಕೊಳ್ಳಿ ಏಕೆಂದರೆ, ನಿಮ್ಮ ಲೆಕ್ಕವನ್ನೇ ಹಾಕಿಕೊಳ್ಳಿ ಎಷ್ಟು ಕೇಸ್‌ಗಳನ್ನು ಎಂ.ಎಸ್.ಐ.ಎಲ್. ಥ್ರೋ ಮಾಡುತ್ತೀರಿ? ಅದರಿಂದ ಎಷ್ಟು ಆದಾಯ ನಿಮಗೆ ಬರುತ್ತದೆ? ಅವರಿಗೆ ಆದಾಯ ಎಷ್ಟು? ಅದರ ಪ್ರಪೋರ್ಷನೇಟ್ಲಿ ಕನ್ಸಮ್ಷನ್ ಥ್ರೂ ಔಟ್ ದಿ ಸ್ಟೇಟ್‌ದ್ದು ಲೆಕ್ಕವನ್ನು ನೀವು ಹಾಕಿ. ಮತ್ತೆ ಪಕ್ಕದ ರಾಜ್ಯದಲ್ಲಿ ಒಂದೊಂದು ರಾಜ್ಯದಲ್ಲಿ 6 ಲಕ್ಷ 7 ಲಕ್ಷ ಕೇಸ್‌ಗಳನ್ನು ಅವರು ಪ್ರತಿ ತಿಂಗಳು ಕನ್ಸ್ಯೂಮ್ ಮಾಡುವಾಗ ನಮ್ಮಲ್ಲಿ ನಮ್ಮ ಜನಸಂಖ್ಯೆಯ ಪ್ರಕಾರ ಅವರಲ್ಲಿ ಪ್ರತಿ ತಿಂಗಳು 7 ಲಕ್ಷ ಕೇಸ್‌ಗಳಿದ್ದರೆ ನಮ್ಮಲ್ಲಿ 5 ಲಕ್ಷ ಕೇಸ್‌ಗಳಾದರೂ ಇರಬೇಕಲ್ಲಾ. ಇದನ್ನು ನಾವು ಪ್ರಾಕ್ಟಿಕಲ್ ಆಗಿ ಆದರೂ ನೋಡಿಕೊಳ್ಳೋಣ. ಸುಮ್ಮನೆ ಟೀಕೆ ಮಾಡಬೇಕು ಎನ್ನುವ ದೃಷ್ಟಿಯಿಂದ ನಾನು ಹೇಳುತ್ತಿಲ್ಲ. ಇವತ್ತು ಪಕ್ಕದ ರಾಜ್ಯದಲ್ಲಿ 7 ಲಕ್ಷ ಕೇಸ್‌ಗಳು ಪ್ರತಿ ತಿಂಗಳು ಕನ್ಸಮ್ಷನ್ ಆದರೆ ನಮ್ಮಲ್ಲಿ ಒಂದರಿಂದ ಒಂದೂವರೆ ಲಕ್ಷ ಕನ್ಸಂಷನ್ ಎಂದು ತೋರಿಸಿದರೆ ಇದು ಯಾವುದು ನ್ಯಾಯ ಇದೆ. ಇಲ್ಲ ಎಂದರೆ ಸೆಕೆಂಡ್ಸ್ ಜಾಸ್ತಿಯಾಗಿರಬೇಕು. ಇಲ್ಲ ಎಂದರೆ ನಮ್ಮ ಇಲಾಖೆಯವರು ಇವತ್ತಿನ ದಿವಸ ಸುಮ್ಮನೆ ಕಣ್ಣು ಮುಚ್ಚಿಕೊಂಡು ನೀವು ಏನು ಬೇಕಾದರೂ ಮಾಡಿ ಎಂದು ಪರ್ಮಿಷನ್ ಕೊಟ್ಟಿರಬೇಕು. ಇದಕ್ಕೆ ಬಿಗಿ ಇಲ್ಲ ಎಂದರೆ ನಾವು ಯಾರಿಗೆ ತೋರಿಸಿಕೊಡಬೇಕೆಂದರೆ ಮುಖ್ಯಮಂತ್ರಿಯವರಿಗೆ ತೋರಿಸಿಕೊಡಬೇಕು. ಮುಖ್ಯ ಮಂತ್ರಿಗಳು ಈ ಇಲಾಖೆಯ ಜವಾಬ್ದಾರಿಯನ್ನು ತೆಗೆದುಕೊಂಡ ಮೇಲೆ I hold the Chief Minister entirely responsible for this leakage. ಅದಕ್ಕೆ ಯಾವ circumstances ನಲ್ಲಿ ನೀವು ಈ ಕಾನೂನನ್ನು ಸಡಿಲಗೊಳಿಸಿದ್ದೀರಿ? ಇದಕ್ಕೆ ಒಂದು ಎನ್‌ಕ್ವೈರಿಯನ್ನು ಮಾಡಿಸಿ. under whose influence? ಅವರು ಏನು ಹೇಳುವುದು ಎಂದರೆ ನಾನು ಅಬಕಾರಿ ಲಾಬಿಯನ್ನು ಮಾಡುವುದಿಲ್ಲ, ಗ್ರಾನೈಟ್ ಲಾಬಿಗೆ ಮಾಡುವುದಿಲ್ಲ. ಮಣಿದೇ ಕಾನೂನನ್ನು ಸಡಿಲಗೊಳಿಸುತ್ತೀರಾ? ನಿಮಗೆ ಏನು ಒತ್ತಡ ಇತ್ತು. ಇದಕ್ಕೆ ಹೆಚ್ಚಿನ ಬೆಳಕನ್ನು ಈಗಾಗಲೇ ಚೆಲ್ಲಿದ್ದೇನೆ. ದಯವಿಟ್ಟು ತಾವು ಗಮನ ಹರಿಸಬೇಕೆಂದು ಹೇಳಿ ಅದೇ ರೀತಿಯಲ್ಲಿ ಅರ್‍ಯಾಕ್ ಬಗ್ಗೆಯೂ ಕೂಡ ನಾನು ಈಗಾಗಲೇ ಹೇಳಿದ್ದೇನೆ. ಬೆಂಗಳೂರು ಸಿಟಿ alone used to consume 14-15 lakhs litres per month ಇತ್ತು ಆದರೆ ಇವತ್ತಿನ ದಿವಸ 7-8 ಲಕ್ಷ ಪ್ರತಿ ತಿಂಗಳು ಹೋಗುತ್ತಿದೆ ಎಂದು ಬಂದಿದೆ. ಅದರಿಂದ, ನಮ್ಮ ರಾಜ್ಯದ ಬೊಕ್ಕಸಕ್ಕೆ ದೊಡ್ಡ ಹೊಡೆತಾ ಬೀಳುತ್ತಿದೆ. ಇಲ್ಲಿ ಜನಸಂಖ್ಯೆಯ ಪ್ರಕಾರ ಆ್ಯವರೇಜ್

40-45ಲಕ್ಷ ಜನಸಂಖ್ಯೆಯನ್ನು ಆಧಾರವಾಗಿ ಇಟ್ಟುಕೊಂಡರು ಕೂಡ ಕುಡಿಯತಕ್ಕಂತಹ ಜನರು ನಿಮ್ಮಲ್ಲಿಯೇ ಕೊಟ್ಟಂತಹ ಅಂಕಿ ಅಂಶಗಳ ಪ್ರಕಾರ ಅಂದರೆ ಜನರ ಸಂಖ್ಯೆಯ ಪ್ರಕಾರವಾಗಿ ಅಲ್ಲ. ಒಂದು ಆ್ಯವರೇಜ್ ಪ್ರಕಾರವಾಗಿ ಹಿಂದನದು ಅವರೇಜ್ ಪ್ರಕಾರವಾಗಿ ಸುಮಾರು 20 ಲಕ್ಷ ಲೀಟರ್ ಕನ್ಸಮ್‌ಷನ್ ಆಗುತ್ತದೆ. ಅಂದರೆ ಎಷ್ಟೊಂದು ಹಣ ಸೋರಿಹೋಗುತ್ತಿದೆ. 20 ಲಕ್ಷ ಎಲ್ಲಿ? 7 ಲಕ್ಷ ಎಲ್ಲಿ? ಸುಮಾರು 13 ಲಕ್ಷ ಲೀಟರ್ ವ್ಯತ್ಯಾಸ. ಆ ಕೇಸ್ ಬೇರೆ, ಕೇಸ್ ಐ.ಎಂ.ಎಫ್.ಎಲ್.ನಲ್ಲಿ. ಇದರಲ್ಲಿ ಅರ್‍ಯಾಕ್ಸ್‌ನಲ್ಲಿ ಬರೀ ಲೀಟರ್ಸ್. ಇಷ್ಟೊಂದು ವ್ಯತ್ಯಾಸ ಇವತ್ತು ತಮ್ಮಲ್ಲಿ ಆಗುತ್ತಾ ಇದೆ. ಇವಕ್ಕೆ ಸಂಪೂರ್ಣವಾದಂಥ ಜವಾಬ್ದಾರಿಯನ್ನು ತಾವು ಹೊತ್ತುಕೊಳ್ಳಬೇಕಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಕನಿಷ್ಠಪಕ್ಷ ಸುಧಾರಣೆ ಮಾಡತಕ್ಕದ್ದು ಇವರು ಮಾಡುತ್ತಾರೆ. ಮತ್ತು ಈ ತಿದ್ದುಪಡಿಗೆ ಇವತ್ತಿನದಿವಸ ಯಾರು ಕಾರಣಕರ್ತರಿದ್ದಾರೆ ಅದರ ಬಗ್ಗೆ ಒಂದು ಎನ್‌ಕ್ವೈರಿ ಮಾಡಬೇಕು ಯಾವ ಕಾರಣಕ್ಕಾಗಿ ಮಾಡಿದ್ದಾರೆ ಎಂದು. ಲಿಬರಲೈಸೇಷನ್ ಒಪ್ಪಿಕೊಳ್ಳೋಲ್ಲ. ಇದೇನೂ ದೊಡ್ಡ ಇಂಡಸ್ಟ್ರಿಯಲ್ಲ. ಇದು ಕೇವಲ ನೇರವಾಗಿ ಪ್ರತಿ ವರ್ಷ ಆ್ಯಕ್ಷನ್ ಮಾಡಿ ಅರ್‍ಯಾಕನ್ನು ಕನ್‌ಸಂಷನ್ ಮಾಡತಕ್ಕದ್ದು. ಇದಕ್ಕೆ ಯಾರೂ ಕೂಡ ಹೊಸ ಇಂಡಸ್ಟ್ರೀ ತಂದುಹಾಕಿ ಅವರೇನೂ ಮಾಡುವಂಥದ್ದಲ್ಲ. ಇಲ್ಲಿಂದಲೇ ಹೊರಗಡೆ ಹೋಗುತ್ತದೆ. ಒಳಗಡೆ ತಂದು ಅಟ್ರಾಕ್ಟ್ ಮಾಡತಕ್ಕದ್ದು ಇಲ್ಲ. ಅಥವಾ ಬೇರೆ ಯಾವರೀತಿಯಿಂದಲೂ ಇಲ್ಲ. ನಮ್ಮಲ್ಲಿ ಸುಮಾರು 17-20 ಡಿಸ್ಟಿಲರಿಗಳಿವೆ. ನಾನು ಅದರ ಬಗ್ಗೆ ಹೇಳುವುದಿಲ್ಲ. ಎಷ್ಟು ಡಿಸ್ಟಿಲರಿಗಳಿವೆ ಎಂಬ ಅಂಕಿಸಂಖ್ಯೆಗಳು ನಿಮ್ಮಲ್ಲಿವೆ.

ಶ್ರೀ ಹೆಚ್. ಎನ್. ನಂಜೇಗೌಡ : ಎನ್‌ಕ್ವೈರಿ ಯಾರ ಮೇಲೆ ಮಾಡಬೇಕು ಎಂದು ಹೇಳುತ್ತಿದ್ದೀರಿ? ಯಾರ ಬಗ್ಗೆ ಎನ್‌ಕ್ವೈರಿ ಮಾಡಬೇಕು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನೇನು ಹೇಳುವುದು, ಎಕ್ಸೈಜ್ ಇಲಾಖೆಯಲ್ಲಿ ಏನು ತಿದ್ದುಪಡಿ ತಂದಿದ್ದಾರೆ ಸಬ್‌ರೂಲ್ 11ಕ್ಕೆ ಅದರ ಬಗ್ಗೆ ಹೇಳುತ್ತಿದ್ದೇನೆ.

ಶ್ರೀ ಎಂ. ಸಿ. ನಾಣಯ್ಯ : ಡಿಸ್ಟಿಲರಿಗಳಿಗೆ ಲೈಸೆನ್ಸ್ ಕೊಟ್ಟವರ ಬಗ್ಗೆಯೂ ಎನ್‌ಕ್ವೈರಿ ಮಾಡಬೇಕಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾಡಿ, ಅದನ್ನೂ ಮಾಡಿ. ಡಿಸ್ಟಿಲರಿ ಲೈಸೆನ್ಸ್ ಕೊಟ್ಟವರ ಬಗ್ಗೆಯೂ ಆಗಬೇಕು. ಈ ಡಿಸ್ಟಿಲರಿ ಲೈಸೆನ್ಸ್ ಕೊಟ್ಟಮೇಲೆ ಎಂ.ಎಸ್.ಐ.ಎಲ್. ಮುಖಾಂತರ ಸೇಲ್ ಆಗಬೇಕು ಎಂದು ಹೇಳಿ ಆ ಕಾನೂನಿಗೆ ತಿದ್ದುಪಡಿ ತಂದು ಎಕ್ಸೈಜ್ ಲಾಬಿಗೆ ಮಣಿದವರು ಯಾರು? ಯಾಕೆ ತಿದ್ದುಪಡಿ ತಂದಿದ್ದು? ಸುಪ್ರೀಂ ಕೋರ್ಟ್ ಅಪ್‌ಹೆಲ್ಡ್ ಮಾಡಿದಮೇಲೆ What business these people have got to amend this? For whose sake? For whose benefit?

SRI. M.C. NANAIAH : For the benefit of the people at large.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹೇಳಬೇಕಾಗುತ್ತದೆ for the benefit of the Government and Janata Dal.

ಶ್ರೀ ಎಂ. ಸಿ. ನಾಣಯ್ಯ : ಈಗ ಒಂದನ್ನು ಹೇಳಿಬಿಡುತ್ತೇನೆ ಮಾನ್ಯ ಸಭಾಧ್ಯಕ್ಷರೆ, ಬೆಂಗಳೂರು ನಗರಕ್ಕೆ ಸಂಬಂಧಪಟ್ಟಹಾಗೆ 7 ಲಕ್ಷ ಲೀಟರ್ ಖರ್ಚಾಗುತ್ತದೆ. ಆದರೆ, ಅದರ ಲೆಕ್ಕಾಚಾರದಲ್ಲಿ 20 ಲಕ್ಷ ಲೀಟರ್ ಬೆಂಗಳೂರು ನಗರದಲ್ಲೇ ಖರ್ಚಾಗುತ್ತದೆ ಎಂದು ಹೇಳಿದರು. ಬೆಂಗಳೂರು ನಗರದ ಜನಸಂಖ್ಯೆ 50 ಲಕ್ಷ ಎಂದು ಇಟ್ಟುಕೊಂಡರೂ ಕೂಡ almost every woman, man and a child, whoever he may be, ಅರ್ಧ ಬಾಟಲ್‌ಗಿಂತ ಕಡಿಮೆ ಕುಡಿಯಲೇಬೇಕಾಗುತ್ತದೆ ಸಾಧಾರಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕುಡಿಯಲೇಬೇಕು ಅಂದರೆ, ಇದರಲ್ಲಿ ಲೆಕ್ಕ ಇದೆ.

ಶ್ರೀ ಎಂ. ಸಿ. ನಾಣಯ್ಯ : 50 ಲಕ್ಷ ಜನಸಂಖ್ಯೆ. 20 ಲಕ್ಷ ಲೀಟರ್ ಅಂದರೆ ಸಾಧಾರಣ ನಾನು ಹೇಳುತ್ತೇನೆ 180 ಎಂ.ಎಲ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ತಿಂಗಳಿಗೆ ಹೇಳಿದ್ದು ಅದು. ಡೈಲಿ ಅಲ್ಲ. ನಿಮ್ಮದೇ 1980-81ರ ಲೆಕ್ಕ ನೋಡಿಕೊಂಡು ಓದಿಕೊಂಡು ಹೇಳಿ.

ಶ್ರೀ ಎಂ. ಸಿ. ನಾಣಯ್ಯ : 180 ml is normal size peg and 240 ml is higher size peg.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಈಗ ಎಂ.ಎಸ್.ಐ.ಎಲ್.ನವರು ಪ್ರತಿ ತಿಂಗಳು ಎಷ್ಟು ಮಾರುತ್ತಾರೆ ತಿಳಿದುಕೊಳ್ಳಿ. ಪ್ರತಿ ತಿಗಳು ಎಷ್ಟು ಕೇಸ್ ಮಾರುತ್ತಾರೆ? ಅದನ್ನು ತಿಳಿದುಕೊಳ್ಳಿ. ಅವರು ಲೆಕ್ಕ ಕೊಟ್ಟ ಪ್ರಕಾರ 1.75. ಅಂಥದ್ದರಲ್ಲಿ ತಮಿಳುನಾಡಿನಲ್ಲಿ ಎಷ್ಟು ಕನ್‌ಸಮ್‌ಷನ್ ಆಗುತ್ತದೆ ಒಂದು ತಿಂಗಳಿಗೆ? 7 ಲಕ್ಷ ಕೇಸಸ್. ನೀವು ಮಾಡುವುದು ಎಷ್ಟು 1 ಲಕ್ಷ 75 ಸಾವಿರ. ಅಂದರೆ ನಾನು ಏನು ಹೇಳಬೇಕು? ಸೆಕೆಂಡ್ಸ್‌ಗೆ ಪ್ರೋತ್ಸಾಹ ಕೊಡುತ್ತೀರಿ ಎಂದು ಹೇಳೋಣವಾ ಇಲ್ಲ ಎಂದು ಹೇಳೋಣವಾ? ಅದೇ ರೀತಿಯಾಗಿ ಬೆಂಗಳೂರು ಸಿಟಿಯಲ್ಲಿ ಪ್ರತಿ ತಿಂಗಳು 7-8 ಲಕ್ಷ ಲೀಟರ್ ನೀವು ತೋರಿಸುತ್ತೀರಿ. ಆದರೆ, ಆಕ್ಚುಯಲ್ ಕನ್‌ಸಮ್‌ಷನ್ ಇರತಕ್ಕದ್ದು 20 ಲಕ್ಷ ಎನ್ನತಕ್ಕಂಥ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆ ಅಂದರೆ ಇದು ಅಂಕಿಸಂಖ್ಯೆ ಆಧಾರದ ಮೇಲೆ 80ರಿಂದ ಇಲ್ಲಿಯವರೆಗೆ ಆವರೇಜ್ ತೆಗೆದು ನೀವು ನೋಡಿಕೊಳ್ಳಿ. ಅದರ ಮೇಲೆ ನಿಮಗೆ ಗೊತ್ತಾಗುತ್ತದೆ ಎಷ್ಟು ಕನ್‌ಸಮ್‌ಷನ್ ಇಲ್ಲಿ ಆಗುತ್ತಿತ್ತು, ಕಳ್ಳಲೆಕ್ಕ ಕಂಟ್ರಾಕ್ಟರ್ ಏನು ಕೊಡುತ್ತಿದ್ದಾರೆ, ಕಡಿಮೆ ಏಕೆ ಎಂದರೆ ನಿಮ್ಮಿಂದ ಕಡಿಮೆ ಪರ್ಚೇಸ್ ಮಾಡುತ್ತಾರೆ. ಹೊರಗಿನಿಂದ ತಂದು ಅದನ್ನು ಮಾರುತ್ತಾರೆ. ಆ ದೃಷ್ಟಿಯಿಂದ ಹೇಳಿದೆ. ಸುಮ್ಮನೆ ನೀವು ಎದ್ದಿರಿ, ಹೇಳಿಬಿಟ್ಟಿರಿ. ಪಾಪ್ಯುಲೇಷನ್ ಪ್ರಕಾರ ಎಂದು.

ಶ್ರೀ ಎಂ. ಸಿ. ನಾಣಯ್ಯ : 1994ನೇ ಡಿಸೆಂಬರ್ ನಂತರ ಇದು ಬಂತೇ ಅದಕ್ಕಿಂತ ಮೊದಲು ನಿಮ್ಮ ಕಾಲದಲ್ಲಿ ಇರಲಿಲ್ಲವೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಹೌದು. ನಮ್ಮ ಕಾಲದಲ್ಲಿ ಇತ್ತು.

ಶ್ರೀ ಎಂ. ಸಿ. ನಾಣಯ್ಯ : ನಿಮ್ಮ ಕಾಲದಲ್ಲೆಲ್ಲಾ ರಾಮರಾಜ್ಯ. ಎಲ್ಲಾ ಹಾಲಿನ ಹೊಳೆಯನ್ನು ಹರಿಸಿಬಿಟ್ಟಿರಿ, ಏನೂ ಮಾಡಲೇ ಇಲ್ಲ, ನಿಮ್ಮ ಕಾಲದಲ್ಲಿ ಏನೂ ಇರಲಿಲ್ಲವೇ ಹೇಳಿಬಿಡಿ. ಗೊತ್ತಾಗಬೇಕಲ್ಲ ಸ್ವಲ್ಪ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅವರು ಸರಿ ಇಲ್ಲ ಅಂತಾನೇ ನಿಮಗೆ ಅಧಿಕಾರ ಕೊಟ್ಟಿದ್ದು. ಅದನ್ನೇ ನೀವೂ ಮಾಡುವುದಾದರೆ ನಿಮಗೆ ಏತಕ್ಕೆ ಕೊಡಬೇಕಾಗಿತ್ತು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಜನ ತೀರ್ಮಾನ ಮಾಡಲಿ. ಆದರೆ ನಾನು ಕೇಳುತ್ತೇನೆ, ನಾನು ಮಾಡಿದೆ. ನನಗೆ ಶಿಕ್ಷೆ ಆಗಿದೆ. ಅಂದರೆ ನಾನು ಕೇಳುತ್ತೇನೆ ಲೂಟಿಯಾಗುವುದಕ್ಕೆ ನೀವು ಸಹಕಾರ ಕೊಡುತ್ತೀರಾ?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಖರ್ಗೆಯವರೇ, ನಿಮಗೆ ಬೆಂಬಲ ಕೊಟ್ಟು ಹೇಳುತ್ತಾ ಇದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒಂದು ನಿಮಿಷ. ಇದು ಲೂಟಿಯಾಗುವುದಕ್ಕೆ ನೀವು ಬೆಂಬಲ ಕೊಡುತ್ತೀರಾ?

ಶ್ರೀ ಎಂ. ಸಿ. ನಾಣಯ್ಯ : ಲೂಟಿ ಮಾಡುವುದಕ್ಕೆ ನಾವೇನೂ ಅವಕಾಶ ಕೊಟ್ಟಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ನಿಮಗೆ ಮಾತು ಬರುತ್ತವೆ ಎಂದು ಹೇಳಿ ಕೊಳ್ಳಬೇಡಿ. ನಾನು ಹೇಳುತ್ತೇನೆ, ಅವರು ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆಯಾಗಲಿ. ನಾನು ತಪ್ಪು ಮಾಡಿದ್ದರೆ ನನಗೆ ಶಿಕ್ಷೆಯಾಗಲಿ.

ಶ್ರೀ ಎಂ. ಸಿ. ನಾಣಯ್ಯ : ಡಿಸ್ಟಿಲರಿಗಳ ಹೆಸರಿತ್ತಲ್ಲ, ರಾತ್ರೋರಾತ್ರಿ ಕೊಟ್ಟಿರುವುದು ಯಾರ ಕಾಲದಲ್ಲಿ ಎಂಬುದನ್ನು ಹೇಳಬೇಕು ತಾವು. ಆಗ ತಾವು ಅಧಿಕಾರದಲ್ಲಿದ್ದರಲ್ಲ ತಾವು ಅಧಿಕಾರದಲ್ಲಿದ್ದಾಗ ಏನು ನಡೆಯಿತು ಹೇಳಿಬಿಡಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ನೂರು ಲೈಸೆನ್ಸ್ ಕೊಡ್ತೇನೆ. ನಾನು ಕೊಟ್ಟೆ ಎಂದು ತಿಳಿದುಕೊಳ್ಳಿ. ನಾನು ಕೊಟ್ಟಿದ್ದು ತಪ್ಪು ಎಂದು ಹೇಳಿ ನೀವು ಕ್ಯಾನ್ಸಲ್ ಮಾಡಿಕೊಳ್ಳಿ. ಅಥವಾ ನೀವು ಹೇಳಿ ನನಗೆ ನೇಣಿಗೆ ಏರಿಸಿ. ನಾನು ಇವತ್ತು ಕೇಳುತ್ತೇನೆ ಸುಪ್ರೀಂ ಕೋರ್ಟಿನಲ್ಲಿ ಈ ತಿದ್ದುಪಡಿ ಅಪ್‌ಹೆಲ್ಡ್ ಆದಮೇಲೆ ನಿಮಗೇನು ಬಿಸಿನೆಸ್ ಇದೆ ಇದನ್ನು ತಕ್ಷಣ ತಿದ್ದುಪಡಿ ಮಾಡತಕ್ಕಂಥದ್ದು? ನೀವು ಅಫಿಡವಿಟ್ ಕೊಟ್ಟು ಬಂದಿದ್ದೀರೋ ಇಲ್ಲವೋ? ಇಲ್ಲಿ ಹೋಲ್‌ಸೇಲ್ ಡೀಲರ್‌ಷಿಪ್ ಕೊಡದೇಹೋದರೆ ಗೌರ್ನಮೆಂಟ್ ಕಂಟ್ರೋಲ್ಡ್ ಏಜೆನ್ಸಿಗೆ ಕೊಡದೇ ಹೋದರೆ ಸೆಕೆಂಡ್ಸ್ ಹೆಚ್ಚಾಗುತ್ತದೆ. ಅದಕ್ಕಾಗಿ ನಾವು ಎಂ.ಎಸ್.ಐ.ಎಲ್.ಗೆ ಒಪ್ಪಿಸತಕ್ಕದ್ದು ಎಂದು ಅಫಿಡವಿಟ್ ಕೊಟ್ಟುಬಂದು ಇಲ್ಲಿ ತಕ್ಷಣ ತಿದ್ದುಪಡಿ ಮಾಡತಕ್ಕದ್ದು ಮಾಡಿದರೆ ನಾವು ಡಬಲ್ ಪಾಲಿಸಿ ಇದೆ ಎಂದು ಹೇಳಬೇಕೋ ಇಲ್ಲವೋ? ಅದಕ್ಕೆ ದಯವಿಟ್ಟು ತಪ್ಪಾಗಿದ್ದರೆ ತಪ್ಪಾಗಿದೆ, ಅದನ್ನು ಸರಿಪಡಿಸುತ್ತೇನೆ ಎಂದು ಹೇಳಿ. ಅದಕ್ಕೆ ಮಾತಿಗೆ ಮಾತು ಹೇಳುವುದು ಬೇಡ.

ಶ್ರೀ ಎಂ. ಸಿ. ನಾಣಯ್ಯ : ನೀವು ಈಲ್ಡ್ ಆಗುವುದಾದರೆ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಬೇಡ ನೀವು ಆಮೇಲೆ ಹೇಳಿ.

ಶ್ರೀ ಎಂ. ಸಿ. ನಾಣಯ್ಯ : ಎಂ.ಎಸ್.ಐ.ಎಲ್. ಬಗ್ಗೆ ಹೇಳುತ್ತೀರಲ್ಲ ಅದನ್ನು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ ಅದು ಅವರು ಹುಟ್ಟಿಹಾಕಿದೆ ಮಗು ತಾನೇ? ಅದನ್ನು ಹೇಗೆ ಹೇಳುತ್ತಾರೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಹುಟ್ಟಿಹಾಕಿದ್ದೇನೋ ನೀವು ಹುಟ್ಟಿಹಾಕಿದ್ದೀರೋ? ಇಲ್ಲೆಲ್ಲಾ ಡೇಟ್‌ವೈಸ್ ಇದೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಿಸ್‌ಗೈಡೆಡ್ ಫ್ಯಾಕ್ಟ್ಸ್ ಅದು. ತಾವು ಒಂದು ನಿಮಿಷ ಈಲ್ಡ್ ಆಗಿ. ಮಾನ್ಯ ಅಧ್ಯಕ್ಷರೇ, ಇವರು ಏನು ಹೇಳಿದರು, ಸಾರಾಯಿದು ಮೂರು ತಿಂಗಳಿಗೇ ಒಂದು ಪಾಲಿಸಿ ಮಾಡಿದ್ದಾರೆ, ಅಧಿಕಾರಿಗಳ ಮೇಲೆ ಇವರಿಗೆ ಹಿಡಿತ ಇಲ್ಲ, ಇವರೆಲ್ಲಾ ಎಕ್ಸೈಜ್ ಕಂಟ್ರಾಕ್ಟರ್ ಸಾರಾಯಿ ಕಂಟ್ರಾಕ್ಟರ್ ಜೊತೆಯಲ್ಲಿ ಶಾಮೀಲಾಗಿಬಿಟ್ಟಿದ್ದಾರೆ ಎಂದು ಹೇಳಿದರು. ನಾನು ಹೇಳುತ್ತಿದ್ದೇನೆ ಜುಲೈ, ಆಗಸ್ಟ್, ಸೆಪ್ಟೆಂಬರ್, ಅಕ್ಟೋಬರ್‌ಗೆ ಆ್ಯಕ್ಷನ್ ಮಾಡಿದ್ದೇವೆ ನಾವು. ಓಪನ್ ಆ್ಯಕ್ಷನ್ ಮಾಡಿದಮೇಲೆ 10 ಪರ್ಸೆಂಟ್ 15 ಪರ್ಸೆಂಟ್ ಜಾಸ್ತಿಯಾಗಿದೆ. ಮತ್ತು ಇದು ಲೀನ್ ಪೀರಿಯಡ್.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮುಖ್ಯ ಮಂತ್ರಿಗಳು ಸ್ಟೇಟ್‌ಮೆಂಟ್ ಮಾಡಿದ್ದಾರೆ. ಇದನ್ನು ತಾವು ಅವರಿಗೆ ಓದಿ ಹೇಳಿದರೆ ಇದು ಎಲ್ಲರಿಗೂ ಗೊತ್ತಾಗುತ್ತದೆ. ಈಗ ಆ್ಯಕ್ಷನ್ ಹಾಕಿದ್ದು ಆಯಿತು ಹಿಂದೆ ತಾವು ಸ್ಟೇಟ್‌ಮೆಂಟ್ ಮಾಡಿದ್ದಾರೆ. ನಿನ್ನೆ ಮೊನ್ನೆ ವೈಜನಾಥ್‌ಪಾಟೀಲರು ಎತ್ತಿದಾಗ ಇಲ್ಲಿ ಹೇಳಿದ್ದಾರೆ. ವೈಜನಾಥಪಾಟೀಲರು ಎಂದು ಎತ್ತಿದರು ಅದು? ಮೂರು ದಿವಸಗಳ ಹಿಂದೆ ಎತ್ತಿದರು. ಅದಕ್ಕೆ ಮೂರು ದಿವಸದ ಹಿಂದೆ ಏನು ಸ್ಟೇಟ್‌ಮೆಂಟ್ ಕೊಟ್ಟರು ಎಂದು ತಿಳಿದುಕೊಳ್ಳಿ. ಅದರ ಮೇಲೆ ಹೇಳಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಅಧ್ಯಕ್ಷರೆ, I am one of the Members of the Cabinet sub-committee. I am aware of the Excise Policy?

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಪಾಲಿಸಿಯಿಂದ ಎಂದು ನಾನು ಹೇಳಿದೆ. ಇವತ್ತಿನಿಂದ ಎಂದು ಹೇಳಲಿಲ್ಲ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಹೊಸ ಪಾಲಿಸಿಯಿಂದಾಗಿ 250 ಕೋಟಿ ರೂಪಾಯಿಗಳ ಕಡಿಮೆ ಆದಾಯ ಬರುತ್ತದೆಂದು ಕೂಡ ನಾವು ಹೇಳಿದ್ದೇವೆ.

ಶ್ರೀ ವಾಟಾಳ್ ನಾಗರಾಜ್ : ಸಾರಾಯಿ ಏತಕ್ಕೆ ಬಂದ್ ಮಾಡಲಿಲ್ಲ ನೀವು? ಪ್ರತಿ ವರ್ಷ ಜನರ ಮುಂದೆ ಸಾರಾಯಿ ನಿಲ್ಲಿಸುತ್ತೇವೆ ಎಂದು ಹೇಳುತ್ತಿದ್ದೀರಿ. ನಿಮಗೆ ನೈತಿಕ ಹಕ್ಕಿಲ್ಲ. ನೈತಿಕ ಹಕ್ಕನ್ನು ಕಳೆದು ಕೊಂಡು ಬಿಟ್ಟಿದ್ದೀರಿ.

ಶ್ರೀ ಪಿ. ಜಿ. ಆರ್. ಸಿಂಧ್ಯಾ : ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಎಲ್ಲಿ? ಪ್ರತಿ ವರ್ಷ ಹೇಳುತ್ತಿದ್ದರು. ಸಾರಾಯಿ ಬಂದ್ ಮಾಡುತ್ತೇವೆ, ಸಾರಾಯಿ ಬಂದ್ ಮಾಡುತ್ತೇವೆ ಎಂದು ತಮಟೆ ಹೊಡೆಯುತ್ತಿದ್ದರು. ಎಲ್ಲ ಬಂದ್ ಮಾಡಿದ್ದುದು ನೀವು?

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಸಂಪೂರ್ಣ ನಿಷೇಧ ಮಾಡುತ್ತೇವೆ ಎಂದು ಹೇಳಲಿಲ್ಲವಾ?

ಶ್ರೀ ವಾಟಾಳ್ ನಾಗರಾಜ್ : ಸಾರಾಯಿ ನಿಷೇಧ ಎಂದು ನಿಮ್ಮ ಸರ್ಕಾರ ಹೇಳಲಿಲ್ಲವೇ? ಬರೀ ಜನರಿಗೆ ಮೋಸ ಮಾಡುತ್ತಿದ್ದೀರಿ. ಸಾರಾಯಿ ನಿಷೇಧ ಮಾಡುತ್ತೇವೆ ಎಂದು ಹೇಳಲಿಲ್ಲವೇ? ಹೇಳಿಲ್ಲ ಎಂದು ಹೇಳಿ. ಏನು ಹುಡುಗಾಟ ಆಡುತ್ತಿದ್ದೀರಿ ಜನಗಳ ಮುಂದೆ ನೀವು.

ಶ್ರೀ ಹೆಚ್. ಎನ್. ನಂಜೇಗೌಡ : ನಿಮ್ಮ ಎಕ್ಸೈಜ್ ಪಾಲಿಸಿ ಹೇಗಿದೆ ಎಂದರೆ ಸಿಂಧ್ಯಾ ಅವರೆ ಡಿಸ್ಟಿಲರಿ ಓನರ್ಸ್‌ಗೆ ನೀವು ಮಾರಾಟ ಮಾಡಿಕೊಂಡಿದ್ದೀರಿ ಎಂದು ಸಾಬೀತಾಗಿದೆ. ಅದರಲ್ಲಿ ಏನೂ ಅನುಮಾನ ಬೇಡ. ಈಗ ತಿರುಚುವುದು ಬೇಡ. ಸರ್ಕಾರಕ್ಕೆ ಬರುವ ಆದಾಯವನ್ನೂ ನೀವು ತಪ್ಪಿಸಿದಿರಿ. ಅರ್ರ್ಯಾಕ್ ರೇಟ್ ಏರಿಸಿ ಆನ್ ಫಾರ್ ವಿತ್ ಐ.ಎಂ.ಎಫ್.ಎಲ್ ತಂದುಬಿಟ್ಟು ತಿರುಚುವ ವ್ಯವಹಾರ ಬೇಡ. ನೀವು ಕುಡಿಯುವುದನ್ನು ಕಡಿಮೆ ಮಾಡುತ್ತಾ ಇದ್ದೀರಾ You have increased the rate of arrack. It is coming on par with the IMFL rate. ಎಲ್ಲರೂ ಐಎಮ್‌ಎಫ್‌ಎಲ್‌ನಲ್ಲಿ ಕೊಂಡುಕೊಳ್ಳುತ್ತಾರೆ, ಅವರು ಸೆಕೆಂಡ್ಸ್ ಮಾರಾಟ ಮಾಡುತ್ತಾರೆ. ಇವರು ಒಂದೂವರೆ ಕೋಟಿ ಎಂದು ಹೇಳಿದ್ದಾರೆ. As on to-day 3 ಕೋಟಿ ರೂಪಾಯಿಗಳಷ್ಟು ಸೆಕೆಂಡ್ಸ್ ಹೋಗುತ್ತಾ ಇದೆ ನಮ್ಮ ಕರ್ನಾಟಕ ರಾಜ್ಯದಲ್ಲಿ, ನಾನು ಹೇಳುತ್ತೇನೆ ಈ ನಿಮ್ಮ ಎಕ್ಸೈಜ್ ಪಾಲಿಸಿಯಿಂದ 6 ಕೋಟಿ ರೂಪಾಯಿಗೆ ಏರುತ್ತದೆ.6 ಕೋಟಿ ರೂಪಾಯಿ ಸೆಕೆಂಡ್ಸ್ ಹೋಗುತ್ತದೆ. ಡಿಸ್ಟಲಿರಿಗೆ ನೀವು ಸರ್ಕಾರದವರು ಮಾರಾಟಮಾಡಿಕೊಂಡಿದ್ದೀರಿ, ಅವರ ಪಾಲಿಸಿ ಇದು, ನಿಮ್ಮ ಪಾಲಿಸಿ ಅಲ್ಲ.

ಶ್ರೀ ಜೆ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಸರ್ಕಾರಕ್ಕೆ ಎಕ್ಸೈಜ್ ಕಂಟ್ರಾಕ್ಟರ್ ಒಬ್ಬ ಬಾಕಿ ಕೊಡುವುದು ಇದೆ. ಅದನ್ನು ವಸೂಲಿ ಮಾಡಲು ಏನು ಕ್ರಮ ತೆಗೆದುಕೊಡಿದ್ದಾರೆ ಎಂದು ಹೇಳಲಿ ಏಕೆ ಬಿಟ್ಟರು ಇವರು? ಸರ್ಕಾರಕ್ಕೆ ಬರತಕ್ಕ ಹಣವನ್ನು ಏಕೆ ವಸೂಲಿ ಮಾಡಬಾರದು? ಹಿಂದಿನವರು ಮಾಡಿದ್ದಾರೆ ಎಂದು ತಪ್ಪಿಸಿಕೊಳ್ಳಲು ಆಗುವುದಿಲ್ಲ.

ಶ್ರೀ ಬಿ. ಎಸ್. ಯಾಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ಮಾನ್ಯ ಪಿ.ಜಿ.ಆರ್. ಸಿಂಧ್ಯಾರವರು ಎದ್ದು ನಿಂತುಕೊಂಡು ಮಾತನಾಡಿದರು, ಈಗ ನಾನು ಕೇಳುತ್ತೇನೆ, ನೀವು ಪಾನ ನಿಷೇದ ಮಾಡುತ್ತೇವೆ, ಅರ್ರ್ಯಾಕನ್ನು ರದ್ದು ಮಾಡುತ್ತೇವೆ ಎಂದು ಹೇಳಿ, ಅದಕ್ಕಾಗಿ ಹೋದ ವರ್ಷ ಜೂನ್‌ನಲ್ಲಿ ನೀವು ಪ್ರತಿವರ್ಷ ಮಾಡಿದಂತೆ ಹರಾಜು ಮಾಡಲಿಲ್ಲ. ನಾವು ಹೇಳಿದಾಗ, ಈ ರೀತಿ ಅರ್ರ್ಯಾಕ್‌ನ್ನು ರದ್ದು ಮಾಡುತ್ತೇವೆ ಅದಕ್ಕಾಗಿ ಹರಾಜು ಮಾಡಲಿಲ್ಲ ಎಂದು ಹೇಳಿದ್ದಿರಿ, ಇಲ್ಲೇ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು, ಅರ್ರ್ಯಾಕ್‌ನ್ನು ರದ್ದು ಮಾಡಲು ಸದನದ ಸರ್ವಸಮ್ಮತ ಅಭಿಪ್ರಾಯ ಇದ್ದರೆ ನಾನು ರದ್ದು ಮಾಡಲು ಸಿದ್ಧನಾಗಿದ್ದೇನೆ. ಒಂದು ದಿನದ ವಿಶೇಷ ಅಧಿವೇಶನವನ್ನು ಕರೆಯುತ್ತೇನೆ ಎಂದು ಹೇಳಿದ್ದೀರಿ ಮೂರನೆಯದಾಗಿ ತಮಗೆ ಯಾರು ಅಪ್ಪಣೆ ಕೊಟ್ಟರು, ಪ್ರತಿ ಜುಲೈನಲ್ಲಿ ಇಡೀ ರಾಜ್ಯದಲ್ಲಿ ಹರಾಜು ಆಗುತ್ತಾ ಇತ್ತು, ತಾವು ಅರ್ರ್ಯಾಕ್ ರದ್ದು ಮಾಡುತ್ತೇವೆ ಎನ್ನುವುದಕೋಸ್ಕರ ಹರಾಜು ಏಕೆ ರದ್ದು ಮಾಡಿದಿರಿ, ಅವರಿಗೆ ಏಕೆ ಶೇ. 8, ಶೇ 10 ಏರಿಕೆ ಮಾಡಿದಿರಿ, ಬೆಂಗಳೂರಿಗೆ ಸಂಬಂಧಿಸಿದಂತೆ ಅವರೆ ಕಂಟ್ರಾಕ್ಟ್ ಮಾಡಿಕೊಳ್ಳುತ್ತಾ ಇದ್ದರು ನೀವು ಏಕೆ ನಡೆಸಲು ಹೋದಿರಿ, ಸುಮಾರು 200 ಕೋಟಿ

ರೂಪಾಯಿಗಳನ್ನು ಲಾಸ್ ಏಕೆ ಮಾಡಿದ್ದೀರಿ, ಇದು ಬಹಳ ಸ್ಪಷ್ಟವಾಗಿ ಇರತಕ್ಕದ್ದು, ನಾವು ಇರುವುದು ಜನಹಿತಕ್ಕೆ, ಸರ್ಕಾರದ ಬೊಕ್ಕಸ ತುಂಬುವುದಕ್ಕೆ, ಅದು ಬಿಟ್ಟು ಹೆಂಡದ ದೊರೆಗಳು ಹೇಳಿದ ಹಾಗೆ ಸರ್ಕಾರ ನಡೆಸುತ್ತೇವೆ ಎಂದು ತಾವು ಹೇಳುವುದಾದರೆ, ನಾವು ಹೇಳುತ್ತೇವೆ, ಹೆಂಡದ ದೊರೆಗಳಿಗೆ ಸರ್ಕಾರ ತನ್ನನು ತಾನು ಮಾರಿಕೊಂಡಿದೆ. ಸರ್ಕಾರ ಅವರು ಹೇಳಿದಂತೆ ಕೇಳುತ್ತದೆ, ಆಡಳಿತ ನೀವು ನಡೆಸುತ್ತಾ ಇಲ್ಲ, ಅವರು ಹೇಳಿದಂತೆ ನಡೆಸುತ್ತಾ ಇದ್ದೀರಿ ಎಂದು ಜನ ಮಾತನಾಡುತ್ತಾರೆ,ನಾವು ಇಲ್ಲಿ ಆರೋಪ ಮಾಡುತ್ತೇವೆ. ನಿಮಗೆ ತಾಕತ್ತು ಇದ್ದರೆ ಹೇಳಿ ಜನಹಿತದೃಷ್ಟಿಯಿಂದ ಅರ್ರ್ಯಾಕ್‌ನ್ನು ನಾವು ಬಂದ್ ಮಾಡುತ್ತೇವೆ ಎಂದು, ಹೇಳಿದಂತೆ ನಾಡಿನಲ್ಲಿ ಜಾರಿಗೆ ತರುತ್ತೇವೆ ಎಂದು ಹೇಳಿ. ಉಪಮುಖ್ಯಮಂತ್ರಿಗಳಾದ ಸಿದ್ದರಾಮಯ್ಯನವರು ಮೊನ್ನೆ ಹೇಳಿದರು, ಎಕ್ಸೈಜ್ ಪಾಲಿಸಿ ಮತ್ತೊಂದು ಜಾರಿಗೆ ತರುತ್ತೇವೆ ಎಂದು ಹಾಗಾದರೆ ಸರ್ಕಾರಕ್ಕೆ ಬರುವ ಇನ್ನೊಂದು ಕೋಟಿ ರೂಪಾಯಿಗಳನ್ನು ಮುಳಗಿಸುತ್ತೀರಾ.

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಈ ಹೆಂಡದ ಮುಖಾಂತರ ಸರ್ಕಾರ ಬಡವರ ಮೇಲೆ ಗದಾಪ್ರಹಾರ ಮಾಡುತ್ತಿದೆ. ಆಗಬಾರದು ಎಲ್ಲ ಆಗುತ್ತಿದೆ.

ಅಧ್ಯಕ್ಷರು : ಜ್ವರ ಎಂದು ಬೆಳಿಗ್ಗೆ ಹೇಳುತ್ತಿದ್ದಿರಿ,

ಮಾನ್ಯ ಸದಸ್ಯರು : ಎಕ್ಸೈಜ್ ಬಗ್ಗೆ ವಿಷಯ ಬಂದ ತಕ್ಷಣ ಅವರ ಜ್ವರ ಇಳಿದು ಹೋಯಿತು.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಅವರು ಹೇಳಿದ ರೂಲ್ಸ್ ಬಗ್ಗೆ ಈಗಾಗಲೇ ಹೈಕೋರ್ಟಿನಲ್ಲಿ ನೋಟೀಸ್ ಇಶ್ಯೂ ಆಗಿದೆ, ತಾವು ಈಗಾಗಲೇ ಓದಿರಬಹುದು. "The Karnataka High Court has issued a notice to former Prime Minister H.D. Deve Gowda and Chief Minister J.H. Patel on a petition filed by former Cabinet Minister Puttaswamy Gowda, seeking quashing of the Karnataka Excise Rules, 1997 allowing private distributors for Indian Munufactured Foreign Liquor..." ಎಂದು ಹೇಳಿ 89ನೇ ರೂಲ್ಸ್‌ನ Staate Excise Rules, 1989 which allowed only Mysore Sales International Ltd., to operate as the distributor for all breweries and for import of liquor from outside the state.ಎಂದು ಈಗಾಗಲೇ ಹೈಕೋರ್ಟ್‌ನಲ್ಲಿ ಕೂಡ ಇದರ ಮೇಲೆ ಹೇಳಿದ್ದಾರೆ. ಮಾಡಿದ್ದೆಲ್ಲ ಸರಿ ಎಂದು ಹೇಳಲು ಹೋಗಬೇಡಿ ಆ ರೂಲ್ಸ್‌ನಿಂದ ತೊಂದರೆಯಾಗುತ್ತದೆ ಮತ್ತು ಆಡಳಿತದ ಹಿಡಿತ ತಪ್ಪುತ್ತದೆ. ಏಕೆಂದರೆ ಪ್ರೈವೇಟ್ ಡಿಸ್ಟ್ರಿಬ್ಯೂಟರ್ಸ್ ಬಂದಮೇಲೆ, ಅವರು ತಮ್ಮ ಇಚ್ಛೆ ಅನುಸಾರ ಕೆಲವರು distiller ಸಂಚುಮಾಡಿಕೊಂಡು ನಾಳೆ ನೇರವಾಗಿ ಅವರು ಸೆಕೆಂಡ್ಸ್ ಆಗಲಿ, ಅಥವಾ ಅವರೆ ಬೋಗಸ್ ಐಎಂಎಸ್‌ಎಲ್ ತಯಾರು ಮಾಡಿಕೊಂಡು ಮಾರಬಹುದು ಅದಕ್ಕೆ ಸೀಲ್ ಹಾಕಿ ಮಾರಾಟ ಮಾಡಬಹುದು. ಅದಕ್ಕೆ ಇದನ್ನು ತಪ್ಪಿಸಲು ನೀವು ಹೋಲ್‌ಸೇಲ್ ಏಜನ್ಸಿಯನ್ನು ಎಂಎಸ್‌ಐಎಲ್ ಅವರಿಗೆ ಕೊಟ್ಟಿರಿ, ಈಗ ಪುನಃ ಅದನ್ನು ತೆಗೆದುಕೊಂಡು ಬನ್ನಿ You remove that.

ಅಧ್ಯಕ್ಷರು : ನಿಮಗೆ ವಿನಂತಿಮಾಡಿಕೊಳ್ಳುವುದು ಏನು ಎಂದರೆ you discuss in the larger way in the interest of state, ತಾವು ಸೆಕೆಂಡ್ಸ್ ಅದು evasion of tax, Exactly. It is a very serious matter undoubtedly. ಆದರೆ, ತಾವು ಬೆಳಿಗ್ಗೆ ಹೇಳಿದಿರಲ್ಲ ಥರ್ಡ್ಸ್ ಬಗ್ಗೆ ನನಗೆ ಗೊತ್ತಿರಲಿಲ್ಲ, That is even more dangerous.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಅದಕ್ಕೆ ನಾನು ಹೇಳುವುದು ಅದರ ಬಗ್ಗೆ ಏನಾದರೂ ಮಾಡಿ, ಇಲ್ಲದಿದ್ದರೆ ಪೋಲೀಸ್‌ನವರಿಗೆ ಅಧಿಕಾರ ಕೊಡಿ it is not only excise department. You give to Police Department also. ಇಲ್ಲದಿದ್ದರೆ ಅದನ್ನು ತಡೆಹಿಡಿಯಲು ನಿಮ್ಮಿಂದ ಆಗುವುದಿಲ್ಲ.

ಶ್ರೀ ಜಿ. ವಿ. ಶ್ರೀರಾಮ ರೆಡ್ಡಿ : ಮಾನ್ಯ ಅಧ್ಯಕ್ಷರೆ, ಪೋಲಿಸ್ ಇಲಾಖೆಯವರು, ಎಕ್ಸೈಜ್ ಇಲಾಖೆಯವರು ಒಂದೇ ಸಮವಸ್ತ್ರದಲ್ಲಿ, ಒಂದೇ ಜೀಪ್‌ನಲ್ಲಿ ತೆಗೆದುಕೊಂಡು ಹೋಗುತ್ತಾರೆ.

ಅಧ್ಯಕ್ಷರು : ನಾನು ಏನು ವಿನಂತಿ ಮಾಡಿಕೊಂಡೆ ಮಾನ್ಯ ವಿರೋಧ ಪಕ್ಷದ ನಾಯಕರ ಹತ್ತಿರ ಎಂದರೆ, ಸೆಕೆಂಡ್ಸ್ ವಿಚಾರದಲ್ಲಿ ಅವರು ಬೆಳಿಗ್ಗೆ ವಿವರಣೆ ಕೊಟ್ಟಹಾಗೆ, ಸರ್ಕಾರಕ್ಕೆ ಬರತಕ್ಕ ಆದಾಯ ಮಾತ್ರ ಕಡಿಮೆಯಾಗುತ್ತದೆ. ಇದು ಬಹಳ ದೊಡ್ಡ ಅಪರಾಧ ಅದನ್ನು ಸರ್ಕಾರ ನೋಡಿಕೊಳ್ಳಲಿ, ಆದರೆ ಥರ್ಡ್ಸ್ ಎಂದು ಒಂದು ಅವರು ಬೆಳಿಗ್ಗೆ ಹೇಳಿದರು, ಅಂದರೆ ಅವರು ಎಲ್ಲೋ ತಮಷ್ಟಕ್ಕೆ ತಾವೇ ತಯಾರು ಮಾಡಿ ಈ ಪ್ರಚಾರದಲ್ಲಿ ಇರುವ ಲೇಬಲ್‌ನ್ನು ಹಚ್ಚಿಕೊಂಡು ಮಾರತಕ್ಕದು. ಅವರು ಏನು ಮಾಡುತ್ತಾರೋ, ಅದನ್ನು ಯಾರು ಕುಡಿಯುತ್ತಾರೋ, ಅವರ ಗತಿ ಏನಾಗುತ್ತದೆ that is even more dangerous.ಯಾವುದೋ ಒಂದು ವಿಚಾರವನ್ನು ನಾವು ಬೇಡಿಕೆ ಮೇಲೆ ಚರ್ಚೆ ಮಾಡುತ್ತಿದ್ದೇವೆ ಸರ್ಕಾರಕ್ಕೆ ಹೇಳುತ್ತಿದ್ದಾರೆ ಎಂದು ಅವರು ಲಘುವಾಗಿ ತೆಗೆದುಕೊಳ್ಳುವುದಾಗಲಿ, ಹೇಳುವುದಕ್ಕೆ ಹೇಳುತ್ತೇವೆ ಎನ್ನುವುದು ಬೇಡ, hooch tragedy ಆ ತರಹ hooch tragedy ಎಷ್ಟು ಆಗುತ್ತದೆ ಎಂದು ನಮ್ಮ ಗಮನಕ್ಕೆ ಬರತ್ತೆ that is a very serious thing. Let us find ways and means through this Assembly, how could the government arrest these things? supervise these things? That will be more helpful.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೆ, ಈಗ ಎರಡು ತಿಂಗಳ ಹಿಂದೆ ಶಿವಮೊಗ್ಗದಲ್ಲಿ ರೈಡ್ ಮಾಡಿ ಕೃತಕವಾಗಿ ಸ್ಯಾಚೆಟ್‌ಗಳನ್ನು ತಯಾರು ಮಾಡಿ ಮಾರುವಂತಹ ಎರಡು ಮೂರು ಯೂನಿಟ್‌ಗಳನ್ನು ಹಿಡಿದರು ಯಾರೇ ಒಬ್ಬ ಅಧಿಕಾರಿಯನ್ನು ಇದುವರೆಗೆ ಸಸ್ಪೆಂಡ್‌ನಲ್ಲಿ ಇಡಲಿಲ್ಲ ಇವರ ಇಲಾಖೆಯು ಅವರ ಜೊತೆಗೆ ಸೇರಿಕೊಂಡೆ ಈ ಕೆಲಸ ಮಾಡುತ್ತಿದೆ. ಯಾರಿಗೆ ಅದರಲ್ಲಿ ಪಾಲು ಹೋಗುತ್ತದೆ ಎಂದು ನಾನು ಕೇಳಬೇಕಾಗುತ್ತದೆ. ಈ ನಿಟ್ಟಿನಲ್ಲಿ ನಾವು ಚರ್ಚೆ ಮಾಡುತ್ತೇವೆ ಹೊರತು ವಾಸ್ತವಿಕವಾಗಿ ದೊಡ್ಡ ದೊಡ್ಡ ಕಾರ್ಖಾನೆಗಳೆ ನಡೆತಾ ಇವೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದನ್ನು ಎಲ್ಲ ಕಡೆ ಮಾಡುತ್ತಿದ್ದಾರೆ, ಎಲ್ಲಾ ತಾಲ್ಲೂಕುಗಳಲ್ಲಿ ಕಂಟ್ರಾಕ್ಟ್ ಕೊಟ್ಟಿರುತ್ತಾರೆ ಆಗ ಸರ್ಕಾರದವರು ಒಂದು ಖೋಟಾ ನಿಗದಿ

ಮಾಡಿರುತ್ತಾರೆ ಇಷ್ಟು ಪ್ರತಿತಿಂಗಳಿಗೆ ಕೊಡಬೇಕು ಎಂದು. ಆದರೆ ಅವರು ಒಂದು ಬೋರ್‌ವೆಲ್ ಹಾಕಿಕೊಂಡು ಪೌಡರ್‌ಮಿಕ್ಸ್ ಅವರೇ ತಯಾರು ಮಾಡುತ್ತಾರೆ. ಅವರು ಸರ್ಕಾರಕ್ಕೆ ಲೆಕ್ಕ ಕೊಡುವುದು ಬರ ಶೇ.10 ಮಾತ್ರ, ಇನ್ನು ಶೇ.90ರಷ್ಟನ್ನು ಆ ತಾಲ್ಲೂಕಿನಲ್ಲಿ ಅವರೇ ತಯಾರು ಮಾಡಿಕೊಳ್ಳುತ್ತಾರೆ. ರೈಡ್ ಮಾಡಿ ಹಲವಾರು ಸಂದರ್ಭಗಳಲ್ಲಿ ಹಿಡಿದುಕೊಂಡು ಬಂದಿದ್ದಾರೆ. ಕೇಸ್ ಮಾತ್ರ ಹಾಕಲಿಲ್ಲ.

ಡಾ|| ಎಂ.ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ನಾವು ಯಾವುದಾದರು ಸೂಚನೆ ಕೊಡಬಹುದು. ಆದರೆ ಸರ್ಕಾರ ಅದನ್ನು ಇಂಪ್ಲಿಮೆಂಟ್ ಮಾಡುವ ಮನಸ್ಸು ಬೇಕು. ಅದೇ ಇಲ್ಲದಿದ್ದರೆ ಏನು ಉಪಯೋಗ.

ಅಧ್ಯಕ್ಷರು : ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದು, ಸರ್ಕಾರ ಈ ವಿಷಯದಲ್ಲಿ ವಿರೋಧ ಪಕ್ಷ ಎಂದು ಮಾತನಾಡುವುದು ಬೇಡ ನಾವು ಎಲ್ಲರೂ ಜನಪ್ರತಿನಿಧಿಗಳು ಜನರ ಆರೋಗ್ಯದ ದೃಷ್ಟಿಯಿಂದ, ಈ ರಾಜ್ಯದ ಜನರನ್ನು ಕಾಪಾಡುವ ದೃಷ್ಟಿಯಿಂದ ನಿರ್ದಿಷ್ಟವಾಗಿ ಯಾವುದಾದರೂ ಒಂದು ನಿರ್ಣಯಕ್ಕೆ ಬರೋಣ ಎಂದು. I am appealing to both the sides. Let us rise above party considerations and view this matter more seriously.

ಶ್ರೀ ಕೆ. ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಈ ಸೆಕೆಂಡ್ಸ್‌ದಿಂದ ಮಾನವನ ಶರೀರದ ಅಂಗವಾದ ಕಣ್ಣಿಗೆ ಬಹಳ ದುಷ್ಪರಿಣಾಮ ಬೀರುತ್ತದೆ, ತಾವು ಕೊಡುತ್ತಿರುವ ಸಲಹೆ ಇದು ಎಲ್ಲರ ಹೊಣೆಗಾರಿಕೆ, ಜವಾಬ್ದಾರಿ, ಹಣಕ್ಕಿಂತ ನಮ್ಮ ಜನರ ಆರೋಗ್ಯವೆ ಬಹಳ ಮುಖ್ಯ. ಈಗ ಎಲ್ಲ ಪೆಟ್ಟಿಗೆ ಅಂಗಡಿಗಳಲ್ಲಿ, ಎಲ್ಲ ಅಂಗಡಿಗಳಲ್ಲಿ ಮಾರುತ್ತಾರೆ, ಈ ಸರ್ಕಾರ ಬಂದ ಮೇಲೆ ಅಂದರೆ ನಾನು ಸರ್ಕಾರವನ್ನು ಆಪಾದನೆ ಮಾಡುತ್ತೇನೆ ಎಂದು ಅಲ್ಲ, ಎಲ್ಲ ಹಳ್ಳಿಗಳಲ್ಲೂ ಪೆಟ್ಟಿಗೆ ಅಂಗಡಿಗಳಲ್ಲಿ ಥರ್ಡ್ಸ್ ಮಾರಿಯೇ ಮಾರುತ್ತಾರೆ. ಇದರ ಬಗ್ಗೆ ಜವಾಬ್ದಾರಿಯಿಂದ ಕೆಲಸ ಮಾಡದೆ ಇದ್ದರೆ ದುಡಿಯುವ ವರ್ಗವನ್ನೇ ಪೂರ್ಣ ನಾಶಮಾಡಿದ ಹಾಗೆ ಆಗುತ್ತದೆ.

ಡಾ|| ಎಂ. ಪಿ. ಕರ್ಕಿ : ಮಾನ್ಯ ಅಧ್ಯಕ್ಷರೆ, ನಮ್ಮಲ್ಲಿ ಹಾಲು ಮಾರಾಟ ಮಾಡಿದ ಹಾಗೆ ಪ್ಯಾಕೆಟ್‌ಗಳನ್ನು ಮನೆ-ಮನೆಗೆ ಹೋಗಿ ಕೊಡುತ್ತಾ ಇದ್ದಾರೆ. ಪೆಟ್ಟಿಗೆ ಅಂಗಡಿ ಹೋಯಿತು ಈಗ.

ಅಧ್ಯಕ್ಷರು : ಅಡ್ವಾನ್ಸ್ ಆಗಿದ್ದೀರಿ ನೀವು ಉತ್ತರ ಕನ್ನಡ ಜಿಲ್ಲೆಯವರು, ನಮ್ಮಲ್ಲಿ ಇನ್ನು ಹಿಂದುಳಿದವರು, ಅವರೇ ಹೋಗಿ ತೆಗೆದುಕೊಳ್ಳಬೇಕು. ಮನೆ-ಮನೆಗೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ್ ಖರ್ಗೆ : ಸನ್ಮಾನ್ಯ ಅಧ್ಯಕ್ಷರೆ, ಈ ಥರ್ಡ ನಿಲ್ಲಿಸತಕ್ಕದ್ದು ಒಂದು ಕಡೆ, Seconds, without duty, sales tax ಹೋಗುತ್ತಾ ಇದೆ, ಅದಕ್ಕೆ ಗಮನ ಕೊಡತಕ್ಕಂಥದ್ದು ಇನ್ನೊಂದು. ಈ ಎರಡು ಕೆಲಸಕ್ಕೆ ಬಿಗಿ ಮಾಡದೆ ಹೋದರೆ ತಾವು ಹೇಳಿದ ಹಾಗೆ ಒಂದು ಕಡೆ ಜನರ ಆರೋಗ್ಯ ಕೆಡುತ್ತದೆ, ಇನ್ನೊಂದು ಯಾವ ಜನರಿಗೊಸ್ಕರ ನಾವು ಅವರ ಆರೋಗ್ಯ, ಶಿಕ್ಷಣ, ಮನೆಗಳು ಇವೆಲ್ಲಕ್ಕೆ ಕಲ್ಯಾಣ ನಿಧಿಯಿಂದ ಕೋಟಿಗಟ್ಟಲೆ ಹಣ ತೆಗೆದುಕೊಂಡು ಅವರಿಗೆ ಖರ್ಚು ಮಾಡುತ್ತೇವೆ, ಇನ್ನೊಂದು ಕಡೆ ಇಂತಹ ಕಾನೂನು ಬಾಹಿರವಾಗಿ ತಯಾರು ಮಾಡುವಂತಹ ಸೆರೆಯನ್ನು

ಕುಡಿಯುವಂತಹದ್ದು ಆದರೆ ಖಂಡಿತವಾಗಿ ನಾವು ಅವರ ಮೇಲೆ ಖರ್ಚು ಮಾಡುವಂತಹ ಹಣವು ಹೋಗುತ್ತದೆ. ಇನ್ನೊಂದು human resources ಎಂದು ನಾವು ಏನು ಹೇಳುತ್ತೇವೆ ಅದನ್ನು ಉಪಯೋಗ ಮಾಡಿಕೊಳ್ಳಲು ಆಗುವುದಿಲ್ಲ. ಇದರಿಂದ ನಾವು ತೊಂದರೆಗೆ ಒಳಗಾಗುತ್ತೇವೆ ಎನ್ನುವಂತಹ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕೆ ಇದನ್ನು ಕಟ್ಟುನಿಟ್ಟಾಗಿ ಮಾಡಬೇಕಾದರೆ ಸರ್ಕಾರದವರು ಒಂದು ಸ್ಕ್ವಾಡ್ ಇಲ್ಲ ಅವರು ಹೇಳಿದಹಾಗೆ ಪೋಲಿಸ್‌ನವರು ಎಕ್ಸೈಜ್‌ನವರು ಒಂದೇ ಎಂದು ಅವರು ಹೇಳಿದರು, ಇದು ಬೇಡ ಎಂದರೆ independent vigilance committee ಏನಾದರೂ ಒಂದು ಇರಬೇಕಲ್ಲ, ಯಾವುದಾದರೂ ಒಂದು ಏಜೆನ್ಸಿ ಇಲ್ಲದೆ ಹೋದರೆ ಇದನ್ನು ತಡೆಗಟ್ಟುವುದು ಅಸಾಧ್ಯವಾಗುತ್ತದೆ. ಆದ್ದರಿಂದ, ಇತರ ಕಡೆ ಗಮನ ಕೊಡುವುದು ಅವಶ್ಯಕವಾಗಿದೆ.

5.00 ಪಿ.ಎಂ.

ಎಲ್ಲ ಜಿಲ್ಲೆಯೊಳಗೆ ಈ ಡಿಸ್ಟಿಲರೀಸ್ ಬಗ್ಗೆ, ಮೊಲ್ಯಾಸಿಸ್ ಬಗ್ಗೆ ಕೆಲವು ವಿಷಯಗಳ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ಆಮೇಲೆ ಮುಖ್ಯಮಂತ್ರಿಗಳು ಕೂಡ ಈ ಸದನದಲ್ಲಿ 12-8-97ರಂದು ಮಾನ್ಯ ಜಗದೀಶ್ ಶೆಟ್ಟರ್ ಮತ್ತು ನಮ್ಮ ಕುನ್ನೂರು ಅವರ ಪ್ರಶ್ನೆಗೆ ಉತ್ತರ ಕೊಡುತ್ತಾ ಹೇಳಿದ್ದಾರೆ. Hon'ble Chief Minister in his reply to the House to Question No. 3068 on 12.8.97 has stated that the arrack contractors are due to the government to the tune of Rs. 291 crores. ಅದು ಸುಮಾರು ಮುನ್ನೂರು ಕೋಟಿ ಸಮೀಪಕ್ಕೆ ಏನು ಬಾಕಿ ಇದೆ, ಅದನ್ನು ವಸೂಲು ಮಾಡತಕ್ಕಂಥಾದ್ದು ಒಂದು ಕಡೆ. ಎರಡನೆಯದು, ಇದು ಪ್ರತಿವರ್ಷ ಕಂಟಿನ್ಯೂಯಸ್ ಆಗಿ ಇನ್‌ಕ್ರೀಸ್ ಆಗುತ್ತದೆ. ಅದಕ್ಕೆ ಅವರು ಏನು ಮಾಡುತ್ತಾರೆ ಎಂದರೆ ಈ ಬಾಕಿ ಇದ್ದ ತಕ್ಷಣ ಬೇನಾಮಿ ಬೇರೆಯವರ ಹೆಸರಿನಲ್ಲಿ ಆ್ಯಕ್ಷನ್‌ನಲ್ಲಿ ಎಂಟ್ರಿಯಾಗುವುದು, ತೆಗೆದುಕೊಳ್ಳುವುದು ಮತ್ತು ಯಾರು ಅವರ ಹತ್ತಿರ ಆಸ್ತಿ ಇರುವುದಿಲ್ಲ, ಮಣ್ಣು ಇರಲ್ಲ, ಸುಡುಗಾಡೂ ಇರುವುದಿಲ್ಲ, ಅಂತಹವರು ಎಂಟರ್ ಆಗಿ ಬ್ಯಾಂಕ್ ಗ್ಯಾರಂಟಿಯನ್ನು ಅವರಿಂದ ಕೊಡಿಸಿ ಇವತ್ತಿನ ದಿವಸ ಅದೇ ಚಾಳಿಯಿಂದ ಕೆಲವು ಜನ ಮಾಡುತ್ತಾರೆ. ಅವರು ಇಲ್ಲಿಂದ ಡ್ರಾ ಮಾಡತಕ್ಕಂಥ ಮೆಟೀರಿಯಲ್ಸ್ ಅಗಲಿ, ಕ್ವಾಂಟಿಟಿ ಆಫ್ ಅರ್‍ರ್ಯಾಕ್ ಮತ್ತು ಅವರು ಡಿಪಾಸಿಟ್ ಮಾಡಿದಂಥ ಹಣಕ್ಕೆ, ಎರಡಕ್ಕೂ ಹೊಂದಾಣಿಕೆ ಆಗತಕ್ಕಂಥ ರೀತಿಯಲ್ಲಿ ಅನೇಕ ಸಾರಿ ಅವರು ಮಾಡಿಕೊಳ್ಳುತ್ತಾರೆ. ಡಿಪಾರ್ಟ್‌ಮೆಂಟ್‌ನಲ್ಲೂ ಹೇಳಿಕೊಳ್ಳುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ, ಒಂದು, ನಮಗೆ ಬರತಕ್ಕಂಥ ಹಣ ಕೂಡ ಇನ್‌ಟೈಮ್ ಬರುವುದಿಲ್ಲ. ಎರಡನೆಯದು ಒಂದುವೇಳೆ ಅವರ ಬಾಕಿ ಇದ್ದಂಥ ಕೋಟಿಗಟ್ಟಲೆ ಹಣಕ್ಕೆ ನಾವು ಬಡ್ಡಿ ಲೆಕ್ಕಹಾಕಿದರೆ ಅವನ ಆ್ಯಕ್ಷನ್ ಅಮೌಂಟ್‌ನಷ್ಟೇ ಅನೇಕ ಸಾರಿ ಬಡ್ಡಿ ಹಣವಾಗುತ್ತದೆ. ಹೀಗಾಗಿ ಕೋಟ್ಯಾಂತರ ರೂಪಾಯಿ ಸರ್ಕಾರಕ್ಕೆ ಇದರಲ್ಲಿ ಲುಕ್ಸಾನು ಆಗತಕ್ಕಂಥಾದ್ದು ಇದೆಯೆಂಬ ಮಾತನ್ನು ನಾನು ಹೇಳುತ್ತೇನೆ. ಮತ್ತೆ ಪ್ರೊಡಕ್ಷನ್ ಬಗ್ಗೆ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಇದು ಮಾನ್ಯ ನಾಣಯ್ಯನವರನ್ನು ಕೇಳಿದ್ದರು. ಬಹುಶಃ ಇದು ಹೇಳಿದರೆ ಅವರಿಗೆ ಕ್ಲಿಯರ್ ಆಗಬಹುದು. ಇದು ನೀವು ಕೊಟ್ಟಂಥ ಬುಕ್‌ಲೆಟ್ ಏನು ಸರ್ಕ್ಯುಲೇಟ್ ಮಾಡಿದ್ದೀರಿ, ಅದು ಡಿಸ್ಟಿಲರಿ ಬಗ್ಗೆ ಬರೆದಂಥಾದ್ದು, ಅದರಲ್ಲೇ ಇದರ ಬಗ್ಗೆ ಅಂಕಿಸಂಖ್ಯೆಗಳನ್ನು ಕೊಟ್ಟಿದ್ದು ಇದೆ - "There are many

such illegal activities in the department which encourage the distilleries and illicit liquor manufacturers for ex.; a major liquor company in its annual report dtd. 31st March, 1995 showed its licensed capacity as 10,89,600 litres, while the installed capacity was 7.5 times. ಅಂದರೆ ಅದರ ಏಳುಪಟ್ಟು ಅವರ ಇನ್‌ಸ್ಟಾಲ್ ಕೆಪ್ಯಾಸಿಟಿ. ಆನ್ಯುಯಲ್ ಪ್ರೊಡಕ್ಷನ್ 26.47 ಟೈಮ್ಸ್. ಅಂದರೆ ಅವರಿಗೆ ಹೊರಗಿನಿಂದ ತರತಕ್ಕಂಥ ವ್ಯವಸ್ಥೆ ಇರಬೇಕು. ಅರ್ಯಾಕ್ ಇಂಪೋರ್ಟ್ ಮಾಡಿಕೊಳ್ಳಬಹುದು ಅಥವಾ ಮೊಲ್ಯಾಸಿಸ್ ಮಾಡಿಕೊಳ್ಳಬಹುದು. ಇದು ಕಡಿಮೆ ಬಿದ್ದರೆ ಹೊರಗಿನಿಂದ ತೆಗೆದುಕೊಳ್ಳುವುದಕ್ಕೆ ಯಾವ ಅಭ್ಯಂತರ ಕೂಡ ಇಲ್ಲ. ಅದು ಪರ್ಮಿಶನ್ ತೆಗೆದುಕೊಂಡು ತರುತ್ತಾರೆ. ಆದರೆ ಅವರು ಅನೇಕ ಸಾರಿ ಸರ್ಕಾರಕ್ಕೆ ಕೊಡತಕ್ಕಂಥ ಲೆಕ್ಕ ಒಂದು ಮತ್ತು ಇಲ್ಲೀಗಲ್ ಆಗಿ ಪ್ರೊಡಕ್ಷನ್ ಮಾಡುವುದಿದೆ. ಅದನ್ನೇ ಸೆಕೆಂಡ್ಸ್‌ನಲ್ಲಿ ಕಳಿಸತಕ್ಕಂಥಾದ್ದು. ಅದಕ್ಕಾಗಿ ಪ್ರತಿ ಡಿಸ್ಟಿಲರಿಯಲ್ಲಿ ತಾವು ಆ ಡಿಸ್ಟಲರಿ ಓನರ್‌ನ ಮಾತು ಕೇಳಿ ಅಧಿಕಾರಿಯನ್ನು ಪೋಸ್ಟ್ ಮಾಡುವುದಕ್ಕಿಂತ, ಅಲ್ಲಿ ಲೋಕಲ್ ಮುಖಂಡರುಗಳ ಒತ್ತಾಯಕ್ಕೆ ಒಳಪಟ್ಟು ಪೋಸ್ಟ್ ಮಾಡುವುದಕ್ಕಿಂತಲೂ ನೇರವಾಗಿ ತಮ್ಮ ಇಲಾಖೆಯಲ್ಲಿ ಯಾರು ಅಧಿಕಾರಿಗಳು ಇದ್ದಾರೆ ಅವರನ್ನು ತಿಳಿದುಕೊಂಡು ಒಳ್ಳೆಯ ಅಧಿಕಾರಿಗಳನ್ನು ಆ ಒಂದು ಡಿಸ್ಟಿಲರಿಗಳಲ್ಲಿ ಅದು ಚೆಕ್‌ಪೋಸ್ಟ್ ಅಂತಿರೋ ಅಥವಾ ಯಾವುದು ಅದು ಲಿಕ್ಕರ್ ಹೊರಗಡೆಗೆ ಬರುತ್ತದೆ ಅಥವಾ ಟ್ಯಾಕ್ಸ್ ಇದೆಲ್ಲಾ ಕೊಟ್ಟರೂ ಕೂಡ ಅವರು ಹೋಗುತ್ತಾರೆಯೇ ಇಲ್ಲವೇ ಎಂದು ನೋಡಿಕೊಳ್ಳತಕ್ಕಂಥ ವ್ಯಕ್ತಿ ಅವರು ಡಿವೈಎಸ್‌ಪಿ ಇರಬಹುದು ಅಥವಾ ಎಕ್ಸೈಸ್ ಇನ್‌ಸ್ಪೆಕ್ಟರ್ ಇರಬಹುದು, ಪ್ರಾಮಾಣಿಕವಾಗಿ ದಕ್ಷರಾಗಿ ಇರತಕ್ಕಂಥವರನ್ನು ಹಾಕುವ ವ್ಯವಸ್ಥೆ ಮಾಡಬೇಕು. ಅವನು ಸರಿಯಿದ್ದರೆ ಅಲ್ಲಿ ಲೀಕೇಜ್ ಆಗತಕ್ಕಂಥ 50 ಪರ್ಸೆಂಟ್ ಆದರೂ ತಡೆಗಟ್ಟಬಹುದು. ನೂರಕ್ಕೆ ನೂರರಷ್ಟು ತಡೆಗಟ್ಟಬಹುದು ಎಂದು ನಾನು ಹೇಳುವುದಿಲ್ಲ. 50 ಪರ್ಸೆಂಟ್ ಆದರೂ ಅವರು ತಡೆಗಟ್ಟಿದರೆ ಕೋಟ್ಯಾಂತರ ರೂಪಾಯಿಗಳ ಹಣ ಉಳಿತಾಯವಾಗುತ್ತದೆ. ಆದರೆ ಅಷ್ಟೊಂದು ಪ್ರಾಮಾಣಿಕ ಜನ ಸಿಗುವುದಿಲ್ಲ ಎಂದು ಎಲ್ಲರಿಗೂ ಕೂಡ ಗೊತ್ತಿದೆ. ಅದಕ್ಕೆ ಏನು ಮಾಡಬೇಕು? ಚೆಕ್ ಹಾಕಬೇಕು, ಪದೇಪದೇ ಇದಕ್ಕೆ ನಿಮ್ಮ ಇಲಾಖೆಯವರು ಹೋಗಿ ಚೆಕ್ ಮಾಡಬೇಕು, ರಿವ್ಯೂ ಮಾಡಬೇಕು, ಅಲ್ಲಿ ತಪ್ಪಿತಸ್ಥರು ಇದ್ದರೆ ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು. ಈ ಕೆಲಸವನ್ನು ನೀವು ಮಾಡದೇಹೋದರೆ ಖಂಡಿತವಾಗಿಯೂ ನಾವು ಈ ಇಲಾಖೆಯಮೇಲೆ ಹಿಡಿತ ಇಟ್ಟುಕೊಳ್ಳುವುದಕ್ಕೆ ಆಗುವುದಿಲ್ಲ. ಮತ್ತು ಇವತ್ತು ನಮಗೆ ಏನು 900 ಕೋಟಿರೂಪಾಯಿಗಿಂತಲೂ ನಿರೀಕ್ಷಿತ ಆದಾಯ ಬರಬೇಕಾಗಿತ್ತು ಆ ಹಣ ಅಂತೂ ಇವತ್ತು ಬರುವುದಿಲ್ಲ. ನೀವೇ ಹೇಳಿದಿರಿ 200-250 ಕೋಟಿ ರೂಪಾಯಿ ಕಡಿಮೆ ಆಗಬಹುದು ಎಂದು ಒಂದುಕಡೆ ಪ್ರಾಹಿಬಿಶನ್ ಇಂಟ್ರಡ್ಯೂಸ್ ಮಾಡಿ ಇನ್‌ಕಮ್ ಕಡಿಮೆಯಾಗುತ್ತದೆ ಈ ಜಿಲ್ಲಾ ಅಥವಾ ತಾಲ್ಲೂಕುಗಳಲ್ಲಿ ಕಡಿಮೆಮಾಡಿ, ಅಲ್ಲಿ ಯಾವುದಾದರೊಂದು ತಾಲ್ಲೂಕಿನಲ್ಲಿ ಟೋಟಲ್ ಪ್ರಾಹಿಬಿಶನ್ ಇಂಟ್ರಡ್ಯೂಸ್ ಮಾಡಿ ಆದಾಯ ಕಡಿಮೆಯಾಗಿದೆ ಎಂದು ಹೇಳಿದರೆ ಒಪ್ಪಿಕೊಳ್ಳೋಣ. ಆದರೆ, ಯಾವುದೇ ಒಂದು ಜಿಲ್ಲೆಗಳಲ್ಲಿ ಅಥವಾ ತಾಲ್ಲೂಕುಗಳಲ್ಲಿ ಟೋಟಲ್ ಪ್ರಾಹಿಬಿಶನ್ ಇಲ್ಲದೆ ಯಥಾಪ್ರಕಾರ ಕನ್‌ಸಮ್‌ಷನ್ ಇದ್ದರೂ ಕೂಡ ತಮ್ಮ ಆದಾಯ ಕಡಿಮೆ ಎಂದು ಹೇಳಿದರೆ - it

reflects on the department. ಅದಕ್ಕೆ ತಾವೇ ಹೊಣೆಗಾರರಾಗುತ್ತೀರಿ. ಏಕೆಂದರೆ ಈ ಇಲಾಖೆಯನ್ನು ತಾವೇ ನೇರವಾಗಿ ಹ್ಯಾಂಡಲ್ ಮಾಡತಕ್ಕಂಥಾದ್ದು. ಅದಕ್ಕೇ ಇದರ ಬಗ್ಗೆ ಆಸಕ್ತಿವಹಿಸಿ ಇದು ಸರಿಯಾದ ರೀತಿಯಿಂದ ನಿರ್ವಹಣೆ ಮಾಡತಕ್ಕಂಥಾದ್ದು ಮಾಡಬೇಕು. ತಾವು ಇರಲಿಲ್ಲ, ನಾನು ಈಗಾಗಲೇ ಸ್ಪಷ್ಟವಾಗಿ ಹೇಳಿದ್ದೇನೆ. ಆ ಎಕ್ಸೈಸ್ ರೂಲ್ 3, ಸಬ್‌ಕ್ಲಾಸ್ 11-ಏನು ಹಿಂದೆ ಅಮೆಂಡ್‌ಮೆಂಟ್ ಆಗಿ - state-owned or state-controlled organisationsಗೆ ಹೋಲ್‌ಸೇಲ್ ಡೀಲರ್‌ಶಿಪ್ ಕೊಡಬೇಕು ಎನ್ನತಕ್ಕಂಥಾದ್ದು ಏನಿತ್ತು ಅದು ಸುಪ್ರೀಂ ಕೋರ್ಟಿನಲ್ಲಿ ಅಪ್‌ಹೆಲ್ಡ್ ಆಗಿತ್ತು. ಅದಕ್ಕೆ ಈಗ ಪುನಃ ನೀವು ತಿದ್ದುಪಡಿ ತಂದು ಪ್ರೈವೇಟ್‌ನವರಿಗೆ ಕೂಡ ಕೊಡಬೇಕು ಎಂದು ಏನು ಮಾಡಿದ್ದೀರಿ, ಅದು ಸರಿಯಲ್ಲ. ಇದರಿಂದ ಕೋಟ್ಯಾಂತರ ರೂಪಾಯಿ ಲುಕ್ಸಾನು ಆಗುತ್ತದೆ. ತಾವು ದಯವಿಟ್ಟು ಆ ಗವರ್ನಮೆಂಟ್ ಆರ್ಡರನ್ನು ಸ್ಕ್ಯಾಪ್‌ಮಾಡಿ ಯಥಾಪ್ರಕಾರ ನೀವು ಕಂಟಿನ್ಯೂ ಮಾಡಿ. ಕೊನೆಯಪಕ್ಷ ಸರ್ಕಾರಕ್ಕೆ ಎಷ್ಟು ಹಣ ಬರುತ್ತದೆ, ಅಷ್ಟು ಹಣವಾದರೂ ನಮ್ಮ ಖಜಾನೆಯನ್ನು ತುಂಬುತ್ತದೆ. ಇದನ್ನು ಹೇಳಿದರೆ ನಿಮಗೆ ಸಿಟ್ಟು ಬರುತ್ತದೆ. ನೇರವಾಗಿ ನಾನು ಹೇಳಬೇಕಾದರೆ ನೀವು ಇದಕ್ಕೆ ಜವಾಬ್ದಾರರು ಇದ್ದೀರಿ ಎಂದರೆ ನಾವು ಹೇಗೆ ರೆಸ್ಪಾನ್ಸಿಬಲ್. ಎಂದು ಕೇಳುತ್ತೀರಿ. ಇದರ ಬಗ್ಗೆ ಕೆಲವು ಜನರಿಗೆ ಮಣಿದೇ ತಾವು ಇದನ್ನು ಕೊಟ್ಟಿದ್ದೀರಿ ಎಂದು ನಾವು ಹೇಳಬೇಕಾಗುತ್ತದೆ. ಯಾವಾಗ ಸುಪ್ರೀಂ ಕೋರ್ಟ್ ಡಿಸಿಶನ್ ಇದ್ದರೂ ಕೂಡ ಕೆಲವು ಪ್ರೈವೇಟ್ ಕಂಟ್ರಾಕ್ಟರ್ಸ್‌ಗೆ ಕೊಡಬೇಕು ಎನ್ನತಕ್ಕಂಥ ಮನಸ್ಸು ಪರಿವರ್ತನೆ ಆಗಬೇಕಾದರೆ ಖಂಡಿತವಾಗಿಯೂ ಇದರಲ್ಲಿ ಪ್ರೈವೇಟ್ ಕಂಟ್ರಾಕ್ಟರ್ಸ್‌ಗೆ ನೀವು ಬೆಂಬಲ ಕೊಡುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಆದ್ದರಿಂದ ಮಾನ್ಯ ಅಧ್ಯಕ್ಷರೇ, ಇಷ್ಟು ಮಾತ್ರ ಇದರ ಬಗ್ಗೆ ಹೇಳಿದ್ದೇನೆ. ಇದನ್ನು ಮುಖ್ಯಮಂತ್ರಿಗಳು ಗಮನದಲ್ಲಿಟ್ಟುಕೊಂಡು ಆ ಗೌರ್ನಮೆಂಟ್ ಆರ್ಡರನ್ನು ವಾಪಾಸ್ಸು ತೆಗೆದುಕೊಳ್ಳಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು, ಕೊನೆಯದಾಗಿ ಲಾ ಅಂಡ್ ಆರ್ಡರ್ ಬಗ್ಗೆ ಕೆಲವು ಮಾತುಗಳನ್ನು ಆಡಿ ನನ್ನ ಭಾಷಣವನ್ನು ಮುಗಿಸುತ್ತೇನೆ. ಸನ್ಮಾನ್ಯ ಅಧ್ಯಕ್ಷರೇ, ಲಾ ಅಂಡ್ ಆರ್ಡರ್ ಪರಿಸ್ಥಿತಿ ಬಗ್ಗೆ ಇವತ್ತು ಪ್ರಸ್ತಾಪ ಮಾಡಬೇಕಾದರೆ ದಿನೇ ದಿನೇ ಲಾ ಅಂಡ್ ಆರ್ಡರ್ ಸಿಚ್ಯುಯೇಶನ್ ಕೆಡುತ್ತಿದೆ. ಇದಕ್ಕೆ ಕಾರಣ ಏನು ಎಂದು ಕಂಡುಹಿಡಿಯುವುದು ಕೂಡ ಅವಶ್ಯಕತೆ ಇದೆ. ಒಂದು ಕಡೆ ನಾವು ಪೋಲೀಸ್ ಅಧಿಕಾರಿಗಳಿಗೆ ಅವರು ಸರಿಯಾಗಿ ತಮ್ಮ ಕರ್ತವ್ಯವನ್ನು ನಿರ್ವಹಿಸುತ್ತಿಲ್ಲ ಎಂದು ಹೇಳುವುದಕ್ಕಿಂತಲೂ ಸರ್ಕಾರ ಒಂದು ಇಚ್ಛಾಶಕ್ತಿಯನ್ನು ಇಟ್ಟುಕೊಂಡು ಇವತ್ತಿನದಿವಸ ಇಂತಹ ದುರ್ಘಟನೆಗಳು ಅಥವಾ ಅನೇಕ ಅಟ್ರಾಸಿಟೀಸ್, ಕೊಲೆಗಳು, ದರೋಡೆಗಳು ಇವುಗಳನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡದೇ ಹೋದರೆ ಇವತ್ತು ದಿನೇದಿನೇ ಪರಿಸ್ಥಿತಿ ಕರ್ನಾಟಕದಲ್ಲಿ ಹದಗೆಡುತ್ತಿದೆ. ಇವತ್ತು ಬೆಂಗಳೂರಿನಲ್ಲಿ ಏನಾಗಿದೆ ಎಂದರೆ, ಬೊಂಬಾಯಿ ಹಾಗೆ, ಅಥವಾ ಡೆಲ್ಲಿಯಲ್ಲಿ ಯಾವರೀತಿ ಕ್ರೈಮ್ಸ್ ಆಗುತ್ತದೆ, ಬಿಹಾರ್‌ನಲ್ಲಿ ಯಾವರೀತಿ ಕ್ರೈಮ್ಸ್ ಆಗುತ್ತದೆ, ಆ ಒಂದು ಮಾದರಿಯಲ್ಲಿ ನಮ್ಮ ಬೆಂಗಳೂರಿನಲ್ಲಿ ಕೂಡ ಕ್ರೈಮ್ಸ್ ಹೆಚ್ಚಿಗೆ ಆಗುತ್ತಿದೆ. ಇದಕ್ಕೆ ನಾವು ತತ್‌ಕ್ಷಣ ಕಡಿವಾಣವನ್ನು ಹಾಕದೇ ಹೋದರೆ ಇದಕ್ಕೆ ನಾಳೆ ಎಲ್ಲರೂ ಕೂಡ ಹೊಣೆಯನ್ನು ಹೊರಬೇಕಾಗುತ್ತದೆ ಮತ್ತು ಮುಂದಿನ ಪೀಳಿಗೆಗೆ ನಾವು ಜವಾಬು

ಕೊಡತಕ್ಕಂಥಾದ್ದು ಆಗಲಿ, ಉತ್ತರ ಕೊಡತಕ್ಕಂಥಾದ್ದು ಆಗಲಿ, ಅದಕ್ಕೆ ಕಷ್ಟವಾಗುತ್ತದೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಹೇಳುತ್ತೇನೆ. ಇದು ಎಲ್ಲಿಯವರೆಗೆ ಹೋಗಿದೆ ಎಂದರೆ, ಒಂದು ಉದಾಹರಣೆ ತಮಗೆ ಕೂಡ ಗೊತ್ತಿರಬಹುದು. ಶ್ರೀಮಾನ್ ಸೈಯದ್ ಜುಲ್ಫಿಕರ್ ಹಷ್ಮಿಯವರು ನಮ್ಮ ಶಾಸಕರು ಇದ್ದಾರೆ. ಅವರು ಒಬ್ಬ ಶಾಸಕರು. ಈ ಶಾಸಕರಿಗೆ ಒಬ್ಬ ಸಬ್ ಇನ್‌ಸ್ಪೆಕ್ಟರ್ ಹೆದರಿಸತಕ್ಕಂಥಾದ್ದು ಇದ್ದು, ಒಂದು ಜೀಪ್‌ನ್ನು ಅವರಮೇಲೆ ಹತ್ತಿಸಿ ಅವರ ಕೊಲೆಮಾಡಬೇಕು ಎನ್ನತಕ್ಕಂಥ ಪ್ರಯತ್ನಪಟ್ಟರೆ ಮತ್ತೆ ಯಾವ ಶಾಸಕ ನಿರ್ಭೀತಿಯಿಂದ ಕೆಲಸ ಮಾಡುತ್ತಾನೆ ಎನ್ನತಕ್ಕಂಥ ಮಾತನ್ನು ನಾನು ಕೇಳುತ್ತೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳಿಗೆ ಪತ್ರವನ್ನು ಬರೆದಿದ್ದೇನೆ. ತಮಗೂ ಕೂಡ ಬರೆದಿರಬಹುದು ಅಥವಾ ಬಂದು ಹೇಳಿರಬಹುದು, ಈ ಮಾತನ್ನು ತಿಳಿಸಿದ್ದೇನೆ. ಒಬ್ಬ ಶಾಸಕನಿಗೆ ಇವತ್ತು ನಿರ್ಭೀತಿಯಿಂದ ಕೆಲಸ ಮಾಡುವ ಸಾಧ್ಯತೆ ಇಲ್ಲವೆಂದಾಗ, ಬೇರೆ ಸಾಮಾನ್ಯ ಕಾರ್ಯಕರ್ತರಾಗಲೀ ಅಥವಾ ಸಾಮಾನ್ಯ ಜನ ಆಗಲೀ ಹೇಗೆ ಬದುಕುತ್ತಾರೆ ಎನ್ನತಕ್ಕಂತಾದ್ದನ್ನು ನಾವು ಯೋಚನೆ ಮಾಡಬೇಕು. ಪ್ರತಿಯೊಂದು ಹಳ್ಳಿಯ ಜನರ ಮೇಲೂ ಸಾರಾಸಗಟು 5 ಕೋಟಿ ಜನರ ಮೇಲೂ ಈ ಅನ್ಯಾಯ ನಡೆದಿದೆ ಎಂದು ಹೇಳುತ್ತಾರೆ. ಆದರೆ, ಎಲ್ಲಿ ಜನ ಸ್ವಲ್ಪ ಮಿಲಿಟೆಂಟ್ ಇರುತ್ತಾರೆ, ಅಥವಾ ಯಾರು ಬಡವರ ಹಕ್ಕನ್ನು ರಕ್ಷಣೆ ಮಾಡಬೇಕೆಂದು ಮುಂದೆ ಬರುತ್ತಾರೆ, ಅವರಿಗೆ ಹೆದರಿಸಬೇಕು ಮತ್ತು ತಮ್ಮ ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳಬೇಕೆಂಬ ದೃಷ್ಟಿಯಿಂದ ಈ ತಂತ್ರಗಳನ್ನು ಕೆಲವು ಅಧಿಕಾರಿಗಳು ಹೂಡುತ್ತಾರೆ. ಇವತ್ತು ಆ ಪೋಲೀಸ್ ಅಧಿಕಾರಿಗಳು ಈ ಕೆಲಸವನ್ನು ಬೀದರ್‌ನಲ್ಲಿ ಮಾಡಿದ್ದಾರೆ, ಇದು ತಮ್ಮ ಗಮನಕ್ಕೆ ಬಂದಿದೆ. ಪುನಃ ಈ ಪತ್ರವನ್ನು ಮಂಡಿಸತಕ್ಕಂಥ ಅಥವಾ ಕೊಡತಕ್ಕಂಥ ಅವಶ್ಯಕತೆ ಇಲ್ಲ. ಈಗಾಗಲೇ 29-8-97ಕ್ಕೆ ತಮಗೆ, ಅವರು ಪತ್ರವನ್ನು ಬರೆದಿದ್ದಾರೆ. ದಯವಿಟ್ಟು ಇಂತಹ ಕೆಲಸಗಳು ಆಗಬಾರದು. ಶಾಸಕರಿಗೆ ಹೆದರಿಸತಕ್ಕಂಥ, ಈ ಕೆಲಸಗಳನ್ನು ಮಾಡಿದರೆ, ನಾವು ಹೇಳಬೇಕಾಗುತ್ತದೆ. ಇದಕ್ಕೆ ಸರ್ಕಾರದ ಕುಮ್ಮಕ್ಕು ಇದೆಯೆಂದು, ಅವರು ಈ ರೀತಿಯಾಗಿ ಬಿಹೇವ್ ಮಾಡುತ್ತಾರೋ ಅಥವಾ ಸರ್ಕಾರ ನಾವೇನು ಮಾಡಿದರೂ ಸಹಿಸಿಕೊಂಡು ಹೋಗುತ್ತಾರೆ, ನಮಗೆ ಬೆಂಬಲ ನೀಡುತ್ತಾರೆ ಎಂಬ ದೃಷ್ಟಿಯಿಂದ ಆ ಅಧಿಕಾರಿ ಈ ರೀತಿಯಾಗಿ ವರ್ತನೆ ಮಾಡುತ್ತಾನೋ ಎನ್ನತಕ್ಕಂತಾದ್ದು ಗೊತ್ತಾಗುತ್ತಿಲ್ಲ. ಇವತ್ತು ಅವರು ಡಿ.ವೈ.ಎಸ್.ಪಿ. ಗಮನಕ್ಕೆ ತಂದರೂ ಕೇಳುತ್ತಾ ಇಲ್ಲ. ಎಸ್.ಪಿ. ಗಮನಕ್ಕೆ ತಂದರೂ ಕೇಳುತ್ತಾ ಇಲ್ಲ. ಅಲ್ಲಿ ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್ ಅಥವಾ ಒಬ್ಬ ಸಬ್ ಇನ್‌ಸ್ಪೆಕ್ಟರೇ ಆಡಳಿತ ನಡೆಸಬೇಕೆಂದರೆ, ಸರ್ಕಾರ ಏನು ಮಾಡುತ್ತಿದೆ? ಸರ್ಕಾರದಲ್ಲಿ ಮೇಲ್ವಿಚಾರಣೆ ಮಾಡತಕ್ಕ ಅಧಿಕಾರಿಗಳು ಏಕೆ ಈ ಕಡೆ ಲಕ್ಷ್ಯ ಕೊಡುತ್ತಾ ಇಲ್ಲ. ಮುಖ್ಯಮಂತ್ರಿಗಳ ಗಮನಕ್ಕೆ ನೇರವಾಗಿ ಪತ್ರ ಬರೆದು ತಂದರೂ ಕೂಡ, ಇದರ ಬಗ್ಗೆ ಏಕೆ ಕ್ರಮ ತೆಗೆದುಕೊಂಡಿಲ್ಲ?

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ : ಮೊನ್ನೆ ನಾನು ಅಸೆಂಬ್ಲಿಯಲ್ಲಿ ಖೋಟಾ ನೋಟ್ ಬಗ್ಗೆ ಮಾತನಾಡಿದೆ. ನಮ್ಮ ಕೆಲಸಗಾರರಿಗೆ ಅಲ್ಲಿನ ಪೋಲೀಸಿನವರು ಹೇಳುತ್ತಾ ಇದ್ದಾರೆ, ನಿಮ್ಮ ಶಾಸಕರನ್ನು ಕರೆಸಿ, ಈ ಖೋಟಾ ನೋಟು ಪ್ರಕರಣದಲ್ಲಿ ಪೋಲೀಸಿನವರು ಇನ್‌ವಾಲ್ವ್ ಇದ್ದಾರೆ ಎಂದು ಹೇಳಿ, ಮತ್ತೆ ನಮ್ಮ ಹಿಂಬಾಲಕರಿಗೆ ಹೊಡೆಯುತ್ತಿದ್ದಾರೆ. ಇದು ಓಪನ್ ಆಗಿ ನಡೆಯುತ್ತಾ ಇದೆ ಒಂದು

ವರ್ಷದಿಂದ ಹೇಳುತ್ತಾ ಇದ್ದೇನೆ, ಇದರ ಬಗ್ಗೆ ಯಾರಿಗೂ ಸೀರಿಯಸ್‌ನೆಸ್ ಇಲ್ಲ, ಮತ್ತೆ ಹೋಮ್ ಮಿನಿಸ್ಟರ್ ಹತ್ತಿರವೂ ಹೋಗಿದ್ದೆ. ಡಿ.ಜಿ.ಪಿ.ವರೆಗೂ ಹೋಗಿದ್ದೇನೆ. ನಮ್ಮ ತಪ್ಪೇನಿದೆ ಅದರ ಬಗ್ಗೆ ಎನ್‌ಕ್ವೈರಿ ಮಾಡಿ. ನಾವು ಒಬ್ಬ ಸಬ್‌ಇನ್‌ಸ್ಪೆಕ್ಟ್‌ರಿಗೆ ವರ್ಗಾವಣೆ ಮಾಡಿ ಎಂದು ಹೋಗಿಲ್ಲ. ಸುಮ್ಮಸುಮ್ಮನೆ, ದಿನನಿತ್ಯ ಇದರ ಬಗ್ಗೆ ಸಮಸ್ಯೆಯನ್ನು ಕ್ರಿಯೇಟ್ ಮಾಡುತ್ತಿದ್ದಾರೆ. ಅವರು ಯಾರಿಗೆ ಹೊಡೆಯುತ್ತಿದ್ದಾರೆಂದರೆ, ಆಟೋದವರಿಗೆ, ಫುಟ್‌ಪಾತ್‌ನವರಿಗೆ ಹೊಡೆಯುತ್ತಾರೆ. ರಾತ್ರಿ 2 ಗಂಟೆಯವರೆಗೂ ಬಾರ್ ನಡೆಸುತ್ತಾರೆ, ಅವರಿಗೆ ಯಾರೂ ಹಿಡಿಯುವವರು ಇಲ್ಲ. ಓಪನ್ ಆಗಿ ಮಟಕಾ ನಡೆಸುತ್ತಿದ್ದಾರೆ ಅವರಿಗೆ ಯಾರೂ ಹಿಡಿಯುವುದಿಲ್ಲ. ಮಟಕಾದವರನ್ನು ನಾನು ಹಿಡಿದೆ. ಮಟಕಾದವರ ಜೊತೆ ಪೋಲೀಸಿನವರು ಶಾಮೀಲಾಗಿ ಆ ಮಟಕದವರಿಗೂ ನನಗೂ ಟಾರ್ಚರ್ ಮಾಡುತ್ತಿದ್ದಾರೆ. ಆದ್ದರಿಂದ, ತಾವು ನಮಗೆ ನ್ಯಾಯ ನೀಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇದು ಶಾಸಕರ ವಿಷಯ. ಇನ್ನೊಂದು ಎಸ್.ಆರ್. ಸಣ್ಣಶೆಟ್ಟಿ ಎಂದು ಪೋಲೀಸ್‌ಕಾನ್‌ಸ್ಟೇಬಲ್. ವಸಂತಕುಮಾರ್ ಎಂಬುವರು ದಲಿತ ಸಂಘರ್ಷ ಸಮಿತಿಯಲ್ಲಿ ಕೆಲಸ ಮಾಡತಕ್ಕ ವ್ಯಕ್ತಿ. ಇವರಿಗೆ ಪೋಲೀಸ್ ಸ್ಟೇಷನ್‌ನಲ್ಲಿ ಲಾಕಪ್ ಡೆತ್ ಆಯಿತು. ಅಲ್ಲಿ ಈ ಕೊಲೆ ಹೇಗಾಯಿತು ಎನ್ನುವುದಕ್ಕೆ ಸಿ.ಓ.ಡಿ. ಎನ್‌ಕ್ವೈರಿ ನಡೆಯುತ್ತಿದೆ. ಸಿ.ಓ.ಡಿ.ಯವರು ತನಿಖೆಯನ್ನು ಮಾಡುತ್ತಿದ್ದಾರೆ. ತನಿಖೆ ಮಾಡತಕ್ಕ ಸಂದರ್ಭದಲ್ಲಿ ಸಣ್ಣ ಶೆಟ್ಟಿ ಎಂಬ ಪೋಲೀಸಿನವರ ಎವಿಡೆನ್ಸ್ ತೆಗೆದುಕೊಂಡರು. ಆ ಎವಿಡೆನ್ಸ್‌ನಲ್ಲಿ, ಅವರು ಏನು ಹೇಳಿದರೆಂದರೆ, ಆ ವಸಂತ ಕುಮಾರನ ಕೊಲೆಯಾಗಬೇಕಾದರೆ, ಇದಕ್ಕೆ ಮುಖ್ಯ ಕಾರಣಕರ್ತರು ವೆಂಕಟೇಶಪ್ಪ ಎಂಬ ಪೋಲೀಸ್ ಇನ್‌ಸ್ಪೆಕ್ಟರ್ ಎಂದು ಎವಿಡೆನ್ಸ್‌ನಲ್ಲಿ ಸಣ್ಣಶೆಟ್ಟಿ ಹೇಳಿದ್ದಾರೆ. ಈ ರೀತಿ ಹೇಳಿದ ತಕ್ಷಣ ಮರುದಿವಸ ಈ ವೆಂಕಟೇಶಪ್ಪ ಮತ್ತು ಅವರ ಸಂಗಡಿಗರು ಸೇರಿ, ಯಾರು ಎವಿಡೆನ್ಸ್ ಕೊಟ್ಟಿದ್ದಾರೆ ಅವರ ಕೈ ಕಾಲು ಮುರಿದು ಬನ್ನಿ ಎಂದು ಹೇಳಿದ್ದಾರೆ. ಯಾವ ಸಣ್ಣಶೆಟ್ಟಿ, ಸರ್ಕಾರದ ಪರವಾಗಿ ಎವಿಡೆನ್ಸ್ ಕೊಟ್ಟಿದ್ದಾನೆ, ಆ ವಸಂತಕುಮಾರನ ಕೊಲೆ ಏನು ನಡೆದಿತ್ತು. ಅದರ ಬಗ್ಗೆ, ಅಂದರೆ ಆ ಕೊಲೆ ನಡೆದಿದ್ದು 6-5-97ರ ರಾತ್ರಿಯಲ್ಲಿ. ಈ ಕೊಲೆ ನಡೆದ ಬಗ್ಗೆ ಮಾಹಿತಿ ಕೊಟ್ಟಿದ್ದಕ್ಕಾಗಿ ಈ ಸಣ್ಣಶೆಟ್ಟಿಯ ಕೈ ಕಾಲು ಮುರಿದು, ಮೊನೆಗೆ ಕೂರಿಸಿದ್ದಾರೆ. ವೆಂಕಟೇಶಪ್ಪ ಎಂಬುವನು ಇನ್‌ಸ್ಪೆಕ್ಟರ್ ಸರಿ ಮಾಡಿಕೊಳ್ಳುವುದಕ್ಕೆ ಅಡ್ಡಾಡುತ್ತಿದ್ದಾನೆ. ನಾನು ಹೇಳುತ್ತೇನೆ, ಇನ್‌ಸ್ಪೆಕ್ಟರೇ ಈ ರೀತಿಯಾಗಿ ಪವರ್‌ಫುಲ್ ಆದರೆ, ಮತ್ತೆ ಸಿ.ಓ.ಡಿ. ಎನ್‌ಕ್ವೈರಿ ಏಕೆ ಬೇಕು? ಸಿ.ಓ.ಡಿ. ಎನ್‌ಕ್ವೈರಿಯಲ್ಲಿ ಅವನ ಹೆಸರು ಹೇಳಿದ್ದಾರೆ. ಈಗ ಅವನು ಅಮಾನತ್ತಿನಲ್ಲಿದ್ದಾನೆ. ಸಸ್ಪೆಂಡ್ ಆದರೂ ಅವನು ಪ್ರಭಾವ ಬೀರಿಕೊಂಡು ಇವತ್ತಿನದಿವಸ ಕಾನ್‌ಸ್ಟೇಬಲ್‌ಗಳಿಗೆ, ವಿಟ್‌ನೆಸ್‌ಗಳಿಗೆ, ಹೊಡೆಯತಕ್ಕ, ಬಡಿಯತಕ್ಕ ಕೆಲಸ ಮಾಡಿದರೆ, ಇದು ಯಾವರೀತಿಯಾಗಿ ಇಂಪಾರ್ಷಿಯಲ್ ಎನ್‌ಕ್ವೈರಿಯಾಗುತ್ತದೆ? ಯಾವರೀತಿಯಾಗಿ ಬಡವರು ಬಂದು ಎವಿಡೆನ್ಸ್ ಕೊಡುತ್ತಾರೆ? ಇದನ್ನು ಸರ್ಕಾರದ ಗಮನಕ್ಕೆ ತರಲಾಯಿತು ಮತ್ತು ಸ್ವತಃ ಬಂದು ಸಣ್ಣಶೆಟ್ಟಿಯೇ ಅಧಿಕಾರಗಳಿಗೂ ಕೂಡ ಭೇಟಿಯಾಗಿದ್ದಾರೆ. ಬೇರೆ ಯಾರು ಸಿ.ಓ.ಡಿ. ಎನ್‌ಕ್ವೈರಿ ಮಾಡುತ್ತಿದ್ದಾರೆ, ಅವರಿಗೂ ಕೂಡ ಇದರ ಬಗ್ಗೆ ಹೇಳಿದ್ದಾರೆ. ಇಲ್ಲಿಯವರೆಗೆ ಅವನಿಗೆ ರಕ್ಷಣೆ ಇಲ್ಲ. ಇವತ್ತು ಆ ಕೇಸಿನಲ್ಲಿ ಎವಿಡೆನ್ಸ್ ಕೊಡುವುದಕ್ಕೆ ಯಾರೂ ಮುಂದೆ ಬರುತ್ತಾ ಇಲ್ಲ. ಕೊನೆಗೆ ಏನಾಗುತ್ತದೆಂದರೆ, ಆ

ವಸಂತಕುಮಾರ್, ದಲಿತ ಸಂಘರ್ಷ ಸಮಿತಿ ಯುವಕ, ಅವನು 32 ವರ್ಷ ವಯಸ್ಸಿನವನು, ಏನು ತೀರಿಕೊಂಡಿದ್ದಾನೆ, ಇದು ಸರಿಯಾದಂಥ ಇನ್‌ವೆಸ್ಟಿಗೇಷನ್ ಆಗದೇಹೋದರೆ, ಮುಂದೆ ಯಾರೂ ಕೂಡ ಕಾರ್ಯಕರ್ತರು ಧೈರ್ಯದಿಂದ ಮುಂದೆ ನುಗ್ಗಿ ಕೆಲಸ ಮಾಡುವುದಕ್ಕೆ ಈ ಬಡ ಸಮಾಜದಲ್ಲಿ ಬರುವುದಿಲ್ಲವೆಂಬುದನ್ನು ನಾನು ಸ್ಪಷ್ಟಪಡಿಸುತ್ತೇನೆ. ಈ ಕೇಸಿನ ಬಗ್ಗೆ ಈಗಾಗಲೇ 13-8-97ರಲ್ಲಿ ಒಂದು ಅಪ್ಲಿಕೇಷನ್ ಕೊಟ್ಟಿದ್ದಾರೆ. ಇದಾದಮೇಲೆ 10-8-97ಕ್ಕೆ ಎಸ್. ಆರ್. ಸಣ್ಣಶೆಟ್ಟಿ ಎಂಬುವರೇ ಕೊಟ್ಟಿದ್ದಾರೆ. ಹೀಗೆ ಅನೇಕ ಅರ್ಜಿಗಳನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿದ್ದಾರೆ. ಇದು ಮೂರನೇ ಕೇಸು. ದಿನಾಂಕ : 8-6-97ಒಬ್ಬ ಆಟೋ ಡ್ರೈವರ್ ಅಕ್ಬರ್ ಪಾಶಾ ಎಂಬುವರ ಕೊಲೆ, ಚಾಮರಾಜನಗರದಲ್ಲಿ ಅಲ್ಲಿಯೂ ಕೂಡ ಇವನಿಗೆ ಕೊಲೆ ಮಾಡಿದಂತಹವರು ಯಾರು? ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಇದರ ಹಿಂದೆ ರಾಜಕಾರಣಿಗಳ ಕೈವಾಡ ಇದೆ. ಕೆಲವು ಜನರಿಗೆ ಶಕ್ತಿ ಏನು ಬಂದಿದೆ ಎಂದರೆ, ನಮ್ಮ ಸರ್ಕಾರ ಬಂದಿದೆಯೆಂದು ಈ ರೀತಿಯಾಗಿ ವರ್ತನೆ ಮಾಡುತ್ತಿದ್ದಾರೋ ಅಥವಾ ಅವರಿಗೆ ಸರ್ಕಾರ ನಾವೇನು ಮಾಡಿದರೂ ಕೂಡ ಅಡ್ಜಸ್ಟ್ ಮಾಡಿಕೊಂಡು ಹೋಗುತ್ತಾರೆ ಎಂಬ ಭಾವನೆ ಬಂದಿದೆಯೋ ಗೊತ್ತಿಲ್ಲ. ತಮಗೂ ಕೂಡ ಪುಟ್ಟಸ್ವಾಮಿಯವರು ಒಂದು ಪತ್ರವನ್ನು ಕಳುಹಿಸಿರಬಹುದು. 26-8-97ಕ್ಕೆ ನನಗೂ ಕಳುಹಿಸಿದ್ದಾರೆ. ಅದೇರೀತಿಯಾಗಿ ತಮಗೂ ಕೂಡ ಒಂದು ಕಾಪಿಯನ್ನು ಹಾಕಿದ್ದೇವೆಂದು ಅದರಲ್ಲಿ ಬರೆದಿದ್ದಾರೆ. ಅದನ್ನು ತಾವು ವೆರಿಫೈ ಮಾಡಬೇಕು. ಇದರಲ್ಲಿಯೂ ಕೂಡ ಇವನ ಕೊಲೆಯಾಗಿ ಸುಮಾರು 22-6-97ರಲ್ಲಿ ಅಂದರೆ ಇಲ್ಲಿಯವರೆಗೆ ಇದರ ಬಗ್ಗೆ ಯಾರಿಗೂ ಕೂಡ ಅರೆಸ್ಟ್ ಮಾಡಿಲ್ಲ. ಮತ್ತು ಇದರ ಬಗ್ಗೆ ಯಾವ ಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ಅವನು, ಅನೇಕ ರಾಜಕಾರಣಿಗಳ ಹೆಸರುಗಳನ್ನು ಕೂಡ ಅದರಲ್ಲಿ ಹೇಳಿದ್ದಾನೆ. ಅದರಲ್ಲಿ ಮುನಿಸಿಪಲ್ ಕೌನ್ಸಿಲರ್ ಇದ್ದಾರೆ. ಅಲ್ಲಿರತಕ್ಕಂಥ ಪ್ರಮುಖರು ಇದ್ದಾರೆ, ಮುಖಂಡರು ಇದ್ದಾರೆ ಎನ್ನತಕ್ಕಂಥ ಮಾತನ್ನು ಕೂಡ ಹೇಳಿದ್ದಾರೆ. ಸುಮಾರು 2 ತಿಂಗಳಾಯಿತು, ಇಲ್ಲಿಯವರೆಗೆ ಯಾವ ತನಿಖೆಯನ್ನೂ ಜರುಗಿಸಿಲ್ಲ. ಮತ್ತು ಅವರ ಮೇಲೆ ಕ್ರಮವನ್ನೂ ಕೂಡ ತೆಗೆದುಕೊಂಡಿಲ್ಲ. ತದನಂತರ ಮಳವಳ್ಳಿಯಲ್ಲಿ ಇನ್ನೊಂದು ಕೊಲೆ ಪ್ರಕರಣ, 6-5-97ಕ್ಕೆ ಆಗಿದೆ ಇವೆಲ್ಲವನ್ನೂ ಕೂಡ ಜನರಲ್ ಆಗಿ ಮರ್ಡರ್ ಕೇಸಸ್ ಬಗ್ಗೆ ಹೇಳುತ್ತಾ ಇಲ್ಲ, ಸಾವಿರಾರು ಇವೆ. ಯಾವು ಪೊಲಿಟಿಕಲಿ ಮೋಟಿವೇಟೆಡ್ ಇವೆ, ಎಲ್ಲಿ ದುರ್ಬಲ ವರ್ಗದವರಿಗೆ ಅಥವಾ ಕೈಲಾಗದಂಥ ಜನ ಏನೋ ತಮ್ಮ ಹೊಟ್ಟೆಪಾಡಿಗಾಗಿ ಯಾವುದೋ ಒಂದು ವ್ಯವಹಾರ ಮಾಡಿಕೊಳ್ಳುವಾಗ, ಅಥವಾ ಸಣ್ಣಪುಟ್ಟ ಬಿಸಿನೆಸ್ ಇಟ್ಟುಕೊಂಡು ಅಥವಾ ಸಮಾಜ ಸೇವೆ ಮಾಡತಕ್ಕಂಥವರು ಅಂತಹವರಿಗೆ ಕಿರುಕುಳ ಕೊಡತಕ್ಕಂಥಾದ್ದು ಅಥವಾ ಅವರ ಆಸ್ತಿ ಕಸಿದುಕೊಳ್ಳತಕ್ಕ ಪ್ರಯತ್ನ ಮಾಡತಕ್ಕಂಥಾದ್ದು ನಡೆಯುತ್ತಿದೆ. ಇಂತಹ ಸಂದರ್ಭದಲ್ಲಿ ಅವರಿಗೆ ಸರ್ಕಾರ ಸಹಾಯ ಮಾಡುವುದನ್ನು ಬಿಟ್ಟು, ಅಧಿಕಾರಿಗಳೇ ಅವರಿಗೆ ಹೆದರಿಸಿಕೊಂಡು, ಇವತ್ತಿನದಿವಸ ಮರ್ಡರ್ ಮಾಡಿದವರ ಪರವಾಗಿ ಇವತ್ತಿನದಿವಸ ಕೆಲಸ ಮಾಡುತ್ತಿದ್ದಾರೆ.6-5-97ರಲ್ಲಿ ನಾಗಮ್ಮ ಎಂಬ ಮಧ್ಯವಯಸ್ಸಿನ ಮಹಿಳೆ, ಇವರು ಬಟ್ಟೆ ಒಗೆಯುವುದಕ್ಕೆ ಹೋದಾಗ, ಅಲ್ಲಿಯೇ ಕೊಲೆ ಮಾಡಿ ಇವತ್ತಿನದಿವಸ ಆಕೆಯ ಬಗ್ಗೆ ವಿಚಾರಣೆ ಮಾಡಿ ಎಂದು ಹೇಳಿದರೆ, ಇಲ್ಲಿಯವರೆಗೆ ಆ ಎನ್‌ಕ್ವೈರಿ ಆಗಲಿಲ್ಲ. ಈಗಾಗಲೇ ಆ ಊರಿನ ಜನ, ಮಂಡ್ಯ ಜಿಲ್ಲೆ,

ಮಳವಳ್ಳಿ ತಾಲ್ಲೂಕಿನ, ಬಿ.ಜಿ.ಪುರ ಗ್ರಾಮದ ಶಿವಪ್ಪನ ಮಗ ಮಹದೇವಸ್ವಾಮಿ ಇವರು ಅರ್ಜಿಯನ್ನು ಬರೆದುಕೊಟ್ಟು, ತಮಗೆ ವಿನಂತಿಸಿಕೊಂಡಿದ್ದಾರೆ. ಈ ಕೊಲೆ ಹೇಗಾಯಿತು, ಇದಕ್ಕೆ ಯಾರು ಕಾರಣಕರ್ತರು ಮತ್ತು ಯಾರು ಯಾರು ಇದರ ಹಿಂದೆ ಇದ್ದಾರೆ ಎನ್ನತಕ್ಕಂಥಾದ್ದನ್ನು ಕೂಡ ಸ್ಪಷ್ಟವಾಗಿ ತಮಗೆ ಬರೆದುಕೊಟ್ಟಿದ್ದಾರೆ. ಬರೆದುಕೊಟ್ಟರೂ ಕೂಡ, ಇಲ್ಲಿಯವರೆಗೆ ಈ ಕೇಸ್‌ನ್ನು ಮುಚ್ಚಿಹಾಕುವ ಪ್ರಯತ್ನ ನಡೆದಿದೆಯೇ ಹೊರತಾಗಿ ಇದರ ಬಗ್ಗೆ ಯಾರು ಮರ್ಡರ್ ಮಾಡಿದ್ದಾರೆ ಅಥವಾ ಯಾರು ಈ ಕೇಸ್‌ನಲ್ಲಿ ಇನ್‌ವಾಲ್ವ್ ಆಗಿದ್ದಾರೆಂದು ಇಲ್ಲಿಯವರೆಗೆ ಪತ್ತೆಯಾಗದೆ, ಅವರು ಯಾವ ಚಾರ್ಜ್‌ಶೀಟ್ ಹಾಕಿಲ್ಲ ಎನ್ನತಕ್ಕದ್ದನ್ನು ನಾನು ಅಧ್ಯಕ್ಷರೆ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನೊಂದು ವಿಶೇಷವೆಂದರೆ, ದಿ: 27.4.97ರಿಂದ "Kullegowda found murdered at 3 pm after midnight in K.R. Pet police.." ಇದರ ಬಗ್ಗೆ ನಾನೇ ಸ್ವತಃ ಡಿಜಿಪಿಯವರಿಗೆ ಪತ್ರ ಬರೆದಿದ್ದೆ. ಆ ಊರಿನವರೆಲ್ಲಾ ಪತ್ರ ಬರೆದು ನನಗೆ ಕೊಟ್ಟಿದ್ದರು. ಯಾವ ರೀತಿಯಾಗಿ ಅಲ್ಲಿ ಕೊಲೆಯಾಗಿದೆ? ಅದಕ್ಕೆ ಯಾರು ಕಾರಣಕರ್ತರು? ಸುಮಾರು 3 ವರ್ಷಗಳ ಹಿಂದೆ ಪಟೇಲ್ ನಾಗರಾಜೇಗೌಡ ಎನ್ನತಕ್ಕವರು ಆ ಹಳ್ಳಿಯಲ್ಲಿ ಒಂದು ಕೊಲೆಗೆ ಕಾರಣಕರ್ತರು ಎನ್ನತಕ್ಕದ್ದನ್ನು ಅವರು ಹೇಳಿದ್ದಾರೆ. ಆದರೆ, ಇದರಲ್ಲಿ ಎಷ್ಟರಮಟ್ಟಿಗೆ ಸತ್ಯವಿದೆ ಎಂದು ನಾನೂ ಕೂಡ ವೆರಿಫೈ ಮಾಡಿದಾಗ, ಅಲ್ಲಿನ ರೈತರೇ ಈ ಅರ್ಜಿಯನ್ನು ತೆಗೆದುಕೊಂಡು ಬಂದು ನಡೆದಂತಹ ಘಟನೆಯನ್ನು ಸಂಪೂರ್ಣವಾಗಿ ವಿವರಣೆ ಮಾಡಿದ್ದಾರೆ. ಅದನ್ನು ಕೂಡ ನಾನು ನಮ್ಮ ಡಿಜಿಪಿಯವರಿಗೆ ನೇರವಾಗಿ ಪತ್ರ ಬರೆದು ಇದರ ಬಗ್ಗೆ ತಾವು ಇಂಪಾರ್ಷಿಯಲ್ ಎನ್‌ಕ್ವಯರಿ ಮಾಡಬೇಕು ಮತ್ತು ಇದನ್ನು ನೇರವಾಗಿ ಸಿಓಡಿಗೆ ವಹಿಸಿಕೊಡಬೇಕೆಂದು ಕೇಳಿಕೊಂಡೆ. ಆದರೆ, ಇಲ್ಲಿಯವರೆಗೆ ಯಾವ ದಿಕ್ಕಿನಲ್ಲಿ ಆ ಎನ್‌ಕ್ವೈಯರಿ ನಡೆದಿದೆ, ಎಷ್ಟರಮಟ್ಟಿಗೆ ಸರ್ಕಾರದವರು ಆಸಕ್ತಿ ವಹಿಸಿದ್ದಾರೆನ್ನತಕ್ಕದ್ದರ ಬಗ್ಗೆ ಯಾವ ಮಾಹಿತಿಯೂ ಇಲ್ಲ, ಒಂದು ತಿಂಗಳಾಯಿತು ನನಗೆ ಇದರ ಬಗ್ಗೆ ಯಾವ ಮಾಹಿತಿಯೂ ಬಂದಿಲ್ಲ.

MR. SPEAKER : What may be the reasons for all these crimes?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಕೆಲವು ಕಡೆ ಬಡವರಿದ್ದರೆ, ಅವರ ಮನವೊಲಿಸಿಕೊಳ್ಳುವ ಪ್ರಯತ್ನ ಮಾಡುತ್ತಾರೆ, ಅವರು ಒಪ್ಪಲಿಲ್ಲವೆಂದರೆ ಒತ್ತಡ ತರುತ್ತಾರೆ. ಕೊನೆಗೆ, ಯಾರಿಗೋ ಹೇಳಿಕೊಂಡು, ಹಿಂದಿರುವವರು ಬೇರೆ ಇರುತ್ತಾರೆ. ಈ ಕೊಲೆಗಳಾಗತಕ್ಕದ್ದು, ಮಾಡುವವರೇ ಒಬ್ಬರು, ನ್ಯಾಚುರಲೀ ಸಫರ್ ಪಡುವವರು ಇನ್ನೊಬ್ಬರು. ಕೋಲ್ಯಾಟರಲ್ ಗೇನ್ ಇರಬಹುದು, ಪ್ರಾಪರ್ಟಿ ಗೇನ್ ಇರಬಹುದು, ಜೆಲಸಿ ಆಫ್ ಕ್ಯಾಸ್ಟ್ ಇರಬಹುದು.

MR. SPEAKER : Why the local officers keep quiet?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಾನು ಬೇರೆಯವರಿಗೆ ಹೇಳಲ್ಲ. ನನ್ನ ಇನ್‌ಫ್ಲುಯೆನ್ಸ್ ಎಂದರೆ ಮುಖ್ಯಮಂತ್ರಿಗಳಿಗೆ ಹೇಳಿಕೊಳ್ಳುತ್ತೇನೆ, ನನಗೆ... ಸಬ್ ಇನ್ಸ್‌ಪೆಕ್ಟರ್‌ರವರು ಇದ್ದಾರೆ. ನಾನು ಅಲ್ಲಿ ಲಾ ಅಂಡ್ ಆರ್ಡರ್ ಚೆನ್ನಾಗಿರಬೇಕು ಎಂದು ಹಾಕಿಸಿಕೊಂಡು ಹೋದರೆ ದಟೀಸ್ ಗುಡ್. ಆದರೆ, ಅಲ್ಲಿ ಆಗತಕ್ಕ ಎಲ್ಲಾ ಕೆಲಸ ಕಾರ್ಯಗಳು ನಾನು ಹೇಳಿದ ಪ್ರಕಾರವೇ ನಡೆಯಬೇಕೆಂದು

ಹಾಕಿಸಿಕೊಂಡು ಹೋಗುವವರಿದ್ದಾರಲ್ಲಾ, ಆಗ ಅವರೇನು ಮಾಡುತ್ತಾರೆ, ಆ ಅಧಿಕಾರಿ ಮುಖ್ಯಮಂತ್ರಿಗಳ ಮಾತೂ ಕೇಳಲ್ಲ, ಡಿಪಿಸಿಯವರ ಮಾತೂ ಕೇಳಲ್ಲ, ಅವನಿಗೆ ಮುಖ್ಯಮಂತ್ರಿ ಯಾರೆಂದರೆ ಅಲ್ಲಿನ ಶಾಸಕ, ಅಲ್ಲಿನ ಪುಢಾರಿ, ಯಾರು ಅವನನ್ನು ಹಾಕಿಸಿಕೊಂಡು ಬರುತ್ತಾರೆ, ಅವರೇ ಅವನಿಗೆ ಲೀಡರ್, ಸಿಎಂ. ಎಲ್ಲ. ಅವನು ಅವರ ಮಾತು ಕೇಳುತ್ತಾನೆಯೇ ಹೊರತು, ಬೇರೆಯವರ ಮಾತನ್ನು ಕೇಳುವುದಿಲ್ಲ. ಅಪರೂಪಕ್ಕೆ 100ರಲ್ಲಿ ಒಬ್ಬರೋ, ಇಬ್ಬರೋ ಆ ತರಹದ ಅಧಿಕಾರಿಗಳಿರಬಹುದು. ವಿಶೇಷವಾಗಿ 90 ಪರ್ಸೆಂಟ್ ಜನ ಈ ರೀತಿಯಾಗಿ ಒತ್ತಡದ ಮೇಲೆ ಹಾಕಿಸಿಕೊಂಡವರು ಒಳ್ಳೆಯವರು, ಆದರೆ, ಕೆಲವು ಸಲ ಒತ್ತಡಗಳಿಂದ ಹಾಕಿಸಿಕೊಂಡು ಹೋಗುತ್ತಾರಲ್ಲಾ ಅವರೇನು ಮಾಡುತ್ತಾರೆಂದರೆ ತಮ್ಮ ಅಭಿಪ್ರಾಯಗಳನ್ನು ಅವರ ಮೇಲೆ ಹೇರಿ ಅಥವಾ ಅವರ ಮುಖಾಂತರ ಸೇಡು ತೀರಿಸಿಕೊಳ್ಳುವ ಕೆಲಸ ಮಾಡುತ್ತಾರೆ.

MR. SPEAKER : Are you referring to Vohra commission recommendations? ವೋಹ್ರಾ ಕಮೀಷನ್ ರೆಕಮೆಂಡೇಷನ್ ಬಗ್ಗೆ ಏನಾದರೂ ಹೇಳುತ್ತೀರಾ? ವೋಹ್ರಾ ಕಮಿಷನ್ ರೆಕಮೆಂಡೇಷನ್‌ನಲ್ಲಿ they have made it very very clear. It is not a simple thing. This is a problem which is worrying all of us. They have made very fine recommendations, how the police administration should be run in the State, about political interference, about postings, about clandestine alliance, all these matters are mentioned. ಅದಕ್ಕೇ ನಾನು ತಮ್ಮನ್ನು ಕೇಳಿದ್ದು. ಬೈ-ಚಾನ್ಸ್, ವೋಹ್ರಾ ಕಮೀಷನ್ ರೆಕಮೆಂಡೇಷನ್ ಬಗ್ಗೆ ತಾವೇನಾದರೂ ಹೇಳುತ್ತೀರಾ? That would really help you.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅದನ್ನು ಪ್ರತ್ಯೇಕವಾಗಿ ನೋಡೋಣ. ತಾವು ಹೇಳಿದ್ದೀರಿ. Definitely I will study and come before the House. ಇವತ್ತು ಸರ್ಕಾರದ ಆಡಳಿತದಲ್ಲಿ ಏನು ನಡೆದಿದೆ ಎನ್ನತಕ್ಕದ್ದರ ಬಗ್ಗೆ ನಾನು ಪ್ರಸ್ತಾಪಿಸುತ್ತೇನೆ. ಅದಕ್ಕೆ ಇವರು ಇದು ಹಿಂದಿನಿಂದ ನಡೆದಿದೆ, ಇದೇನೂ ಹೊಸದಲ್ಲವೆಂದು ಹೇಳಬಹುದು.

ಅಧ್ಯಕ್ಷರು : ನಾನು ತಮಗೆ ಲೀಡ್ ಕ್ವೊಶ್ಚನ್ ಹಾಕಿದ ಉದ್ದೇಶವೇ ಅದು. ತಾವು ಬೇರೆ ಮಾತನಾಡುತ್ತಿರಿ. I would only request the hon'ble Chief Minister kindlly go through those recommendations. That would help us.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇವತ್ತು ಏನಾಗಿದೆಯೆಂದರೆ, ತಮ್ಮ ಕಂಪ್ಯಾರಿಟೀವ್ ಸ್ಟೇಟ್‌ಮೆಂಟ್ ತಮ್ಮ ಇಲಾಖಾವತಿಯಿಂದ ಕೊಟ್ಟಿದ್ದು. ಒಟ್ಟು ಎಷ್ಟು ಮರ್ಡರ್‌ಗಳು, ಅಟೆಂಪ್ಟ್ ಟು ಮರ್ಡರ್ಸ್ ಹೋಮಿಸೈಡ್, ರೇಪ್ಸ್, ಕಿಡ್ನಾಪಿಂಗ್, ಡಕಾಯಿಟಿ, ರಾಬರಿ, ಬರ್ಗ್ಲರಿ, ಥೆಫ್ಟ್, ಕಮ್ಯುನಲ್ ರಯಟ್ಸ್, ಇಂಡಸ್ಟ್ರೀಸ್, ಪೊಲಿಟಿಕಲ್, ಕ್ಯಾಸ್ಟ್, ಆಗ್ರೇರಿಯನ್, ಸ್ಟೂಡೆಂಟ್ ಅಜಿಟೇಷನ್, ಇದರಲ್ಲಿ ಕೆಲವು ಮಾತ್ರ ಪ್ರಮುಖವಾದಂತಹವನ್ನು ನಾನು ತಮ್ಮ ಗಮನಕ್ಕೆ ತರುತ್ತೇನೆ. ಮರ್ಡರ್ ಬಗ್ಗೆ ಹೇಳುವುದಾದರೆ, 1996ರಲ್ಲಿ 1,604 ಮರ್ಡರ್‌ಗಳಾಗಿದ್ದರೆ, ಈ ವರ್ಷದ ಮೇ

ಕೊನೆಯವರೆಗೆ 730 ಮರ್ಡರ್‌ಗಳಾಗಿವೆ. ಇದರಲ್ಲಿ ಅಟ್ರಾಸಿಟೀಸ್ ಇರಬಹುದು, ರೇಪ್ ಇರಬಹುದು ಇವೆಲ್ಲಾ ಮರ್ಡರ್‌ಗಳು ಅಂದರೆ ಎಲ್ಲಾ ಸೇರಿ. ಆಮೇಲೆ ಅಟೆಂಪ್ಟ್ ಟು ಮರ್ಡರ್ ಬಗ್ಗೆ ಹೇಳುವುದಾದರೆ, ಕಳೆದ ವರ್ಷ 1.220 ಇದ್ದರೆ, ಕೇವಲ 3 ತಿಂಗಳಲ್ಲಿ 614 ಆಗಿವೆ. ಆಮೇಲೆ ರೇಪ್‌ಗಳು 1996ರಲ್ಲಿ 221 ರೇಪ್ ಕೇಸ್ ರಿಪೋರ್ಟ್ ಆಗಿದ್ದರೆ, ಕೇವಲ 3 ತಿಂಗಳಲ್ಲಿ 82 ಕೇಸಸ್ ರಿಪೋರ್ಟ್ ಆಗಿವೆ. 1996ರಲ್ಲಿ 533 ಕಿಡ್ನಾಪಿಂಗ್ ಕೇಸಸ್ ಆಗಿದ್ದರೆ, ಮೇ ಕೊನೆಯವರೆಗೆ 298 ಕೇಸಸ್ ರಿಪೋರ್ಟ್ ಆಗಿವೆ. 1996ರಲ್ಲಿ 252 ಡಕಾಯಿಟ್‌ಗಳಾಗಿದ್ದರೆ, ಕೇವಲ 3 ತಿಂಗಳಲ್ಲಿ 112 ಪ್ರಕರಣವಾಗಿವೆ. 1996ರಲ್ಲಿ 994 ರಾಬರಿಗಳಾಗಿದ್ದರೆ, ಕೇವಲ 3 ತಿಂಗಳಲ್ಲಿ 495 ನಡೆದಿವೆ. ಅದೇ ರೀತಿಯಾಗಿ, 9,210 ಬರ್ಗ್ಲರಿಗಳಾಗಿದ್ದರೆ, ಈ 3 ತಿಂಗಳಲ್ಲಿ 3,601 ಪ್ರಕರಣಗಳು ನಡೆದಿವೆ. ಅಂದರೆ, ಇದು ನೀವು ಈ ಫಿಗರ್ಸ್ ನೋಡಿದರೆ, ಈ 3 ತಿಂಗಳಲ್ಲಿ ಮತ್ತು ವರ್ಷಪೂರಾ ಫಿಗರ್ಸ್ ನೋಡಿದಾಗ, crimes are increasing ಕೆಲವು ರಿಪೋರ್ಟ್ ಆಗದಿರಬಹುದು ಅಥವಾ ನಾಳೆ ಅಂಕಿಅಂಶವನ್ನು ನೀವು, ತಿದ್ದುಪಡಿ ಮಾಡಿಕೊಂಡು ಕಡಿಮೆ ಎಂದು ಹೇಳಬಹುದು. ಆದರೆ, ಒಂದು ಮಾತನ್ನು ನಾವೆಲ್ಲರೂ ಒಪ್ಪಲೇಬೇಕಾಗುತ್ತದೆ. ನೀವು ಕೊಟ್ಟ ಅಥೆಂಟಿಕೇಟ್ ರಿಪೋರ್ಟ್ ಮೇಲೆಯೇ ನಾನು ಹೇಳುತ್ತಿದ್ದೇನೆ. ನಿಮ್ಮ ಇಲಾಖಾವತಿಯಿಂದ ಏನೊಂದು ರಿಪೋರ್ಟ್ ಪಬ್ಲಿಶ್ ಮಾಡುತ್ತೀರಿ, ಆ ಪಬ್ಲಿಶ್ ಆದ ರಿಪೋರ್ಟ್ ಪ್ರಕಾರವೇ ನಾನು ಹೇಳುತ್ತಿದ್ದೇನೆ. ಇವತ್ತು ಇನ್‌ಕ್ರೀಸ್ ಆಗುತ್ತವೆ. ಏಕೆ ಇನ್‌ಕ್ರೀಸ್ ಆಗುತ್ತಿದೆ ? several reasons ಇರಬಹುದು, ಅನೇಕ ಬಾಂಬೆ ಜನ ಗೂಂಡಾಗಳು ಇಲ್ಲಿ ಬಂದಿರಬಹುದು, ಮಟ್ಕಾ ಇರಬಹುದು, ಸಿಂಗಲ್ ಡಿಜಿಟ್ ಲಾಟರಿ ಇರಬಹುದು, ಲಿಕ್ಕರ್ ಇವತ್ತು ಕುಡಿದು ತಿಂದು ಹೆಚ್ಚಿಗೆ ಹ್ಯೂಜ್ ಟ್ರಾಜಿಡಿ ಎಂದು ಇವತ್ತು ಎಕ್ಸೈಸ್‌ನವರು ಇದರಲ್ಲಿ ಇನ್‌ವಾಲ್ವ್ ಆಗಿರಬಹುದು, ಅನೇಕ ಕಾರಣಗಳಿರಬಹುದು. ಅದರೆ, ಬೆಳೆಯುತ್ತಿರತಕ್ಕ ಕ್ರೈಂ ರೇಟ್ ಏನಿದೆ, ಪ್ರತಿಯೊಂದು ಮರ್ಡರ್, ರೇಪ್ ಡಕಾಯಿತಿ, ಎಲ್ಲದರಲ್ಲೂ ಕೂಡ ಇವತ್ತು ನಾವು ಹೆಚ್ಚೆಚ್ಚು ನೋಡುತ್ತಿದ್ದೇವಲ್ಲಾ, ಇದನ್ನು ನಿಲ್ಲಿಸತಕ್ಕದ್ದು ಹೇಗೆ? ಏಕೆಂದರೆ, ಇದನ್ನು ನಾವು ನಿಲ್ಲಿಸದಿದ್ದರೆ, ರಾಜ್ಯದಲ್ಲಿ ಶಾಂತಿಯನ್ನಂತೂ ಕಾಪಾಡುವುದಕ್ಕಾಗುವುದಿಲ್ಲ. ಏಕೆಂದರೆ, ಕರ್ನಾಟಕ ರಾಜ್ಯ ಇದು ಶಾಂತಿಪ್ರಿಯ ರಾಜ್ಯ peaceful State ಎನ್ನತಕ್ಕ ಹೆಸರು ಇಲ್ಲಿಯವರೆಗೆ ಇದೆ. ಯಾರೇ ಮುಖ್ಯ ಮಂತ್ರಿಗಳು ಬಂದಿರಬಹುದು, ಸುಮಾರು ಸ್ವಾತಂತ್ರ್ಯ ಸಿಕ್ಕಿದಾಗಿನಿಂದ ಇಲ್ಲಿಯವರೆಗೆ, ಪ್ರಜಾಪ್ರಭುತ್ವ ಸ್ಥಾಪನೆ ಯಾದಂದಿನಿಂದ ನಾವು ಇಡೀ ಭಾರತ ದೇಶದ ಅಂಕಿ-ಅಂಶ ನೋಡಿದಾಗ, ಇದೊಂದು ಶಾಂತಿಯುತವಾದ ರಾಜ್ಯ, ಒಂದು ಒಳ್ಳೆಯ ಕಾನೂನು ವ್ಯವಸ್ಥೆ ಇದೆ ಮತ್ತು ಪೋಲೀಸರೂ ಕೂಡ ಒಳ್ಳೆಯ ಕೆಲಸ ಮಾಡುತ್ತಿದ್ದಾರೆನ್ನತಕ್ಕ ಹೆಸರಿದೆ. ಆದರೆ, ಇತ್ತೀಚೆಗೆ ಇಷೊಂದು ಹೆಚ್ಚಿನ ಮರ್ಡರ್ ಆಗತಕ್ಕ ಕಾರಣಗಳೇನು ? ಇಷ್ಟೊಂದು ಡಕಾಯಿಟಿ ಆಗಲು ಕಾರಣವೇನು ? ಇಷೊಂದು ರೇಪ್‌ಗಳಾಗಲು ಕಾರಣವೇನು ? ಇದನ್ನು ನೀವು ನಿಮ್ಮ ಸ್ಪೆಷಲ್ ಇಂಟೆಲಿಜನ್ಸ್ ಮುಖಾಂತರವಾಗಿ ಕಂಡುಹಿಡಿಯದೆ ಹೋದರೆ ಮತ್ತು ಇದಕ್ಕೊಂದು ರೆಮಿಡಿ ಕಂಡು ಹಿಡಿಯದೇ ಹೋದರೆ, ಖಂಡಿತವಾಗಿ ಇದು lawlessness ಕ್ರಿಯೇಟ್ ಆಗುತ್ತದೆ. ಯಾವ ರೀತಿ ಬಾಂಬೆಯಲ್ಲಿ ಇವತ್ತು ಹಾಡುಹಗಲೇ ಶ್ರೀಮಂತರಿಗೆ, ಕಲಾವಿದರಿಗೆ ಗುಂಡು ಹಾಕಿ ದುಡ್ಡನ್ನು ಎಕ್ಸ್‌ಟ್ರಾಕ್ಟ್ ಮಾಡತಕ್ಕದ್ದನ್ನು ಮಾಡುತ್ತಿದ್ದಾರೆ,

ಆ ಪದ್ಧತಿಯು ಈಗಾಗಲೇ ಇಲ್ಲಿ ಪ್ರಾರಂಭವಾಗಿದೆ. ಆದರೆ, ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತದೆ. ನಾಳೆ ನಿಮಗೂ, ನಮಗೂ ಸೆಕ್ಯುರಿಟಿ ಇರುವುದಿಲ್ಲ ಎನ್ನತಕ್ಕ ಮಾತನ್ನೂ ಕೂಡ ನಾನು ಸ್ಪಷ್ಟವಾಗಿ ತಮ್ಮ ಗಮನಕ್ಕೆ ತರುತ್ತೇನೆ. ಅದಕ್ಕಾಗಿ, ಈ ಅಂಕಿ ಸಂಖ್ಯೆ ನೋಡಿದಮೇಲೆ ತಮಗೆ ಖಂಡಿತವಾಗಿ ಮನವರಿಕೆಯಾಗಬೇಕು, ಲಾ ಅಂಡ್ ಆರ್ಡರ್ ಸ್ವಲ್ಪ ಬದಲಾವಣೆಯಾಗಿದೆ. ಏಕೆಂದರೆ ಆಡಳಿತ ಅಷ್ಟೊಂದು ಬಿಗಿ ಇಲ್ಲ ಆಡಳಿತ ಎನ್ನುವುದಕ್ಕೆ ಈ ಅಂಕಿಅಂಶವೇ ಸಾಕ್ಷಿ ಮತ್ತು ನೀವು ಕೊಟ್ಟ ಅಂಕಿಅಂಶವನ್ನು ನೋಡಿದರೆ ಅದರ ಮೇಲೆ ನಾವು ಸರ್ಕಾರ ಎಷ್ಟರಮಟ್ಟಿಗೆ ವಿಚಲಿತಗೊಂಡಿದೆ, ಎಷ್ಟು ಪ್ರಭಾವಶಾಲಿಯಾಗಿ ಕೆಲಸ ಮಾಡಬೇಕಾಗಿತ್ತೋ, ಆ ರೀತಿ ಮಾಡುತ್ತಿಲ್ಲವೆಂದು ಹೇಳಬಹುದು. ಇದು ಉದಾಹರಣೆ ಎನ್ನತಕ್ಕ ಮಾತನ್ನು ನಾನು ಇವತ್ತು ಹೇಳುತ್ತಿದ್ದೇನೆ. ಇದರ ಜೊತೆಯಲ್ಲಿ ಗ್ಯಾಂಗ್‌ವಾರ್ ಸಾಕಷ್ಟು ಆಗಿದೆ. ಏಪ್ರಿಲ್ 17ನೇ ತಾರೀಖಿಗೆ ಬಾಂಬೆ ಹಮೀದ್ one of the accused in the murder of koli Fayaz and the man who is supposedly masterminded the slain was done to death on the busy road by the gang of Tanveer.

5.30 ಪಿ.ಎಂ.

Another rowdy by nameMazoor who was also an accused in Fayaz murder was badly injured. ಗ್ಯಾಂಗ್‌ವಾರ್‌ಗಳು ಕರ್ನಾಟಕದಲ್ಲಿ ಸಹ ಪ್ರಾರಂಭವಾಗುತ್ತಿದೆ. ಡೆಲ್ಲಿಯಲ್ಲಿ ಏನು ಗ್ಯಾಂಗ್‌ವಾರ್ ನಡೆಯುತ್ತಿದೆ ಅದೇ ರೀತಿಯಲ್ಲಿ ಅದೇ ಮಾದರಿಯಲ್ಲಿ ಇವತ್ತು ನಮ್ಮಲ್ಲಿಯೂ ಕೂಡ ನಡೆಯುತ್ತಿದೆ. ಅದು ಶ್ರೀನಿವಾಸ್ ಕೇಸ್ ಇರಬಹುದು. 1ನೇ ಜುಲೈ 1997. Seena alias Srinivas a rowdy sheeted associate of sridhar. an underworld goon, who is virtually ruling the Bangalore underworld currently was brutally murdered by hired killers of Muthappa Rai. ಅದೇ ರೀತಿಯಲ್ಲಿ ಜುಲೈ 15-1997ರಲ್ಲಿ Three persons shot at a businessman while he was taking morning walk in Koramangala ಇದರ ಬಗ್ಗೆ ನಮ್ಮ ಪೋಲೀಸಿನವರು ಏನೋ ಬಹಳ ಸಾಹಸ ಮಾಡಿ ಅವನನ್ನು ಬಿಡಿಸಿಕೊಂಡರು. ಯಾವುದು ಒಳ್ಳೆಯ ಕೆಲಸ ನಮ್ಮ ಪೋಲೀಸಿನವರು ಮಾಡಿದರು ಅದರ ಬಗ್ಗೆ ನಾವು ಮೆಚ್ಚುಗೆಯನ್ನು ಸೂಚಿಸೋಣ. ಅನೇಕ ಜನ ಅಂಡರ್‌ಗ್ರೌಂಡ್ ವರ್ಲ್ಡ್‌ನಿಂದ ಇಲ್ಲಿ ಬಂದು ದಾಂದಲೆ ಮಾಡುತ್ತಿದ್ದಾರೆ. ಖೂನಿಗಳು ಏನು ಮಾಡುತ್ತಿದ್ದಾರೆ, ಆಸ್ತಿ ಲೂಟಿಗಳು ಏನು ಮಾಡುತ್ತಿದ್ದಾರೆ ಅನೇಕ ಜನ ಎಸ್ಟೇಟ್ ಎಜೆನ್ಸಿ ಮಾಡತಕ್ಕಂಥವರಿಗೆ ಎದುರಿಸತಕ್ಕಂಥಾದ್ದು ಒಂದು, ಇನ್ನೂ ಕೆಲವು ಕಡೆ ಅದೇ ವ್ಯವಹಾರಕ್ಕೆ ಅವರೇ ಇಳಿದು, ಬಡವರನ್ನು ಹೆದರಿಸಿ ಅಥವಾ ಯಾರ ಕೈಯಲ್ಲಿ ಆಗುವುದಿಲ್ಲ, ಅವನು ಶ್ರೀಮಂತ ಇರಬಹುದು, ಆದರೆ ಅವನು ತನ್ನ ಮರ್ಯಾದೆಗೆ ಹೆದರಿಕೊಂಡು ಮನೆಯಲ್ಲಿರುತ್ತಾನೆ. ಅಂತಹವರಿಗೆ ಹೆದರಿಸಿಕೊಂಡು ದುಡ್ಡನ್ನು ದೋಚಿಕೊಳ್ಳಬೇಕು, ಆಸ್ತಿ ದೋಚಿಕೊಳ್ಳಬೇಕು ಅಥವಾ ಅವನಿಗೆ ಹೆದರಿಸಿಕೊಂಡು ಆ ಆಸ್ತಿಯನ್ನು ತಮ್ಮ ಹೆಸರಿನಲ್ಲಿ ಮಡಿಸಿಕೊಳ್ಳಬೇಕೆಂದು ಅನೇಕ ಜನ ಇಂತಹ ಗುಂಡಾಗಳು ಪ್ರಯತ್ನ ಮಾಡುತ್ತಿದ್ದಾರೆ. ಇದರ ಬಗ್ಗೆ ಕೂಡ ನಾವು ಕಟ್ಟುನಿಟ್ಟಿನ ಕ್ರಮವನ್ನು

ತೆಗೆದುಕೊಳ್ಳದೇ ಹೋದರೆ ಸುಮ್ಮನೇ ನೀವು ನಾವು ಎಲ್ಲಾ ಕ್ರಮ ಹಾಕಿಕೊಂಡಿದ್ದೇವೆ. 50 ಹೊಸ ವ್ಯಾನುಗಳು ತಂದಿದ್ದೇವೆ. ಕೂನಿಗಳು, ಡಕಾಯಿತಿ, ಅಥವಾ ಕಳ್ಳತನ ಇಂಥಾದ್ದು ಏನಾದರೂ ಆದರೆ ತಕ್ಷಣ ಫೋನ್ ಮಾಡಬೇಕು, ಅವರು ತಕ್ಷಣ ಬರುತ್ತಾರೆ ಎನ್ನತಕ್ಕಂಥ ಮಾತು ಹೇಳಿದರು. ಇಷ್ಟೆಲ್ಲಾ ಇದ್ದರೂ ಇವತ್ತು ಇಷ್ಟೊಂದು ಜನ ರೌಡಿಗಳು ಜೀವಂತ ಇದ್ದು ಇನ್ನೂ ಕೆಲಸ ಮಾಡುತ್ತಿದ್ದಾರೆ ಅಂದಾಗ ಎಲ್ಲೋ ನಾವು ಎಡವಿದ್ದೇವೆ, ಎಲ್ಲೋ ತಪ್ಪು ಆಗುತ್ತಿದೆ ಇದನ್ನು ಸರಿ ಮಾಡಿಕೊಳ್ಳುವುದಕ್ಕೆ ತಾವು ಏನು ಕ್ರಮ ಜರುಗಿಸಿದ್ದೀರಿ ಎನ್ನತಕ್ಕಂಥ ಮಾತನ್ನು ತಾವು ತಮ್ಮ ಉತ್ತರದಲ್ಲಿ ಸ್ಪಷ್ಟಪಡಿಸಬೇಕು. ಮೊನ್ನೆಯ ದಿವಸ ಸ್ವಲ್ಪ ಆವೇಶದಿಂದ ಮಾತನಾಡಿ ಎಲ್ಲಾ ಹೆಣ್ಣು ಮಕ್ಕಳು ರಕ್ಷಣೆಗೆ ಬಂದು, ಅವರಿಗೆ ಶಿಕ್ಷೆ ಮಾಡಬೇಕು ಅದು ಮಾಡಬೇಕು ಎಂದು ಹೇಳಿದ್ದೀರಿ. ಆದರೆ ನಾನು ಇವತ್ತು ತಮ್ಮನ್ನು ಕೇಳುತ್ತಿದ್ದೇನೆ, ಏಷಿಯನ್ ಏಜ್ ಮೇಲೆ, ಪತ್ರಕರ್ತನ ಕೊಲೆ, ಗುಂಡ್ಲುಪೇಟೆಯಲ್ಲಿ ಆಯಿತು, ಅದರ ಬಗ್ಗೆ ತಾವು ಏನಾದರೂ ಕ್ರಮ ಜರುಗಿಸಿರಬೇಕಲ್ಲ. ಎಲ್ಲಿ ಒಂದು ಕಡೆ ಅನ್ಯಾಯವಾಗುತ್ತದೆ, ಆ ನ್ಯಾಯವನ್ನು ತಕ್ಷಣ ಸರಿಪಡಿಸಬೇಕು ಅಂದರೆ ತಕ್ಷಣವೇ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇದರ ಬಗ್ಗೆ ನಾವು ಸಾಕಷ್ಟು ಕೇಳಿದೆವು ಇದರ ಬಗ್ಗೆವಿಚಾರಣೆ ಮಾಡಿಸಿ ಎಂದು ಏಕೆಂದರೆ ಅದರಲ್ಲೂ ಕೂಡ ಕೆಲವು ರಾಜಕೀಯ ವ್ಯಕ್ತಿಗಳು ಇದ್ದಾರೆ. ಪ್ರಭಾವಶಾಲಿ ವ್ಯಕ್ತಿಗಳು ಇದ್ದಾರೆ, ದಯವಿಟ್ಟು ತಾವು ಅವರ ಪ್ರಭಾವಕ್ಕೆ ಒಳಗಾಗದೆ ನಿಷ್ಪಕ್ಷಪಾತವಾದ ವಿಚಾರಣೆ ನಡೆಯಬೇಕಾದರೆ ಇದನ್ನು ತಾವು ಸಿ.ಬಿ.ಐ.ಗೆ ವಹಿಸಿ ಎಂದು ಕೇಳಿದೆವು. ಆದರೆ ಆ ಪತ್ರಕರ್ತನ ಕೊಲೆ ಏನು ಆಗಿತ್ತು, ಅದರ ಬಗ್ಗೆ ತಾವು ಸಿ.ಬಿ.ಐ.ಗೆ ಒಪ್ಪಿಸಲು ತಾವು ಒಪ್ಪಲಿಲ್ಲ. ಮತ್ತು ಏಷಿಯನ್ ಏಜ್ ಪತ್ರಿಕೆ ಮೇಲೆ ಏನು ಅಟ್ಯಾಕ್ ಆಗಿತ್ತು ಇವೆರಡನ್ನು ಸೇರಿಸಿ ಸಿ.ಬಿ.ಐ. ತನಿಖೆ ಮಾಡಿಸಿ ಎಂದು ಕೇಳಿದೆವು ಅದಕ್ಕೂ ತಾವು ಒಪ್ಪಲಿಲ್ಲ. ಇವತ್ತು ಏನಾಗಿದೆ ಅಂದರೆ ಒಂದು ಕಡೆ ತಾವು ಹೇಳುತ್ತೀರಿ, ನಾವು ಹೇಳುತ್ತೇವೆ ಆದಷ್ಟು ರಕ್ಷಣೆ ಮಾಡಬೇಕು, ಕಾನೂನು ವ್ಯವಸ್ಥೆ ಸರಿ ಇರಬೇಕೆಂದು ಹೇಳುತ್ತೇವೆ, ಕಾನೂನು ರಕ್ಷಣೆ ಮಾಡತಕ್ಕಂಥ ಒಂದು ಅಧಿಕಾರ ನಿಮಗೆ ಬಂದಾಗ ತಕ್ಷಣ ಕಾರ್ಯಕ್ರಮ ಏಕೆ ಜರುಗಿಸುತ್ತಿಲ್ಲ ಎನ್ನತಕ್ಕಂಥಾದ್ದನ್ನು ನಾನು ಕೇಳಬೇಕಾಗಿದೆ.45 ವರ್ಷದ ಸತ್ಯನಾರಾಯಣ ಅವನ ಕೊಲೆ ಏನಾಯಿತು, ಅದರ ಬಗ್ಗೆ ತಾವು ಸೀರಿಯಸ್ ಆಗಿ ಕ್ರಮ ತೆಗೆದುಕೊಳ್ಳಬೇಕು. ಮತ್ತು ಅವರಿಗೆ ಇದುವರೆಗೂ ಪರಿಹಾರ ಕೊಟ್ಟಿಲ್ಲ. ಅವರಿಗೆ ಪರಿಹಾರ ಕೊಡುತ್ತೇವೆ ಎನ್ನತಕ್ಕಂಥ ಮಾತನ್ನು ತಾವು ಈ ಸದನದಲ್ಲಿ ಹೇಳಿದಿರಿ. ಆದರೆ ಆ ಪರಿಹಾರ ಕೂಡ ಅವರಿಗೆ ಇದುವರೆಗೂ ತಲುಪಿಲ್ಲ. ಆದರೆ ನಿಷ್ಪಕ್ಷಪಾತವಾದ ವಿಚಾರಣೆಯನ್ನು ಮಾಡುವುದಕ್ಕೆ ತಾವು ಈಗಲಾದರೂ ಸಿ.ಬಿ.ಐ.ಗೆ ಕಳುಹಿಸುತ್ತೀರಿ ಎನ್ನತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಕೇಳುತ್ತೇನೆ. ನಾನು ಹೆಚ್ಚು ಸಮಯ ತೆಗೆದುಕೊಳ್ಳದೇ ಕೊನೆಯದಾಗಿ ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲೆ ಮತ್ತು ಅನೇಕ ಕಡೆ ಹಲ್ಲೆಗಳು ಆಗುತ್ತಿವೆ. ಅದು ಆಳಂದ್ ತಾಲ್ಲೂಕು, ಪಂಚಾಯತಿ ಅಧ್ಯಕ್ಷನಾದ ಶ್ರೀ ದತ್ತಪ್ಪ ಬಸಪ್ಪ ದೊಡ್ಡಮನೆ ಇರಬಹುದು ಹಡುಗಲಿ ಗ್ರಾಮಪಂಚಾಯತಿ. ಅಥವಾ ಮೈಲಪ್ಪ ಸಮಾಜ ಸೇವಕ. ಸಮಾಜ ಕಾರ್ಯಕರ್ತ ನಮ್ಮ ಸೇಡಂ ತಾಲ್ಲೂಕ್ ವ್ಯಕ್ತಿ ಇರಬಹುದು. ಅಥವಾ ಉದ್ಬೂರಿನಲ್ಲಿ ರತಕ್ಕಂಥ ದಲಿತ ಜನಾಂಗದ ಮೇಲೆ ಏನು ಅನ್ಯಾಯ ಆಯಿತು, ಆ ಜನ ಇರಬಹುದು. ಶಹಪೂರ್‌ನಲ್ಲಿ ಒಂದು ಸಣ್ಣ ಘಟನೆ ನಡೆಯಿತು

ಎಂದು ತಿಳಿದುಕೊಂಡು ಇಡೀ ಹರಿಜನ ಕಾಲೋನಿಯನ್ನೇ ಬಹಿಷ್ಕಾರ ಮಾಡತಕ್ಕಂಥಾದ್ದು ಲಕ್ಷಾಂತರ ರೂಪಾಯಿ ಆಸ್ತಿಪಾಸ್ತಿಯನ್ನು ಹಾಳು ಮಾಡತಕ್ಕಂಥ ಘಟನೆಗಳು ಇರಬಹುದು, ಈ ರೀತಿ ಅನೇಕ ಘಟನೆಗಳು ಇವೆ. ನಾನು ಅವೆಲ್ಲವನ್ನೂ ಬಿಚ್ಚಿ ಬಿಚ್ಚಿ ಹೇಳುವುದಿಲ್ಲ. ಅದರಲ್ಲಿ ಪ್ರಮುಖವಾದ 2-3 ಕೊಲೆಗಳು, ಮತ್ತು 2-3 ಕಡೆ ಆಗಿರುವ ಲೂಟಿ. ಈಗ ಉದ್ಬೂರು ಬಗ್ಗೆ ತಮಗೆ ಗೊತ್ತಿರಬಹುದು, ಮಾನ್ಯ ಸಿದ್ಧರಾಮಯ್ಯನವರಿಗೆ ಗೊತ್ತು. ಒಂದು ಹರಿಜನರ ಕಾಲೋನಿಯಲ್ಲಿ ಅಂಬೇಡ್ಕರ್ ನಗರ ಎಂದು ಬೋರ್ಡ್‌ಬರೆದು ಹಚ್ಚುವುದು ತಪ್ಪು ಅಂದ್ರೆ, ಯಾವ ರೀತಿಯಾಗಿ ಅವರು ತಮ್ಮ ಜೀವನ ಮಾಡಬೇಕು? ಆ ಜನ ಹೋಗಿ ಏನಾದರೂ ಅನ್ಯಾಯ ಮಾಡಿದ್ದರೆ, ಏನಾದರೂ ದಬ್ಬಾಳಿಕೆ ಮಾಡಿದ್ದರೆ ಏನಾದರೂ ಕಾನೂನು ಬಾಹಿರವಾದ ಕೃತ್ಯ ಮಾಡಿದ್ದರೆ, ಅವರು ಸರಿ ಇರಲಿಲ್ಲ ಅದಕ್ಕೆ ಆ ಜನರಿಗೆ ಪಾಠ ಕಲಿಸುವುದಕ್ಕೆ ಮಾಡಿದ್ದಾರೆ ಅಂದ್ರೆ ನಾನು ಒಪ್ಪಿಕೊಳ್ಳುತ್ತೇನೆ. ಅವರ ಜಾಗದಲ್ಲಿ, ಅವರ ಅಂಗನವಾಡಿ ಕಟ್ಟಡ ಇರತಕ್ಕಂಥ ಜಾಗದಲ್ಲಿ ಒಂದು ಬೋರ್ಡ್ ಹಾಕಿ ಅವರ ಓಣಿಗೆ ಅಂಬೇಡ್ಕರ್ ನಗರ ಎಂದು ಮಾಡಬೇಕು ಎಂದು ಹೇಳಿ, ಒಂದು ನಾಮ ಫಲಕವನ್ನು ಹಾಕಿದರೆ ಇಡೀ ಊರಿನ ಜನ ನೀವು ಈ ಫಲಕ ಹಾಕಬಾರದು ಎಂದು ಹೇಳಿ, ಆ ನಾಮಫಲಕವನ್ನು ಕಿತ್ತು ಬಿಸಾಕಿ ಆ ಜನಗಳ ಮನೆಗಳನ್ನು ಹಾಳು ಮಾಡಿ ಲೂಟಿ ಮಾಡಿ ಸುಟ್ಟು ಅವರನ್ನು ಹೊಡೆದು ಓಡಿಸಬೇಕು ಅಂದ್ರೆ ಇದು ಯಾವ ಸೌಜನ್ಯ, ಇದು ಯಾವ ಸಿವಿಲೈಜೇಶನ್? ನಾನು ಏಕೆ ಈ ಮಾತು ಹೇಳುತ್ತಿದ್ದೇನೆಂದರೆ ಸರ್ಕಾರ ಸಹಾಯ ಮಾಡುವುದು ಬಿಡುವುದು ಅದು ಬೇರೆ ಮಾತು ಅದು ಆರ್ಥಿಕವಾಗಿ. ಆದರೆ ಮಾನಸಿಕವಾಗಿ, ಸಾಮಾಜಿಕವಾಗಿ ಅವರು ಯಾವ ರೀತಿ ಒಂದು ಹಿಂಸೆ ಈ ಸಮಾಜ ಕೊಡುತ್ತಿದೆ ಎನ್ನತಕ್ಕಂಥಾದ್ದೇ ನನಗೆ ಅರ್ಥವಾಗುತ್ತಿಲ್ಲ. ಇನ್ನು ಅದೇ ರೀತಿಯಾಗಿ ಮೆನ್ನೆ ತಾವು ಕೂಡ ಕಂಡಮ್ ಮಾಡಿದ್ದೀರಿ. ಶಹಪೂರ ಘಟನೆ ಬಗ್ಗೆ. ಒಬ್ಬ ಪಿ.ಯು.ಸಿ. ವಿದ್ಯಾರ್ಥಿ. ಇನ್ನೊಬ್ಬ ಪಿಯುಸಿ ವಿದ್ಯಾರ್ಥಿನಿ. ಸಾಮಾನ್ಯವಾಗಿ ವಿದ್ಯಾರ್ಥಿಗಳಲ್ಲಿ, ವಿದ್ಯಾರ್ಥಿ ಎನ್ನುವುದು ಒಂದೇ ಜಾತಿ. ಆದರೆ ಈ ರೀತಿ ಅವರು ಟ್ರೀಟ್ ಮಾಡಲಿಲ್ಲ. ಸಮಾಜದ ಜನ ಬಹುಸಂಖ್ಯಾತರು ಸೇರಿ, ಓಹೋ ಏನೋ ಇದು ಬೇರೆ ವಿಷಯ ಇದೆ ಎಂದು ತಿಳಿದುಕೊಂಡು ಅವನು ಪರಿಶಿಷ್ಟ ಜಾತಿಯ ಹುಡುಗ ಹೇಗೆ ಮಾಡಿದ. ಎಂದು ತಿಳಿದುಕೊಂಡು ನೂರಾರು ಕೇಸಸ್, ಅತ್ಯಾಚಾರ ಅಥವಾ ಚುಡಾಯಿಸತಕ್ಕಂಥಾದ್ದು ಪೋಲೀಸ್ ಆ್ಯಕ್ಟ್‌ನಲ್ಲಿ ಇಂತಹ ಕೇಸ್‌ಗಳು ನೂರಾರು ಹಾಕಬಹುದು, ಅಂಥಾದ್ದು ಆಗುತ್ತದೆ. ಆದರೆ, ಯಾರು ತಪ್ಪು ಮಾಡಿದ್ದಾರೆ ಅವರಿಗೆ ಶಿಕ್ಷೆ ಕೊಡಿ. ಆಗ ಯಾವ ಸಮಾಜದ ಮುಖಂಡರು ಸಹ ಒಂದು ಇದು ಸರಿ ಇದೆ ಎಂದು ಹೇಳುವುದಿಲ್ಲ. ತಪ್ಪು ಮಾಡಿದವರಿಗೆ ಶಿಕ್ಷೆ ಆಗಲೇಬೇಕು. ಪೋಲೀಸಿನವರು ಇದ್ದಾರೆ. ಕೋರ್ಟ್ ಇದೆ. ಆದರೆ ಅವರೇ ಕಾನೂನನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಯಾವ ಜನ ತಪ್ಪೇ ಮಾಡಿಲ್ಲ ಅವರ ಮನೆ ಮನೆಗೆ ಹೋಗಿ ಅವರ ಮನೆಗಳನ್ನು ಸುಡತಕ್ಕಂಥಾದ್ದು, ಅವರ ಆಟೋಗಳನ್ನು ಸುಡತಕ್ಕಂಥಾದ್ದು ಅವರ ಅಂಗಡಿಗಳನ್ನು ಸುಡತಕ್ಕಂಥಾದ್ದು, ಅದು ಅಲ್ಲದೇ ಜನ ಅಲ್ಲಿ ಹೋಗಿ ಸಮಾಧಾನ ಮಾಡಿತಕ್ಕಂಥಾದ್ದು ಬಿಟ್ಟು, ಅಲ್ಲಿನ ಮುಖಂಡರು ಹೋಗಿ ಪ್ರಚೋದನೆ ಮಾಡಿದರೆ ಯಾವ ರೀತಿಯಾಗ ಬದುಕಬೇಕು ಅವರು ಹೇಳಿ. ಏನು ಅವರು ಅದರಲ್ಲಿ ಹುಟ್ಟಿದ್ದೇ ತಪ್ಪಾ? ಅವನು ಮಲ್ಲಪ್ಪ ಹೋಗಿ ಮಾಟ್ರಿನ್ ಆದರೆ ಅವನಿಗೆ ನೀವು

ಸಲಾಮ್ ಹೊಡೆಯುತ್ತೀರಿ. ಮಲ್ಲಪ್ಪ ಹೋಗಿ ಮಹಮದ್ ಆದರೆ ಅವನಿಗೆ ಸಲಾಮ್ ಹೊಡೆಯುತ್ತೀರಿ. ನಾನು ಮಲ್ಲಪ್ಪ ನಿಮ್ಮವನೇ ಅಂದರೆ ಅವನಿಗೆ ಹೋಗಲೇ ಎಂದು ಹೇಳಿ ಅವನ ಮನೆ ಸುಡುತ್ತೀರಿ. ಇದು ಯಾವ ನ್ಯಾಯ? ಮತ್ತು ತಾವು ಹೇಳುತ್ತಿದ್ದೀರಿ. ಬಹಳ ಆಯಿತಪ್ಪ ಷೆಡ್ಯೂಲ್ಡ್ ಕ್ಯಾಸ್ಟ್ ಕೇಸಸ್. ಏನಾಗಿದೆ ಷೆಡ್ಯೂಲ್ಡ್ ಕ್ಯಾಸ್ಟ್ ಕೇಸಸ್ ಎಷ್ಟಾಗಿದೆ? ಇವರು ರಿಜಿಸ್ಟರ್ ಮಾಡಿದ್ದು ಒಂದು ಸಾವಿರ ಕೇಸ್ ಇಲ್ಲ ಅಧ್ಯಕ್ಷರೇ? 5 ಕೋಟಿ ಜನಸಂಖ್ಯೆಯಲ್ಲಿ ಇವತ್ತು ಪರಿಶಿಷ್ಟ ಜಾತಿ ಮತ್ತು ಪಂಗಡದವರ ಮೇಲೆ ಆಗಿರುವ ಅಟ್ರಾಸಿಟಿ ಕೇಸಸ್ ಕೇವಲ 1 ಸಾವಿರ ಮಾತ್ರ. ಇದರಲ್ಲಿ 20 ಪರ್ಸೆಂಟ್ ಮಿಸ್ ಯೂಜ್ ಮಾಡಿದ್ದಾರೆ ಎಂದು ತಿಳಿದುಕೊಳ್ಳಿ. ಇನ್‌ವೆಸ್ಟಿಗೇಶನ್ ಮಾಡಿ ಕ್ಲೋಜ್ ಮಾಡಿ ಕೇಸಸ್. ಆದರೆ ಇದೇ ನೆಪದಲ್ಲಿ ನೀವು ಹೆರ್‍ಯಾಸ್‌ಮೆಂಟ್ ಮಾಡಿಕೊಂಡು ಪ್ರತಿ ಊರು ಊರಿಗೆ ಬೆಂಕಿ ಹಚ್ಚಿಬಿಟ್ಟಿದ್ದೀರಿ. ಅಲ್ಲಿ ಒಂದು ಕಡೆ ಕೊಲೆ ಇನ್ನೊಂದು ಕಡೆ ಕೊಲೆ. ಇನ್ನೊಂದು ಕಡೆ ಲೂಟಿ ಅಥವಾ ಇನ್ನೊಂದು ಕಡೆ ಯಾವುದೋ ಒಂದು ಮೆರವಣಿಗೆ ಮಾಡುತ್ತಾರೆ ಅಥವಾ ಜಯಂತಿ ಮಾಡುತ್ತಾರೆ ಅಂದ್ರೆ ಅಲ್ಲಿ ಹೊಡೆದಾಟ ಹೀಗಾಗಿ ಏನಾಗಿದೆ ಅಂದ್ರೆ ಹಿಂದುಸಮಾಜದಲ್ಲಿ ಇವತ್ತು ಭಾಗ ಮಾಡಿ, ಆಳತಕ್ಕಂಥ ಜನ ಇವತ್ತು ಬರುತ್ತಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಇವತ್ತು ಯಾರೋ ಒಬ್ಬ ಪರಿಶಿಷ್ಟ ಜಾತಿಯ ಮನುಷ್ಯ ಅವನು ಕ್ರಿಶ್ಚಿಯನ್ ಆದರೆ ಅವನಿಗೆ ಮರ್ಯಾದೆ ಸಿಗುವುದಿಲ್ಲವೇ? ನಿಮ್ಮ ಊರು ಬಿಟ್ಟು ಚೆನ್ನಗಿರಿಗೆ ಬಂದರೆ ಸಾಮಾನ್ಯವಾಗಿ ಅವನ ಮೂಲ ಏನು ಎಂದು ಯಾರು ಕೇಳುವುದಿಲ್ಲ. ಮಲ್ಲಪ್ಪ ಹೋಗಿ ಮಾರ್ಟಿನ್ ಎಂದು ಆದರೆ ಬನ್ನಿ ಬನ್ನಿ ಎಂದು ಸಲಾಮ್ ಹೊಡೆಯುತ್ತಾರೆ. ಮಲ್ಲಪ್ಪ ಬಂದು ನಾನು ನಿಮ್ಮವನೆ ಇದ್ದೀನಿ ಎಂದು ಹೇಳಿದರೆ ಎಲ್ಲರೂ ಹೊಡೆಯುತ್ತೀರಿ. ಅವನ ಮನೆ ಸುಡಲು ಹೋಗುತ್ತೀರಿ. ಈ ರೀತಿಯಾಗಿ ನಾವು ಸಮಾಜ ಕಟ್ಟತಕ್ಕಂಥ ಪ್ರಯತ್ನ ಮಾಡಿದರೆ ಮತ್ತು ಅವರಿಗೆ ರಕ್ಷಣೆ ಇಲ್ಲದೇ ಹೋದರೆ ಏನೋ ಅತಿ ಆಯಿತು. ನಾನು ಹುಟ್ಟಿಸಿ ಹೇಳುವಂತಹ ಕೇಸಸ್ ಅಲ್ಲ ನಿಮ್ಮ ಪೋಲೀಸ್‌ನವರೇ ತಮ್ಮ ವರದಿಯನ್ನು ಹೇಳಿದ್ದಾರೆ. ನೀವು ಅದರಲ್ಲಿ ಹೇಳಿದ್ದೀರಿ. ಎಷ್ಟು ಕೇಸಸ್ ರಿಜಿಸ್ಟರ್ ಆಗಿದೆ ಎನ್ನತಕ್ಕಂಥಾದ್ದರ ಬಗ್ಗೆ ಹೇಳಿದ್ದಾರೆ. 1995ರಲ್ಲಿ 1,121, 1996ರಲ್ಲಿ 1,164, ಈಗ ಮೂರು ತಿಂಗಳಲ್ಲಿ 500. ಇದರಲ್ಲಿ 100 ಬೋಗಸ್ ಇರಬಹುದು, 100 ಕೇಸ್ ಬೋಗಸ್ ಆದ ತಕ್ಷಣ ಇಡೀ ಜನ ಕೆಟ್ಟವರು ಆದರಾ? ಇದರ ಹಿಂದೆ ಮಾಡಿಸುವರೇ ಬೇರೆಯವರು ಇರುತ್ತಾರೆ. ಅವರವರ ಎನಿಮಿಟಿಯನ್ನು ಇವರ ಮುಖಾಂತರ ಮಾಡಿಸಿಕೊಳ್ಳತಕ್ಕಂಥ ಜನ ಬಹಳಷ್ಟು ಇದ್ದಾರೆ. ಅದನ್ನು ಕಂಡುಹಿಡಿದು ಪರಿಹಾರ ಕಂಡುಹಿಡಿಯಬೇಕೇ ಹೊರತು, ಎಲ್ಲರೂ ಒಗ್ಗಟ್ಟಾಗಿ ಅವರ ಮೇಲೆ ಬಿದ್ದರೆ ದೇಶ ಉಳಿಯುತ್ತದೆಯೇನೂ? ಇವತ್ತು ಅವರೂ ಪ್ರಜ್ಞಾವಂತರಾಗಿದ್ದಾರೆ, ಬುದ್ಧಿವಂತರಾಗಿದ್ದಾರೆ. ಅವರಲ್ಲಿ ಯಾರೋ ನಾಲ್ಕು ಜನ ತಪ್ಪು ಮಾಡಿದರೆ ಅವರಿಗೆ ಕಾನೂನಿನ ಪ್ರಕಾರ ಶಿಕ್ಷೆ ಕೊಡಿ. ಆದರೆ, ಇಡೀ ಅವರ ಸಮಾಜವನ್ನೇ, ಇಡೀ ಆ ಬಡ ಜನರನ್ನೇ ತುಳಿಯತಕ್ಕಂಥ ಸಂಚು ಮಾಡಿದರೆ ಹೇಗೆ? ಇದು ನನಗಂತೂ ಅರ್ಥವಾಗುತ್ತಿಲ್ಲ. ಯಾವಾಗ ಈ ಬ್ರದರ್‌ಹುಡ್ ಎನ್ನತಕ್ಕಂಥಾದ್ದು ಸಮಾಜದಲ್ಲಿ ಬರುತ್ತದೋ ಎಂದು ಗೊತ್ತಾಗುತ್ತಿಲ್ಲ. ಆದುದರಿಂದ, ಈ ಬಗ್ಗೆ ಗಮನ ಕೊಟ್ಟು ಅವರಲ್ಲಿ ಸಾಮಾಜಿಕ ಸಾಮರಸ್ಯವನ್ನು ತರುವುದಕ್ಕಾಗಿ ಸಂಬಂಧಪಟ್ಟ ಡೆಪ್ಯುಟಿ ಕಮೀಷನರ್‌ರವರು, ಎಸ್.ಸಿ.ಯವರು ಹಾಗೂ ಆ ಜಿಲ್ಲೆಯ ಇನ್‌ಚಾರ್ಜ್

ಮಿನಿಸ್ಟರ್ ಅವರು ಹೋಗಿ ಕೆಲಸ ಮಾಡಬೇಕು. ಜನರಲ್ಲಿ ಒಡಕು ಮೂಡಿಸುವಂಥ ಕೆಲಸ ಮಾಡುವುದನ್ನು ರಾಜಕೀಯವಾಗಿ ಮಾಡುವುದನ್ನು ಬಿಟ್ಟು ಅವರುಗಳಿಗೆ ಸಮಾಜಾಯಿಷಿ ಹೇಳಬೇಕು.

ಅಧ್ಯಕ್ಷರು : ಇದು ಬಹಳ ಸೆನ್ಸಿಟೀವ್ ವಿಷಯ. ಬಹಳ ಮುಖ್ಯಾವಾದ ವಿಷಯವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಇದನ್ನು ಮುಕ್ತವಾದ ಮನಸ್ಸಿನಿಂದ ಚರ್ಚೆ ಮಾಡಬೇಕು. ಅಟ್ರಾಸಿಟಿ ಆದಂಥ ಸಂದರ್ಭದಲ್ಲಿ ಮಿಸ್ ಅಪ್ಲಿಕೇಷನ್ ಆದಾಗ,

SRI. M. MALLIKARJUNA KHARGE : Sir, that's why I said, only 1000 cases are there.

ಅಧ್ಯಕ್ಷರು : ಮಿಸ್ ಅಪ್ಲಿಕೇಷನ್ ಆದಾಗ ಇನ್ನೋಸೆಂಟ್ ಜನರ ಮೇಲೆ ಕ್ಯುಮಿಲೆಟೀವ್ ಎಫೆಕ್ಟ್ ಬಹಳ ಜನರಿಗೆ ಆಗುತ್ತದೆ. ಪ್ರಾಮಾಣಿಕ ಜನತೆಯ ಮೇಲೆ ಅಟ್ರಾಸಿಟಿ ಆದಾಗ ಕಂಪ್ಲೇಂಟ್ ಕೊಟ್ಟರೆ ಪರವಾಗಿಲ್ಲ. ಈ ಕಂಪ್ಲೇನೆಂಟ್ಸೇ ಒಂದು ಪ್ರೊಫೆಷನಲ್ಸ್ ಆಗುತ್ತಿದ್ದಾರೆ. A section of people are taking advantage of this Act and are trying to implicate innocent people. ಜೆನಿಯನ್ ಆಗಿ ಆದರೆ ತೊಂದರೆ ಇರುವುದಿಲ್ಲ. ಕೆಲವು ಪ್ರೊಫೆಷನಲ್ಸ್ ಇದನ್ನು ಮಿಸ್‌ಯೂಸ್ ಮಾಡುತ್ತಿರುವುದರಿಂದ ಕೆಲವು ಕಡೆ the situation is getting aggravated.

SRI. M. MALLIKARJUNA KHARGE : Alright Sir, I do agree. But, how many cases? In the entire State, 52,000 villages, only 1,000 cases are registered. It means. ಹಂಡ್ರೆಡ್ ವಿಲೇಜ್‌ಗೆ 1 ಕೇಸ್ ಆಯಿತು, ಅಷ್ಟೂ ಆಗಲಿಲ್ಲ. ಅದಕ್ಕೆ ಇದನ್ನೇ ದೊಡ್ಡದು ಮಾಡುವುದು, ಇವರ ಮೇಲೆ ಅನ್ಯಾಯ ಮಾಡುವುದು ಯಾವ ನ್ಯಾಯ? ಅದರ ಬಗ್ಗೆ ಚಿಂತನೆಯೇ ಇಲ್ಲ. ಅಲ್ಲಿ ಹೋಗಿ ನೀವು ಮಾಡಿದ್ದೇ ಸರಿ ಎಂದು ಪ್ರಚೋದನೆ ಕೊಡುವುದು, ನಾವು ಈ ರೀತಿ ಹೇಳಲಿಲ್ಲವೆಂದರೆ ಮೆಜಾರಿಟಿ ಕಮ್ಯುನಿಟಿಯವರು ನಮ್ಮ ವಿರುದ್ಧವಾಗುತ್ತಾರೇನೋ, ಅಥವಾ ಶೆಡ್ಯುಲ್ಡ್ ಕ್ಯಾಸ್ಟ್‌ನವರಿಗೆ ಇದೇ ರೀತಿ ಹೇಳಬೇಕೇನೊ ಎನ್ನುವ ಭಾವನೆಯನ್ನು ಇಟ್ಟುಕೊಂಡು ಮಾಡಿದರೆ ಯಾವ ರೀತಿ ಸೋಶಿಯಲ್ ಜಸ್ಟೀಸ್ ಕೊಡುವುದಕ್ಕಾಗುತ್ತದೆ? ಯಾರು ಬಡವರು ಇರುತ್ತಾರೋ? ಯಾರು ನೊಂದವರು ಇರುತ್ತಾರೋ? ಅವರ ಪರವಾಗಿ ನಾವು ಇರಬೇಕೇ ಹೊರತು ಅವರ ವಿರುದ್ಧವಾಗಿ ಪ್ರಚೋದನೆ ಮಾಡುವುದು ಸರಿಯಲ್ಲವೆಂದು ನಾನು ಹೇಳುತ್ತೇನೆ. ಈ ರೀತಿಯ ಪ್ರಚೋದನೆ ಕೆಲಸವನ್ನು ಯಾರೇ ಮಾಡಲಿ, ಶಾಸಕರುಗಳೇ ಮಾಡಲಿ, ಮಂತ್ರಿಗಳೇ ಮಾಡಲಿ, ಅಧಿಕಾರಿಗಳೇ ಮಾಡಲಿ ಅವರುಗಳಿಗೆ ಕಟ್ಟುನಿಟ್ಟಿನ ಮತ್ತು ಖಡಾಖಂಡಿತವಾಗಿ ಸೂಚನೆ ಕೊಟ್ಟು ಆ ರೀತಿ ಕೆಲಸ ಮಾಡಬಾರದೆಂದು ತಿಳಿಸಬೇಕು. ನೊಂದವರಿಗೆ ಕಾನೂನು ರಕ್ಷಣೆ ಕೊಡತಕ್ಕಂಥ ಕೆಲಸವನ್ನು ಮೊದಲು ಮಾಡಬೇಕು. ಕಾನೂನು ವ್ಯವಸ್ಥೆಯನ್ನು ಸರಿಯಾಗಿ ಪಾಲಿಸದೇ ಇದ್ದರೆ ಅನೇಕ ಹಳ್ಳಿ ಮತ್ತು ತಾಲ್ಲೂಕುಗಳಲ್ಲಿ ಇಂಥಾ ದೊಂಬಿಗಳು ಆಗುವುದಕ್ಕೆ ಕಾರಣವಾಗುತ್ತದೆ. ಇದರಿಂದಾಗಿ ಎಲ್ಲರ ಮನಸ್ಸಿನಲ್ಲೂ ವೈಮನಸ್ಸು ಉಂಟಾಗಿ ಸಮಾಜದಲ್ಲಿ ಒಡಕಾಗುತ್ತದೆ. ಇದರಿಂದ ದೊಡ್ಡ ಹೇಟ್ರೆಡ್ ಉಂಟಾಗುತ್ತದೆ. ಈ ಹೇಟ್ರೆಡ್‌ನ್ನು ಹೋಗಲಾಡಿಸಬೇಕಾದರೆ ಒಬ್ಬರು ದೊಡ್ಡ ಸಂತರೇ

ಹುಟ್ಟಿಬರಬೇಕಾಗುತ್ತದೆ. ಸ್ವಾತಂತ್ರ ಬಂದು 50 ವರ್ಷಗಳಾದರೂ ಇದನ್ನು ಸರಿಮಾಡುವುದಕ್ಕಾಗಲಿಲ್ಲವೆಂದರೆ ಮುಂದೆ ಯಾವಾಗ ಮಾಡುವುದಕ್ಕಾಗುತ್ತದೆ? ಆದುದರಿಂದ, ಕಾನೂನನ್ನು ಬಿಗಿ ಮಾಡಿ ತಪ್ಪಿತಸ್ಥರಿಗೆ ಶಿಕ್ಷೆ ಮಾಡಬೇಕು. ಶೆಡ್ಯೂಲ್ಡ್ ಕ್ಯಾಸ್ಟ್‌ನವರು ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಕೊಡಿ ಬೇರೆ ಕ್ಯಾಸ್ಟಿನವರು ತಪ್ಪು ಮಾಡಿದರೆ ಅವರಿಗೆ ಶಿಕ್ಷೆ ಕೊಡಿ. ಇದರಲ್ಲಿ ಯಾವುದೇ ಧರ್ಮ, ಪಂಥ, ಮತ ಎಂದು ಹೇಳುವುದಿಲ್ಲ. ನಾನು ಏಕೆ ಈ ಮಾತನ್ನು ಹೇಳುತ್ತೇನೆಂದರೆ, ಇದರಲ್ಲಿ ಒಂದು ಸಂಚು ನಡೆದಿದೆ ಅದಕ್ಕಾಗಿ ನಾನು ಈ ಮಾತನ್ನು ಪ್ರಸ್ತಾಪ ಮಾಡಿದೆ. ಇದನ್ನು ಕಾನೂನಿನಿಂದ ಮಾಡುವುದ್ಕಕಾಗದೇ ಇರುವುದರಿಂದ, ಎಲ್ಲಾ ಮುಖಂಡರುಗಳನ್ನು ಮತ್ತು ಅಧಿಕಾರಿಗಳನ್ನು ಕೂಡಿಸಿಕೊಂಡು ಈ ಕೆಲಸ ಮಾಡಬೇಕಾಗುತ್ತದೆ. ಅದಕ್ಕಾಗಿ ಈ ಕೆಲಸವನ್ನು ಅವರು ಮಾಡುತ್ತಾರೆಂದು ನಾನು ನಂಬಿದ್ದೇನೆ. ಇವತ್ತು ನಾನು ಇರಿಗೇಷನ್, ಲಾ ಅಂಡ್ ಆರ್ಡರ್ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇನೆ ಅದರ ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಸಮರ್ಪಕವಾದ ಉತ್ತರವನ್ನು ಕೊಡಬೇಕೆಂದು ಕೇಳುತ್ತೇನೆ ಹಾಗೂ ಎಕ್ಸೈಸ್ ಡಿಪಾರ್ಟ್‌ಮೆಂಟ್ ವಿಷಯ ಮಾತನಾಡುವಂಥ ಸಂದರ್ಭದಲ್ಲಿ ಈ ಎಕ್ಸೈಸ್ ಡಿಪಾರ್ಟ್‌ಮೆಂಟಿನಲ್ಲಿ ದೊಡ್ಡ ಪ್ರಮಾಣದ ಲೀಕೇಜ್ ಆಗಿದೆ, ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕೆಂದು ಹೇಳಿದ್ದೇನೆ, ಡಿಪಾರ್ಟ್‌ಮೆಂಟ್ ಎನ್‌ಕ್ವೈರಿಗಿಂತಲೂ I prefer a Lokayuktha Enquiry, so that... ಈ ರೀತಿ ಸೋರತಕ್ಕಂಥಾದ್ದನ್ನು ನಿಲ್ಲಿಸತಕ್ಕಂಥ ಪ್ರಯತ್ನ ಮಾಡಬೇಕು. ಇಲ್ಲವೆಂದರೆ, ಅವರು ಏನು ಅಮೆಂಡ್‌ಮೆಂಟ್ ತಂದಿದ್ದಾರೋ ಅದನ್ನು ವಿತ್‌ಡ್ರಾ ಮಾಡಿಕೊಂಡು ಸರಿಪಡಿಸತಕ್ಕಂಥ ಕೆಲಸವಾದರೂ ಮಾಡಬೇಕೆಂದು ಹೇಳಿ ಈ ಅಟ್ರಾಸಿಟಿ ನಡೆದಿರತಕ್ಕಂಥ ಕೇಸ್ ಬಗ್ಗೆ ವಿಶೇಷ ಆಸಕ್ತಿಯನ್ನು ವಹಿಸಿ ಸರಿಪಡಿಸುತ್ತಾರೆಂದು ತಿಳಿದುಕೊಂಡು ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಅಧ್ಯಕ್ಷರೆ, ನಾನು ವ್ಯವಸಾಯ ಮತ್ತು ತೋಟಗಾರಿಕೆ ಇಲಾಖೆ ಬಗ್ಗೆ ಮಾತನಾಡಬೇಕೆಂದು ಬಯಸಿದ್ದೇನೆ. ಆದರೆ, ಆ ಇಲಾಖೆಯ ಮಂತ್ರಿಗಳೇ ಸದನದಲ್ಲಿ ಇಲ್ಲ. ಆದರೂ ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇರುವುದರಿಂದ ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಈ ಎರಡೂ ಖಾತೆಗಳು ಬಹಳ ಪ್ರಮುಖವಾದವೆಂದು ನನಗನಿಸುತ್ತದೆ. ಬೆಳೆಯುತ್ತಿರತಕ್ಕಂಥ ಜನ ಸಂಖ್ಯೆಗೆ ಊಟ, ಕಾರ್ಖಾನೆಗಳಿಗೆ ಕಚ್ಚಾವಸ್ತುಗಳು, ಮತ್ತು ಗ್ರಾಮೀಣ ಪ್ರದೇಶದ ಜನರಲ್ಲಿ ಶೇಕಡ 80 ಜನರಿಗೆ ಉದ್ಯೋಗವನ್ನು ಕೊಡತಕ್ಕಂಥ ದೊಡ್ಡ ಖಾತೆಗಳು ಇವಾಗಿವೆ. ಕೃಷಿ ಪ್ರಧಾನವಾದ ಈ ರಾಜ್ಯ ಅಭಿವೃದ್ಧಿಯಾಗಬೇಕಾದರೆ ಮೊದಲು ಕೃಷಿಯು ಅಭಿವೃದ್ಧಿಯಾಗಿ ಕೃಷಿಕನ ಕೈಗೆ ದುಡ್ಡು ಬರಬೇಕಾಗುತ್ತದೆ. ಇಲ್ಲಿ ವಿಚಿತ್ರವೇನೆಂದರೆ, ಹೆಚ್ಚು ದುಡಿದಷ್ಟು ಹೆಚ್ಚು ಬಡವನಾಗುವಂಥ ಮತ್ತು ಹೆಚ್ಚು ಉತ್ಪಾದನೆ ಮಾಡದಷ್ಟೂ ಹೆಚ್ಚು ಸಾಲಗಾರನಾಗುವಂಥ ಕ್ಷೇತ್ರ ಇದು. ಬಹಳ ವರ್ಷಗಳ ಹಿಂದೆ ಆಹಾರ ಪದಾರ್ಥಗಳನ್ನು ಆಮದು ಮಾಡಿಕೊಳ್ಳುವಂಥ ಕೆಟ್ಟ ಪರಿಸ್ಥಿತಿಯಲ್ಲಿ ನಮ್ಮ ದೇಶ ಇದ್ದಾಗ 'ಗ್ರೀನ್ ರೆವೆಲ್ಯೂಷನ್' ಎಂಬ ಘೋಷಣೆಯನ್ನು ಕೂಗಿ ರೈತರುಗಳಿಗೆ ಸಾಲ ಕೊಡಿಸಿ, ವಿದೇಶದಿಂದ ತರಿಸಿದ್ದ ಹೈ-ಬ್ರೀಡ್ ಬೀಜವನ್ನು ಕೊಡಿಸಿದರು, ಆ ಹೈಬ್ರಿಡ್ ಬೀಜವನ್ನು ಬಿತ್ತಿ ಬೆಳೆಯುವುದಕ್ಕೆ ಹೈ-ಬ್ರೀಡ್ ಗೊಬ್ಬರವನ್ನು ಕೊಡಿಸಿದರು, ಆ ಎರಡನ್ನು ಹಾಕಿ ಬೆಳೆದಾಗ ಹೈ-ಬ್ರೀಡ್ ರೋಗ ಬಂತು.

ಆ ಹೈ-ಬ್ರೀಡ್ ರೋಗವನ್ನು ಹೋಗಲಾಡಿಸಲು ಹೈ-ಬ್ರೀಡ್ ಔಷಧಿಯನ್ನು ಕೊಡಿಸಿದರು. ಇದರ ಪರಿಣಾಮವಾಗಿ ಬೆಳೆದಂಥ ವಿಷವಾಯಿತು. ಇವತ್ತು ತಾಯಿಯ ಮೊಲೆ ಹಾಲು ಕೂಡ ವಿಷವಾಗಿ ಬರುತ್ತಿದೆಯೆಂದು ಅನೇಕ ತಜ್ಞರು ಹೇಳುತ್ತಿದ್ದಾರೆ. ನಮಗೆ ದೂರದರ್ಶಿತ್ವ ಇಲ್ಲದೆ ವಿದೇಶಿಯರು ಹೇಳಿದ್ದಾರೆಂದು ಅವರ ಮೇಲೆ ಅವಲಂಬಿತರಾಗಿ ಕೃಷಿ ನೀತಿಯನ್ನು ಪರಿವರ್ತನೆ ಮಾಡಿರುವುದರಿಂದ ಬಹಳ ತೊಂದರೆಯಾಗಿದೆ. ನಮ್ಮ ಭೂಮಿಯನ್ನು ಮೇಲ್ಪದರದ 9 ಇಂಚಿನ ಆಳದವರೆಗೆ ಮಣ್ಣು ಸೂಕ್ಷ್ಮಾಣು ಜೀವಿಗಳ ಕ್ಷೇತ್ರವಾಗಿರುತ್ತದೆ. ಒಂದು ಇಂಚು ಮಣ್ಣು ಫಲವತ್ತಗಬೇಕಾದರೆ ಸಾವಿರಾರು ವರ್ಷಗಳು ಬೇಕಾಗುತ್ತದೆಂದು ಕೃಷಿ ತಜ್ಞರು ಹೇಳುತ್ತಾರೆ. ಅಂಥಾ ಫಲವತ್ತಾತೆಯನ್ನು ಇವತ್ತು ನಾವು ಹಾಳು ಮಾಡುತ್ತಿರುವುದನ್ನು ನೋಡಿದರೆ 'ಹಾಲು ಕರೆದು ಕುಡಿಯುವ ಬದಲು ಕೆಚ್ಚಲನ್ನೇ ಕೊಯ್ದು ಊಟ ಮಾಡುವಂಥ' ವ್ಯವಸ್ಥೆ ಮಾಡಲಾಗುತ್ತಿದೆಯೆಂದು ನನಗನಿಸುತ್ತದೆ. ಬಹಳ ಬೇಗ ಹೊಟ್ಟೆಯನ್ನು ತುಂಬಿಸಿಕೊಳ್ಳಬೇಕು, ಬಹಳ ಬೇಗ ಈ ದೇಶದ ಆಹಾರದ ಕೊರತೆಯನ್ನು ನೀಗಿಸಬೇಕೆಂದು ಮುಗ್ಧ ರೈತರುಗಳನ್ನು ಜೀತದಾಳುಗಳನ್ನಾಗಿ ಮಾಡಿ ಈ ದೇಶದಲ್ಲಿ ದುಡಿಸಿದ್ದೇವೆ. ಇದರ ಪರಿಣಾಮವಾಗಿ ರೈತರುಗಳು ಸಾಲಗಾರರಾಗಿದ್ದಾರೆ. ಇಡೀ ಗ್ರಾಮಾಂತರ ಜೀವನ ಬರಡಾಗುವಂತಹ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಮಣ್ಣಿನ ಸಂಪೂರ್ಣ ಫಲವತ್ತತೆಯನ್ನು ಕಳೆದುಕೊಂಡು ಇವತ್ತು ಮಣ್ಣನ್ನು ಕೂಡ ಕೊಳ್ಳುವಂತ ಒಂದು ವಿಚಿತ್ರ ಪರಿಸ್ಥಿತಿ ನಿರ್ಮಾಣವಾಗಿದೆ. ತಾವು ಶಿವಮೊಗ್ಗ ಹಾಗೂ ನೀರಾವರಿ ಇರುವಂತಹ ಪ್ರದೇಶಗಳಿಗೆ ಸಂಚಾರ ಮಾಡಿದರೆ ತಮಗೆ ತಿಳಿಯುತ್ತದೆ, ಬೇರೆಯವರ ಖುಷ್ಕಿ ಜಮೀನಲ್ಲಿ ಹೋಗಿ ಒಂದು ಟ್ರಾಕ್ಟರ್ ಮಣ್ಣು ಇಷ್ಟು ಬೆಲೆ ಎಂದು, ಅದನ್ನು ಕೊಂಡು ತಂದು ತಾವು ಬೆಳೆಯುವಂತಹ ಜಮೀನುಗಳಿಗೆ ಹಾಕುತ್ತಿದ್ದಾರೆ. ಈ ರೀತಿ ಮಣ್ಣನ್ನು ಕೊಂಡು ತಂದು ರೈತರು ಇವತ್ತು ಬೇಸಾಯ ಮಾಡಬೇಕಾಗಿದೆ. ಅಲ್ಲಿ ಏನನ್ನು ಬೆಳೆಯುವುದಕ್ಕೆ ಸಾಧ್ಯವಾಗುತ್ತಿಲ್ಲ. ಹೀಗಾಗಿ ಪರಾಂಪರಾಗತವಾಗಿ ಬೇಸಾಯವನ್ನು ಮಾಡಿ ಕೊಂಡು ಬಂದಿರತಕ್ಕಂಥ ರೈತ ಹೇಗೋ ಒಂದು ಹೊತ್ತು ಊಟ ಇರಲಿ ಬಿಡಲಿ ಒಂದು ರೀತಿಯಲ್ಲಿ ನೆಮ್ಮದಿಯನ್ನು ಕಾಣುತ್ತಿದ್ದ. ಇಂತಹ ನೆಮ್ಮದಿಯ ಬದುಕಿಗೆ ಗೊಂದಲ, ಅಶಾಂತಿ ಮಾಡುವಂತಹ ಒಂದು ಪ್ರಯತ್ನ ಈ ದೇಶದಲ್ಲಿ ನಡೆದಿದೆ. ಇಡೀ ಕೃಷಿ ಇಲಾಖೆಯ ಆಯವ್ಯಯದಲ್ಲಿ ಈ ವರ್ಷ 6 ಕೋಟಿ ರೂಪಾಯಿಗಳ ಯೋಜನೆಯಲ್ಲಿ ಕಡಿತವನ್ನು ಮಾಡಿದೆ. ವರ್ಷದಿಂದ ವರ್ಷಕ್ಕೆ ಯೋಜನೆಯಲ್ಲಿ ಹಣ ಹೆಚ್ಚು ಮಾಡಿಕೊಂಡು ಹೋಗಬೇಕಾಗಿದ್ದ ಕೃಷಿ ಇಲಾಖೆ ದುರದೃಷ್ಟಕರವಾದ ರೀತಿಯಲ್ಲಿ 6 ಕೋಟಿಗಿಂತ ಹೆಚ್ಚು ಹಣ ಕಡಿತವಾಗಿದೆ. ಈ ವಿಷಯವನ್ನು ತಾವು ಗಮನಿಸಿದಿರೋ ಇಲ್ಲವೋ ನನಗೆ ಗೊತ್ತಿಲ್ಲ. ಇತ್ತೀಚಿನ ದಿನಗಳಲ್ಲಿ ಇಡೀ ಇಲಾಖೆ ರೈತರಿಗೆ ಸಹಾಯ ಮಾಡುವುದರ ಬದಲು ಒಂದು ರೀತಿಯ ಕಿರುಕುಳ ಕೊಡುತ್ತಿದೆ ಎನ್ನುವಂತಹ ಭಾವನೆ ನಮಗೆ ಇದೆ.

ಅಧ್ಯಕ್ಷರು : ಭೂಮಿಯ ಸಾರಾಂಶದ ಬಗ್ಗೆ ನೀವು ಹೇಳುತ್ತಿರುವುದು, ನೈಟ್ರೋಜನ್ ಕಾಂಪನೆಂಟ್ಸ್ ರೆಡ್ಯೂಸ್ ಆಗುತ್ತಿದೆ ಎಂದು ಹೇಳಿದರು, ನೈಟ್ರೋಜನ್ ಸೈಕಲ್ ಎಫೆಕ್ಟ್ ಆಗಿದೆ, ಕಾಂಪೋಸ್ಟ್ ಯೂಸ್ ಮಾಡುತ್ತಿಲ್ಲವೆಂದು ಹೇಳಿದ್ದು, ಭೂಮಿಯ ಶಕ್ತಿ ಸಾರಜನಕದ ಅಂಶ ಕಡಿಮೆ ಯಾಗುತ್ತಿದೆ ಎಂದು ಹೇಳುತ್ತಾರೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅಧ್ಯಕ್ಷರೆ, ಅವರು ಹೇಳತಕ್ಕಂಥದ್ದು ಏನೆಂದರೆ ಅತಿ ಹೆಚ್ಚಿನ ರಾಸಾಯನಿಕ ಗೊಬ್ಬರಗಳನ್ನು ಉಪಯೋಗ ಮಾಡುವುದರಿಂದ ಭೂಮಿಯಲ್ಲಿರುವ ವಾಸ್ತವಿಕ ಫಲವತ್ತತೆ ಹೋಗುತ್ತದೆ ಅದರ ಜೊತೆಗೆ ಆ ಮಣ್ಣು ಕೂಡ ಹೈಬ್ರಿಡ್ ಮಣ್ಣಾಗುವುದರಿಂದ ಅದರಲ್ಲಿ ಬೆಳೆಯುವ ಬೆಳೆಯಲ್ಲಿ ಸರಿಯಾದ ಆರೋಗ್ಯಕರವಾದ ಆಹಾರವಾಗದೆ, ಅದು ಕೂಡ ಹೈಬ್ರಿಡ್ ಆಗಿ, ಪ್ರೊಟೀನ್ಸ್ ಕೂಡ ಕಡಿಮೆ ಆಗುತ್ತಿದೆ ಎಂದು ಹೇಳುತ್ತಾರೆ.

ಶ್ರೀ ಎ. ಟಿ. ರಾಮಸ್ವಾಮಿ : ಅಧ್ಯಕ್ಷರೆ, ಜ್ಞಾನೇಂದ್ರರವರು ಹೇಳಿದ ಹಾಗೆ ಮೇಲ್ಮೈ ಮಣ್ಣು ಏನಿದೆ ಅದು ಹೆಚ್ಚಿನ ಶಕ್ತಿಯುಳ್ಳದ್ದು, ಇಂತಹ ಮಣ್ಣನ್ನು ನಾವು ಒಂದು ಸಲ ಕಳೆದುಕೊಂಡರೆ ಪುನಃ ಅದನ್ನು ಪಡೆಯುವುದು ಕಷ್ಟ. ಅನೇಕ ಕಾರಣಗಳಿಂದ ಮೇಲ್ಮಣ್ಣನ್ನು ನಾವು ಕಳೆದುಕೊಳ್ಳುತ್ತೇವೆ. ಇದು ಹೆಚ್ಚಿನ ಮಳೆಯಾದಾಗ ಉಂಟಾಗುತ್ತದೆ. ಹೆಚ್ಚು ಮಳೆಯಾದಾಗ ಕಾಡು ಇದ್ದಾಗ ಆ ನೀರು ಭೂಮಿಯಲ್ಲಿ ಹಿಂಗಿಕೊಳ್ಳುತ್ತಿತ್ತು, ಈಗ ಕಾಡು ನಾಶವಾದಮೇಲೆ ಭೂಮಿಗೆ ಮಳೆ ಬಿದ್ದಾಗ ಬಿದ್ದಂತಹ ನೀರು ಭೂಮಿಯ ಮೇಲ್ಪದರವನ್ನು ಹೊತ್ತುಕೊಂಡು ಹೋಗುತ್ತದೆ. ಇದರಿಂದಾಗಿ ಮೇಲ್ಪದರದ ಮಣ್ಣು ನಾಶವಾಗುತ್ತದೆ. ಜ್ಞಾನೇಂದ್ರರವರು ಏನು ಹೇಳುತ್ತಾರೆಂದರೆ ಮೇಲ್ಪದರದ ಮಣ್ಣು ಏನು ಹೋಗುತ್ತದೆ ಅಲ್ಲಿ. ಹಿಂದೆ ಎರೆಹುಳುಗಳು ಇದ್ದವು. ಈ ಎರೆಹುಳುಗಳು ಭೂಮಿಯ ಮಣ್ಣನ್ನು ಲಘುವಾಗಿ ಇಡುತ್ತಿದ್ದವು ಭೂಮಿಯ ರಚನೆಯನ್ನು ಚೆನ್ನಾಗಿ ಇಡುತ್ತಿದ್ದವು, ಇದರ ಬಗ್ಗೆ ತಮಗೆ ಒಂದು ಉದಾಹರಣೆಯನ್ನು ಹೇಳಿದರೆ ನಿಮ್ಮ ಮನಸ್ಸಿಗೆ ಹೋಗುತ್ತದೆ ಎಂದು ನಾನು ಅಂದುಕೊಂಡಿದ್ದೇನೆ. ಹಿಂದೆ ದನದ ಗೊಬ್ಬರ, ಹಟ್ಟಿಯ ಗೊಬ್ಬರವನ್ನು ನಾವು ಉಪಯೋಗಿಸುತ್ತಿದ್ದೆವು.

ಅಧ್ಯಕ್ಷರು : ನಾನು ಅದನ್ನೇ ಹೇಳಿದ್ದುದು ಕಾಂಪೋಸ್ಟ್ ಮೆನ್ಯೂರ್ ಇಲ್ಲ ಎಂದು.

ಶ್ರೀ ಎ. ಟಿ. ರಾಮಸ್ವಾಮಿ : ಕಾಂಪೋಸ್ಟ್ ಗೊಬ್ಬರವನ್ನು ಉಪಯೋಗ ಮಾಡುವುದರಿಂದ ಭೂಮಿಯ ಸಾರ ಅಥವಾ ರಸ ಭೂಮಿಯಲ್ಲಿ ಬಹಳ ಕಾಲ ಉಳಿದುಕೊಳ್ಳುತ್ತದೆ. ಈ ವರ್ಷ ಒಂದು ಗಾಡಿ ಗೊಬ್ಬರವನ್ನು ಭೂಮಿಯಲ್ಲಿ ಹಾಕಿದರೆ ಮುಂದಿನ ವರ್ಷ ನಾವು ಬೆಳೆಯನ್ನು ನೋಡಿದರೆ ಗೊತ್ತಾಗುತ್ತದೆ ಏಕೆಂದರೆ ಒಂದು ಗಾಡಿಯ ಗೊಬ್ಬರ ಹಾಕಿದ ಆ ಭಾಗದಲ್ಲಿ ಭೂಮಿಯ ಮಣ್ಣಿನ ಫಲವತ್ತತೆ ಇನ್ನೂ ಉಳಿದುಕೊಂಡಿರುತ್ತದೆ. ಜೊತೆಗೆ ನೀರನ್ನು ಹಿಡಿದಿಟ್ಟುಕೊಳ್ಳುವ ಅಂಶ ಜಾಸ್ತಿಯಿರುತ್ತದೆ ಜೊತೆಗೆ ಮಣ್ಣಿನ ರಚನೆ ಕೂಡ ಚೆನ್ನಾಗಿದ್ದು ಭೂಮಿಯು ಲಘುವಾಗಿರುತ್ತದೆ, ಇದರಿಂದಾಗಿ ಬೆಳೆಯು ಹುಲುಸಾಗಿ ಬೆಳೆಯುತ್ತದೆ. ಕೆಮಿಕಲ್ ಗೊಬ್ಬರ ಉಪಯೋಗ ಮಾಡುವುದರಿಂದ ಏನಾಗುತ್ತದೆ ಎಂದರೆ. ನಮಗೆ ಕಾಯಿಲೆ ಬಂದಾಗ ಯಾವ ರೀತಿಯಲ್ಲಿ ಗ್ಲೊಕೋಸ್, ಟಾನಿಕ್ ಹೇಗೆ ಉಪಯೋಗ ಮಾಡುತ್ತೇವೆಯೋ ಆ ರೀತಿಯಲ್ಲಿ ಉಪಯೋಗ ಮಾಡಬೇಕೇ ಹೊರತು ಮಣ್ಣಿನ ಗೊಬ್ಬರ, ಕಾಂಪೋಸ್ಟ್ ಗೊಬ್ಬರವನ್ನು ಸಂಪೂರ್ಣವಾಗಿ ಬಿಟ್ಟು ಪೂರ್ಣವಾಗಿ ಸೀಮೆಗೊಬ್ಬರಕ್ಕೆ ಅಂಟಿಕೊಂಡು ಸುಲಭಕ್ಕೆ ಬಂದಿದ್ದೇವೆ. ಇದನ್ನು ಉಪಯೋಗಿಸಿದರೆ ಅವಮಾನ ಎನ್ನುವ ರೀತಿಯಲ್ಲಿ ನಾವು ಬಂದು ಬಿಟ್ಟಿದ್ದೇವೆ.

ಶ್ರೀ ಅರಗ ಜ್ಞಾನೆಂದ್ರ : ಅಧ್ಯಕ್ಷರೆ, ನಮ್ಮ ಕೃಷಿ ತಜ್ಞರು, ಸ್ವದೇಶಿ, ಸ್ವಾವಲಂಬಿ, ಸಾವಯವ ಕೃಷಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗಿತ್ತು. ಈ ರೀತಿ ಕೊಡದೇ ಇರುವ ಪರಿಣಾಮದಿಂದಾಗಿ ಬೇಕಾಬಿಟ್ಟಿಯಾಗಿ ರಸಾಯನಿಕ ಗೊಬ್ಬರಗಳನ್ನು, ಕ್ರಿಮಿ ನಾಶಕಗಳನ್ನು, ಉಪಯೋಗ ಮಾಡಿರುವುದರಿಂದ ಭೂಮಿಯ ಒಳಗಡೆ ಏನು ಫಲವತ್ತತೆ ಕಾಪಾಡಿಕೊಂಡು ಬಂದಿದ್ದರೋ ಅದು ಇಲ್ಲದ ಹಾಗೆ ಆಗಿದೆ ಫಲವತ್ತತೆಯ ಮಣ್ಣನ್ನು ಶ್ರೀಮಂತಗೊಳಿಸುವ ಬದಲು ನಮಗೆ ಬೆಳೆಯನ್ನು ಕೊಡುವುದರ ಜೊತೆಗೆ ಮಣ್ಣು ಕೂಡ ತನ್ನ ಫಲವತ್ತತೆಯನ್ನು ಕಳೆದುಕೊಂಡು ಬರಡಾಗಿದೆ. ಇಂತಹ ಒಂದು ಕೃಷಿ ನಾಶವಾಗಿ ಹೋಗಿದೆ. ಸಾಮಾನ್ಯ ಗ್ರಾಮೀಣದಲ್ಲಿರತಕ್ಕಂಥ ಅವಿದ್ಯಾವಂತ ರೈತರಿಗೆ ಗ್ರಾಮಸೇವಕರ ಮೂಲಕರಾಗಿ ಎಷ್ಟು ಹಾಕಬೇಕು, ಏನು ಇದು ಯಾವುದು ಗೊತ್ತಿಲ್ಲದ ಪರಿಸ್ಥಿತಿ ನಿರ್ಮಾಣವಾಗಿದೆ. ಸರಿಯಾದ ವಿಷಯ ತಿಳಿದುಕೊಳ್ಳದೆ ಎಲ್ಲರೂ ಡೆಮಕ್ರೂನ್, ಬಿಹೆಚ್‌ಸಿ ಸಿಂಪಡಿಸುತ್ತಾರೆ ಹಿಂದೆ ನಮ್ಮ ಪೂರ್ವಜರು ಗೋ ಆಧಾರಿತ ಕೃಷಿಯನ್ನು ಮಾಡಿಕೊಂಡು ಬರುತ್ತಿದ್ದರು, ಬೇಸಾಯದಲ್ಲಿ ಬೆಳೆದಂತಹ ಕಾಳು ನಮಗೆ, ಹುಲ್ಲು ಮಾತ್ರ ಗೋವುಗಳಿಗೆ, ಇದರಿಂದಾಗಿ ಹಸು ಹುಲ್ಲನ್ನು ತಿಂದು ಸಗಣಿಯನ್ನು ಹಾಕುವುದರಿಂದ ಅದು ಗೊಬ್ಬರವಾಗುತ್ತಿತ್ತು ಹೀಗೆ ಸೈಕಲ್ ರೀತಿಯಲ್ಲಿ ಉಂಟಾಗುತ್ತಿತ್ತು, ಇದರ ಆಧಾರದ ಮೇಲೆ ಕೃಷಿಯನ್ನು ಪೂರ್ವಜರು ಮಾಡುತ್ತಿದ್ದರು. ಇದರಿಂದಾಗಿ ನಾವು ಕೂಡ ನೆಮ್ಮದಿಯಿಂದ ಇರುವುದರ ಜೊತೆಗೆ ಮಣ್ಣಿನ ಫಲವತ್ತತೆಯನ್ನು ಕಾಪಾಡಿಕೊಂಡು ಬರುತ್ತಿದ್ದವು, ಆದರೆ ಈಗ ಈ ಎಲ್ಲವನ್ನು ಬಿಟ್ಟು ಬೇಕಾಬಿಟ್ಟಿಯಾಗಿ ಮಾಡುತ್ತಿರುವುದರಿಂದ, ಈಗ ಪುನಃ ನಾವು ಸಾವಯವ ಕೃಷಿಗೆ ಒಲವನ್ನು ತೋರಿಸದೆ ಹೋದರೆ ಬಹಳ ಆಘಾತಕಾರವಾದಂಥ ಪರಿಸ್ಥಿತಿ ನಿರ್ಮಾಣವಾಗುವ ಕಾಲ ಬರುತ್ತದೆ.

ಅಧ್ಯಕ್ಷರು : ಒಂದು ನಿಮಿಷ, ಸ್ವಲ್ಪ ದಯಮಾಡಿ ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಮಧ್ಯೆ ಮಾಡಿಕೊಳ್ಳುವ ಚರ್ಚೆಯನ್ನು ಸ್ವಲ್ಪ ಮೆಲುಧನಿಯಲ್ಲಿ ಮಾತನಾಡಿಕೊಂಡರೆ, ಇಲ್ಲಿ ಮಾತನಾಡುವವರ ಮಾತು ಕೇಳುತ್ತದೆ, ತಾವು ನೀವು ಎಲ್ಲರೂ ಚರ್ಚೆ ಒಟ್ಟಿಗೆ ಪ್ರಾರಂಭಿಸಿದರೆ ಸ್ವಲ್ಪ ಕಷ್ಟವಾಗುತ್ತದೆ, ಆದ್ದರಿಂದ ಸ್ವಲ್ಪ ಸಹಕರಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಹೀಗಾಗಿ ಸಾವಯವ ಕೃಷಿಗೆ ಹೆಚ್ಚಿನ ಒತ್ತನ್ನು ಕೊಡಬೇಕಾಗಿದೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಕೃಷಿ ಇಲಾಖೆಯವರು ಸಾವಯವ ಕೃಷಿ ಸಂಶೋಧನೆಯ ಬಗ್ಗೆ 1996-97ನೇ ಸಾಲಿಗೆ 50 ಲಕ್ಷ ರೂಪಾಯಿ ಹಣ ನಿಗದಿಪಡಿಸುವತ್ತಾರೆ, ಮಾಡುತ್ತಾರೆ. 1997-98ನೇ ಸಾಲಿಗೆ 40 ಲಕ್ಷ ರೂಪಾಯಿ ಹಣ ನಿಗದಿ ಮಾಡುತ್ತಾರೆ. ಇದು ಏನು ಅರ್ಥವಾಗದೆ ಗೊಂದಲಮಯ ವಾಗಿರುವುದರಿಂದ ಇದನ್ನು ಎಲ್ಲಿಗೆ ತೆಗೆದುಕೊಂಡು ಹೋಗಿ ಮುಟ್ಟಿಸುತ್ತಾರೋ ಎನ್ನುವ ಮಾತನ್ನು ಅವರು ಸ್ಪಷ್ಟಪಡಿಸಬೇಕಾಗುತ್ತದೆ. ಈ ಒಂದು ಆಯವ್ಯಯದಲ್ಲಿ ಏನಾಗಿದೆ ಎಂದರೆ, ಕೃಷಿಯ ಕಾರ್ಯವನ್ನು ಸುಗಮಗೊಳಿಸಬೇಕಾದಂಥ ಸಂಶೋಧನೆಯನ್ನು ನಗಣ್ಯ ಮಾಡತಕ್ಕಸ್ಥಿತಿ ನಿರ್ಮಾಣವಾಗಿದೆ. ನಮ್ಮ ರಾಜ್ಯದ ಬಹಳಷ್ಟು ಹಳ್ಳಿಗಳಲ್ಲಿ ಎಚ್ಚೆತ್ತಂಥ ಒಂದು ರೈತ ವರ್ಗದವರು ಸಾವಯವ ಕೃಷಿಯ ಬಗ್ಗೆ ತಮ್ಮದೆ ಆದಂಥ ಒಂದು ಸಂಶೋಧನೆಯನ್ನು ನಡೆಸುತ್ತಿದ್ದಾರೆ. ಇವತ್ತು ಮಾಡುತ್ತಿರುವ ಸಂಶೋಧನೆಯ

ಲ್ಯಾಬ್‌ಗೆ ತಜ್ಞರುಗಳಿಗೆ ಸಂಬಳ ಸಾರಿಗೆ ಮುಂತಾದ ಎಲ್ಲ ಸೌಲಭ್ಯಗಳನ್ನು ಸರ್ಕಾರವೆ ಕೊಡಬೇಕಾಗಿದ್ದರೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು. ರೈತರುಗಳು ತಮ್ಮಷ್ಟಕ್ಕೆ ತಾವೆ ಒಂದು ಸಮೂಹವನ್ನು ಮಾಡಿ ಕೊಂಡು, ಸಂಘಟನೆಯನ್ನು ಮಾಡಿಕೊಂಡು ಇದುವರೆವಿಗೆ ಅನುಸರಿಸಿಕೊಂಡು ಬಂದಿರುವ ಕೃಷಿ ಪದ್ಧತಿಯು ತಪ್ಪೆಂದು ತಿಳಿದುಕೊಂಡು. ಈ ಇಲಾಖೆಯವರ ಅಡ್ವೈಸ್ ಕೇಳುತ್ತಾ ಹೋದರೆ ನಾವು ಹಾಳಾಗಿ ಹೋಗುತ್ತೇವೆಂದು ಈ ಎಚ್ಚೆತ್ತಂಥ ಕೆಲವೇ ರೈತ ವರ್ಗದವರು ಈ ಕೆಲಸವನ್ನು ಮಾಡುತ್ತಿದ್ದಾರೆ. ಉದಾಹರಣೆಗೆ ಹೇಳುವುದಾದರೆ ನಮ್ಮ ತೀರ್ಥಹಳ್ಳಿಯ ಪುರಸಭೆಯ ಅಧ್ಯಕ್ಷರಾಗಿರುವ ಪುರುಷೋತ್ತಮ ರಾವ್ ಎನ್ನುವವರು ಈ ಸಾವಯವ ಕೃಷಿಯಲ್ಲಿ ವಿಶೇಷವಾದ ತಜ್ಞತೆಯನ್ನು ಪಡೆದುಕೊಂಡಿದ್ದಾರೆ. ಹಾಗೆಯೇ ಪ್ರದೀಪ್ ತಪನ್‌ಎನ್ನುವ ಸಾವಯವ ಕೃಷಿ ತಜ್ಞರು ಒಬ್ಬರು ಇದ್ದಾರೆ. ಇವರ ಬಗ್ಗೆ ಮಾನ್ಯ ಡಿ. ಆರ್. ಪಾಟೀಲ್‌ರವರಿಗೆ ಚೆನ್ನಾಗಿ ಗೊತ್ತಿದೆ. ಇವರು ಸಾವಯವ ಕೃಷಿಯಲ್ಲಿ ಬಹಳ ದೊಡ್ಡ ತಜ್ಞರು, ಸ್ಥಳೀಯವಾಗಿ 50,100 ರೈತ ಕುಟುಂಬಗಳನ್ನು ಸೇರಿಸಿಕೊಂಡು ತಾವೆ ಹಣವನ್ನು ಹಾಕಿಕೊಂಡು, ತಾವೆ ಇದನ್ನು ಭೌತಿಕವಾಗಿ ಪ್ರಯೋಗವನ್ನು ನಡೆಸುತ್ತಿದ್ದಾರೆ. ಯಾವುದೇ ಕೆಮಿಕಲ್ಸ್‌ನ್ನು ಉಪಯೋಗ ಮಾಡದೆ ಕೆಲವು ಸೊಪ್ಪಿನ ರಸವನ್ನು ಉಪಯೋಗಿಸಿ ಸಿಂಪಡಿಸುವುದರಿಂದ ಹಿಡಿದು ಹುಳವನ್ನು, ಕಾಯಿಲೆಯನ್ನು ನಾಶಮಾಡತಕ್ಕಂಥದ್ದು, ಕೀಟಾಣುಗಳನ್ನು ನಾಶ ಮಾಡತಕ್ಕಂಥ ಬೆಳೆಗಳಿಗೆ ಯಾವುದೇ ರೀತಿಯಲ್ಲಿ ತೊಂದರೆಯಾಗದೇ ಇರತಕ್ಕಂಥ ಒಂದು ಸ್ಥಿತಿಯಲ್ಲಿ ಇವತ್ತು ಅಭಿವೃದ್ಧಿಯನ್ನು ಸಾಧಿಸಿದ್ದಾರೆ. ನಮ್ಮ ತೀರ್ಥಹಳ್ಳಿಯ ತಾಲ್ಲೂಕಿನ ಸುಮಾರು 100-150ಕ್ಕಿಂತ ಹೆಚ್ಚು ಕೃಷಿ ಕುಟುಂಬಗಳು ಇವತ್ತು ರಾಸಾಯನಿಕ ವಸ್ತುಗಳನ್ನು, ಗೊಬ್ಬರಗಳನ್ನು ಉಪಯೋಗಿಸದೆ, ಈ ಕೀಟನಾಶಕ ವಿಷ ವಸ್ತುಗಳನ್ನು ಉಪಯೋಗಿಸದೆ ಬೆಳೆಯನ್ನು ಬೆಳೆಸತಕ್ಕಂಥ ಒಂದು ಪ್ರಯತ್ನವನ್ನು ನಡೆಸುತ್ತಿದ್ದಾರೆ. ಇಂತಹ ರೈತರಿಗೆ ವಿಶೇಷವಾದ ಮಾರುಕಟ್ಟೆ ಕೂಡ ಲಭ್ಯವಿದೆ. ಕ್ರಿಮಿನಾಶಕ ವಿಷ ವಸ್ತುಗಳನ್ನು ಸಿಂಪಡಿಸದೆ ಬೆಳೆದಿರುವ ಭತ್ತಕ್ಕೆ ಈ ಮಾರುಕಟ್ಟೆಯಲ್ಲಿ ಸುಮಾರು 50 ರೂಪಾಯಿ ಧಾರಣೆ ಜಾಸ್ತಿಯಿದೆ. ಈ ರೀತಿ ಸಮಾಜದಲ್ಲಿ ಒಂದು ಪರಿವರ್ತನೆಯಾಗುತ್ತಿದೆ. ಇದಕ್ಕೆ ಹೆಚ್ಚಿನ ಒತ್ತನ್ನು ಕೊಡುವ ದೃಷ್ಟಿಯಲ್ಲಿ ಕೃಷಿ ಇಲಾಖೆ ವಿಶೇಷವಾದಂಥ ಕೆಲಸವನ್ನು ಮಾಡಬೇಕಾಗುತ್ತದೆ. ನನಗೆ ದುಃಖವಾಗುತ್ತಿದೆ ಏಕೆಂದರೆ ಇವತ್ತು ಕೃಷಿ ಸಚಿವರು ಇದ್ದರೆ ನಾನು ನೇರವಾಗಿ ಅವರಿಗೆ ಹೇಳುತ್ತಿದ್ದೆ, ತೀರ್ಥಹಳ್ಳಿಗೆ ಬರಬೇಕೆಂದು ಒತ್ತಾಯಿಸುತ್ತಿದ್ದೆ. ಮೊನ್ನೆ ನಮ್ಮ ತೀರ್ಥಹಳ್ಳಿಗೆ ಜಪಾನ್‌ನಿಂದ ಒಂದು ಟೀಮ್ ಬಂದಿತ್ತು ಹಾಗೂ ಇಂಡೋನೇಷಿಯಾದಿಂದ ಕೂಡ ಒಂದು ಟೀಮ್ ಬಂದಿತ್ತು. ಇವರು ಅವರ ಮನೆಗಳಲ್ಲಿ ಕುಳಿತುಕೊಂಡು ಸುಮಾರು ಎರಡು-ಮೂರು ದಿನ ಅವರು ಹೇಳುವ ಮಾತುಗಳನ್ನೆಲ್ಲಾ ರೆಕಾರ್ಡ್ ಮಾಡಿಕೊಂಡರು. ಅವರ ಕೃಷಿ, ಹಾಗೂ ಫಾರ್ಮ್‌ಗಳನ್ನು ಭೇಟಿಯಾಗಿ ಬಂದರು, ಅವರು ಗೊಬ್ಬರವನ್ನು, ಔಷಧಿಯನ್ನು ಯಾವ ರೀತಿಯಾಗಿ ತಯಾರು ಮಾಡುತ್ತಾರೆ ಎನ್ನತಕ್ಕಂಥದ್ದನ್ನು ನೋಡಿಕೊಂಡು ಹೋದರು. ಇಲ್ಲಿ ಒಂದು ವಿಚಿತ್ರ ಸನ್ನಿವೇಶವೆಂದರೆ ನಿಮ್ಮ ಕೃಷಿ ಇಲಾಖೆಯ ರಾಜ್ಯಮಟ್ಟದ ಅಧಿಕಾರಿಗಳು ಅಲ್ಲಿಗೆ ಬರಲಿಲ್ಲ, ಅವರನ್ನು ಸಂಪರ್ಕ ಮಾಡುವಂತಹ ಒಂದು ಪ್ರಯತ್ನ ಕೂಡ ಮಾಡಲಿಲ್ಲ. ಅವರಿಗೆ ಪ್ರಚಾರವಾಗಲಿ, ಹಣಕಾಸು ಕೊಡುವುದಾಗಲಿ ಯಾವುದು ಬೇಡ, ಆದರೆ ಅವರು ಮಾಡಿರುವಂತಹ ಒಂದು ಸಾಧನೆಯನ್ನು

ಕಲೆತು, ಬೇರೆ ರೈತರಿಗೆ ತಿಳಿಸುವ ಒಂದು ಯೋಚನೆ ಮಾಡುವುದು ಬೇಡವೆ? ಇಷ್ಟು ಒಂದು ನೆಟ್ ವರ್ಕ್ ನಮ್ಮಲ್ಲಿರುವಾಗ, ಇಡೀ ರಾಜ್ಯದಲ್ಲಿ ಈ ಇಲಾಖೆಯಿರುವುದರಿಂದ ಇದನ್ನು ಅಳವಡಿಸುವುದಕ್ಕೆ ಒಂದು ಪ್ರಯತ್ನ ಮಾಡಬೇಕು, ಅವರನ್ನು ಕರೆದುಕೊಂಡು ಹೋಗಿ ಬೇರೆ ಬೇರೆ ರೈತರಿಗೆ ಈ ವಿಷಯವನ್ನು ತಿಳಿಸುವಂತಹ ಒಂದು ವ್ಯವಸ್ಥೆಯನ್ನು ಮಾಡಬೇಕು. ಬಹಳ ದುಃಖದ ವಿಚಾರವೆಂದರೆ ಈ ಇಲಾಖೆ ಅತ್ಯಂತ ನಿಷ್ಕ್ರಿಯವಾಗಿದೆ.

6.00 ಪಿ.ಎಂ.

ಇವೊತ್ತು ಇಲಾಖೆಗೆ ಕೊಟ್ಟಂಥ ಹಣ ಏನಾಗುತ್ತದೆ? ನಾನು ಅತ್ಯಂತ ಸಂತೋಷದಿಂದ ಮಾನ್ಯ ಭೈರೇಗೌಡರನ್ನು ಅಭಿನಂದಿಸಬೇಕಾಗುತ್ತದೆ. ಬಹಳಷ್ಟು ಜನ ಮಂತ್ರಿಗಳು ತಮ್ಮ ಖಾತೆಯ ವಿಚಾರ ಹೇಳಿದರೆ ತಮ್ಮ ಮರ್ಯಾದೆಯು ಹೋಗುತ್ತದೇನೋ ಎಂದು ಅಲ್ಲಿ ಆಗಿರತಕ್ಕಂಥ ಭ್ರಷ್ಟಾಚಾರವನ್ನು ಮುಚ್ಚಿಟ್ಟಿರುತ್ತಾರೆ. ಭೈರೇಗೌಡರಂತಹ ಸಚಿವರು ಇಡೀ ರಾಜ್ಯದಲ್ಲಿ ತಿರುಗಾಡಿ ಯಾವ ಯಾವ ಅಧಿಕಾರಿ ಎಷ್ಟೆಷ್ಟು ಭ್ರಷ್ಟಾಚಾರ ಮಾಡುತ್ತಾ ಇದ್ದಾರೋ ಅದನ್ನು ಸಾರೋದ್ಧಾರವಾಗಿ ಜನರಿಗೆ ತಿಳಿಸುವಂಥ ಕೆಲಸವನ್ನು ಮಾಡುತ್ತಾ ಇದ್ದಾರೆ. ಇದಕ್ಕಾಗಿ ನಾವು ಅವರನ್ನು ಅಭಿನಂದಿಸಬೇಕಾಗುತ್ತದೆ. ಯಾಕೆಂದರೆ ಯಾರೇ ಭ್ರಷ್ಟಾಚಾರ ಮಾಡಿದರೂ ಅದನ್ನು ಹೊರಗೆಡುವುದರಲ್ಲಿ ಮತ್ತು ಆ ಕುರಿತು ಜಾಗೃತೆ ಮಾಡುವುದರಲ್ಲಿ ಒಂದು ವಿಶೇಷವಾದಂಥ ಪರಿಶ್ರಮವನ್ನು ಮಾಡಿದ್ದಾರೆ. ಉದಾಹರಣೆಗೆ "ಭ್ರಷ್ಟಾಚಾರ ಆರೋಪ, 150 ಅಧಿಕಾರಿಗಳ ವಿರುದ್ಧ ಕ್ರಮ. ಕೃಷಿ ಅಧಿಕಾರಿಗಳ ವಿರುದ್ಧ ಮೊಕದ್ದಮೆ ವಾಪಸ್ಸಿಗೆ ಆಗ್ರಹ, ಭುಸಾರ ಸಂರಕ್ಷಣೆ ಭ್ರಷ್ಟಾಚಾರದ ವಿರುದ್ಧ ಕಟ್ಟುನಿಟ್ಟಿನ ಕ್ರಮ, ದಾಖಲೆಯಲ್ಲಷ್ಟೆ ಕಂಡು ಬಂದ ಕೃಷಿ ಇಲಾಖೆ. "-500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ಅದರಲ್ಲಿ 400 ಕೋಟಿ ರೂಪಾಯಿಗಳನ್ನು ಭ್ರಷ್ಟಾಚಾರ ಮಾಡಿದ್ದಾರೆ ಎಂದು ಹೇಳಿ, ಬಾಗಲಕೋಟೆಯಲ್ಲಿ ಮಾನ್ಯ ಕೃಷಿ ಸಚಿವರೇ ಹೇಳಿಕೆಯನ್ನು ಕೊಡುತ್ತಾರೆ. ಆ 400 ಕೋಟಿ ರೂಪಾಯಿಗಳು ಎಲ್ಲಿ ಹೋಯಿತು? ಅದನ್ನು ವಸೂಲು ಮಾಡುವ ಕ್ರಮ ಆಯಿತೇ? ಆ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡಿದ್ದೀರಿ? ಆ ಅಧಿಕಾರಿಗಳು ಇವೊತ್ತು ಕೂಡ ಸಂಬಳ ತಿನ್ನುತ್ತಾ ಇದ್ದಾರೋ? ಇವರ ಮೇಲೆ ಏನು ಕ್ರಮ ಆಗಿದೆ? ನಮ್ಮ ರೈತರಿಗೆ ಕೊಡಬೇಕಾಗಿದ್ದಂಥ ಸುಮಾರು 400 ಕೋಟಿ ರೂಪಾಯಿಗಳನ್ನು ಅವರೇ ತಿಂದುತೇಗಿದ್ದಾರೆ ಅಂದರೆ, ಇದನ್ನು ಸ್ವತಃ ಈ ರಾಜ್ಯದ ಕೃಷಿ ಸಚಿವರೇ ಹೇಳುತ್ತಾರೆ. "ಹಣ ದುರುಪಯೋಗ ಆರೋಪ, ಕೃಷಿ ಅಧಿಕಾರಿ ವಜಾ" ಇದನ್ನು ನಾವು ಪ್ರತಿನಿತ್ಯವೂ ಪೇಪರ್‌ಗಳಲ್ಲಿ ಓದುತ್ತೇವೆ. ಕೃಷಿ ಇಲಾಖೆಯಲ್ಲಿ 400 ಕೋಟಿ ರೂಪಾಯಿಗಳ ಸೋರಿಕೆ. ಔರಾದ ಕೃಷಿ ಇಲಾಖೆಯಲ್ಲಿ ಭಾರೀ ಅವ್ಯವಹಾರ" - "18 ಹಿರಿಯ ಕೃಷಿ ಅಧಿಕಾರಿಗಳ ಸಸ್ಪೆಂಡ್" "ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಕಟ್ಲೆ ದಾಖಲು" - ಇನ್ನೂ ಇಂಥ ಅಧಿಕಾರಿಗಳು ಇವರಲ್ಲಿ ಎಷ್ಟು ಜನರು ಉಳಿದುಕೊಂಡಿದ್ದಾರೋ ನನಗೆ ಗೊತ್ತಿಲ್ಲ. ಯಾಕೆಂದರೆ ಇಷ್ಟೊಂದು ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡರೆ, ಕೆಲಸ ಮಾಡಲು ಯಾರಿದ್ದಾರೆ? ಅವರ ಬದಲಿಗೆ ಏನು ವ್ಯವಸ್ಥೆ ಆಗಿದೆ? ಎನ್ನುವುದನ್ನು ಇಲಾಖಾ ಮಂತ್ರಿಗಳು ಜನರಿಗೆ ತಿಳಿಸಬೇಕಾಗಿದೆ. ಇವೊತ್ತು ಈ ಇಲಾಖೆಯು ಹೇಗೆ ಕೆಲಸ ಮಾಡುತ್ತಿದೆ? 'ಬೀಜದ ಭತ್ತ, ಗೊಬ್ಬರ ಕೊಡುವುದರಲ್ಲಿ

ಕಳಪೆ' 'ಹೆಚ್ಚು ಬೆಲೆಗೆ ಗೊಬ್ಬರದ ಮಾರಾಟ' - 'ಯೂರಿಯಾ ಹಗರಣದಲ್ಲಿ ಅಧಿಕಾರಿಗಳ ಶಾಮೀಲು' - 'ಕಳಪೆ ಬೀಜ ತೀರ್ಮಾನಿಸುವ ಮುನ್ನ ನಿಗದಿತ ಪರೀಕ್ಷೆ ನಡೆಸಲು ಆಗ್ರಹ' - 'ಕೃಷಿ ಮಾರುಕಟ್ಟೆ ಅಧಿಕಾರಿಗಳಿಂದ ಅಕ್ರಮ ಆಸ್ತಿ ಪತ್ತೆ' - 'ಕಲ್‌ಬುರ್ಗಿಯಲ್ಲಿ ಕಳಪೆದರ್ಜೆಯ ಕೀಟನಾಶಕ ಪತ್ತೆ' - 'ನಕಲಿ ಬೀಜ ಮಾರಿದ ಕಂಪನಿಗಳು ಕಪ್ಪು ಪಟ್ಟಿಗೆ' - ಭೈರೇಗೌಡರ ಹೇಳಿಕೆ. 'ಕಳಪೆ ಬೀಜ ಮಾರಾಟದ ವಿರುದ್ಧ ಕ್ರಮ' - 'ಖಾಸಗಿ ಬಿತ್ತನೆ ಬೀಜ ಕಂಪನಿಗಳಿಂದ ಹಾನಿ' - ಇದು ಒಂದು ಕೃಷಿ ಇಲಾಖೆಯ ಅಧಿಕಾರಿಗಳ ಚಟುವಟಿಕೆಗಳ ಸ್ಥೂಲ ಚಿತ್ರಣ ಎಂದು ನನಗನ್ನಿಸುತ್ತದೆ. ಇದು ಬಹಳ ಬೇಸರದ ಸಂಗತಿ. ಹಣ ಹಾಕುವಂತಾದ್ದೇ ಕಡಿಮೆ, ಅದನ್ನು ಹಾಕಿದರೂ ಕೂಡ ಯಾರೋ ತಿಂದು ಅವರ ಪಾಲಾಗುತ್ತದೆ ಅಂದರೆ, ನಮ್ಮ ಗ್ರಾಮಾಂತರ ಪ್ರದೇಶದ ರೈತರಿಗೆ ಮುಟ್ಟಬೇಕಾದಂಥ ಈ ಹಣವು ಈ ರೀತಿಯಾಗಿ ಸೋರಿಕೆಯಾಗುತ್ತಿದೆ ಅಂದರೆ ಇದು ಎಲ್ಲಿಗೆ ಬಂದು ಮುಟ್ಟುತ್ತದೆ ಮತ್ತು ಕೃಷಿ ಇಲಾಖೆಯು ಯಾರ ನಿಯಂತ್ರಣದಲ್ಲಿ ಇಲ್ಲದೆ ಇವೊತ್ತು ತಪ್ಪಿ ಹೋಗುವ ಪರಿಸ್ಥಿತಿಯು ನಿರ್ಮಾಣವಾಗಿದೆ. ಇಷ್ಟೆಲ್ಲಾ ಮಾಡಿ ಬೆಳೆ ಬೆಳೆದರೆ, ಭಾರಿ ಬೆಳೆ, ಬೆಳೆಯುವುದಕ್ಕೆ ಭತ್ತದ ಬೀಜಗಳ ಪೂರೈಕೆ. ಈ ಸಾರಿ ಭತ್ತದ ಬೀಜಕ್ಕೆ 1200 ರೂಪಾಯಿಗಳ ದರ. ಪೇಟೆಯಲ್ಲಿ ನಮ್ಮ ರೈತರಿಗೆ ಸಿಗುವ ಧಾರಣೆ 450 ರೂಪಾಯಿಗಳು ಮಾತ್ರ. ಆದರೆ, ಬೀಜದ ಭತ್ತ ತೆಗೆದುಕೊಳ್ಳಲು 1200 ರೂಪಾಯಿಗಳನ್ನು ಕೊಡಬೇಕು. ಅದಕ್ಕೆ 200 ರೂಪಾಯಿಗಳ ಸಬ್ಸಿಡಿ. 200 ರೂಪಾಯಿಗಳ ಸಬ್ಸಿಡಿ ವಜಾ ಆಗಿ 1000 ರೂಪಾಯಿಗಳನ್ನು ನಾವು ಕೊಟ್ಟು ಕ್ವಿಂಟಾಲ್ ಬೀಜದ ಭತ್ತ ತಂದು ಹಾಕಬೇಕಾಗುತ್ತದೆ. ಯಾವುದು ಇದು? ಬೀಜದ ಭತ್ತ? ನಾವು ಇಂಟಾನ್ ಎಂದು ತೆಗೆದುಕೊಂಡು ಹೋಗಿ ನೆಟ್ಟರೆ ಅದು ಜಯಾ ಆಗಿರುತ್ತದೆ. ಜಯಾ ಎಂದು ತೆಗೆದುಕೊಂಡು ಹೋಗಿ ನೆಟ್ಟರೆ ಫಸಲು ಬರುವಾಗ ಇನ್ನಾವುದೋ ಆಗಿರುತ್ತದೆ. ಈ ಬೀಜಗಳು ಫೌಂಡೇಶನ್ ಇಲ್ಲದೇ ಇರುವ ರೀತಿಯಲ್ಲಿ ಆಗಿವೆ. ಇಲ್ಲಿನ ಒಂದು ವಿಚಿತ್ರ ಅಂದರೆ, ಈ ಇಲಾಖೆಯಲ್ಲಿ ಕೆಲಸ ಮಾಡಿ ನಿವೃತ್ತರಾಗಿರತಕ್ಕಂಥ ಅನೇಕ ಅಧಿಕಾರಿಗಳು ಇವೊತ್ತು ಬೀಜದ ಪ್ರೊಸೆಸಿಂಗ್ ಏಜನ್ಸಿಯನ್ನು ತೆಗೆದುಕೊಂಡಿದ್ದಾರೆ. ಶಿವಮೊಗ್ಗದಲ್ಲಿ ಒಂದು ಯೂನಿಟ್ ಇದೆ. ನಮ್ಮ ಇಲಾಖೆಯವರು ಅಲ್ಲಿಂದ ಸಾವಿರಾರು ಕ್ವಿಂಟಾಲ್ ಭತ್ತವನ್ನು ಖರೀದಿ ಮಾಡುತ್ತಾರೆ.

ಅಧ್ಯಕ್ಷರು : ಕೃಷಿ ಅಷ್ಟೇ ಅಲ್ಲ, ಯಾವುದೇ ಕ್ಷೇತ್ರದಲ್ಲಿ ವೈಜ್ಞಾನಿಕ ಸಾಧನೆ ಅಥವಾ ಬೆಳವಣಿಗೆ ಕೇವಲ ಕೆಲವೇ ಜನರಿಗೆ ಅದರ ಲಾಭವು ಸಿಗುವುದಾದರೆ ವೈಜ್ಞಾನಿಕ ಕ್ಷೇತ್ರದಲ್ಲಿ ನಾವು ಅಭಿವೃದ್ಧಿ ಸಾಧಿಸಿದ್ದೇವೆ ಎಂದು ಅನ್ನಿಸುವುದಿಲ್ಲ. ಯಾರೋ ಶ್ರೀಮಂತರಿಗೆ ಇನ್ನಷ್ಟು ಸೌಲಭ್ಯ ಆಯಿತು ಎಂದು ತಿಳಿದುಕೊಳ್ಳುತ್ತೇವೆ. ಇಲ್ಲಿಯೂ ಕೂಡ ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಈ ಗೊಬ್ಬರ ಮಾರಿ ಯಾರೋ ಸಿಕ್ಕಿ ಹಾಕಿಕೊಂಡಿರುವುದನ್ನು ಹೇಳಿ, ಹೇಳ ಬೇಡಿ ಎಂದು ಹೇಳುವುದಿಲ್ಲ. ಕೃಷಿಕರು ಎಷ್ಟು ಜನರು ಇದ್ದಾರೆ, ಕೃಷಿ ನೀತಿ ಏನು? ಕೃಷಿ ವಿಶ್ವವಿದ್ಯಾಲಯಕ್ಕೂ ಅಲ್ಲಿಂದ ಹೊರ ಬರತಕ್ಕಂಥ ವಿದ್ಯಾರ್ಥಿಗಳಿಗೂ, ಸರಕಾರದ ಕೃಷಿ ನೀತಿಗೂ, ಕೃಷಿಕರ ಜೀವನ ರೀತಿಗೂ ಏನಾದರೂ ಸಂಬಂಧ ಇದೆಯೇ? ಈ ಕೃಷಿಯನ್ನು ನಾನು ಮೊನ್ನೆಯ ದಿವಸ ಹೇಳಿದಂತೆ ಶಾಲೆಯ ಹಂತದಲ್ಲಿ ಪಠ್ಯವಸ್ತುವಾಗಿ ತಂದು ಇನ್ನೂ ಹೆಚ್ಚು ಸುಧಾರಿಸಲು ಸಾಧ್ಯವೆ? ಅಥವಾ ನಮ್ಮ ಸಾಂಪ್ರದಾಯಕವಾದಂಥ ಕೃಷಿ ಏನಿತ್ತು? ಮತ್ತು ಈಗ ಹೊಸತಾಗಿ ಬಂದಿರತಕ್ಕಂಥಾದ್ದರಲ್ಲಿ ಸೇರಿದಂತೆ ಈ ಎರಡರ ಮಧ್ಯೆ ನಾವು ಯಾವುದನ್ನು

ಆಯ್ಕೆ ಮಾಡಿಕೊಳ್ಳಬಹುದು? ಈಗ ತಿಪ್ಪೆ ಹಾಕುವುದಿಲ್ಲ, ತಿಪ್ಪೆ ಗೊಬ್ಬರ ಉಪಯೋಗಿಸುವುದಿಲ್ಲ, ರೊಟೇಶನ್ ಆಫ್ ಕ್ರಾಪ್ಸ್ ಇಲ್ಲ, ಈಗ ಕಣಗಳನ್ನು ಎಲ್ಲಿ ಮಾಡುತ್ತಿದ್ದಾರೆ ಎಂದು ಗೊತ್ತೇನು? ರಸ್ತೆಗಳಲ್ಲಿ ಕಣ ಮಾಡುತ್ತಿದ್ದಾರೆ. It is an honour to speak on behalf of a major political party in the Assembly on the demands. ನಿಮ್ಮ ಪಕ್ಷದವರು ಬಹಳ ಉದಾರತನದಿಂದ ನಿಮಗೆ ಮಾತನಾಡುವ ಆ ಗೌರವವನ್ನು ಕೊಟ್ಟಿದ್ದಾರೆ. ನೀವು ಒಂದು ಕೃಷಿ ಕುಂಟುಂಬದಿಂದ ಬಂದವರಾಗಿ ಆ ನೀತಿಯ ಬಗ್ಗೆ ನಿಮಗೆ ಏನು ತೋಚುತ್ತದೆ ಆ ನಿಮ್ಮ ಒರಿಜಿನಲ್ ಫೀಲಿಂಗ್ಸ್‌ನ್ನು ಎಕ್ಸ್‌ಪ್ರೆಸ್ ಮಾಡಿ. That would be more genuine. ಈ ಸ್ಟ್ಯಾಟಿಸ್ಟಿಕ್ಸ್ ಯಾರೋ ಓದಿರುತ್ತಾರೆ. don't worry about it. Try to concentrate on policy matters. You advise the Government where we have to make improvements; that will be helpful.

ಶ್ರೀ ಬಿ. ಎ. ಮೊಯಿದ್ದೀನ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಅರಗಜ್ಞಾನೇಂದ್ರರವರು ಬಹಳ ಚೆನ್ನಾಗಿ ಮಾತನಾಡುತ್ತಾ ಇದ್ದಾರೆ. ಈಗ ಸಾಂಧ್ರ ಬೇಸಾಯ ಮತ್ತು ಸಾಂಪ್ರದಾಯಿಕ ಬೇಸಾಯ. ಇದರ ಬಗ್ಗೆ ಅವರು ಚೆನ್ನಾಗಿ ಹೇಳಿದ್ದಾರೆ. ಸಾಂಪ್ರದಾಯಿಕವಾಗಿರತಕ್ಕಂಥ ಬೇಸಾಯ ಮಾತನಾಡುವಾಗ ಬಹಳ ಚೆನ್ನಾಗಿ ಇರುತ್ತದೆ, ಸಾವಯವ, ಇನ್ನೊಂದು ಮತ್ತೊಂದು ಎಂದು. ಇನ್ನೊಂದು ದೃಶ್ಯವನ್ನು ನಾವು ಜ್ಞಾಪಿಸಿಕೊಳ್ಳಬೇಕು. ಸ್ವಾತಂತ್ರ್ಯಪೂರ್ವದಲ್ಲಿ ನಮ್ಮ ದೇಶದಲ್ಲಿದ್ದಂಥ ಜನಸಂಖ್ಯೆ; ಮತ್ತು ಈಗ ಇರತಕ್ಕಂಥ ಜನಸಂಖ್ಯೆ. ಇನ್ನು ಸ್ವಲ್ಪ ದಿವಸಗಳಲ್ಲಿಯೇ ನಾವು ನಮ್ಮ ದೇಶದ ಜನಸಂಖ್ಯೆಯನ್ನು 100 ಕೋಟಿಗಳಿಗೆ ತಲುಪಲಿದ್ದೇವೆ. ನಾವು ಬೆಳೆಯತಕ್ಕಂಥ ಆಹಾರ, ಇಷ್ಟೆಲ್ಲಾ ಸಾಂದ್ರ ಬೇಸಾಯ ಆಗಿದೆ, ನಾವು ದೊಡ್ಡ ರೀತಿಯಲ್ಲಿ ಗ್ರೀನ್ ರೆವಲ್ಯೂಶನ್ ಏನು ಆಯಿತು, ಇದರ ಮೂಲಕವಾಗಿ ಈ ದೇಶದ ಜನರು ಪಿಎಲ್480 ಎಂದು ಬರತಕ್ಕ ಆಹಾರದ, ಆ ಒಂದು ಸಂಕೋಲೆಯಿಂದ ನಾವು ಬಿಡಿಸಿಕೊಂಡಿದ್ದೇವೆ. ಆದರೂ ಕೂಡ ಇವೊತ್ತು ನಾವು ಬೆಳೆಯತಕ್ಕಂಥ ಆಹಾರ ಏನಿದೆ, ಇಷ್ಟೆಲ್ಲಾ ಸಾಂದ್ರ ಬೇಸಾಯ ಆದರೂ ಕೂಡ ಇವೊತ್ತು ನಮ್ಮಲ್ಲಿರತಕ್ಕಂಥ ಜನಗಳಿಗೆ ಎರಡು ಹೊತ್ತು, ಆಹಾರ, ನೀವು ಇದನ್ನು ತಿಳಿದುಕೊಳ್ಳಬೇಕು, ಎರಡು ಹೊತ್ತಿನ ಆಹಾರ ಅವರು ನಿರ್ಮಲವಾಗಿ ಉಣ್ಣುವ ಹಾಗೆ ನಾವು ಕೊಟ್ಟರೆ ಇದು ಸಾಕಾಗುತ್ತದೋ ಎಂಬ ಬಗ್ಗೆ ಬೆಳಕು ಚೆಲ್ಲುವುದು ಅಗತ್ಯ. ಈ ದಿಸೆಯಲ್ಲಿ ಇವೊತ್ತು ನಾವು ನಮ್ಮ ಕೃಷಿ ಸಚಿವರು ತಂದಿರತಕ್ಕಂಥ ಕೃಷಿ ನೀತಿ ಏನಿದೆ, ಅದರ ಬಗ್ಗೆ ತಾವು ಮಾತನಾಡಿದರೆ ಬಹಳ ಚೆನ್ನಾಗಿ ಇರುತ್ತದೆ.

ಶ್ರೀ ಅರಗಜ್ಞಾನೇಂದ್ರ : ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಒಂದು ಭಯ ಆಗುತ್ತಿದೆ, ಸಾಂಪ್ರದಾಯಿಕವಾಗಿರತಕ್ಕಂಥ ಕೃಷಿ ಬಗ್ಗೆ ಮಾತನಾಡುವಾಗ ಇಳುವರಿ ಕಮ್ಮಿ ಆಗುತ್ತದೋ ಏನೋ ನಮ್ಮ ಇದ್ದ ಜನಸಂಖ್ಯೆಗೆ ಆಹಾರವು ಸಾಕಾಗುವುದಿಲ್ಲವೋ ಏನೋ? ಎಂಬ ಆತಂಕ ಇರಬಹುದು. ತಾವು ದಯಮಾಡಿ ನಮ್ಮಲ್ಲಿ ಬಂದು ನೋಡಬೇಕು. ತಾವು ಬೆಂಗಳೂರಿನಿಂದ ಮಂಗಳೂರಿಗೆ ಹೋಗುವ ಮಾರ್ಗದಲ್ಲಿ ವಯಾ ತೀರ್ಥಹಳ್ಳಿ ಮೂಲಕ ಹೋಗಿ, ಅಲ್ಲಿ ಒಂದು ಕ್ಷಣ ತಾವು ಬರಬೇಕು. ನಿಮಗೆ ಅಲ್ಲಿ ಕೆಲವು ಕುಟುಂಬಗಳನ್ನು ನಾನು ಅಲ್ಲಿ ತೋರಿಸುತ್ತೇನೆ. ಅವರುಗಳು ಬೆಳೆದಂಥ

ಬೆಳೆಗಳನ್ನು ತೋರಿಸುತ್ತೇನೆ. ಯಾವುದೇ ಕೆಮಿಕಲ್ ಫರ್ಟಿಲೈಸರ್ಸ್‌ನ್ನು ಉಪಯೋಗಿಸದೇನೇ ಬೆಳೆದಿರತಕ್ಕಂಥ ಬೆಳೆಗೂ ಉಪಯೋಗಿಸಿ ಬೆಳೆದಿರತಕ್ಕಂಥ ಬೆಳೆಗೂ ಏನು ವ್ಯತ್ಯಾಸ ತಾವು ಪರೀಕ್ಷೆ ಮಾಡಿ ಹೇಳಬೇಕು. ಅದನ್ನು ನಾನು ಒಪ್ಪುತ್ತೇನೆ. ಖಂಡಿತವಾಗಿ ಕೆಲವು ಕ್ರಮಗಳಿದ್ದಾವೆ. ವಿಶೇಷವಾಗಿರತಕ್ಕಂಥ ಅಂಥ ಕ್ರಮಗಳನ್ನು ಅನುಸರಿಸಿ ನಾವು ಬೆಳೆ ಬೆಳೆದರೆ, ಖಂಡಿತವಾಗಿಯೂ ಬೆಳೆಯಬಹುದು.

ಶ್ರೀ ಡಿ.ಆರ್. ಪಾಟೀಲ್ : ನೀವೇನು ಹೇಳಿದಿರಿ ನಾವೆಲ್ಲರೂ ಇದರಿಂದ ಮಿಸ್‌ಲೀಡ್ ಆಗಿದ್ದೇವೆ. ನಾವೆಲ್ಲರೂ ಕೆಮಿಕಲ್ ಫರ್ಟಿಲೈಸರ್ ಯೂಸ್ ಮಾಡುವುದರಿಂದ ತಾತ್ಕಾಲಿಕವಾಗಿ ಕೆಲವು ವರ್ಷ ಈಲ್ಡ್ ಜಾಸ್ತಿಯಾಗಿ ಬಂತು. ಆದರೆ ಮುಂದೆ ಪ್ರತಿಯೊಂದು ಈಲ್ಡ್ ಕಡಿಮೆಯಾಗುತ್ತದೆ. ಹತ್ತಿ, ಜೋಳದ ಈಲ್ಡ್ ಶೇಂಗಾ ಈಲ್ಡ್ ಕಡಿಮೆಯಾಗಿದೆ. ಕೆಮಿಕಲ್ ಫರ್ಟಿಲೈಸರ್ ಉಪಯೋಗ ಮಾಡುವುದನ್ನು ಬಿಟ್ಟು ಸಾವಯವ ಕೃಷಿ ಯಾರು ಮಾಡುತ್ತಿದ್ದಾರೆ ಅವರದ್ದು ಪ್ರತಿ ವರ್ಷ ಈಲ್ಡ್, ಜಾಸ್ತಿಯಾಗುತ್ತದೆ ಅವರದ್ದು ಸಾಯಲ್ ಫರ್ಟಿಲಿಟಿ ಜಾಸ್ತಿಯಾಗುತ್ತದೆ ಅವರದ್ದು ಸೆಲ್ಫ್ ವಾಲ್ಯು ಜಾಸ್ತಿ ಇರುತ್ತದೆ ಅವರಿಗೆ ಹಣ ಜಾಸ್ತಿ ಸಿಗುತ್ತದೆ ಅವರಿಗೆ ಇನ್‌ಪುಟ್ ಭಾರಿ ಕಡಿಮೆ ಇರುತ್ತದೆ. ಟೋಟಲ್ ಸೇವಿಂಗ್ಸ್ ಭಾರಿ ಜಾಸ್ತಿಯಾಗುತ್ತದೆ. ಇಲ್ಲಿ ತೋರ ಹುಣಸೆ ಇದೆ ನಾರಾಯಣರೆಡ್ಡಿ ಎಂಬುವವರು ಕಳೆದ 12 ವರ್ಷದಿಂದ ಕ್ರಿಮಿನಾಶಕ ಉಪಯೋಗ ಮಾಡುತ್ತಿಲ್ಲ ಗೊಬ್ಬರ ಉಪಯೋಗಿಸುತ್ತಿಲ್ಲ. ಅವರ ತೋಟವನ್ನು ಹೋಗಿ ನೋಡಿ ಬನ್ನಿ. ಶಿವಮೊಗ್ಗಕ್ಕೆ ಹೋಗುವುದಕ್ಕೆ ನಿಮಗೆ ಪುರುಸೊತ್ತಾಗುವುದಿಲ್ಲ ಆದರೆ ಅಲ್ಲಿಗೇ ಹೋಗಿನೋಡಿ ಬನ್ನಿ. ಮೊನ್ನೆ ದೊಡ್ಡಬಳ್ಳಾಪುರದ ಹತ್ತಿರ5 ಎಕರೆಯಲ್ಲಿ ಫ್ಲೋರಿಕಲ್ಚರ್ ಅನ್ನು ವೀನಸ್ ಟೆಕ್ನಾಲಜಿಯೊಳಗೆ ಕೆಮಿಕಲ್ ಫರ್ಟಿಲೈಸರ್ ಪೆಸ್ಟಿಸೈಡ್ಸ್ ಇಲ್ಲದೇ ಮಾಡುತ್ತಿದ್ದಾರೆ. ಅವರಿಗೆ ಇವರೆಲ್ಲರಿಗಿಂತ ಹೂವಿನ ಹಣ ಜಾಸ್ತಿ ಸಿಗುತ್ತಿದೆ. ಮಾಡುವುದಕ್ಕೆ ಸೀಮಿತ ಅಲ್ಲ. ಆದರೆ ಮಾಡಿದರೆ ಇದು ಸಾಧ್ಯವಿದೆ. ಇದೆಲ್ಲ ಸಕ್ಸಸ್ ಫುಲ್ ಎಕ್ಸ್‌ಪೆರಿಮೆಂಟ್ ನಾವು ಹೇಳುವುದು. ಬೇರೆ ದೊಡ್ಡ ಕಂಪೆನಿಯವರ್‍ಯಾರೂ ಇದನ್ನು ಹೇಳುವುದಿಲ್ಲ ಏಕೆಂದರೆ, ಆ ದೊಡ್ಡ ಕಂಪನಿಗಳವರಿಗೆ ಇದರಿಂದ ಲಾಭ ಇಲ್ಲ. ಏಕೆಂದರೆ ಪ್ರತಿ ಕೃಷಿ ಕುಟುಂಬ ಇದನ್ನು ತಾನೇ ಮಾಡಬೇಕಾಗುತ್ತದೆ. ನಮಗೆ ಕಾಂಪೋಸ್ಟ್ ಗೊಬ್ಬರ ತಂದು ಕೊಡುವುದಕ್ಕೆ ಟಾಟಾ ಬಿರ್ಲಾ ಅವರಿಗೆ ಸಾಧ್ಯವಾಗುವುದಿಲ್ಲ ಯಾರಾದರೂ ಸ್ಪಿಕ್ ನವರಿಗೆ ತಂದು ಕೊಡುವುದಕ್ಕಾಗುವುದಿಲ್ಲ. ಕಾಂಪೋಸ್ಟ್ ಗೊಬ್ಬರ ಬೇಕೆಂದರೆ ಡಿ. ಆರ್. ಪಾಟೀಲರೇ ಮಾಡಿಕೊಳ್ಳಬೇಕು, ಜ್ಞಾನೇಂದ್ರ ಅವರೇ ಮಾಡಿಕೊಳ್ಳಬೇಕು ಜೆ. ಹೆಚ್. ಪಟೇಲರೇ ಮಾಡಿಕೊಳ್ಳಬೇಕು ಇಂತಹ ವ್ಯವಸ್ಥೆ ಇದೆ. ಇದು ಬಹಳ ದುರ್ದೈವ. ಬೆಂಗಳೂರು ವಿಶ್ವಾವಿದ್ಯಾನಿಲಯದವರಿಗೆ ಬಹಳಷ್ಟು ಅನುಭವವಿದ್ದು ಸಾವಯವ ಕೃಷಿ ಒಳ್ಳೆಯದೆಂದು ಹೇಳುತ್ತಾರೆ. ಆದರೆ ಪ್ಯಾಕೇಜ್ ಆಫ್ ಪ್ರಾಕ್ಟೀಸ್ ರೇಡಿಯೋ ಮುಖಾಂತರ ಹೇಳುವುದು, ಗ್ರಾಮ ಸೇವಕರ ಮುಖಾಂತರ ಹೇಳುವುದೆಲ್ಲ ಕೆಮಿಕಲ್ ಫರ್ಟಿಲೈಸರ್ಸ್. ಇದೆಲ್ಲಾ ಹೋಗಬೇಕು. ಎಲ್ಲ ತಜ್ಞರನ್ನೂ ಕೂಡಿಸಿ ಯಾರ್‍ಯಾರು ತಮ್ಮ ಸ್ವಂತ ಕ್ಷೇತ್ರದಲ್ಲಿ ಬಹಳ ಸಕ್ಸಸ್‌ಫುಲ್ ಆಗಿ ಕೆಲಸ ಮಾಡಿದ್ದಾರೆ ಅವರನ್ನೆಲ್ಲಾ ಕೂಡಿಸಿಕೊಂಡು ಒಂದು ಹೊಸ ತಿರುವನ್ನು ಕೃಷಿಗೆ ಕೊಡುವಂತಹ ಅವಶ್ಯಕತೆ ಬಹಳಷ್ಟು ಇದೆ. ಅವರಿಗೆ ಅನುಕೂಲತೆ ಮಾಡಿಕೊಡಬೇಕು ನೀವು ಫರ್ಟಿಲೈಸರ್‌ಗೆ ಸಾಲ ಕೊಡುತ್ತೀರಿ. ನಾವು ಕೆಮಿಕಲ್ ಫರ್ಟಿಲೈಸರ್ ತಂದರೆ ಸಾಲ ಕೊಡುತ್ತೀರಿ. ಅದರ ಬದಲು ಎನ್‌ಪಿಕೆಗೆ ಕೊಡಿ ಸಾಲವನ್ನು.

ನಮ್ಮ ಕಾಂಪೋಸ್ಟ್ ಗೊಬ್ಬರದಲ್ಲೂ ಎನ್‌ಪಿಕೆ ಇರುತ್ತದೆ ಬರೀ ಕೆಮಿಕಲ್ ಫರ್ಟಿಲೈಸರ್‌ನಲ್ಲಿ ಮಾತ್ರ ಎನ್‌ಪಿಕೆ ಇರುವುದಿಲ್ಲ. ಎಲ್ಲ ರೀತಿಯಿಂದಲೂ ಬದಲಾವಣೆ ಬರಬೇಕು. ಆ ರೀತಿ ಬದಲಾವಣೆಯಾದಾಗ ಮಾತ್ರ ನಮ್ಮ ರೈತರಿಗೆ ಅನುಕೂಲವಾಗುತ್ತದೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ್ : ಅಗ್ರಿಕಲ್ಚರ್ ಯೂನಿವರ್ಸಿಟಿ ಅದು ನೇರವಾಗಿ ರೈತರ ಜೊತೆ ಸಂಬಂಧವನ್ನು ಬೆಳೆಸಬೇಕಾಗಿದೆ. ರೈತರ ಸಮಸ್ಯೆಗಳೇನು ಇವೆ ಅದನ್ನು ಅವರು ತಿಳಿದುಕೊಳ್ಳುವಂತಹ ವಿಧಾನ ಇಲ್ಲಿ ಬರಬೇಕು. ಇದಕ್ಕೆ ಮೀಡಿಯೇಟರ್, ಆಗಿ ನಮ್ಮ ಕೃಷಿ ಇಲಾಖೆಯ ಎಕ್ಸ್‌ಟೆನ್‌ಷನ್‌ನವರು ಇರಬೇಕು. ಎಕ್ಸ್‌ಟೆನ್‌ಷನ್‌ನವರು ಎಷ್ಟರಮಟ್ಟಿಗೆ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಹೊಸ ಹೊಸ ಸಮಸ್ಯೆಗಳನ್ನು ಓದಿ ಅವರಿಗೆ ತಿಳಿಸುತ್ತಿದ್ದಾರೆ ಎಂದು ವಿಚಾರ ಮಾಡಬೇಕು. ರೈತರು ಫೀಲ್ಡಿನಲ್ಲಿರುವ ಸಮಸ್ಯೆಗಳನ್ನು ತಿಳಿದುಕೊಳ್ಳುವವರು ಕೃಷಿ ಇಲಾಖೆಯ ಎಕ್ಸ್‌ಟೆನ್‌ಷನ್ ಡಿಪಾರ್ಟ್‌ಮೆಂಟ್. ಅವರು ಮೀಡಿಯೇಟರ್ ಆಗಿ ರೈತರಿಗೆ ಸಹಾಯ ಮಾಡಬೇಕಾಗಿತ್ತು. ಆದರೆ ಅವರಿಗೇ ಎಷ್ಟೋ ಪೆಸ್ಟಿಸೈಡ್ಸ್ ಬಗ್ಗೆ ಪ್ಲಾನ್ ಇಲ್ಲ ಅವರಿಗೇ ಕೃಷಿಯ ವೈಜ್ಞಾನಿಕ ತಿಳುವಳಿಕೆ ಅಲ್ಲಿನ ಎಕ್ಸ್‌ಟೆನ್‌ಷನ್‌ನವರಿಗೆ ಇಲ್ಲ. ಈ ಪೆಸ್ಟಿಸೈಡ್ಸ್ ಯಾವ ಹುಳಗಳಿಗೆ ಉಪಯೋಗಿಸುತ್ತೇವೆ ಕ್ರಿಮಿನಾಶಕಗಳು ಯಾವುದು ಅಥವಾ ಪೆಸ್ಟಿಸೈಡ್ಸ್ ಯಾವುದು ಎಂಬ ಬಗ್ಗೆ ಕೂಡ ಅವರಿಗೆ ತಿಳುವಳಿಕೆ ಇಲ್ಲ. ರೈತರು ತಾವೇ ಸ್ವತಃ ಅನೇಕ ಪ್ರಯೋಗ ಸಂಶೋಧನೆಗಳನ್ನು ಮಾಡಿ ಉತ್ತಮವಾದ ಬೆಳೆಗಳನ್ನು ಬೆಳೆಯುವ ಹಂತಕ್ಕೆ ಬಂದಿದ್ದು ಅವನು ಮುಂದೆ ಬಂದಾಗ ನಮ್ಮ ಪ್ಯಾಕೇಜ್ ಆಫ್ ಪ್ರಾಕ್ಟೀಸ್ ಯೂನಿವರ್ಸಿಟಿಯೊಳಗೆ ಬರುತ್ತದೆ. ಅದನ್ನು ಖಾಸಗಿ ಕಂಪನಿಯವರು ಎಕ್ಸ್‌ಟೆನ್‌ಷನ್ ವರ್ಕ್ ಮಾಡುತ್ತಾರೆ. ಖಾಸಗಿ ಕಂಪನಿಯವರು ಎಕ್ಸ್‌ಟೆನ್‌ಷನ್ ಕೇಸ್ ಮಾಡುತ್ತಾರೆಯೇ ವಿನಃ ನಮ್ಮ ಅಗ್ರಿಕಲ್ಚರ್ ವಿಶ್ವವಿದ್ಯಾನಿಲಯದವರು ಮಾಡುತ್ತಿಲ್ಲ. ಖಾಸಗಿ ಕಂಪನಿಯವರು ಎಕ್ಸ್‌ಟೆನ್‌ಷನ್ ವರ್ಕ್ ಮಾಡಿ ಪ್ರಯೋಗವನ್ನು ಮಾಡಿ ಇದರಿಂದಾಗಿ ರೈತರು ಮುಂದೆ ಬಂದಿದ್ದಾರೆ. ಇದರಿಂದಾಗಿ ರೈತರು ಹೊಸ ಹೊಸ ಸುಧಾರಣೆಗಳನ್ನು ಸಹ ಮಾಡಿಕೊಂಡಿದ್ದಾರೆ. ಆದರೆ, ಇವರ ಪ್ರಯೋಗಗಳಾದ ಮೇಲೆ ನಮ್ಮ ಪ್ಯಾಕೇಜ್ ಆಫ್ ಪ್ರಾಕ್ಟೀಸ್‌ನಲ್ಲಿ ಬರುತ್ತದೆ. ಏಕೆಂದರೆ ನಾನೂ ಕೂಡ ಗೊಬ್ಬರ ಬೀಜ, ಮೆಡಿಸನ್ ಮಾರಾಟ ಮಾಡುವುದರ ಮೂಲಕ ಇಲ್ಲಿಗೆ ಬಂದಿದ್ದೇನೆ. ಹಿಂದೆ ಶಾಸಕನಾಗಿದ್ದಾಗ ನಮ್ಮ ಧಾರವಾಢದಲ್ಲಿ ಕೃಷಿ ವಿಶ್ವವಿದ್ಯಾನಿಲಯವಾಗಬೇಕೆಂದು ಒತ್ತಾಯ ಮಾಡಿ ಅಲ್ಲಿ ಕೃಷಿ ವಿಶ್ವವಿದ್ಯಾನಿಲಯವನ್ನು ಸ್ಥಾಪನೆ ಮಾಡಿಸಿದೆ. ಏಕೆಂದರೆ ಉಳಿದ ವಿಶ್ವವಿದ್ಯಾನಿಲಯ ಬರೀ ಕಾರಕೂನರನ್ನು ತಯಾರು ಮಾಡುವಂತಹ ವಿಶ್ವವಿದ್ಯಾನಿಲಯ. ಅವರುಗಳು ಫುಟ್‌ಪಾತ್‌ಮೇಲೆ ಅಡ್ಡಾಡುತ್ತಿದ್ದಾರೆ. ಮಣ್ಣಿನ ಮಕ್ಕಳಿಗೆ ಈ ದೇಶದಲ್ಲಿ 80 ಪರ್ಸೆಂಟ್ ಜನ ಬಡವರು ಬೆವರು ಸುರಿಸಿ ಶುದ್ಧವಾದಂತಹ ಕಾಯಕ ಮಾಡುವವರಿಗೆ ಪ್ರಾಮಾಣಿಕ ಕಾಯಕ ಮಾಡುವಂತಹ ಜನರಿಗೆ ಈ ಸಂಶೋಧನೆಯ ಲಾಭ ಮುಟ್ಟಬೇಕಾಗಿದೆ. ಅವರಿಂದ ಆರ್ಥಿಕವಾಗಿ ಈ ದೇಶ ಬೆಳವಣಿಗೆಯಾಗಬೇಕಾಗಿದೆ. ರೈತರ ಬೆಳವಣಿಗೆಯಾಗಬೇಕಾದರೆ ಕೃಷಿ ವಿಶ್ವವಿದ್ಯಾನಿಲಯಗಳಲ್ಲಿ ಸಂಶೋಧನೆಗಳು ಏನು ಆಗುತ್ತವೆ ಅದು ನೇರವಾಗಿ ರೈತರಿಗೆ ಮುಟ್ಟಬೇಕು. ಎಕ್ಸ್‌ಟೆನ್‌ಷನ್ ವರ್ಕ್‌ನ್ನು ಕೃಷಿ ಇಲಾಖೆಯಲ್ಲಿ ಮಾಡಬೇಕಾಗಿದೆ. ಆ ದೃಷ್ಟಿಯಲ್ಲಿ ಹಾರ್ಟಿಕಲ್ಚರ್ ಇಲಾಖೆ, ಅಗ್ರಿಕಲ್ಚರ್ ಇಲಾಖೆ, ಪಶುಸಂಗೋಪನಾ ಇಲಾಖೆ ಇವೆಲ್ಲ ಹೆಚ್ಚು

ಎಕ್ಸ್‌ಟೆನ್‌ಷನ್ ವರ್ಕ್‌ಅನ್ನು ಯೂನಿವರ್ಸಿಟಿಗೆ ಸಂಬಂಧಿಸಿದಂತೆ ಏನು ಮಾಡುತ್ತಾರೆ ಇದನ್ನು ರೈತರಿಗೆ ಮುಟ್ಟಿಸುವಂತಹ ಕಾರ್ಯ ಮಾಡಬೇಕಾಗಿದೆ. ನಮ್ಮ ವಿಶ್ವವಿದ್ಯಾನಿಲಯಗಳದ್ದು ಅನೇಕ ಫಾರಂಸ್‌ಗಳು ಇವೆ. ಕೃಷಿ ಇಲಾಖೆಯದ್ದು ಕೂಡ ಅನೇಕ ಫಾರಂಸ್‌ಗಳು ಇವೆ. ಅದರಲ್ಲಿ ಎಷ್ಟು ಹಣ ಖರ್ಚು ಮಾಡುತ್ತಿದ್ದೇವೆ ಅದು ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ ಎಂಬುದನ್ನು ನೋಡಬೇಕಾಗಿದೆ.

ಅಧ್ಯಕ್ಷರು : ನೀವು ಇಂಜಿನಿಯರ್ ಅಲ್ಲವೇ? ನಮ್ಮ ವ್ಯವಸಾಯ ಮಾರಾಟಗಾರರ ಕೈಗೆ ಹೊರಟು ಹೋಯಿತು.

ಶ್ರೀ ಐ. ಎಂ. ಜಯರಾಮ ಶೆಟ್ಟಿ : ಗೊಬ್ಬರದ ಬಗ್ಗೆ ಸ್ವಲ್ಪ ಹೇಳುತ್ತೇನೆ. ನಾನು ರೈತನಾಗಿ ಮಾತನಾಡುತ್ತಿದ್ದೇನೆ. ಈಗಾಗಲೇ ಮಾನ್ಯ ಸದಸ್ಯರು ಹೇಳಿದರು. ತಾವು ತಿಳಿದ ಹಾಗೆ ಹೊಸ ಹೊಸ ತಳಿಗಳು ಬಂದಿದೆ. ಹೆಚ್ಚಿನ ಸಂಖ್ಯೆಯಲ್ಲಿ ಎನ್‌ಪಿಕೆ ಗೊಬ್ಬರಗಳನ್ನು ಹಾಕುತ್ತಿದ್ದಾರೆ. ಆದರೆ ಯಾವುದೇ ಒಂದು ಸಸಿ ಚೆನ್ನಾಗಿ ಬೆಳೆಯಬೇಕಾದರೆ 16 ನ್ಯೂಟ್ರಿಯೆಂಟ್ಸ್ ಅಗತ್ಯವಾಗಿ ಅದಕ್ಕೆ ಬೇಕಾಗುತ್ತದೆ. ಅದರಲ್ಲಿ ನೈಟ್ರೋಜನ್ ಆಕ್ಸಿಜನ್ ಕಾರ್ಬನ್. ಇದು ಗಾಳಿ ಮತ್ತು ನೀರಿನಲ್ಲಿ ಸಿಗುತ್ತದೆ. ಈ ಎನ್‌ಪಿಕೆ ಎನ್ನುವುದು ಮೇಜರ್ ನ್ಯೂಟ್ರಿಯೆಂಟ್ ಆಗಿ 17-17 ಅಥವಾ 19-19 ಎಂದು ಹಾಕುತ್ತಾರೆ. ಮತ್ತು ಉಳಿದ ಹತ್ತನ್ನು ಜಿಂಕ್‌ಫುಲ್ ಮ್ಯಾಂಗನೀಸ್ ಐರನ್ ಮಾರ್ಡ್ ಕಮ್ ಬೋರಾನ್ ಕ್ಯಾಲ್ಸಿಯಂ ಸಲ್ಫರ್ ಇದು ಬಹಳ ಕಡಿಮೆ ಪ್ರಮಾಣದಲ್ಲಿ ಬೇಕಾಗುತ್ತದೆ. ನಮ್ಮ ಅರಗ ಜ್ಞಾನೇಂದ್ರ ಅವರು ಹೇಳಿದ್ದಾರೆ. ಹಟ್ಟಿ ಗೊಬ್ಬರ ಏನಾಗುತ್ತದೆಂದು ವಿಚಾರ ಮಾಡಬೇಕು. ರೈತರು ಬೆಳೆಯುತ್ತಾರೆ ಅದು ಎಲೆಯಲ್ಲಿ ಅಥವಾ ಹುಲ್ಲಿನಲ್ಲಿ ಇರುತ್ತದೆ ಆ ಹುಲ್ಲು ತಂದು ಪುನಃ ಗೊಬ್ಬರವಾಗಿ ಮಾರ್ಪಾಟಾಗಿ ಭೂಮಿಯಲ್ಲಿ ಇರುತ್ತದೆ. ಆದರೆ ಈಗ ಹೆಚ್ಚಿನ ಇಳುವರಿ ತಳಿಯನ್ನು ಹಾಕುವುದಕ್ಕೋಸ್ಕರ ಭೂಮಿಗೆ ಸೇರುವ ನ್ಯೂಟ್ರಿಯೆಂಟ್ಸ್ ಸಸಿಗೆ ಸಾಕಾಗುವುದಿಲ್ಲ. ಆದ್ದರಿಂದ ಮಾನ್ಯ ಡಿ. ಆರ್. ಪಾಟೀಲರು ಹೇಳಿದ ಹಾಗೆ ಪ್ರತಿ ವರ್ಷ ಇಳುವರಿ ಕಡಿಮೆಯಾಗುತ್ತದೆ. ರೈತರು 16 ನ್ಯೂಟ್ರಿಯೆಂಟ್ಸ್‌ನಲ್ಲಿ ಖಾಲಿ 6 ನ್ಯೂಟ್ರಿಯೆಂಟ್ಸ್ ಅನ್ನು ಮಾತ್ರ ರೀಪ್ಲೇಸ್ ಮಾಡುತ್ತಿದ್ದಾರೆ. ಮತ್ತೆ ಉಳಿದ 10 ಹಟ್ಟಿ ಗೊಬ್ಬರದಲ್ಲಿ ಖಂಡಿತ ಇವರು ಹೇಳಿದ ಹಾಗೆ ಇರುತ್ತದೆ. ಆದರೆ ಹಟ್ಟಿ ಗೊಬ್ಬರ ಹಾಕುವಂತಹ ಪ್ರಮಾಣ ಇವತ್ತು ಕಡಿಮೆಯಾಗಿದೆ. ಅದರಿಂದಾಗಿ ತೆಗೆಯುವಂತಹ ಇಳುವರಿ ಸಹ ಕಡಿಮೆಯಾಗಿದೆ. ಇದರಿಂದಾಗಿ ಭೂಮಿಯಿಂದ ಬೇಕಾದಂತಹ ಪೋಷಕಾಂಶಗಳು ಸಸಿಗೆ ಸಿಗದೆ ಬೆಳವಣಿಗೆ ಸರಿಯಾಗಿ ಆಗದೇ ಇಳುವರಿ ಕೂಡ ಕಡಿಮೆಯಾಗಿದೆ. ಕುಂಠಿತವಾದ ಬೆಳವಣಿಗೆಯಾಗಿದೆ. ವೈಜ್ಞಾನಿಕವಾಗಿ ನಿಜವಾಗಿ ಯಾವುದೇ ಗೊಬ್ಬರವನ್ನು ರೈತರು ಹಾಕಿದಲ್ಲಿ ಅದರಿಂದ ಇಳುವರಿ ಚೆನ್ನಾಗಿ ಸಿಗುತ್ತದೆ. ಸುಮಾರು 20 ವರ್ಷದ ನನ್ನ ಅನುಭವದಲ್ಲಿ ನಾನು ಇದನ್ನು ಹೇಳುತ್ತಿದ್ದೇನೆ. ಚೆನ್ನಾಗಿ ಇದರಿಂದ ಇಳುವರಿ ಸಿಗುತ್ತದೆ. ಉದಾಹರಣೆಗೆ ಕಾಫಿಯನ್ನೇ ತೆಗೆದುಕೊಳ್ಳಿ. ಅದು ಚೆನ್ನಾಗಿ ಎಸ್ಟಾಬ್ಲಿಷ್ ಆಗಿದೆ. ಅದರಲ್ಲಿ ಚೆನ್ನಾಗಿ ಎಸ್ಟಾಬ್ಲಿಷ್ ಆದಂತಹ ರೈತರು ಎನ್‌ಪಿಕೆ ಫರ್ಟಿಲೈಸರ್ 3 ಹಾಕುತ್ತಾರೆ ಹೈಡ್ರೋಜನ್ ಆಕ್ಸಿಜನ್, ಕಾರ್ಬನ್ ಸಿಗುತ್ತದೆ. ಮತ್ತೆ ಉಳಿದ ಕಾಪರ್ ಸಲ್ಫರ್ ಕ್ಯಾಲ್ಸಿಯಂ ಕಾಪರ್ ಸಲ್ಫರ್‌ಗೆ ಅವರು ಬೋರ್ಡಸ್ ಮಿಕ್ಸ್‌ಚರ್ ಎಂದು ಹಾಕುತ್ತಾರೆ. ಕೇವಲ 7 ನ್ಯೂಟ್ರಿಯೆಂಟ್ ಮಾತ್ರ ಭೂಮಿಯಿಂದ

ಸಿಗುತ್ತಿದೆ. ಅದು ಭೂಮಿಯಲ್ಲಿ ಮತ್ತು ಹಟ್ಟಿ ಗೊಬ್ಬರದಲ್ಲಿ ಕೂಡ ಇರುತ್ತದೆ. ಆದರೆ ದಿವಸ, ದಿವಸ ಹೋದಾಗ ಇವತ್ತು ತೆಗೆಯುವಷ್ಟು ಇಳುವರಿಗೂ ಹೆಚ್ಚೂ ಕಡಿಮೆ 3 ಪಟ್ಟು ಬೆಳೆಯನ್ನು ಹೆಚ್ಚಾಗಿ ತೆಗೆದುಯುತ್ತಿದ್ದೇವೆ. ಆ ರೀತಿ ತೆಗೆಯುವುದರಿಂದ ಭೂಮಿಯಲ್ಲಿ ಲಘು ಪೋಷಕಾಂಶಗಳು ಕಡಿಮೆಯಾಗಿ ಮತ್ತೆ ಹಟ್ಟಿ ಗೊಬ್ಬರ ಹಾಕುವಂತಹ ಪ್ರಮಾಣ ಕಡಿಮೆಯಾಗಿರುವುದರಿಂದ ಇಳುವರಿ ಕಡಿಮೆಯಾಗುವುದಕ್ಕೆ ಕಾರಣವೆಂದು ನಾನು ನನ್ನ ಅನುಭವದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಆಯನೂರು ಮಂಜುನಾಥ್ : ಇಳುವರಿ ಜಾಸ್ತಿ ಬರತಕ್ಕಂತಹ ಅಂಶಗಳ ಕಡೆಗೆ ಗಮನ ಕೊಟ್ಟು ಅದರ ಕಡೆಗೆ ಸಂಶೋಧನೆಗಳು ಈಗ ಏನು ಬಂದಿದೆ ಅದರ ವರದಿಯನ್ನು ನಾವು ಗಮನಿಸಬೇಕಾಗುತ್ತದೆ. ಆಹಾರವನ್ನು ಜನಸಂಖ್ಯೆಗೆ ತಕ್ಕಂತೆ ಕೊಡಬೇಕೆನ್ನುವ ಕಾರಣದಿಂದ ಎಂತಹ ಆಹಾರವನ್ನು ಕೊಡುತ್ತಿದ್ದೇವೆಂದು ವಿಚಾರ ಮಾಡಬೇಕಾಗಿದೆ. ಎಲ್ಲವೂ ಇಂದು ವಿಷಪೂರಿತವಾದಂತಾಗಿದೆ. ವಿಷಪೂರಿತವಾದಂತಹ ಗೊಬ್ಬರ ಮತ್ತು ಔಷಧಿಯಿಂದಾಗಿ ಎಲ್ಲವೂ ವಿಷಪೂರಿತವಾಗುತ್ತಿದೆ. ಬರತಕ್ಕಂತಹ ಎಲ್ಲ ಅಂಶಗಳು ಕುಡಿಯುವ ನೀರಿನಲ್ಲಿ, ಆಹಾರದಲ್ಲಿ ಸೇರುತ್ತಿದೆ. ನಾವು ಹೋಟಲ್‌ಗಳಲ್ಲಿ ಮನೆಗಳಲ್ಲಿ ಉಪಯೋಗಿಸುವಂತಹ ತರಕಾರಿ ಅತ್ಯಂತ ವಿಷಪೂರಿತವಾಗಿದೆ. ಅದನ್ನು ತೊಳೆಯದೆ ಉಪಯೋಗಿಸಿದರೆ ನಾನಾ ಖಾಯಿಲೆಗಳಿಗೆ ಈಡಾಗುವುದರ ಜೊತೆಗೆ ಆರೋಗ್ಯ ಕೂಡ ಕೆಟ್ಟು ಹೋಗುತ್ತದೆ. ಇತ್ತೀಚೆಗೆ ಒಂದು ಸಂಶೋಧನೆ ಕೂಡ ಆಗಿದೆ. ತಾಯಿಯ ಹಾಲಿನಲ್ಲಿ ಡಿ.ಡಿ.ಟಿ. ಅಂಶ ಕಂಡು ಬರುತ್ತಿದೆ. ತಾಯಿಯ ಹಾಲಿನಲ್ಲಿ ಡಿ.ಡಿ.ಟಿ. ಅಂಶ ಕಂಡು ಬರುವುದಕ್ಕೆ ಹೇಗೆ ಸಾಧ್ಯವೆಂದರೆ ಈ ಆಹಾರಕ್ಕೆ ಉಪಯೋಗಿಸುವಂತಹ ಕೆಮಿಕಲ್ಸ್ ಹೊಸ ಹೊಸ ಔಷಧಿಗಳು ಇವೆಲ್ಲವೂ ಆಹಾರದ ಜೊತೆ ಸೇರಿ ತಾಯಿಯ ದೇಹಕ್ಕೆ ಸೇರುತ್ತಿದೆ. ಪುರುಷರ ದೇಹದಲ್ಲಿ ಇದೆ. ಆದರೇ ರೀ ಪ್ರೊಡಕ್ಷನ್ ಆಗುವಂತಹ ಕ್ರಿಯೆ ಪುರುಷನ ದೇಹದಲ್ಲಿ ಆಗುವುದಿಲ್ಲ. ಅದು ಹೆಣ್ಣಿನ ದೇಹದಲ್ಲಿ ಕಂಡುಬರುತ್ತಿದೆ. ನಾವು ಜನರಿಗೆ ಎಂತಹ ಆಹಾರವನ್ನು ಕೊಡಬೇಕೆಂಬ ಬಗ್ಗೆ ಕೂಡ ನಾವು ಯೋಚನೆ ಮಾಡಬೇಕಾಗಿದೆ.

ಶ್ರೀ ಅರಗ ಜ್ಞಾನೇಂದ್ರ : ತಾವು ಈ ನಿಟ್ಟಿನಲ್ಲಿ ಭಯ ಪಡತಕ್ಕಂತಹ ಅವಶ್ಯಕತೆ ಇದೆ. ನಿಜ ಹೇಳಬೇಕು ಎಂದರೆ ಮೆಡಿಸನ್‌ಮಾರತಕ್ಕಂತಹ, ಗೊಬ್ಬರ ಮಾರಾಟ ಮಾಡತಕ್ಕಂತಹ ಕಂಪೆನಿಗಳು, ನಮ್ಮ ಅಧಿಕಾರಿಗಳನ್ನು ಹಳಿ ತಪ್ಪಿಸತಕ್ಕಂತಹವರಿಗೆ ಆಸೆ ಪಡಿಸತಕ್ಕಂತಹ, ಅವರು ಕೊಡತಕ್ಕಂತಹ ವರದಿಗಳಲ್ಲಿ, ಬೆಳೆ ಕಡಿಮೆಯಾಗುತ್ತದೆ ಇಷ್ಟೊಂದು ಜನರಿಗೆ ಆಹಾರ ಒದಗಿಸುವುದಕ್ಕಾಗುವುದಿಲ್ಲ ಏಕೆಂದರೆ, ರೈತರು ಸಾವಯವ ಕೃಷಿಯನ್ನೇ ಅವಲಂಬಿಸಿದರೆ ಅವರಿಗೆ ಲಾಭ ಸಿಗುವುದಿಲ್ಲ. ಅದರಿಂದಾಗಿ ಈ ಲಾಭಕ್ಕೋಸ್ಕರ ನಮ್ಮೆಲ್ಲರನ್ನು ಕೂಡ ಒಂದು ರೀತಿಯಿಂದ ಕತ್ತಲಲ್ಲಿಡತಕ್ಕಂಥ ಒಂದು ವಿಶೇಷವಾದಂಥ ಪ್ರಯತ್ನ ನಡೆಯುತ್ತಿದೆ. ತಜ್ಞರಾಗಿರತಕ್ಕಂಥ ಅನೇಕ ಕೃಷಿ ತಜ್ಞರು ರೈತರ ನಡುವಿನಲ್ಲಿಯೆ ಇದ್ದಾರೆ ಅವರುಗಳನ್ನು ಸೇರಿಸಿ ಒಂದು ಸೆಮಿನಾರ್‌ಗಳನ್ನು ಮಾಡಿ ಅಥವಾ ಮಾನ್ಯ ಮಂತ್ರಿಗಳೇ ಅಂಥವರ ಮನೆಯ ಬಾಗಿಲುಗಳಿಗೆ ಹೋಗಬೇಕು, ಈ ರೀತಿ ಮನೆಗಳಿಗೆ ಹೋಗುವುದರಿಂದ ಅವರಿಗೇನು ಅಗುವುದಿಲ್ಲ, ರೈತರ ಕೃಷಿ ಬಗ್ಗೆ ಮತ್ತು ಅವನ ಭೂಮಿಯ ಬಗ್ಗೆ ಮತ್ತು ಎಷ್ಟು ಇಳುವರಿ ಬರುತ್ತದೆ, ನಾವು ಈಗ ಬೆಳೆಯುತ್ತಿರುವ ಜನಸಂಖ್ಯೆಗೆ ಯಾವರೀತಿಯಿಂದ ಆಹಾರ ಒದಗಿಸಬೇಕು ಎನ್ನುವುದರ ಬಗ್ಗೆ ಚರ್ಚೆ ಮಾಡುವುದಕ್ಕೆ ಏನು ತೊಂದರೆ? ಸರ್ಕಾರದ ಜವಾಬ್ದಾರಿಯನ್ನು

ವಹಿಸಿಕೊಂಡಂಥ ಮಂತ್ರಿಗಳು ಅಂಥವರ ಮನೆಬಾಗಿಲಿಗೆ ದಯಮಾಡಿ ಒಂದು ಸಾರಿ ಹೋಗಿ. ಅವರಲ್ಲಿರತಕ್ಕಂಥ ಜ್ಞಾನವನ್ನು ಕೆದುರಿ ಹೊರತೆಗೆದು ಇಡೀ ರಾಜ್ಯ ವ್ಯಾಪ್ತಿ ಇದನ್ನು ತುಂಬಿಸಲಿಕ್ಕೆ ಸಾಧ್ಯವಾಗುತ್ತದೆ, ಇದು ಕೆಲವರ ಸ್ವತ್ತು ಆಗಬಾರದು, ನೀವು ಇಲ್ಲಿಗೆ ಹೋಗುವಾಗ ನಿಮ್ಮ ಅಧಿಕಾರಿಗಳನ್ನು ಕರೆದುಕೊಂಡು ಹೋಗಿ, ಆ ಅಧಿಕಾರಿಗಳ ತಲೆಯಲ್ಲಿ ಮತ್ತು ಹೃದಯದಲ್ಲಿ ಸ್ವಲ್ಪ ತುಂಬಿಸಬೇಕು. ಇವತ್ತು ನಾವು ಯಾವುದೊಂದು ಭ್ರಮೆಯಲ್ಲಿಯೂ ಕೂಡ ಇರಬಾರದು, ಮಾನ್ಯ ಮಂಜುನಾಥ್‌ರವರು ಹೇಳಿದ ಹಾಗೆ ಇವತ್ತು ಆಹಾರವನ್ನು ಕೊಡಬೇಕು, ಎಂಥ ಆಹಾರವನ್ನು ಕೊಡಬೇಕು, ಯಾವ ಸತ್ವ ಇರಬೇಕು, ಎಲ್ಲ ಸತ್ವವನ್ನು ಕಳೆದುಕೊಂಡಂಥ ಆಹಾರದಿಂದ ಸ್ವಲ್ಪ ಹೊತ್ತು ಹೊಟ್ಟೆ ತುಂಬಬಹುದು, ಅದರಿಂದ ಬರತಕ್ಕಂಥ ಕಾಯಿಲೆಗಳು ಮತ್ತು ಅದರಿಂದ ಉತ್ಪತ್ತಿಯಾಗತಕ್ಕಂಥ ಸತ್ವದ ಬಗ್ಗೆ ಎಲ್ಲವನ್ನು ಕೂಡ ಈ ಸಂದರ್ಭದಲ್ಲಿ ಯೋಚನೆ ಮಾಡಬೇಕಾಗುತ್ತದೆ. ಹೀಗೆ ಎಜುಕೇಟ್ ಮಾಡತಕ್ಕಂಥ ವ್ಯವಸ್ಥೆ ಇವತ್ತು ಇಲ್ಲ. ನೀವು ಬಜೆಟ್‌ನಲ್ಲಿ ರೈತ ಮಹಿಳೆಯರಿಗೆ ತರಬೇತಿ ಮಾಡಲಿಕ್ಕೆ ಸಾಕಷ್ಟು ಹಣವನ್ನು ಇಟ್ಟುಕೊಂಡಿರುತ್ತೀವಿ, ಎಂದು ಹೇಳುತ್ತೀರಿ, ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಯಾವ ರೀತಿ ತರಬೇತಿ ಆಗುತ್ತಿದೆ? ಯಾರೋ ಕೆಲವು ಹೆಣ್ಣುಮಕ್ಕಳು ಇರುತ್ತಾರೆ, ಅವರೇ ಹಳ್ಳಿಗಳಲ್ಲಿ ನಡೆಯುವ ಎಲ್ಲಾ ಮೀಟಿಂಗ್‌ಗಳಿಗೆ ಹೋಗುತ್ತಾರೆ, ನಿಜವಾಗಿ ಯಾರು ನಾಟಿ ನೆಡುತ್ತಿದ್ದಾರೆ, ಅದನ್ನು ಎಷ್ಟು ಇಂಚು ಆಳದಲ್ಲಿ ಅದನ್ನು ನೆಡಬೇಕು ಎನ್ನತಕ್ಕಂಥದ್ದು ಎಷ್ಟೋ ಜನ ಹೆಣ್ಣುಮಕ್ಕಳಿಗೆ ಇವತ್ತು ಗೊತ್ತಿಲ್ಲ, ಹಿಂದೆ ನಮ್ಮಲ್ಲಿ ಅರ್ಧ ಅಡಿ ಆಳದಲ್ಲಿ ನೆಡುತ್ತಿದ್ದರು ನಾವು ಮಲೆನಾಡಿನಲ್ಲಿ ಹುಟ್ಟಿದರು, 3 ತಿಂಗಳು ಬೆಳೆದಂಥ ಸಸಿಯನ್ನು ತಂದು ನಾವು ನೆಡುತ್ತಿದ್ದೆವು ಇವತ್ತಿನ ಆಧುನಿಕ ಕೃಷಿ ಹಾಗಿಲ್ಲ, ಕೇವಲ ಎರಡು ಇಂಚು ಒಳಗೆ ನಾಟಿ ಮಾಡಬೇಕೆಂದು ಹೇಳುತ್ತಾರೆ, ಮೇಲ್ಗಡೆ ಫಲವತ್ತಾಗಿರತಕ್ಕಂಥ ಮಣ್ಣಿನಲ್ಲಿ ಒಂದು ಫಲವತ್ತತೆ ಇರುತ್ತದೆ ಅದರಿಂದ ಬೇಗ ಬೇರು ಒಳಗೆ ಇಳಿದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ, ಎನ್ನುವ ಜ್ಞಾನ ಹಳ್ಳಿಯಲ್ಲಿ ಕೊನೆಯದಾಗಿ ನಾಟಿ ಮಾಡತಕ್ಕಂಥ ಆ ಹೆಣ್ಣುಮಕ್ಕಳಿಗೆ ಸಿಗಬೇಕು. ಇವತ್ತು ನಮ್ಮ ಕೃಷಿ ತಜ್ಞರು ಮತ್ತು ಕೃಷಿ ಅಧಿಕಾರಿಗಳು ಹೆಣ್ಣುಮಗಳನ್ನು ಕೂರಿಸಿಕೊಂಡು ಹೇಳಬೇಕು, ಈ ರೀತಿ ಹೇಳುವ ವ್ಯವಸ್ಥೆ ಇವತ್ತು ಆಗುತ್ತಿಲ್ಲ. ಎಲ್ಲಿಗೋ ಅವರನ್ನು ತಂದು ನಾವಲು ಅವರಿಗೆ ಒಂದು ವಾರದ ಮತ್ತು 20 ದಿವಸದ ಟ್ರೈನಿಂಗ್ ಕೊಡುತ್ತೇವೆಂದರೆ ಬರುವುದಿಲ್ಲ, ಗ್ರಾಮಾಂತರ ಪ್ರದೇಶದಲ್ಲಿ ಒಂದು ಗುಂಪು ಮಾಡಿ, ಸೋಮವಾರ ದಿವಸ ನಮ್ಮಲ್ಲಿ ಕೃಷಿ ಕೆಲಸ ಮಾಡುವುದಿಲ್ಲ ಆವತ್ತಿನ ದಿವಸ ನಮ್ಮ ಹಳ್ಳಿಯಲ್ಲಿ ಟ್ರೈನಿಂಗ್ ವಿಚಾರ ಹೇಳಬಹುದು.

ಶ್ರೀಮತಿ ಬಿ. ಟಿ. ಲಲಿತಾನಾಯಕ್ : ಮಾನ್ಯ ಅಧ್ಯಕ್ಷರೆ, ಕೃಷಿ ತಜ್ಞರು ಹಳ್ಳಿಗಳಲ್ಲಿ ಏನು ಹೇಳುವುದಕ್ಕೆ ಆಗುವುದಿಲ್ಲ, ಏಕೆಂದರೆ ಹಳ್ಳಿಯ ಹೆಣ್ಣು ಮಗಳಿಗೆ ಅದು ಮುಟ್ಟುವುದಿಲ್ಲ, ಏಕೆಂದರೆ ಆ ಅಧಿಕಾರಿಗಳಿಗೆ ಕನ್ನಡ ಬರುವುದಿಲ್ಲ. ಯಾವ ವಿಶ್ವವಿದ್ಯಾಲಯದಲ್ಲಿ ಕನ್ನಡದಲ್ಲಿ ಪಾಠ ಮಾಡುವುದಿಲ್ಲ, ಮತ್ತು ಯಾರಿಗೂ ಕನ್ನಡ ಬರುವುದಿಲ್ಲ, ಅದನ್ನು ತಾವು ಗಮನಿಸಬೇಕು.

ಶ್ರೀ ಅರಗ ಜ್ಞಾನೇಂದ್ರ : ಹೀಗೆ, ಅವೆಲ್ಲವನ್ನೂ ಕೂಡ ಅವರು ಹೇಳುವಂತಹ ವ್ಯವಸ್ಥೆ ಇವತ್ತು ಆಗಬೇಕು. ಬೀಜದ ಭತ್ತದಿಂದ ಹಿಡಿದು ಪ್ರತಿಯೊಂದರಲ್ಲೂ ಆಗತಕ್ಕಂಥ ಅವ್ಯವಹಾರ, ಮತ್ತು ಕಳಪೆ ಯಾವ ಬೀಜದ ಭತ್ತ ನನ್ನ ಮನೆಯಲ್ಲಿ ಬಂದು ಸುಮಾರು 400 ರಿಂದ 450 ರೂಪಾಯಿಗೆ ಒಂದು

ಕ್ವಿಂಟಾಲ್ ತೆಗೆದುಕೊಂಡು ಹೋಗಿ ಅದಕ್ಕೆ ಒಂದು ಲೇಬಲ್ ಹಚ್ಚಿ ಅದನ್ನು ಇಲಾಖೆಗೆ ಕೊಟ್ಟು, ನಮ್ಮ ರೈತರಿಗೆ ಮಾರಾಟಮಾಡುವುದಾದರೆ, ಅದನ್ನು ಫೌಂಡೇಶನ್ ಸೀಡ್ಸ್, ಸರ್ಟಿಫೈಡ್ ಸೀಡ್ಸ್ ಎಂದು ಮಾರಾಟಮಾಡುವುದಾದರೆ ಹೇಗೆ? ಈ ರೀತಿಯ ದಂಧೆ ರಾಜ್ಯದಲ್ಲಿ ನಡೆಯುತ್ತಿದೆ, ಇವರನ್ನು ಹಿಡಿದು ನೇಣುಕಂಬಕ್ಕೆ ಏರಿಸುವಂಥ ಒಂದು ಕಾನೂನು ತಂದರೆ ಸರಿಯಾಗಬಹುದು. ಇಲ್ಲದಿದ್ದರೆ ಇದರಲ್ಲಿ ಏನು ಅರ್ಥವೇ ಇಲ್ಲ, ಮೊದಮೊದಲು ರೈತ-ರೈತರೆ ಸ್ವಲ್ಪ ಒಳ್ಳೆಯ ಬೀಜ ಯಾರ ಜಮೀನಿನಲ್ಲಿ ಇದೆ ಎಂದು ತಿಳಿದುಕೊಂಡು ನೀನು ಬೀಜವನ್ನು ಕೊಡು ಎಂದು ತೆಗೆದುಕೊಳ್ಳುತ್ತಿದ್ದೆವು, ಆದರೆ, ಇವತ್ತು ಸರ್ಕಾರ ಭಾರಿ ಒಳ್ಳೆಯ ಬೀಜ ಕೊಡುತ್ತದೆ ಮತ್ತು ಭಾರಿ ಜಾಹೀರಾತು ಕೊಡುತ್ತಿದೆ ಎಂದು ಬೀಜ ಕೊಂಡುಕೊಳ್ಳಲು ಹೋದಂಥ ರೈತರಿಗೆ ಟೋಪಿ ಹಾಕತಕ್ಕಂಥ ಒಂದು ವಿಶೇಷವಾದ ಪ್ರಯತ್ನ ಎಂದು ಹೇಳಬಹುದು. ರೈತರಿಗಾಗಿ ಕೊಡತಕ್ಕಂಥ ಈ ಎಲ್ಲಾ ಹಣದಲ್ಲಿಯು ಕೂಡ ಇವರೆಲ್ಲರೂ ಪಾಲುದಾರರಾಗಿದ್ದಾರೆ, ಈಗಿನ ಪರಿಸ್ಥಿತಿ ಹೇಗಿದೆಯೆಂದರೆ ರಸ್ತೆ ಮೇಲೆ ಬಿದ್ದಂಥ ಹಿಟ್ಟಿನ ಚೀಲವನ್ನು ಬೀದಿ ನಾಯಿಗಳೆಲ್ಲಾ ಹರಿದು ತಿನ್ನುತ್ತವೆ ಆ ರೀತಿಯಲ್ಲಿ ಹರಿದು ತಿನ್ನುತ್ತಿದ್ದಾರೆ. ಬೀಜ ಮಾರಾಟ ಮಾಡುವ ವ್ಯಾಪಾರಿ ಮತ್ತು ಗೊಬ್ಬರ ಮಾರಾಟ ಮಾಡುವಂಥ ವ್ಯಾಪಾರಿ, ಅಂದರೆ ಗೊಬ್ಬರದಲ್ಲಿ 50 ಕೆ.ಜಿ. ಚೀಲದಲ್ಲಿ ಬರುವುದೇ ಇಲ್ಲ, ಇದು ಹೊಲಿದಿರುವ ಚೀಲ ನಾನೇನು ಮಾಡುವುದಕ್ಕೆ ಆಗುವುದಿಲ್ಲ ಬೇಕಾದರೆ ಅದರಲ್ಲಿ ಸಕ್ಕರೆ ಗುತ್ತಿ ಹಾಕಿ 10 ಕೆ.ಜಿ. ತೆಗೆದಿರುತ್ತಾನೆ, ಏಕೆ ಹೀಗಾಗಿದೆ ಎಂದು ಕೇಳಿದರೆ ಅದರಲ್ಲಿ ಸರ್ಟಿಫಿಕೇಟ್ ಇದೆ, ಅದು ಬಂದಿರುವುದೆ ಅಷ್ಟು ಎಂದು ಅದರಲ್ಲಿ 10 ಕೆ.ಜಿ. ತೆಗೆದು ಬೇರೆ ಮಾರಿರುತ್ತಾನೆ. ಇಷ್ಟೊಂದು ಕೆಟ್ಟ ರೀತಿಯಲ್ಲಿ ರೈತರಿಗೆ ಶೋಷಣೆ ಮಾಡತಕ್ಕಂಥ ಒಂದು ವ್ಯವಸ್ಥಿತವಾದಂಥ ಜಾಲ, ಏಕೆಂದರೆ ಇವತ್ತು ವ್ಯಾಪಾರಿಗಳನ್ನು ಮತ್ತು ವಿದ್ಯಾವಂತರನ್ನು ಆ ರೀತಿ ಶೋಷಣೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಮುಗ್ಧರಾಗಿರತಕ್ಕಂಥ ರೈತರನ್ನು ಶೋಷಣೆ ಮಾಡಿ ಅವರ ಬೆವರಿನ ಹಣದಿಂದ ಒಂದು ರೀತಿಯ ಬಂದಳಿಕೆಯಲ್ಲಿ ಅನೇಕರು ಬದುಕಿದ್ದಾರೆ, ಒಳ್ಳೆಯ ವೃಕ್ಷ ಇದ್ದರೆ ಅದನ್ನು ಸರಿಯಾಗಿ ಬಂದಳಿಕೆ ಹಬ್ಬಿದರೆ ಅದು ಹೇಗೆ ಸ್ವಲ್ಪ ವರ್ಷದಲ್ಲಿ ಸತ್ತುಹೋಗಬಹುದು ಆ ರೀತಿಯಲ್ಲಿ ಆತನ ದುಡಿಮೆಯಿಂದ ರಕ್ತ ಹೀರಿ ಬದುಕತಕ್ಕಂಥ, ಒಂದು ವ್ಯವಸ್ಥಿತವಾದಂಥ ಪ್ರಯತ್ನ, ಒಂದು ಜಾಲ ಇವತ್ತು ಬದುಕುತ್ತಿದೆ. ಇದನ್ನು ತಪ್ಪಿಸಬೇಕಾಗಿದೆ, ಅದಕ್ಕೋಸ್ಕರ ಈ ಜನರನ್ನು ವಿದ್ಯಾವಂತರನ್ನಾಗಿ ಮಾಡಬೇಕು ಸಾವಯವ ಕೃಷಿಯ ಬಗ್ಗೆ ವಿಶೇಷವಾದಂಥ ತಜ್ಞತೆಯನ್ನು ಕೊಡತಕ್ಕಂಥ, ವ್ಯವಸ್ಥಿತವಾದಂಥ ಪ್ರಯತ್ನವನ್ನು ಇವತ್ತು ಮಾಡಬೇಕು. ಬೆಳೆಯನ್ನು ಬೆಳೆಯುತ್ತೇವೆ, ಆದರೆ ಬೆಳೆದಂಥ ಬೆಳೆಗೆ ಏನು ಪರಿಸ್ಥಿತಿ ಆಗಿದೆ.

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಈಗ ವ್ಯವಸಾಯ ಸಾವಯವ ಪದ್ಧತಿ ಅಥವಾ ನಾವು ಹಿಂದೆ ಯಾವರೀತಿ ಮನೆ ಗೊಬ್ಬರ ಹಾಕಿ ಬೆಳೆಯುತ್ತಿದ್ದ ಬೆಳೆ ಗುಣಮಟ್ಟದಲ್ಲಿ ಉತ್ತಮವಾದರೂ ಬಾಹುಳ್ಯದಲ್ಲಿ ಬಹಳ ಕಡಿಮೆ ಇತ್ತು, ನಾವು ಹುಡುಗರಾಗಿದ್ದಾಗ ಹೊಲಕ್ಕೆ ಹೋಗಿ ಬಿತ್ತುವಾಗ ಅಥವಾ ಎಡೆಕುಂಟೆ ಹೊಡೆಯುವಾಗ ಕಳೆ ತೆಗೆಯುವಾಗ ಸ್ವತಃ ನಮ್ಮ ಮನೆಯ ಹೆಣ್ಣುಮಕ್ಕಳು ಕೆಲಸಕ್ಕೆ ಹೋಗುತ್ತಿದ್ದರು, ನಮ್ಮ ತಾಯಿ ಸ್ವತಃ ಕೆಲಸಕ್ಕೆ ಹೋಗುತ್ತಿದ್ದರು, ನಾವು ವರ್ಷಕ್ಕೆ 500-600 ಪಲ್ಲ ಜೋಳವನ್ನು ಬೆಳೆಯುತ್ತಿದ್ದೆವು. ಈಗ ಮಾನ್ಯ ಅಧ್ಯಕ್ಷರೆ, ಎಲ್ಲಾ ಕಡೆ

ಕಾಂಟ್ರಾಕ್ಟ್ ಲೇಬರ್ ಇದೆ, ಅಂದರೆ 1 ಎಕರೆ ನಾಟಿ ಮಾಡುವುದಕ್ಕೆ ಇಷ್ಟು, ಗೊಬ್ಬರ ಹಾಕುವುದಕ್ಕೆ ಇಷ್ಟು, ಅದನ್ನು ಕೊಯ್ಯುವುದಕ್ಕೆ ಇಷ್ಟು, ಕೊನೆಗೆ ಭತ್ತಮಾಡಿಕೊಡುವುದಕ್ಕೆ ಇಷ್ಟು ಮತ್ತು ಅದನ್ನು ಮಾರುಕಟ್ಟೆಗೆ ತೆಗೆದುಕೊಂಡು ಹೋಗಿ ಮಾರುವುದಕ್ಕೆ ಇಷ್ಟು, ಈ ರೀತಿಯ ವ್ಯವಸಾಯ ಇರುವುದು ಮಾನ್ಯ ಬಿ.ಆರ್. ಪಾಟೀಲ್‌ರವರಿಗೆ ಗೊತ್ತಿದೆ. ಸ್ವತಃ ಇವತ್ತು ನಾವು ಶಿಕ್ಷಣ ಕೊಡಬೇಕೆಂದರೆ ಯಾರಿಗೆ ಶಿಕ್ಷಣ ಕೊಡಬೇಕು? ಈಗ 2 ಇಂಚು ನಾಟಿ ಮಾಡುವುದು ಹೇಳುತ್ತೀರಿ. ಆದರೆ ನಮ್ಮ ಕಡೆ ನೀರಾವರಿ ಬಂದಮೇಲೆ ನಾಟಿಮಾಡುವುದರಲ್ಲಿ ಕೆಲವರು ಪರಿಣಿತರಾಗಿದ್ದಾರೆ, ಗುತ್ತಿಗೆ ತೆಗೆದುಕೊಳ್ಳುತ್ತಾರೆ, ದಿನಗೂಲಿ ರೀತಿಯಲ್ಲಿ ಯಾರೂ ಬರುವುದಿಲ್ಲ, ಒಂದು ಎಕರೆಗೆ ಇಷ್ಟು ಎಂದು ನಾವು ಅವರಿಗೆ ಗುತ್ತಿಗೆ ಕೊಟ್ಟಾಗ, ಅವರು ಒಂದು ಎಕರೆಯನ್ನು 2 ಗಂಟೆಯಲ್ಲಿ ಅಥವಾ 3 ಗಂಟೆಯೊಳಗೆ ಮುಗಿಸಿಕೊಂಡು ಬರಬಹುದು. ಮೊದಲನೆಯದಾಗಿ, ಈಗಿರತಕ್ಕಂಥ ಪ್ರಜಾಸಂಖ್ಯೆಗೆ ನಾವು ಹಳೆಯ ಪದ್ಧತಿಯಲ್ಲಿ ಬೆಳೆದು ನಾವು ಹೊಟ್ಟೆ ತುಂಬಿಸುವುದಕ್ಕೆ ಸಾಧ್ಯವೆ, ಅಥವಾ ಇಲ್ಲವೆ? ನಾವು ಇವತ್ತು ಗೊಬ್ಬರ ಉಪಯೋಗಿಸುವುದು ಬೇಡವೆಂದು ತೀರ್ಮಾನ ಮಾಡೋಣ, ಗೊಬ್ಬರ ಉಪಯೋಗಿಸುವುದರಿಂದ ಎಲ್ಲಾ ರೀತಿಯಿಂದ ವಿಷವನ್ನು ಹರಡುತ್ತಿದ್ದೇವೆ ಎನ್ನುವುದು ಸತ್ಯಾಂಶ. ಚೈನ ದೇಶದಲ್ಲಿ ಇರತಕ್ಕಂಥ ಪದ್ಧತಿಯನ್ನು ನಾವು ಯಾರಾದರೂ ನೋಡಿದರೆ, ಅಲ್ಲಿ ಕೆಮಿಕಲ್ ಫರ್ಟಿಲೈಸರ್ ಒನ್ ಥರ್ಡ್, ಮತ್ತು ಥರ್ಡ್ ಕನ್‌ವೆನ್‌ಷನಲ್ ಫರ್ಟಿಲೈಸರ್ ಕಾಂಪೋಸ್ಟ್ ಕಾಂಪೋಸ್ಟ್ ಏಕೆ ಅಲ್ಲಿ ಅಂದರೆ, ಅಲ್ಲಿ ನಾನು ಒಂದು ಹಳ್ಳಿಗೆ ಹೋಗಿದ್ದೆ ಮಾನ್ಯ ಅಧ್ಯಕ್ಷರೆ, ಆ ಹಳ್ಳಿಯಲ್ಲಿ ಪ್ರತಿಯೊಬ್ಬರ ಮಲಮೂತ್ರ ವಿಸರ್ಜನೆಗೆ ನಿಗದಿತ ಸ್ಥಳಕ್ಕೆ ಹೋಗಬೇಕು, ಆ ಗ್ರಾಮದಲ್ಲಿ 18 ಜನರ ಒಂದು ವರ್ಕ್ ಬ್ಯಾಚ್ ಇದೆ. ಈ 18 ಜನರಲ್ಲಿ 18 ವರ್ಷದಿಂದ ಹಿಡಿದು 45 ವರ್ಷದವರೆಗೆ ಮಾತ್ರ ಇದ್ದಾರೆ, ವಿದ್ಯಾರ್ಥಿಗಳು ಕಾಲೇಜು ಸಮಯ ಬಿಟ್ಟರೆ ಬೇರೆ ರೊಟೀನ್ ವರ್ಕ್ ರೀತಿಯಲ್ಲಿ ಒಂದು ಟೀಮ್ ಒಂದು ದಿವಸ ಕಸ ಗುಡಿಸಿದರೆ, ಇನ್ನೊಂದು ದಿವಸ ಲೈಟ್‌ಗಳನ್ನು ಸರಿಮಾಡುವುದು, ಮತ್ತೊಂದು ದಿವಸ ಆಸ್ಪತ್ರೆ ಕೆಲಸ ಮಾಡುತ್ತಾರೆ, ಮತ್ತು ವಾರದಲ್ಲಿ ಒಂದು ದಿನ ಆ ಮಲಮೂತ್ರವನ್ನು ಎತ್ತಿ ತೆಗೆದುಕೊಂಡು ಹೋಗಿ ಹೊಲಕ್ಕೆ ಕಂಪಲ್‌ಸರಿ ಹಾಕಲೇಬೇಕು. ಆ ಮಲಮೂತ್ರವನ್ನು ಹೊಲಕ್ಕೆ ಸಾಗಿಸತಕ್ಕಂಥ ಮೆಕಾನಿಸಂ ಏನಿದೆ ಅದನ್ನು ನೋಡಿ ನಾವು ಕಲಿತುಕೊಳ್ಳಬೇಕು. ಅಂದರೆ ಪ್ರತಿಯೊಬ್ಬರಿಗೂ ಹ್ಯಾಂಡ್ ಗ್ಲೋಸ್, ಮೂಗಿಗೆ ಬಟ್ಟೆ ಕಟ್ಟಿಕೊಂಡಿರುತ್ತಾರೆ. ಆಟೋಮೆಟಿಕ್ ಟ್ರ್ಯಾಲಿ ತೆಗೆದುಕೊಂಡು ಹೋಗಿ ಅದೇ ತುಂಬಿಕೊಂಡು ಮುಚ್ಚಳವನ್ನು ಕ್ಲೋಸ್ ಮಾಡಿಕೊಳ್ಳುತ್ತದೆ, ಆನಂತರ ಅದನ್ನು ತೆಗೆದುಕೊಂಡು ಹೋಗಿ ಊರ ಮುಂದೆ ಗುಂಡಿಗೆ ಹಾಕುತ್ತಾರೆ. ಆ ರೀತಿ ಕಂಪಲ್‌ಸರಿ ಪ್ರತಿಯೊಬ್ಬರು ಮಲಮೂತ್ರವನ್ನು ಎತ್ತತಕ್ಕಂಥ ಕಾನೂನು ಇದೆ ಮಾನ್ಯ ಜ್ಞಾನೇಂದ್ರರವರೆ, ಆದರೆ, ಇಲ್ಲಿ ಯಾವುದಕ್ಕೂ ನಿಯಮ ಇಟ್ಟುಕೊಳ್ಳದೆ ನಾವು ಹಳೆರೀತಿಯ ಗೊಬ್ಬರ ಹಾಕಿದರೆ ಅದು 3 ತಿಂಗಳಿಗೆ ಅದು ಸಾಕಾಗುವುದಿಲ್ಲ, ಅದಕ್ಕಾಗಿ ಜಪಾನ್ ಮಾದರಿ ಬೆಳವಣಿಗೆ ಎಂದು ನಮಗೆ ಹೊಸದಾಗಿ ಬಂದಾಗ ಅಂದರೆ ಜಪಾನ್‌ನಲ್ಲಿ ಸಮುದ್ರದ ಮೇಲೆ ಮಣ್ಣನ್ನು ಹಾಕಿ ಅದರ ಮೇಲೆ ಬೆಳೆಯನ್ನು ಬೆಳೆಯುತ್ತಾರೆಂದು ಹೇಳಿ ಜಪಾನ್ ಮಾದರಿ ಬಂದಾಗ, ಏಕೆಂದರೆ ದೇಶ ಚಿಕ್ಕದು, ಜನಸಂಖ್ಯೆ ಕಡಿಮೆ, ಅವರಿಗೆ ಉಳಿಮೆಗೆ ಅಂದರೆ ವ್ಯವಸಾಯಕ್ಕೆ ಇರತಕ್ಕಂಥ ಭೂಮಿಯೇ ಕಡಿಮೆ ಇದೆ, ಈಗ ಅಲ್ಲಿ ಸಂಶೋಧನೆ

ಮಾಡಿರುವುದನ್ನು ಪ್ರಪಂಚದ ಎಲ್ಲಾಕಡೆ ಪ್ರಸರಿಸಿದ್ದೇವೆ. Hybridization is a boon as well as a curse. Without hybridization, ತಾವು ಈಗ ಏನಾದರೂ ಡೆಮಾನ್‌ಸ್ಟ್ರೇಶನ್ ಮಾಡಿದರೆ, ಅಂದರೆ ನೀವು ಈಗ ತೀರ್ಥಹಳ್ಳಿಯಲ್ಲಿ 150 ಕುಟುಂಬಗಳು ಮಾಡುತ್ತಿವೆ ಎಂದು ಹೇಳಿದ್ದೀರಿ, ಅವರು ಬೆಳೆಯುತ್ತಿರುವ ಒಂದು ಎಕರೆಗೆ ಇಳುವರಿ ಏನು ? ಅದು ಅವರ ಮನೆಯ ಸಂಸಾರಕ್ಕೆ ಆಗಬಹುದು, ಅಥವಾ ಈಗಲೂ ಸರ್ಕಾರಿ ಗೊಬ್ಬರವನ್ನು, ಸರ್ಕಾರಿ ಗೊಬ್ಬರ ಅಂದರೆ ಕೆಮಿಕಲ್ ಫರ್ಟಿಲೈಸರ್ಸ್‌ಗೆ, ಸರ್ಕಾರಿ ಗೊಬ್ಬರವನ್ನು ಹಾಕದೆ ಇದ್ದು ಏನಾದರೂ ಭತ್ತ ಬೆಳೆದರೆ ಆ ಅಕ್ಕಿಯನ್ನು ಕೊಂಡುಕೊಳ್ಳುತ್ತಾರೆ, ಏಕೆಂದರೆ ತಮ್ಮ ಸ್ವಂತ ಉಪಯೋಗಕ್ಕೆ, ಆ ರೀತಿಯಲ್ಲಿ ನಾವು ಡೆಮಾನ್‌ಸ್ಟ್ರೇಟಿವ್ ಪ್ಲಾಟ್ ಮಾಡಬಹುದೇ ಹೊರತು you please show us a way. We will certainly follow. We will lose nothing if we can produce. ನಮ್ಮ ಜನರಿಗೆ ಆಗುವಷ್ಟು, ಮಾನ್ಯ ಬಿ.ಆರ್. ಪಾಟೀಲ್ ಮತ್ತು ತಾವು ಹೇಳಿದಹಾಗೆ ಇದನ್ನು ಮಾಡಿ ಅವರ ಹೊಟ್ಟೆ ತುಂಬಿಸುವುದಕ್ಕೆ ಸಾಧ್ಯವಿದ್ದರೆ ಬೇರೆ ಯೋಚನೆ ಮಾಡುವುದೆ ಬೇಡ. ಸೀಡ್ಸ್ ಕಂಪನಿಗಳು ಮತ್ತು ಫರ್ಟಿಲೈಸರ್ಸ್ ಕಂಪನಿಗಳು ಇವತ್ತು ಹಳ್ಳಿಗಳಲ್ಲಿ ಅವರ ಜಾಹೀರಾತುಗಳನ್ನು ಕೊಡುತ್ತಿದ್ದಾರೆ ಮತ್ತು ರೇಡಿಯೋ ಟಿ.ವಿ.ಗಳಲ್ಲಿ ಕೊಡುತ್ತಾರೆ, ರೇಡಿಯೋದಲ್ಲಿ ಪ್ರತಿ ದಿನ ರೈತರಿಗೆ ನಾವು ಉಪದೇಶ ಮಾಡುತ್ತೇವೆ.

6.30 ಪಿ.ಎಂ.

ಇಂಥ ರೋಗ ಬಂದರೆ ಇಂಥದ್ದನ್ನು ಇಂಥ ಲೀಟರ್‌ಗೆ ಇಷ್ಟು ಹಾಕಿ ಅಷ್ಟು ಹಾಕಿ ಎಂದು ಹೇಳುತ್ತಾರೆ. ಅದಕ್ಕೆ ತಾವು ದಯವಿಟ್ಟು ಮಾರ್ಗವನ್ನು ತೋರಿಸಿ. ಇಡೀ ಭರತಖಂಡದ ಬೇರೆ ಬೇರೆ ರಾಜ್ಯಗಳಲ್ಲಿ ನೋಡಿದರೆ ಅಂದರೆ ಪಂಜಾಬ್‌ನಲ್ಲಿ ಗೋಧಿಯನ್ನು ಚೆನ್ನಾಗಿ ಬೆಳೆಯುತ್ತಾರೆ. ನಾವು ಇವತ್ತು ದಕ್ಷಿಣದ ಆಂಧ್ರ, ಕರ್ನಾಟಕ, ತಮಿಳುನಾಡು ಪ್ರದೇಶದಲ್ಲಿ ಭತ್ತವನ್ನು ಎಲ್ಲರಿಗಿಂತ ಚೆನ್ನಾಗಿ ಬೆಳೆಯುತ್ತಿದ್ದೇವೆ. ಈ ದೇಶಗಳಲ್ಲಿ ಅಥವಾ ಈ ರಾಜ್ಯಗಳಲ್ಲಿ ಈ ರೀತಿಯ ಮಾರ್ಗವನ್ನು ಅನುಸರಿಸಿದ್ದೇವೆ. ನಾವು ಜನರ ಆರೋಗ್ಯವನ್ನು ಕಾಪಾಡಬಹುದು, ಜನರ ಹಸಿವನ್ನೂ ತೀರಿಸಬಹುದು. ಆದ್ದರಿಂದ, ಆ ರೀತಿ ತಾವು ಮಾರ್ಗದರ್ಶನವನ್ನು ಮಾಡಿದರೆ ಕೃಷಿ ಮಂತ್ರಿಗಳು ಇರಲಿ, ಇಲ್ಲದೇ ಇರಲಿ, ನಾನು ಕೃಷಿಯಲ್ಲಿ ಹುಟ್ಟಿ ಬೆಳೆದವನು. ಭ್ರಷ್ಟಾಚಾರದ ವಿಚಾರದಲ್ಲಿ ಅಗ್ರಿಕಲ್ಚರ್ ಆಫೀಸರ್ ಇಷ್ಟು ತಿಂದ, ಚೀಲ ಅಲ್ಲಿ ಬಿಸಾಕಿದ್ದ ಅದಲ್ಲ. ಹೊಸ ಮಾರ್ಗದಿಂದ, ಅಥವಾ ಸಂಪ್ರದಾಯದ ಮಾರ್ಗದಿಂದ ಮತ್ತೆ ನಾವು ರೀಸೈಕಲ್ ಮಾಡಿ ಈ ಆಹಾರದ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನಿಸಬೇಕು. ನಾವು 18-19 ಕೋಟಿ ಟನ್ ಆಹಾರ ಬೆಳೆಯುತ್ತೇವೆ ಭಾರತದಲ್ಲಿ ಎಂದು ಹೇಳುತ್ತೇನೆ. 33 ಕೋಟಿ ಜನರು ಇದ್ದಾಗ 5 ಕೋಟಿ ಟನ್ ಆಹಾರವನ್ನು ಬೆಳೆಯುತ್ತಿದ್ದೆವು, ಇವತ್ತು ನೂರು ಕೋಟಿ ಜನರು ಇದ್ದೇವೆ. ನೂರು ಕೋಟಿ ಜನರಿಗೆ ಆಹಾರವನ್ನು ಒದಗಿಸುವುದಕ್ಕೆ ತಾವೇನಾದರೂ ಒಂದು ಮಾರ್ಗವನ್ನು ತೋರಿಸಿದರೆ ಈ ಸರ್ಕಾರ ಒಪ್ಪಿಕೊಳ್ಳುತ್ತದೆ.

ಶ್ರೀ ಡಿ. ಆರ್. ಪಾಟೀಲ್ : ಮಾನ್ಯ ಅಧ್ಯಕ್ಷರೇ, ಯೀಲ್ಡ್ ಬಗ್ಗೆ ಈಗ ತಾವು ಮಾತನಾಡಿದರಲ್ಲ, ಯೀಲ್ಡ್ ಸಾಕಷ್ಟು ಆಗುವುದಿಲ್ಲ, ಸಾವಯವ ಕೃಷಿಯಲ್ಲಿ ಹಾಗೆ ಹೀಗೆ ಎಂದು ಹೇಳಿ. We are being

misled in this. ಈಗ ಸಾಯಿಲ್ ಫರ್ಟಿಲಿಟಿ ಎಲ್ಲಾ ಕೆಟ್ಟುಹೋಗಿದೆ. ಗೊಬ್ಬರವನ್ನು ನೋಡಿ ನಾವು ಇನ್‌ಪುಟ್ ಜಾಸ್ತಿ ಮಾಡಬೇಕಾಗಿದೆ. ಮೊದಲು ಎರಡು ಚೀಲ ಎಕರೆಗೆ ಹಾಕುತ್ತಿದ್ದರೆ ಈಗ ಎಕರೆಗೆ ನಾಲ್ಕು ಚೀಲವನ್ನು ಹಾಕಬೇಕು. ಪ್ರತಿವರ್ಷವೂ ಗೊಬ್ಬರದ ಕ್ವಾಂಟಿಟಿಯನ್ನು ಜಾಸ್ತಿ ಮಾಡಿಕೊಳ್ಳುತ್ತಾ ಹೋಗುತ್ತಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್ : ಮೊದಲು ನಮ್ಮ ಮನೆಗಳಲ್ಲಿ 10-20 ಎಮ್ಮೆಗಳನ್ನು ಕಟ್ಟಿಕೊಳ್ಳುತ್ತಿದ್ದೆವು. 10-20 ಹಸುಗಳನ್ನು ಕಟ್ಟಿ ಕೊಳ್ಳುತ್ತಿದ್ದೆವು. ಈಗ ಹಳ್ಳಿಗಳಲ್ಲಿ ಹಾಲನ್ನು ಎಲ್ಲಿ ಕೊಂಡುಕೊಳ್ಳುತ್ತೇವೆ. ಎಮ್ಮೆ ಸಾಕುವುದಿಲ್ಲ. ಹಸುವನ್ನು ಸಾಕುವುದಿಲ್ಲ ಎಲ್ಲಿಂದ ಕಾಂಪೋಸ್ಟ್ ಗೊಬ್ಬರವನ್ನು ತರುತ್ತೀರಿ? ಈಗೆಲ್ಲಾ ಹಸುಗಳು ಎಮ್ಮೆಗಳೆಲ್ಲಾ ಇವತ್ತು ಸಿಟಿಗೆ ಹೋಗುತ್ತಿವೆ. ಅಲ್ಲಿಂದ ಹಾಲನ್ನು ತರಿಸಿಕೊಳ್ಳುತ್ತಿದ್ದೇವೆ ಅದಕ್ಕಾಗಿ ಇದರ ಬಗ್ಗೆ ಸಮಗ್ರವಾಗಿ ಆಲೋಚನೆ ಮಾಡಿ.

ಶ್ರೀ ಡಿ. ಆರ್. ಪಾಟೀಲ್ : ಎಲ್ಲೆಲ್ಲಿ ಕೃಷಿ ಕುಟುಂಬಗಳು ಈ ಸಾವಯವ ಕೃಷಿ ಮೇಲೆಯೇ ಉಪಯೋಗ ಮಾಡಿ ಸಾಕಷ್ಟು ಪರಿಣಾಮಕಾರಿಯಾಗಿ ಪ್ರತಿಫಲವನ್ನು ಪಡೆದುಕೊಂಡಿದ್ದಾರೆ, ನೀವು ಅವನ್ನೆಲ್ಲಾ ನೋಡಿದಾಗ ಅನಿಸುತ್ತದೆ, ಇಮ್ಮಿಡಿಯೇಟ್ ಷಿಫ್ಟ್ ಮಾಡಿದಾಗ ಅಫ್‌ಕೋರ್ಸ್ yield will come down definitely because fertility has to be built up.ಅದಕ್ಕೆ ಈ ಕಾಂಪೋಸ್ಟ್ ಗೊಬ್ಬರವನ್ನು ನಾವು ಉಪಯೋಗ ಮಾಡಿದೆವು ಎಂದರೆ ನಾಲ್ಕೈದು ವರ್ಷಗಳು ಬೇಕಾಗುತ್ತದೆ. ಈ ಎರೆಹುಳು ಗೊಬ್ಬರವನ್ನು ಉಪಯೋಗ ಮಾಡಿದೆವು ಎಂದರೆ ಎರಡು ವರ್ಷದಲ್ಲಿ ಫರ್ಟಿಲಿಟಿ ಲೆವೆಲ್ ಸರಿಬಂದು ಬಿಡುತ್ತದೆ. ಯೀಲ್ಡ್ ಈಕ್ವಲ್ ಅಷ್ಟೇ ಅಲ್ಲ, ಎಕ್ಸೀಡ್ ಆಗುತ್ತಿದೆ. ಈಗ ಮಹಾರಾಷ್ಟ್ರದಲ್ಲಿ ನೋಡಿ ಗ್ರೇಪ್ ಬಹುತೇಕ ವರ್ಮಿಕಲ್ಚರ್‌ಗೆ ಬಂದು ಬಿಟ್ಟಿದೆ. ಅದಕ್ಕೆ ಎಲ್ಲೆಲ್ಲಿ ಈ ನೀರಾವರಿ ಸವಲತ್ತು ಇದೆ, ಅಲ್ಲಂತೂ ಇಮ್ಮೀಡಿಯೇಟಲಿ ವರ್ಮಿಕಲ್ಚರ್‌ಗೆ ನಾವು ಷಿಫ್ಟ್ ಆಗುವುದರಿಂದ ಏನು ನಮಗೆ ಯೀಲ್ಡ್‌ನಲ್ಲಿ ತೊಂದರೆಯಾಗುವುದಿಲ್ಲ. ಎರಡೇ ವರ್ಷಗಳಲ್ಲಿ ಸಾಯಿಲ್ ಫರ್ಟಿಲಿಟಿ ಆ ಲೆವೆಲ್‌ಗೆ ಬಂದು ಬಿಡುತ್ತದೆ ತೊಂದರೆಯಾಗುವುದಿಲ್ಲ. ಆದರೆ ಕಾಂಪೋಸ್ಟ್ ಗೊಬ್ಬರದ ಮೇಲೆ ನಾವು ಮಳೆಯಾಧಾರಿತ ಕೃಷಿಯಲ್ಲೇನೂ ಮಾಡುತ್ತಿಲ್ಲ. ಅಲ್ಲಿ ನಮಗೆ ಐದಾರು ವರ್ಷ ಆ ಕಹಿ ಅನುಭವವಾಗುತ್ತದೆ. ಆದರೆ, ಮುಂದೆ ಗ್ರಾಜುಯಲ್ ಆಗಿ ಡೆಫನೇಟ್ ಆಗಿ ಯೀಲ್ಡ್ ಇನ್‌ಕ್ರೀಸ್ ಇರುತ್ತೆ. ಮತ್ತು ಈ ಸಾವಯವ ಕೃಷಿ ಅಳವಡಿಸುವ ರೈತನಿಗೆ ಇನ್‌ಪುಟ್ ಕಾಸ್ಟೇ ಇಲ್ಲ, ಗೊಬ್ಬರ ಖರೀದಿ ಮಾಡಬೇಕಾಗಿಲ್ಲ. ಕೃಷಿ ಕ್ರಿಮಿನಾಶಕ ಖರೀದಿ ಮಾಡಬೇಕಾಗಿಲ್ಲ. ಅದರ ಸಲುವಾಗಿ ಬಹಳ ಹಾಳಾಗುತ್ತಿದ್ದೇವೆ ನಾವು. ಅದಕ್ಕೆ ದಯವಿಟ್ಟು ತಾವು ಸ್ವಲ್ಪ ಎಲ್ಲಾ ತಜ್ಞರು ಈಗ ಬೆಂಗಳೂರು ಅಗ್ರಿಕಲ್ಚರ್ ಯೂನಿವರ್ಸಿಟಿಯಲ್ಲಿ ವೈಸ್-ಛಾನ್ಸಲರ್ ಮತ್ತು ಈ ಎಲ್ಲಾ ಕೆಲವು ಪ್ರೊಫೆಸರ್ಸ್ ತಾವೇನು ಪ್ರಯೋಗ ಮಾಡಿದ್ದಾರೆ, ಆದರಿಂದ ಅವರು ಈಗ ಕನ್‌ವಿನ್ಸ್ ಆಗಿದ್ದಾರೆ. ಈ ಬದಲಾವಣೆ ಬೇಕು ಎಂದು ಅವರು ಹೇಳುತ್ತಾರೆ. ಬದಲಾವಣೆ ಬೇಕು ಎಂದು ಪರದೇಶದವರು ಹೇಳುತ್ತಾರೆ. ಹೀಗಾಗಿ ಗೊಬ್ಬರ, ಕ್ರಿಮಿನಾಶಕ ಮಾಡುವಂಥ ಕಂಪನಿಗಳೇ ಈಗ ಷಿಫ್ಟ್ ಆಗಿ ಸೀಡ್ ಪ್ರೊಡಕ್ಷನ್‌ಗೆ ಬರುತ್ತಿದ್ದಾರೆ. ಏಕೆಂದರೆ ಇನ್ನು 10-15 ವರ್ಷಕ್ಕೆ ಷಿಫ್ಟ್ ಆಗುವುದು ಡೆಫನೇಟ್ ಆಗುವುದು ಎಂದು ಅವರಿಗೂ ಕನ್‌ವಿನ್ಸ್ ಆಗಿದೆ. ಸೀಡ್ ಪ್ರೊಡಕ್ಷನ್‌ಗೆ ಬರುತ್ತಾರೆ. ಯಾವುದಾದರೂ ಒಂದು ಇನ್‌ಪುಟ್ ಅವರು ಹಿಡಿದುಕೊಳ್ಳುತ್ತಾರೆ.

ಸೀಡ್‌ನಲ್ಲಿ ಮತ್ತೆ ಬಯೋಟೆಕ್ನಾಲಜಿ ಅವೆಲ್ಲಾ ಬಂದು ಈ ಇಂಪ್ರೂವ್ಡ್ ಸೀಡ್ ಸಪ್ಲೈಯಿಂದ ಯೀಲ್ಡ್ ಜಾಸ್ತಿಯಾಗುತ್ತದೆಯೇ ಹೊರತಾಗಿ ಈ ಕೆಮಿಕಲ್ ಫರ್ಟಿಲೈಜರ್, ಪೆಸ್ಟಿಸೈಡ್ಸ್ ಉಪಯೋಗ ಮಾಡುವುದರಿಂದದ ಯೀಲ್ಡ್ ಜಾಸ್ತಿಯಾಗುತ್ತದೆ ಎನ್ನುವುದು ಏನು ನಮ್ಮ ತಲೆಯಲ್ಲಿ ಹೋಗಿದೆ, ಇದು ಮಾತ್ರ ರಾಂಗ್ ಎಂದು ಅನ್ನಿಸುತ್ತದೆ.

ಶ್ರೀ ಚಂದ್ರಕಾಂತ್ ಗುರಪ್ಪ ಬೆಲ್ಲದ್ : ಮಾನ್ಯ ಅಧ್ಯಕ್ಷರೇ, ಧಾರವಾಡ ಕೃಷಿ ವಿಶ್ವವಿದ್ಯಾನಿಲಯದಲ್ಲೂ ಸಹಿತ ಈ ಪ್ರಯೋಗ ಮಾಡುತ್ತಿದ್ದಾರೆ. ಮತ್ತ ರೈತರಿಗೂ ಸಹಿತ ಸರ್ಕಾರ ಆ ದೃಷ್ಟಿಯಲ್ಲಿ ಇವತ್ತು ಎಜುಕೇಟ್ ಮಾಡುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ನನ್ನ ರಕ್ಷಣೆಗೆ ನೀವು ಬರಬೇಕು.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ಚಂದ್ರಕಾಂತ್‌ರವರೇ ಎಷ್ಟು ಭೂಮಿ ಇದೆ ನಿಮ್ಮದು. ನೀವು ವ್ಯಾಪಾರಸ್ಥರು. ತಾವು ಮಾಡುವ ವ್ಯಾಪಾರವೆಲ್ಲ ಅಗ್ರಿಕಲ್ಚರ್‌ಗೆ ಸಂಬಂಧಪಟ್ಟಿದ್ದೇ. ನನಗೆ ಗೊತ್ತಿರುವ ಹಾಗೆ.

ಶ್ರೀ ಚಂದ್ರಕಾಂತ್ ಬೆಲ್ಲದ್ : ನಮ್ಮದು ಒಕ್ಕಲುತನದ ಕುಟುಂಬವೇ. ನಾವು ರೈತರೇ.

ಶ್ರೀ ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ಬೆಂಗಳೂರು ನಗರದಲ್ಲಿ ವಾಸ ಮಾಡುವವನು ನಾನು ರೈತನಾಗಿದ್ದೇನೆ, ಎಲ್ಲಾ ಅನುಭವ ಇದೆ. ಇಷ್ಟೊತ್ತು ಭೂಮಿ ಬಗ್ಗೆ ಸ್ನೇಹಿತರು ಬಹಳ ಚೆನ್ನಾಗಿ ಹೇಳಿದರು ತಾವು ಒಂದು ಮಾತು ಹೇಳಿದಿರಿ ಹೋದ ತಿಂಗಳು 7ನೇ ತಾರೀಖು ತಮ್ಮ ಊರಿನಲ್ಲಿ 80 ಹಳ್ಳಿಗಳಿಗೆ ನೀರು ಕೊಡಬೇಕಾದರೆ ಆ ಜನರು ತೆಲುಗಿನಲ್ಲಿ ಮಾತನಾಡುವಾಗ ಒಂದು ಮಾತನ್ನು ಹೇಳಿದಿರಿ. ತಮ್ಮ ಅನುಮತಿ ಪಡೆದು ಮಾತನಾಡುತ್ತಿದ್ದೇನೆ 'ವಿತ್ತತಲ್‌ನಿಕೆ ಭಾರಂ ತೊಮ್ಮದಿ ನೆಲ, ನೇನು ಪುಟ್ಟಿನಮೀಟುಂ ಭೂಮಿಕಿ ಭಾರಂ' ಎಂದು ಹೇಳಿದಿರಿ. ಅದರಲ್ಲಿ ಬಹಳ ಅರ್ಥ ಇದೆ. ಅದರ ಅರ್ಥವೇನೆಂದರೆ ತಾಯಿಗೆ ಮಗು ಭಾರ. ಮಗು ಜನನವಾದಮೇಲೆ ಭೂಮಿಗೆ ಭಾರ. ಅಂದರೆ ಭೂಮಿ ಫಲವತ್ತಾಗಿರಬೇಕು. ನೀವು ಕಾಲಿಟ್ಟ ಭೂಮಿ ಎಷ್ಟು ಶುದ್ಧವಾಗಿ ಫಲವತ್ತಾಗಿರುತ್ತದೋ ಮನುಷ್ಯನೂ ಅಷ್ಟೇ ಆರೋಗ್ಯದಿಂದ ಇರುತ್ತಾನೆ ಎಂದು ಅರ್ಥ. ಇದನ್ನೇ ಮಹಾಭಾರತದಲ್ಲಿ ಕೊನೆಯಲ್ಲಿ, ನಾನು ಸರಿಯಾಗಿ ನೋಡಿಲ್ಲ. ಕೊನೆಯಲ್ಲಿ ನೋಡಿದಾಗ ಭೀಷ್ಮ ಒಂದು ಮಾತನ್ನು ಹೇಳುತ್ತಾನೆ ಹಸ್ತಿನಾಪುರದ ಭೂಮಿ ತಾಯಿಯನ್ನು ಸುಭಿಕ್ಷವಾಗಿಡಿ ಎಂದು ಹೇಳಿದರು. ನಾವು 50 ವರ್ಷದಲ್ಲಿ ಏನು ಮಾಡಿದ್ದೇವೆ.

ಶ್ರೀ ಜೆ. ಹೆಚ್. ಪಟೇಲ್ : ಮಾನ್ಯ ಅಧ್ಯಕ್ಷರೇ, ನಮ್ಮದೇಶದಲ್ಲಿ ತಾಯಿ ಬಹಳ ಫಲವತ್ತಾಗಿದ್ದಾಳೆ. ಇಲ್ಲದಿದ್ದರೆ ನೂರು ಕೋಟಿ ಜನರು ಹೇಗೆ ಆಗುತ್ತಾರೆ? ಆದರೆ ಭೂಮಿ ಫಲವತ್ತಾಗಬೇಕಲ್ಲ.

SRI N. R. RAJANNA : For the last 45 years, after independence, we are using fertilizers.

ಅಧ್ಯಕ್ಷರು : ತಾಯಿ ಫಲವತ್ತಾಗಿದ್ದಾಳೆ, ನಿಮ್ಮಂಥವರು ಅನುಭವಿಗಳು ಇರುವುದರಿಂದ ಅದಕ್ಕೇ ನಾವು ನಿಮ್ಮನ್ನು ನಾಯಕರು ಎಂದು ಆಯ್ಕೆ ಮಾಡಿರುವುದು.

ಶ್ರೀ ಬಿ. ಎ. ಮೊಯಿದ್ದೀನ್ : ಭೀಷ್ಮ ಕೊನೆಯಲ್ಲಿ ಎಲ್ಲಿದ್ದ? ಕೊನೆಯಲ್ಲಿ ಇದ್ದದ್ದು ಕೌರವ. ಮಹಾಭಾರತದಲ್ಲಿ ಭೀಷ್ಮ ಕೊನೆಯಲ್ಲಿ ಇರಲಿಲ್ಲ.

SRI. N. RAJANNA: For the last 45 years after independence, we are using 90% fertilisers.ಎತ್ತು ಇಲ್ಲ, ಗಾಡಿಯೂ ಇಲ್ಲ, ಎಲ್ಲ ಹೋಗಿಬಿಟ್ಟಿತು. ಫ್ಯಾಕ್ಟರಿಗಳೇ ಬಂದುಬಿಟ್ಟಿದೆ. ಇನ್ನು ಸ್ವಲ್ಪ ದಿವಸ ಹೋದರೆ ಸಿಟಿಯಲ್ಲಿ ಹಸು ಎಲ್ಲಿದೆ ಎಂದರೆ ಮ್ಯೂಸಿಯಂನಲ್ಲಿ ನೋಡಬೇಕು. ಇನ್ನು ತಾಲ್ಲೂಕಿನಲ್ಲಿ ಎತ್ತು ಎಲ್ಲಿದೆ ಎಂದರೆ ಮ್ಯೂಸಿಯಂನಲ್ಲಿ ನೋಡಬೇಕು. We have burnt the soil. ಯಾವಾಗ ನಾವು ಮಣ್ಣನ್ನು ಸುಟ್ಟುಬಿಟ್ಟಿದ್ದೇವೆ, ಅದರಲ್ಲಿರುವ ಸಾರಾಂಶ ಏನೂ ಇಲ್ಲ. ಅಲ್ಲಿ ಬರುವ ಸಾರಾಂಶವೆಲ್ಲ ಪಾಷಾಣವಾಗಿದೆ. ನಮ್ಮ ದೇಹ ಪಾಷಾಣವಾಗುತ್ತಿದೆ. ಕಲಬೆರೆಕೆಯಾಗುತ್ತಿದೆ. ಆದರಿಂದಲೇ ನಮಗೆಲ್ಲರಿಗೂ ಈ ರೀತಿಯ ವ್ಯತ್ಯಾಸವಾಗುತ್ತಿರುವುದು. We have burnt the soil. We do not give rest to the soil. ಒಂದು ವರ್ಷಕ್ಕೆ ಮೂರು ಬೆಳೆಯನ್ನು ಬೆಳೆಯುತ್ತೀರಿ. ವರ್ಷಕ್ಕೆ ಒಂದು ಬೆಳೆಯನ್ನು ಬೆಳೆಯಬೇಕು. ಮೂರು ಬೆಳೆ ಬೆಳೆದು ಆ ಮಣ್ಣಿಗೆ ನಾವು ರೆಸ್ಟೇ ಕೊಡುತ್ತಿಲ್ಲ.

ಅಧ್ಯಕ್ಷರು : ಮಾನ್ಯ ರಾಜಣ್ಣನವರೇ, ಜ್ಞಾನೇಂದ್ರ ಏನು ಹೇಳುತ್ತಾರೋ ನೋಡೋಣ.

ಶ್ರೀ ಎನ್. ರಾಜಣ್ಣ : ನನಗೆ ತಾವು ಅಲೌ ಮಾಡಬೇಕು ಸಾರ್.

Mr. SPEAKER : I will give you an opportunity afterwards. Let us hear what Araga Gnanendra says.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಮತ್ತು ಅನೇಕ ಸದಸ್ಯರು ಬಹಳ ಕುತೂಹಲ ವ್ಯಕ್ತಮಾಡಿದ್ದಾರೆ. ತುಂಬಾ ಸಲಹೆಗಳನ್ನು ಕೊಡುತ್ತಿದ್ದಾರೆ. ಒಳ್ಳೆಯ ವಾತಾವರಣದಲ್ಲಿ ನಾನು ಮಾತನಾಡುತ್ತಿದ್ದೇನೆ. ಏನಾಗಿದೆ, ಮಾನ್ಯ ಮುಖ್ಯಮಂತ್ರಿಗಳೇ, ನಮ್ಮಲ್ಲಿ ವೆನಿಲಾ ಬೆಳೆದಿದ್ದಾರೆ, ಬರೀ ಸಗಣಿ ಗೊಬ್ಬರವನ್ನು ಹಾಕಿ ಅದನ್ನು ಬೆಳೆದಿದ್ದಾರೆ. ವೆನಿಲಾ ಒಂದು ಹೊಸ ಕ್ರಾಪ್. ವರ್ಲ್ಡ್ ಮಾರ್ಕೆಟ್‌ನಲ್ಲಿ ತೀರ್ಥಹಳ್ಳಿ ವೆನಿಲಾ ಹೈಯೆಸ್ಟ್ ರೇಟಿಗೆ ಹೋಗಿದೆ. ಕ್ವಾಲಿಟಿ ಮತ್ತು ಸೈಜ್. ಮತ್ತೆ ಅಲ್ಲಿ ಬಿಡತಕ್ಕಂಥ ಇಳುವರಿ ಕೂಡ ಜಾಸ್ತಿಯಾಗಿದೆ. ತಾವು ಬಂದುನೋಡಿ, ಕೇವಲ 30 ಗುಂಟೆಯಲ್ಲಿ ಒಬ್ಬರು ಅಡಿಕೆತೋಟವನ್ನು ಮಾಡಿದ್ದಾರೆ. ಅವರು 30 ಗುಂಟೆಯಲ್ಲಿ 15 ಕ್ವಿಂಟಾಲ್ ಅಡಿಕೆಯನ್ನು ಬೆಳೆಯುತ್ತಿದ್ದಾರೆ ಹತ್ತು ವರ್ಷದ ಮೇಲಾಯಿತು ಅವರು ಕೆಮಿಕಲ್ ಫರ್ಟಿಲೈಜರನ್ನು ಉಪಯೋಗ ಮಾಡುವುದಿಲ್ಲ. ಭತ್ತ ನಿಮ್ಮ ಯಾವ ಕೆಮಿಕಲ್ ಫರ್ಟಿಲೈಜರನ್ನು ಉಪಯೋಗಿಸಿ ಬೆಳೆಯುವುದಕ್ಕಿಂತಲೂ ಕೂಡ ಖಂಡಿತಾ ಇಳುವರಿ ಬರುವುದಿಲ್ಲ. ನಾವೆಲ್ಲ ಟೆಸ್ಟ್ ಮಾಡಿ ಅದನ್ನು ಸಾಕಷ್ಟು ಪ್ರಾಯೋಗಿಕವಾಗಿ ಹೆಚ್ಚುಕಡಿಮೆ ತಿಂಗಳಿಗೆ ಒಂದು ಸಾರಿ ಎರಡು ತಿಂಗಳಿಗೆ ಒಮ್ಮೆ ಈ ರೀತಿ ಕೃಷಿಕರದ್ದೇ ಒಂದು ಗುಂಪು ಇದೆ. ನಾವೆಲ್ಲಾ ಕುಳಿತುಕೊಂಡು ಚರ್ಚೆ ಮಾಡಿ ಯಾರದ್ದು

ಎಷ್ಟು ಯೀಲ್ಡ್ ಬಂದಿದೆ, ಏನಾಗಿದೆ, ಎಂದು ವಿಚಾರ ಮಾಡುತ್ತೇವೆ ದಯಮಾಡಿ ತಾವು ತಮ್ಮ ಮಂತ್ರಿಗಳನ್ನು ಕಳುಹಿಸಿ ತಮ್ಮ ಅಧಿಕಾರಿಗಳನ್ನು ಕಳುಹಿಸಿ ಇದನ್ನು ಟೆಸ್ಟ್ ಮಾಡಿಸಿ.

ಶ್ರೀ ಡಿ. ಟಿ. ಜಯಕುಮಾರ್ : ನಮ್ಮ ರೈತರಲ್ಲಿ ಕ್ರಾಪಿಂಗ್ ಪ್ಯಾಟರ್ನ್ ಇಲ್ಲ. ವೆನಿಲಾ ಬೆಳೆದರೆ ಎಲ್ಲಾ ವೆನಿಲಾ ಬೆಳೆಯುವುದಕ್ಕೆ ಶುರು ಮಾಡುತ್ತಾರೆ. ಆಗ ಆಟೋಮೆಟಿಕಾಗಿ ಪ್ರೈಸ್ ಕಮ್ಮಿ ಬರುತ್ತದೆ. ಟಮೊಟೊ, ಆಲೂಗಡ್ಡೆ ಬೆಳೆಗಾರರೆಲ್ಲಾ ಯಾವುದು ಪ್ರೈಸ್ ಜಾಸ್ತಿಯಿರುತ್ತದೋ ಅದನ್ನು ಬೆಳೆಯುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ವೆನಿಲಾಕ್ಕೆ ವರ್ಲ್ಡ್ ಮಾರುಕಟ್ಟೆ ಇದೆ. ಅದಕ್ಕೆ ಸೀಮಿತ ಮಾಡುವುದಕ್ಕೇನೂ ಆಗುವುದಿಲ್ಲ. ನಮ್ಮ ದೇಶದಲ್ಲಿ ಇವತ್ತು ಬೇಡಿಕೆ ಇಲ್ಲಾಂದರೆ ಇನ್ನೊಂದು ದೇಶದಲ್ಲಿ ಬೇಡಿಕೆ ಇದೆ. ಆದರೆ ಯೀಲ್ಡ್ ಬಗ್ಗೆ ಮಾತ್ರ ಹೇಳಬಹುದು. ಅದರ ಬಗ್ಗೆ ಹೇಳುವಾಗ ಖಂಡಿತಾಗಿಯೂ ಕಡಿಮೆಯಾಗುವುದಿಲ್ಲ ನಾವು ಭಯಪಡತಕ್ಕ ಅವಶ್ಯಕತೆ ಇಲ್ಲ. ಡಿ.ಆರ್. ಪಾಟೀಲರು ಹೇಳಿದಂತೆ ಎರಡು ಮೂರು ವರ್ಷ ವ್ಯತ್ಯಾಸ ಆಗುತ್ತದೆ. ಆ ಮಣ್ಣು ಫರ್ಟೈಲ್ ಆಗುವತನಕ ವ್ಯತ್ಯಾಸ ಆಗುತ್ತದೆ, ಅದಕ್ಕೇನು ಮಾಡುವುದಕ್ಕಾಗುವುದಿಲ್ಲ. ನಮಗೆ ತಡೆದುಕೊಳ್ಳುವಂತಹ ಶಕ್ತಿ ಬೇಕಾಗುತ್ತದೆ. ಈ ರೀತಿಯಲ್ಲಿ ಜನರನ್ನು ಎಜುಕೇಟ್ ಮಾಡಬೇಕು. ಇನ್ನೊಂದೇನಾಗುತ್ತದೆ, ತಾವು ಹೇಳಿದಿರಿ ಯಾರು ಇವತ್ತು ಲೇಬರ್‌ಗೆ ಬರುವುದಿಲ್ಲ ಯಾರೂ ಸ್ವಂತ ಕೆಲಸ ಮಾಡುವುದಿಲ್ಲ. ಇವತ್ತು? ಯಾಕೆ ಮಾಡುತ್ತಾರೆ ಕೃಷಿ ಮಾಡುವುದರಿಂದ, ಅದರಲ್ಲಿ ದುಡಿಮೆ ಮಾಡುವುದರಿಂದ ಏನು ಸಿಗುತ್ತದೆ ಹೇಳಿ. ಒಬ್ಬ ನಾಲ್ಕನೇ ದರ್ಜೆ ಜವಾನ ಮನೆಯಲ್ಲಿ ಟಿವಿ ಇಡುತ್ತಾನೆ. ಎರಡು ಜೊತೆ ಬಟ್ಟೆ ಹಾಕುತ್ತಾನೆ. ಸಿನಿಮಾ ನೋಡೋಕೆ ಹೋಗುತ್ತಾನೆ. ಒಂದು ಜಾತ್ರೆಗೆ ಹೋಗುತ್ತಾನೆ, ಒಂದು ಒಳ್ಳೆಯ ಊಟ ಮಾಡುತ್ತಾನೆ. ಐದು ಎಕರೆ ತರಿ ಜಮೀನು ಮಾಡುವವರ ಮನೆಯಲ್ಲಿ ಎಲ್ಲಿದೆ ಈ ಸವಲತ್ತುಗಳು?

ಶ್ರೀ ಎಸ್. ಯೋಗೀಶ್ ಭಟ್ : ಅಧ್ಯಕ್ಷರೇ ತೀರ್ಥಹಳ್ಳಿಯಲ್ಲಿ ವೆನಿಲಾ ಕ್ರಾಪ್ ಯಾವುದಿದೆ ಅದರ ಬೆಳೆಗಾರ ಪುರುಷೋತ್ತಮರಾವ್ ಅವರನ್ನು ಸಂದರ್ಶಿಸುವ ಹಾಗೂ ಬೆಳೆಯನ್ನು ವೀಕ್ಷಿಸುವಂತಹ ಒಂದು ಅವಕಾಶ ಇತ್ತು. ಅವರನ್ನು ಕೇಳಿದಾಗ ಚುಟುಕಾಗಿ ಹೇಳಿದರು ವೃಕ್ಷ ಆಯುರ್ವೇದ ಅಂತಲೂ ಇದೆ ಆ ಸೂತ್ರದ ಪ್ರಕಾರ ನಾನು ಬೆಳೆಸುತ್ತಿದ್ದೇನೆ ಎಂದು. ಬಹುಶಃ ಇದರ ಬಗ್ಗೆ ನಾವು ಹೆಚ್ಚಿನ ಸಂಶೋಧನೆಗಳನ್ನು ಮಾಡಿದರೆ ಹೆಚ್ಚು ಉಪಯುಕ್ತ ಆಗಬಹುದು ಎಂಬ ಸಲಹೆಯನ್ನು ಕೊಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಹಿಂದಿನವರು ಮಾಡಿದ್ದೆಲ್ಲಾ ದಡ್ಡರು ಮಾಡಿದ ಕೃಷಿ ಎಂದು ನಾವು ತಿಳಿದುಕೊಳ್ಳುವ ಅವಶ್ಯಕತೆ ಇಲ್ಲ. ಬಹಳ ವೈಜ್ಞಾನಿಕವಾಗಿ ಹಿರಿಯರು ಯೋಚನೆ ಮಾಡಿ ಕೃಷಿ ಮಾಡುತ್ತಿದ್ದರು. ಕೆಲವು ಕುಟುಂಬಗಳಿಗೆ ಮಾತ್ರ ಗೊತ್ತಿತ್ತು, ಆದರೆ ಎಲ್ಲರಿಗೂ ಗೊತ್ತಿರಲಿಲ್ಲ.

ಶ್ರೀ ಡಿ. ಆರ್. ಪಾಟೀಲ್ : ಕೃಷಿಗೆ ಸಂಬಂಧಪಟ್ಟಂತೆ ನೀವೀಗ ಕೃಷಿ ವಿಶ್ವವಿದ್ಯಾನಿಲಯದಲ್ಲಿ ಆಗುವ ರಿಸರ್ಚ್‌ಗೆ ಸಪೋರ್ಟ್ ಮಾಡುತ್ತೀರಿ. ಇಂಡಿವಿಜುಯಲ್ ರೈತರು ಗ್ರೂಪ್ ಕೂಡಿ ಏನು ರಿಸರ್ಚ್ ಮಾಡುತ್ತಿದ್ದಾರೆ ಅವರಿಗೂ ಸರ್ಕಾರದಿಂದ ಸಪೋರ್ಟ್ ಸಿಗುವಂತೆ ಮಾಡಿ ಆಗ ಅದರ ಸ್ಪ್ರೆಡ್ ಮಾಡುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಅರಗ ಜ್ಞಾನೇಂದ್ರ : ಒಳ್ಳೆಯ ಸಲಹೆ. ನಾನೂ ಸ್ವಲ್ಪ ಹೇಳಬೇಕೂಂತಿದ್ದುದನ್ನು ಡಿ.ಆರ್. ಪಾಟೀಲರು ಹೇಳಿದರು. ಈ ರೀತಿ ಸ್ವಲ್ಪ ಪ್ರೋತ್ಸಾಹ ತಾವು ಕೊಟ್ಟರೆ ತಮ್ಮ ಸರ್ಕಾರದ ಅಧಿಕಾರಿಗಳ ಭಾರಿ ನೆಟ್‌ವರ್ಕ್ ಬೇಕೂಂತ ಏನಿಲ್ಲ. ನಮ್ಮ ರೈತರಿಗೆ ಅದರ ಹುಚ್ಚು ಹಿಡಿಸಿಬಿಟ್ಟರೆ ಸಾಕಾಗುತ್ತದೆ ಅದರಲ್ಲಿ. ತಜ್ಞತೆ ಇರುವವರು ಬಹಳ ಮಂದಿ ಇದ್ದಾರೆ. ಅವರು ಹೋಗಿ ಹೀಗೆ ಮಾಡಿ ಎಂದು ಹೇಳುವ ವ್ಯವಸ್ಥೆ ಆಗಬೇಕು ಅಷ್ಟೆ. ಕ್ರಾಪಿಂಗ್ ಪ್ಯಾಟರ್ನ್ ಇಲ್ಲ ಬೆಳೆಯುತ್ತಾರೆ ಎಂದು ಮಾನ್ಯ ತೋಟಗಾರಿಕೆ ಸಚಿವರು ಹೇಳಿದರು ಸ್ವಲ್ಪಮಟ್ಟಿಗೆ ಸತ್ಯವಾದರೂ ಕೂಡ ಯಾವ ಸ್ಥಿತಿ ಇದೆ ಹೇಳಿ ? ಕಬ್ಬು ಬೆಳೆದಿವಿ ಬೆಂಕಿ ಕೊಟ್ಟೆವು, ಟಮೊಟೊ ಬೆಳೆದಿವಿ ಚರಂಡಿಗೆ ಹಾಕಿದೆವು. ಆಲೂಗೆಡ್ಡೆ ಬೆಳೆದವರು ಒದ್ದಾಡುತ್ತಿದ್ದಾರೆ. ಈರುಳ್ಳಿ ಬೆಳೆದವರು ಕಣ್ಣೀರು ಹಾಕುತ್ತಿದ್ದಾರೆ. ಗುಲ್ಬರ್ಗಾ ಜಿಲ್ಲೆಯಲ್ಲಿ ತೊಗರಿಬೇಳೆ ಬೆಳೆದವರು ರಸ್ತೆ ಬಂದ್ ಮಾಡಿದರು, ಸಾಕಷ್ಟು ಹಾನಿಯನ್ನು ಅನುಭವಿಸಿದರು. ಇದು ಯಾಕೆ ಹೀಗಾಗುತ್ತದೆ? ಇವತ್ತು ಅಡಿಕೆಯದು. ಮಾನ್ಯ ಮುಖ್ಯಮಂತ್ರಿಗಳೇ ಇವತ್ತು ಅಡಿಕೆ ಬೆಳೆದವರಿಗೆ ಒಂದೇ ಒಂದು ಹೊಡೆತ, ಗುಟ್ಕಾ ಬ್ಯಾನ್ ಮಾಡಬೇಕು ಅನ್ನುವ ಬೊಬ್ಬೆ. ಇದಕ್ಕೆ ಅಡಿಕೆ ಬೆಳೆಗಾರರು ತೆತ್ತಂತಹ ಬೆಲೆ ಏನು ? ಗುಟ್ಕಾದಲ್ಲಿ ಶೇಕಡ 80 ಭಾಗ ಅಡಿಕೆ ಉಪಯೋಗಿಸುತ್ತೇವೆ. ನಾನೊಬ್ಬ ಅಡಿಕೆ ಬೆಳೆಗಾರ, ಕಳೆದ ವರ್ಷ 22 ಸಾವಿರಕ್ಕೆ ಒಂದು ಕ್ವಿಂಟಾಲ್ ಮಾರಾಟ ಮಾಡಿದೆ. ಈ ಕಳೆದ ಏಪ್ರಿಲ್‌ನಲ್ಲಿ ಮಾರುಕಟ್ಟೆಗೆ ಅಡಿಕೆ ಕಳಿಸುವಾಗ 17 ಸಾವಿರ ರೂಪಾಯಿಗಳು ಒಂದು ಕ್ವಿಂಟಾಲ್‌ಗೆ ಇತ್ತು 22 ಸಾವಿರಕ್ಕೆ ಮಾರಿದೆನಲ್ಲ, ಬರಬಹುದು ಎಂದು ಹೇಳಿ ಹಾಗೆ ಅಡಿಕೆ ಸೊಸೈಟಿಯಲ್ಲಿಟ್ಟು ಅದರ ಮೇಲೆ ಅಡ್ವಾನ್ಸ್ ತಗೊಂಡೆ. ಮೊನ್ನೆ ನಿಮ್ಮ ನರಸಿಂಹಯ್ಯನವರ ಕಮಿಟಿ ವರದಿ ಕೊಟ್ಟಿದೆ ಅಂದ ತಕ್ಷಣ ಹನ್ನೊಂದೂವರೆ ಸಾವಿರ ರೂಪಾಯಿಗಳು. ಅಡಿಕೆ ನಾನು ಮಾರಿದ್ದು ನಿಮಗೆ ವೋಚರ್ ತಂದು ತೋರಿಸುತ್ತೇನೆ. ಇವತ್ತು 8, 9 ಸಾವಿರ ರೂಪಾಯಿಗಳು ಸಾಗರ ಮಾರುಕಟ್ಟೆಯಲ್ಲಂತೂ ಆರು, ಏಳೂವರೆ ಸಾವಿರ ರೂಪಾಯಿಗಳು ಇಷ್ಟು ದೊಡ್ಡ ಸ್ಥಿತಿಯಲ್ಲಿ ರೈತರು ನಾವು ಹಾನಿ ಅನುಭವಿಸಿದ್ದೇವೆ. ಗುಟ್ಕಾದಲ್ಲಿ ಯಾವುದೋ ವಿಷವಸ್ತುವನ್ನು ಮಾರಾಟ ಮಾಡಿ ಯಾರದೋ ಜೀವಕ್ಕೆ ಹಾನಿಮಾಡಿ ನಾವು ರೈತರು ಬದುಕಬೇಕೆಂದು ಖಂಡಿತ ನಾನು ಹೇಳುವುದಿಲ್ಲ. ಯಾವ ರೈತರೂ ಹೇಳುವುದಿಲ್ಲ. ಅದರಲ್ಲಿ ಮನುಷ್ಯನ ದೇಹಕ್ಕೆ ಹಾನಿಕಾರಕ ವಸ್ತು ಯಾವುದು ಸೇರಿಸಿದ್ದಾರೆ ಅದನ್ನು ಕೆಮಿಕಲ್ ಅನಲಿಸಿಸ್‌ಗೆ ಒಳಪಡಿಸಿ ಅದರ ಮೇಲೆ ಬ್ಯಾನ್ ಹಾಕಿ. ಇವತ್ತು ಆಹಾರ ಕಾನೂನು ಅಸ್ತ್ರ ಏನಿದೆ ಅದರಂತೆ ಅಂಥವರ ಮಾತೆ ಕಾನೂನಿನ ಕ್ರಮ ಕೈಗೊಳ್ಳಿ. ಆದರೆ ಶೇಕಡ 80 ಭಾಗ ಅಡಿಕೆ ಹಾಕಿ ಇತ್ತೀಚಿನ ದಿನಗಳಲ್ಲಿ ದೊಡ್ಡ ಮಾರ್ಕೆಟ್ ಏನು ಸಿಕ್ಕಿತ್ತು, ಕರ್ನಾಟಕ ರಾಜ್ಯದಲ್ಲಿ ಬಹಳ ಪ್ರಮುಖವಾಗಿರುವಂತಹ ವಾಣಿಜ್ಯ ಬೆಳೆ. ನಿಮಗೆ ನೇರವಾಗಿ 45 ಕೋಟಿ ರೂಪಾಯಿಗಳು ಅಡಿಕೆ ಸೇಲ್ಸ್‌ಟ್ಯಾಕ್ಸ್‌ನಿಂದ ಬರುತ್ತಾ ಇದೆ. ಬೇರೆಬೇರೆ ಮಾರ್ಕೆಟ್‌ಸೆಸ್ ಬರುತ್ತಿದೆ. 1,600 ಕೋಟಿ ರೂಪಾಯಿಗಳ ಆದಾಯ ಕರ್ನಾಟಕ ರಾಜ್ಯಕ್ಕೆ ಬರುತ್ತಿದೆ. 50 ಲಕ್ಷ ಕುಟುಂಬಗಳು ಅಡಿಕೆ ಬೆಳೆಯನ್ನು ಅವಲಂಬಿಸಿಕೊಂಡಿದ್ದಾರೆ. ಇಂತಹ ಬೆಳೆ ಭಾರಿ ದೊಡ್ಡ ಹಾನಿ ಅನುಭವಿಸಿತು. ಅಡಿಕೆಯನ್ನು ವೇದಕಾಲದಿಂದಲೂ ಬೆಳೆಯುತ್ತೇವೆ ತಿನ್ನುತ್ತೇವೆ. ಅಡಿಕೆ ಎಲೆ ಹೊಗೆಸೊಪ್ಪು ತಿಂದವರು ನಮ್ಮ ತಂದೆ ಈಗ 75 ವರ್ಷ, ಏನೂ ತೊಂದರೆಯಾಗಿಲ್ಲ. ದಿವಸಕ್ಕೆ ಕಾಲು ಕೆಜಿ ತಂಬಾಕು ತಿಂತಾರೆ. 20 ಸಾರಿ

ಎಲೆ ಅಡಿಕೆ ಹೊಗೆಸೊಪ್ಪು ಹಾಕುತ್ತಾರೆ ಏನೂ ಆಗಲಿಲ್ಲ, ಕ್ಯಾನ್ಸರ್ ಬರಲಿಲ್ಲ, ಅದರಲ್ಲಿದೆಯೋ ಏನೋ, ಅಡಿಕೆ ಬೆಳೆಗಾರರಿಗೆ ಹಾನಿಯಾಗದ ರೀತಿಯಲ್ಲಿ ಮಾಡಬೇಕು.

ಶ್ರೀ ಜೆ. ಸಿ. ಮಾದುಸ್ವಾಮಿ : ಅಡಿಕೆ ತಿನ್ನಲಿ, ತಂಬಾಕು ತಿನ್ನುವುದನ್ನು ರೆಗ್ಯುಲರೈಸ್ ಮಾಡುವುದು ಬೇಡ.

ಶ್ರೀ ಅರಗ ಜ್ಞಾನೇಂದ್ರ : ಅಲ್ಲಲ್ಲಿ ನಾನು ಯಾಕೆ ಹೇಳುತ್ತಿದ್ದೇನೆ ಅಂದರೆ ತಂಬಾಕು ಅಡಿಕೆ ಎಲೆಗಳನ್ನು ನಮ್ಮಲ್ಲಿ ಪರಂಪರಾಗತವಾಗಿ ಹಾಕುತ್ತಾ ಬಂದಿದ್ದಾರೆ, ಏನೂ ಬರಲಿಲ್ಲ. ಅಡಿಕೆ ಜೀರ್ಣಕಾರಿ. ಇವತ್ತು ದೇವರ ಪೂಜೆಗೆ ಕೂಡ ಅಡಿಕೆ ಉಪಯೋಗಿಸುತ್ತೇವೆ. ಅಂತಹ ಅಡಿಕೆಗೆ ಬಂದಿರುವ ದುರ್ಗತಿ. ಇವತ್ತು ನಾವ್ಯಾರೂ ತಲೆ ಎತ್ತುವ ಹಾಗಿಲ್ಲ ಕ್ಯಾಂಪ್ಕೊ ಅಧ್ಯಕ್ಷರನ್ನು ಮೊನ್ನೆ ಭೇಟಿಯಾಗಿದ್ದೆ.

ಶ್ರೀ ಎಸ್. ಎಸ್. ಪಾಟೀಲ್ : ಎಲೆ ಅಡಿಕೆಯನ್ನು ಇವತ್ತಿಗೂ ದೇವರಿಗೆ ತಾಂಬೂಲ ಎಂದು ಇಡುತ್ತೇವೆ. ತಾಂಬೂಲ ಅನ್ನುವುದು ಪಾಚಕ ಅದರಿಂದ ಆರೋಗ್ಯ ಸರಿಯಾಗುತ್ತದೆ. ಇವತ್ತು ನಾವು ತಿನ್ನುವುದು ತಾಂಬೂಲ ಆ ತಾಂಬೂಲ ತಿಂದು ಹಾಳಾಗುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಈ ರೀತಿ ಅಡಿಕೆ ಬಹಳ ದೊಡ್ಡ ವಾಣಿಜ್ಯ ಬೆಳೆ. ರೈತರು ಕಣ್ಣೀರು ಹಾಕುತ್ತಿದ್ದಾರೆ. ಇವತ್ತು ಟಮೊಟೊ ಬೆಳೆದವರು ನಾಳೆ ಬೇರೆ ಬೆಳೆ ಹಾಕಬಹುದು. ನಾವು ಅಡಿಕೆ ಬೆಳೆಯುವ ರೈತರಿದ್ದೀವಲ್ಲ, ಅಡಿಕೆ ತೋಟ ತಯಾರು ಮಾಡುವುದಕ್ಕೆ 12 ವರ್ಷ ಬೇಕು. ಯೀಲ್ಡ್ ಸ್ಟಾರ್ಟಾಗಲಿಕ್ಕೆ. 12 ವರ್ಷ ಬೆಳೆಸಿದ ಅಡಿಕೆ ತೋಟವನ್ನು ಇವತ್ತು ಕಡಿದು ಮಾರನೇ ದಿವಸವೇ ಬೇರೆ ಹಾಕಲಿಕ್ಕೆ ಖಂಡಿತ ಸಾಧ್ಯವಿಲ್ಲ. ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿ ಇದರ ಬಗ್ಗೆ ಒಂದು ಹೇಳಿಕೆ ಸದನದಲ್ಲಿ ನೀಡಬೇಕು.

ಅಧ್ಯಕ್ಷರು : ಏನಂತ ಹೇಳಿಕೆ ಮಾಡಬೇಕು?

ಶ್ರೀ ಅರಗ ಜ್ಞಾನೇಂದ್ರ : ಅಡಿಕೆ ಬೆಳೆಗಾರರಿಗೆ ಯಾವರೀತಿ ರಕ್ಷಣೆ ಸಿಗುತ್ತದೆ? ಗುಟ್ಕಾದಲ್ಲಿ ಹಾನಿಕಾರಕ ವಸ್ತು ಯಾವುದು? ಅದನ್ನು ಮಾತ್ರ ಹೊರಗೆ ತೆಗೆದು ಉಳಿದ ಭಾಗವನ್ನು ಹಾಗೇ ಬಿಡುವುದಕ್ಕೆ ಆಗುತ್ತದೆ? ಅಡಿಕೆ ಬೆಳೆಗಾರರಿಗೆ ಹಾನಿಯಾಗಬಾರದು. ಕೇರಳ, ನಮ್ಮದು ಅಡಿಕೆ ಬೆಳೆಯುವ ರಾಜ್ಯಗಳು. ಅಧ್ಯಕ್ಷರೇ, ನರಸಿಂಹಯ್ಯನವರು ಕೊಟ್ಟ ವರದಿ ತಾವು ಓದಿದಿರೋ ಇಲ್ಲವೋ ಗೊತ್ತಿಲ್ಲ. ನಾನು ಓದಿದೆ. ಆಂಧ್ರ ಪ್ರದೇಶದ ಎರಡು ಹೆಣ್ಣುಮಕ್ಕಳನ್ನು ಕ್ಯಾನ್ಸ್‌ರ್ ಆಸ್ಪತ್ರೆಗೆ ಹೋಗಿ ಸಂದರ್ಶನ ಮಾಡಿದ್ದಾರೆ. ಕಡ್ಡಿಪುಡಿ ತಿಂದವರು. ನಾನು 15ನೇ ವರ್ಷದಿಂದ ಕಡ್ಡಿಪುಡಿ ತಿಂತಾ ಇದ್ದೆ ಈಗ ಸ್ವಲ್ಪ ಬಾಯಿ ಬಿಡಲಿಕ್ಕೆ ಆಗುತ್ತಿಲ್ಲ. 15-20 ಕಂಪನಿಗಳ ಗುಟ್ಕಾಗಳನ್ನು ಕೆಮಿಕಲ್ ಅನಲಿಸಿಸ್‌ಗೆ ಒಳಪಡಿಸಿದ್ದಾರೆ. ಅದರಲ್ಲಿ ಅಫೀಮು ಇದೆಯಾ, ಬ್ರೌನ್‌ಶುಗರಿದೆಯಾ ಎಂದು ಅನಲಿಸಿಸ್ ಮಾಡಿದ್ದಾರೆ ಅದು ನಿಲ್ ಎಂದು ಬಂದಿದೆ. ಇದು ಯಾವರೀತಿ ಆಗುತ್ತಿದೆ ಎಂದು ಗೊತ್ತಿಲ್ಲ. ನಾನು ಗುಟ್ಕಾವನ್ನು ಸಮರ್ಥನೆ ಮಾಡಲಿಕ್ಕೆ ನಿಂತಿಲ್ಲ ನಿಜವಾಗಲೂ ಆದರೆ ಆ ಗುಟ್ಕಾದಲ್ಲಿನ ಅಡಿಕೆಯನ್ನು ಸಮರ್ಥನೆ ಮಾಡಲಿಕ್ಕೆ ನಿಂತಿದ್ದೇನೆ. ದಯಮಾಡಿ ಇದಕ್ಕೆ ಹಾನಿಯಾಗದಿರುವ

ರೀತಿಯಲ್ಲಿ ಇವತ್ತು ಅನವಶ್ಯಕ ಗೊಂದಲವೊಂದು ನಿರ್ಮಾಣವಾಗಿ ಮಾರುಕಟ್ಟೆಯಲ್ಲಿ ದೊಡ್ಡ ಹಾನಿ ಅನುಭವಿಸುತ್ತಿದ್ದೇನೆ.

ಶ್ರೀ ಜೆ. ಹೆಚ್. ಪಟೇಲ್ : (ಮುಖ್ಯ ಮಂತ್ರಿಗಳು) : 'Smoking is injurious to health.' ಎಂದು ಕಾನೂನು ಪ್ರಕಾರ ಪ್ರತಿಯೊಂದು ಸಿಗರೇಟ್ ಪ್ಯಾಕೇಟ್ ಮೇಲೆ ನಾವು ಪ್ರಿಂಟ್ ಮಾಡುತ್ತೇವೆ. ಕಾನೂನಿನ ಪ್ರಕಾರ, ಸಿಗರೇಟ್‌ನ್ನು ಸೇದಬೇಡಿ ಎಂದು ಯಾವ ದೇಶದಲ್ಲಿಯೂ ಬ್ಯಾನ್ ಮಾಡಿಲ್ಲ. ಹಾಗೆಯೇ ಗುಟ್ಕಾದಲ್ಲಿರುವ ವಿಷಪೂರಿತ ವಸ್ತುವನ್ನು ಬ್ಯಾನ್ ಮಾಡಬಹುದೇ ಹೊರತು ಗುಟ್ಕಾವನ್ನು ನಾವು ಬ್ಯಾನ್ ಮಾಡಿಲ್ಲ. ಆದ್ದರಿಂದ ಮಾನ್ಯ ಸದಸ್ಯರು ಗುಟ್ಕಾ ಅದು ಇಂಜ್ಯುರಿಯಸ್ ಟುದಿ ಹೆಲ್ತ್ ಬಹಳ ಹುಡುಗರು ಇದಕ್ಕೆ ಬಲಿ ಆಗುತ್ತಿದ್ದಾರೆ. ಕ್ಯಾನ್ಸರ್ ರೋಗ ಬರುತ್ತದೆಂದು ಹೇಳತಕ್ಕಂಥ ರಿಪೋರ್ಟ್‌ನಲ್ಲಿ ಸತ್ಯಾಂಶ ಇದೆ. We cannot totally rule out that report ಮತ್ತೆ ತಾವು ಸಜೆಸ್ಟ್ ಮಾಡಿದಂತೆ ಅಡಿಕೆ ಬೆಳೆಗಾರರಿಗೆ ಹಾನಿಯಾಗದಂತೆ ಗುಟ್ಕಾ ಸೇವನೆ ಮಾಡತಕ್ಕಂಥವರಿಗೆ ಎಚ್ಚರಿಕೆ ಕೊಡುವುದು, ಮತ್ತು ಗುಟ್ಕಾ ತಯಾರಿಕರಿಗೆ ಸರ್ಕಾರ ಸೂಕ್ತ ಮಟ್ಟದಲ್ಲಿ ಈ ತರಹ ಹಾನಿಕಾರಕ ವಿಷಪೂರಿತ ವಸ್ತುಗಳನ್ನು ಸೇರಿಸಕೂಡದು ಎಂದು ಹೇಳಬಹುದೆ ಹೊರತು ನಾನು ಅದಕ್ಕಿಂತ ಇನ್ನು ಹೆಚ್ಚಿಗೆ ಏನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಅರಗ ಜ್ಞಾನೇಂದ್ರ : ಧನ್ಯವಾದಗಳು ಸರ್. ಸನ್ಮಾನ್ಯ ಅಧ್ಯಕ್ಷರೇ, ಟೊಮೊಟೋ ಬೆಳೆ ಬಗ್ಗೆ ಹೇಳುತ್ತೇನೆ, ಇತ್ತೀಚಿನ ವರ್ಷದಲ್ಲಿ ಚಿಂತಾಮಣಿಯಲ್ಲಿ ಆಯಿತು. ಚಿಂತಾಮಣಿ ತಮ್ಮ ಜಿಲ್ಲೆ 30 ಪೈಸೆಗೂ ಕೂಡ ಕೊಂಡುಕೊಳ್ಳದೆ ಇರುವ ಪರಿಸ್ಥಿತಿ ಇದ್ದಾಗ್ಯೂ ಕೂಡ, ಧಾರವಾಡದಲ್ಲಿ 6 ರೂಪಾಯಿಗೆ ಸೇಲ್ ಆಗುತ್ತಿತ್ತು ಟೊಮೊಟೋ.

ಶ್ರೀ ಕೆ. ಶ್ರೀನಿವಾಸಗೌಡ (ಕೋಲಾರ) : 6 ರೂಪಾಯಿಯಂತೆ ಮಾರಾಟವಾಯಿತು ನಾನು ಅವಾಗ ಅಲ್ಲಿ ಇದ್ದೆ. ಅದೇರೀತಿ ಮುಳಬಾಗಿಲಿನ ವಡ್ಡಳ್ಳಿಗೆ ಹೋದಾಗ ಬರೀ 60 ರಿಂದ 70 ಪೈಸೆಗೆ ಒಂದೊಂದು ಕೆ.ಜಿ. ಮಾರಾಟವಾಯಿತು. ಕೇವಲ 90 ಕಿ.ಮೀ. ಅಂತರದಲ್ಲಿ ಸುಮಾರು ಐದಾರು ರೂಪಾಯಿಗಳ ಅಂತರವಾಯಿತು ತಮಗೆ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ನಾವೇನು ವಿದೇಶಕ್ಕೆ ಹೋಗಿ ಮಾರಾಟ ಮಾಡುವ ಅವಶ್ಯಕತೆ ಇಲ್ಲ. ನಮ್ಮ ಇಲಾಖೆಗಳು ಕೇವಲ ಬೆಳೆಯಿರಿ, ಬೆಳೆಯಿರಿ ಎಂದು ಹೇಳುವಂಥದ್ದಲ್ಲ. ಮಾರುಕಟ್ಟೆಯನ್ನು ಸ್ಟಡಿ ಮಾಡುವಂಥ ನೆಟ್‌ವರ್ಕಗಳು ಸರ್ಕಾರದಲ್ಲಿ ಇವೆ ರೈತರಿಗೆ ಇದರ ಮೂಲಕ ರಕ್ಷಣೆ ಕೊಡುವ ವ್ಯವಸ್ಥೆಯಾಗಬೇಕು. ಇವತ್ತು ಅಲ್ಲಿ ಬಳಕೆದಾರ ಕುಳಿತಿರತಕ್ಕಂಥವನು 6 ರೂಪಾಯಿಯಿಂದ 10 ರೂಪಾಯಿ ಕೊಡುತ್ತಾನೆ. ಬೆಳೆದಿರತಕ್ಕಂಥವನಿಗೆ 30 ಪೈಸೆಗೂ ಕೇಳುವವರಿಲ್ಲ ಅವನು ಕಣ್ಣೀರು ಹಾಕುತ್ತಾನೆ.

ಅಧ್ಯಕ್ಷರು : ನಾವು ಹೇಗೆ ಅಂದರೆ ನಮ್ಮ ಅನುಕೂಲಕ್ಕೆ ತಕ್ಕಂತೆ ನಾವು ವಾದ ಮಾಡುತ್ತೇವೆ ಮೊದಲು ಕೆರೆಗೆ ನೀರು ಬಂದರೆ ತುಂಬಿದೆಯಾ, ಅರ್ಧವಾಗಿದೆಯಾ ಎಂದು ಹೇಳಿ ಗ್ರಾಮದ ಎಲ್ಲ ಕೆರೆಕಟ್ಟೆ ಮೇಲೆ ಮುಖಂಡರು ಸಭೆ ಮಾಡಿ ಎಷ್ಟು ಸಾಗುಮಾಡಬೇಕು ಅರ್ಧ ಸಾಗಾ ಪೂರ್ತಿ ಸಾಗಾ

ಕಾಲು ಭಾಗ ಸಾಗ ಮಾತನಾಡಿಕೊಂಡು ಅಂದರೆ ಕ್ರಾಪಿಂಗ್ ಪ್ಯಾಟರ್ನ್ ಅವರು ತೀರ್ಮಾನ ಮಾಡಿ ಮಾಡಿಕೊಳ್ಳುತ್ತಿದ್ದರು ಈಗ ಭೂಮಿ ಪ್ರೈವೇಟ್, ನೀರು ಪ್ರೈವೇಟ್, ಬೆಳೆದುಕೊಳ್ಳುವುದು ಪ್ರೈವೇಟ್ ರೇಟ್ ಮಾತ್ರ ಗೌರ್ನಮೆಂಟ್ ಹೇಗೆ ಆಗುತ್ತದೆ? ಇದು ಡಿಫೆನ್ಸ್ ಆರ್ಗ್ಯುಮೆಂಟ್ ಮಾಡುವಂಥದ್ದು ಅಲ್ಲ. At least water management, we should treat water as mineral. Government should have the right. ಕ್ರಾಪಿಂಗ್ ಪ್ಯಾಟರ್ನ್ ಬಗ್ಗೆ ಯಾವ ಯಾವ ಭಾಗದಲ್ಲಿ ಯಾವುದನ್ನು ಬೆಳೆಯಬೇಕು. ಯಾವುದನ್ನು ಬೆಳೆಯಬಾರದು ಯಾವ ಪ್ರಪೋಷನಲ್ ಬೆಳೆಯಬೇಕು ಎನ್ನುವುದನ್ನು ನಾವು ಗೌರ್ನಮೆಂಟ್‌ಗೆ ಜವಾಬ್ದಾರಿ ಬಿಡಬೇಕು ನಾವು. ನಾವು ಹಾಗೆ ಮಾಡುವುದಿಲ್ಲ ಬೆಳೆದರೆ ಎಲ್ಲರೂ ನಾವು ಒಂದೆ ಬೆಳೆಯುತ್ತೇವೆ. ಬೆಳೆ ಸಿಗಲಿಲ್ಲವೆಂದು ಆಮೇಲೆ ಗಲಾಟೆ ಮಾಡುತ್ತೇವೆ. ನಮ್ಮ Whole life ಅನ್ನು ನೀವು Scientific approach ಇಟ್ಟುಕೊಂಡು ನಡೆಸಿಕೊಂಡು ಹೋದಾಗ you cannot discuss agriculture in isolation. Economic policy, social order and various other factors come into picture here.

ಶ್ರೀ ಅರಗ ಜ್ಞಾನೇಂದ್ರ : ನಾನು ಒಂದು ಉದಾಹರಣೆಯನ್ನು ತಮ್ಮ ಎದುರುಗಡೆ ಹೇಳುತ್ತೇನೆ. ಧಾರವಾಡದ ಆವತ್ತಿನ ಮಾರುಕಟ್ಟೆಯ ರಿಪೋರ್ಟ್ ಬೇಕಾದರೆ ತಾವು ತರಿಸಿನೋಡಿ.

ಅಧ್ಯಕ್ಷರು : ನೀವು ಹೇಳುವುದು ಸತ್ಯವಿದೆ ಆದರೆ ಅದಕ್ಕೆ ಕಾರಣವೇನು. We are a disorganised society. ಮೊನ್ನೆ ಇದೆಲ್ಲ ತೊಂದರೆಯಾಗಿದೆ ರಷ್ಯಾದೇಶದಲ್ಲಿ ಅಥವಾ ಇತರ ಸೋಷಿಯಲಿಸ್ಟ್ ಕಂಟ್ರಿಯಲ್ಲಿ ಬೆಳಿಗ್ಗೆ 6 ಗಂಟೆಗೆ ರೇಡಿಯೋದಲ್ಲಿ ಅನೌನ್ಸ್ ಮಾಡುವರು. ಇಡೀ ದೇಶದಲ್ಲಿ ಆಲೂಗಡ್ಡೆಯನ್ನು 45 ಪೈಸೆಗೆ ಮಾರುತ್ತಿದ್ದೇವೆ ಎಂದು ಥ್ರೂಔಟ್ ಕಂಟ್ರಿ ಹೋಗಿ ನೀವು ನೆಗೋಸಿಯೇಟ್ ಮಾಡಬೇಕಾಗಿಲ್ಲ ಬೆಲೆ ಎಷ್ಟು ಎಂದು You could go and pick potatoes for 0.45 paise. It was the state that was controlling. Of course, ಅಮೇರಿಕನ್ಸ್ ಹೋದರು ಅವರು ಪುಣ್ಯ ಕಟ್ಟಿಕೊಂಡರು ಆ ದೇಶ ನಾಶ ಮಾಡಿಬಂದರು ಎಂದು ಇಟ್ಟುಕೊಳ್ಳಿ. ಎಲ್ಲಾದರೂ ಒಂದು ಕಡೆ ನಾವು We should accept the authority of the state. The state should have control over either the distrbution of water, management of water. ಈಗ ನೀವು 600 ಅಡಿ ಕೊರೆದಿರಿ 10 ಹೆಚ್‌ಪಿ ಮೋಟಾರ್ ಹಾಕಿಕೊಂಡಿರಿ ಮೊದಲು ಆ ರೀತಿ ಅಂಡರ್‌ಗ್ರೌಂಡ್ ವಾಟರ್ ಎಕ್ಸ್‌ಪ್ಲಯ್ಡ್ ಮಾಡುವ ಸಿಸ್ಟಮ್ ಇತ್ತಾ ನಮ್ಮಲ್ಲಿ, ಇರಲಿಲ್ಲ. ನಮ್ಮ ಕಡೆ ಅಂತು ಡ್ರೈಲ್ಯಾಂಡ್ ಫಾರ್ಮಿಂಗ್ ಮಾಡುವ ಕಡೆಗೆ ಬುಗ್ಗೆ ಬರುತ್ತಾ ಇತ್ತಲ್ಲಾ ಬುಗ್ಗೆಯಲ್ಲಿ ಎಷ್ಟು ಬರುತ್ತದೆ ಎಲ್ಲಿ ಭಾವಿ ತುಂಬುತ್ತದೆ ಅಷ್ಟಕ್ಕೆ ಹೊಂದಿಕೊಂಡು ನಾವು ಬೆಳೆಯನ್ನು ಬೆಳೆಯುತ್ತಿದ್ದೆವು. ಏತ ಅಥವಾ ಕಪ್ಲೆ ಇಟ್ಟುಕೊಂಡಿದ್ದೆವು. ಆಮೇಲೆ ಆಯಿಲ್ ಇಂಜಿನ್ ಬಂತು So, everyone is in a hurry. ಅಗ್ರಿಕಲ್ಚರಿಸ್ಟ್ ಬಗ್ಗೆ ಆವಾಗಲೇ ಸಭಾನಾಯಕರು ಹೇಳಿದರು. ಮ್ಯಾನ್ ಪವರ್ ಯೂಸ್ ಮಾಡಿ ಮಾಡುತ್ತಿದ್ದ ಅಗ್ರಿಕಲ್ಚರು ಗ್ರಾಜ್ಯುಯಲಿ ರೀಪ್ಲೇಸ್ ಆಗುತ್ತದೆ ಮೆಶಿನ್ ಪವರನ್ನು ಯೂಸ್ ಮಾಡುತ್ತಿದ್ದೇವೆ. ಯಾರು ಅಗ್ರಿಕಲ್ಚರ್ ಲೇಬರ್ ಆಗಿದ್ದರು they are confronted by other

problems in society. It is a question of social status to them. ಕೂಲಿ ಅಂತ ಅನಿಸಿಕೊಂಡು ಅವರು ಬರುವುದಕ್ಕೆ ತಯಾರಿಲ್ಲಾ ಈಗ. ಜೀತದಾಳುಗಳನ್ನು ಇಟ್ಟುಕೊಳ್ಳುವಂತಿಲ್ಲ, ಮನೆಯಲ್ಲಿ ಜನರು ಕಡಿಮೆಯಾಗಿದ್ದಾರೆ. ಮೊದಲು ಎಷ್ಟು ಕ್ಯಾಟಲ್ ಇತ್ತು ಇವತ್ತು ಅಷ್ಟು ಕ್ಯಾಟಲ್ ಇಲ್ಲ. ಕಡಿಮೆಯಾಗಿದೆ ಮೊದಲು ಯೂಸ್ ಮಾಡುತ್ತಿದ್ದ ಇಂಪ್ಲಿಮೆಂಟ್ ಯೂಸ್ ಮಾಡುತ್ತಾ ಇರಲಿಲ್ಲ. ಇವತ್ತು ನಾವು ಶ್ರಮ ಮಾಡುವುದಕ್ಕೂ ತಯಾರು ಇಲ್ಲ. All these factors should be taken into consideration. Nothing could be discussed in isolation. You have to put all these things together. And we have to suggest one comprehensive policy under the changed circumstances, as to how to go about, what should be the attitude of government, what should be the attitude of farming community. We should go on those lines. That would help us.

ಶ್ರೀ ಅರಗ ಜ್ಞಾನೇಂದ್ರ : ಇಲ್ಲಿ ಏನಾಗುತ್ತದೆ, ತಾವು ಹೇಳುವಂಥದ್ದು ಸರಿ ಇದೆ. ಇವತ್ತು ವಾಟರ್ ಮ್ಯಾನೇಜ್‌ಮೆಂಟ್ ಬಹಳ ಮುಖ್ಯ ನಾವು ಅರಣ್ಯವನ್ನು ಹಾಳುಮಾಡುತ್ತಿದ್ದೇವೆ ಮಾಡುವ ವ್ಯವಸ್ಥೆ ನಮ್ಮಲ್ಲಿ ಇಲ್ಲ. ಹಾಗಾಗಿ ಇವತ್ತು ನೀರಿಗಾಗಿ ನಾವು ಎಲ್ಲರೂ ಭೂಮಿ ಅಗೆಯಬೇಕಾಗುತ್ತದೆ. ಇವತ್ತು ಆ ಸೆಟ್‌ಲೈಟ್ ಅದರಲ್ಲಿರತಕ್ಕಂಥ ಫೋಟೋಸ್ ನೋಡಿದೆ, ತುಮಕೂರು ಕೋಲಾರ ಎಲ್ಲವನ್ನೂ ನೋಡಿದೆ.

ಅಧ್ಯಕ್ಷರು : ಕ್ಯಾಟಲ್ಸ್ ಎಷ್ಟು reduce ಆಗಿದೆ ಹೇಳಿ. ಗೋ ಸಂಪತ್ತು ಎಷ್ಟು ಕಡಿಮೆಯಾಗಿದೆ ಹೇಳಿ.

ಶ್ರೀ ಅರಗ ಜ್ಞಾನೇಂದ್ರ : ಆದರೆ ಸದ್ಯದ ಪರಿಸ್ಥಿತಿಯಲ್ಲಿ ಸರ್ಕಾರ ಸ್ವಲ್ಪ ರಕ್ಷಣೆಯನ್ನು ಕೊಡಬೇಕು ಎಲ್ಲವನ್ನೂ ಸರ್ಕಾರ ಮಾಡಬೇಕೆಂದು ನಾವು ಅವಲಂಬಿಸಿರುವುದಿಲ್ಲ. ಇಷ್ಟು ದೊಡ್ಡದಾದ ಕೃಷಿಯನ್ನು ಮಾಡಲಿಕ್ಕೆ ಆಗದೆ ಇರಬಹುದು. ಆದರೆ ಇಂತಹ ಇಕ್ಕಟ್ಟಿನ ಪರಿಸ್ಥಿತಿಯಲ್ಲಿ ರಕ್ಷಣೆ ಕೊಡಬೇಕಾಗುತ್ತದೆ. 10 ರೂಪಾಯಿ, 6 ರೂಪಾಯಿ ಇದೆ ಮಾರ್ಕೆಟ್ಟಿನಲ್ಲಿ ಒಂದು 50-60 ಲೋಡನ್ನು ಎತ್ತಿದರೆ ಸಾಕಾಗುತ್ತದೆ. ಆಟೋಮೆಟಿಕ್ಕಾಗಿ ಮಾರ್ಕೆಟ್ ವ್ಯಾಲ್ಯು ಹೆಚ್ಚು ಆಗುವುದಕ್ಕೆ ಸಾಧ್ಯವಾಗುತ್ತದೆ. ಹೀಗೆ ಅಲ್ಲಲ್ಲಿ ರಕ್ಷಣೆಗೆ ಬರಬೇಕಾಗುತ್ತದೆ. ನಮ್ಮ ಶಿವಮೊಗ್ಗಾ ಜಿಲ್ಲೆಯಲ್ಲಿ ಓಸ್ವಾಲ್ ಕಂಪನಿಗೆ ಕೊಟ್ಟರು ಪಾಮ್ ಆಯಿಲ್ ಎಂದು ಫ್ಯಾಕ್ಟರಿ ಮಾಡುವುದಕ್ಕೆ. ಎಡಿಬಲ್ ಆಯಿಲ್ ತಯಾರು ಮಾಡಬೇಕು, ಈ ದೇಶದಲ್ಲಿ ಆಯಿಲನ್ನು ಇಂಪೋರ್ಟ್ ಮಾಡುವಂಥದ್ದನ್ನು ತಡೆಗಟ್ಟಬೇಕು. ಮಾನ್ಯ ತೋಟಗಾರಿಕೆ ಸಚಿವರು ನಮ್ಮ ಉಪ ಮುಖ್ಯಮಂತ್ರಿಗಳು ಸೇರಿ ಮೊನ್ನೆ ಸಭೆ ಮಾಡಿದರು. ಏನು ಪರಿಸ್ಥಿತಿಯಾಗಿದೆ 4½ ಸಾವಿರ ಹೆಕ್ಟೇರ್‌ನಲ್ಲಿ ಚಿಕ್ಕಮಗಳೂರು, ಚಿತ್ರದುರ್ಗ, ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಪ್ರದೇಶದಲ್ಲಿ ಪಾಮ್ ಆಯಿಲ್ ಬೆಳೆಸಿದರು. ಸರ್ಕಾರದ ತೋಟಗಾರಿಕೆ ಇಲಾಖೆಯವರು ಬಂದು ಬೆಳೆಯಿರಿ ನಿಮಗೆ ಒಳ್ಳೆಯ ಧಾರಣೆ ಬರುತ್ತದೆ. ನೀವು ಅಡಿಕೆಯನ್ನು ಬೆಳೆಯಬೇಡಿ ತೆಂಗು ಬೆಳೆಯಬೇಡಿ. ಇದು ನಿಮ್ಮದು ಲಾಭದಾಯಕವಾಗುತ್ತದೆಂದು ಹೇಳಿದರು ಒಂದು ಪಾಮ್ ಆಯಿಲ್ ತೋಟ ಮಾಡಬೇಕಾದರೆ

3½ ವರ್ಷದಿಂದ 4 ವರ್ಷ ಬೇಕಾಗುತ್ತದೆ. ಅಷ್ಟು ವರ್ಷ ಬೆಳೆಸಿದರೂ ಅವನಿಗೆ ಗೊಬ್ಬರ ಕೊಟ್ರೆ ಎರಡು ಎಕರೆ ಜಮೀನು ಇದ್ದರು ಆ ಎರಡು ಎಕರೆಯಲ್ಲಿ ಪಾಮ್ ಹಾಕಿದ್ದಾರೆ. ಪರಿಸ್ಥಿತಿ ಏನಾಗಬೇಕು ಇವತ್ತು. ಅವನು ಕೈ ಎತ್ತಿದ್ದಾನೆ. ಚನ್ನಗಿರಿಯಿಂದ ಲಿಫ್ಟ್ ಮಾಡುತ್ತಾ ಇಲ್ಲ ಮೊನ್ನೆ ಚನ್ನಗಿರಿಯಿಂದ ರೈತರು ಬಂದಿದ್ದರು. ಶಿವಮೊಗ್ಗದಿಂದ ಲಿಫ್ಟ್ ಮಾಡುತ್ತಾ ಇಲ್ಲ ಓಸ್ವಾಲ್ ಕಂಪನಿಯವರು ಕೈ ಎತ್ತಿ ಬಿಟ್ಟಿದ್ದಾರೆ. 35 ಲಕ್ಷ ರೂಪಾಯಿಗಳು ಪೇಮೆಂಟ್ ಇಲ್ಲಾ ಇವತ್ತಿನವರೆಗೂ ಕೊಡುತ್ತಾ ಇಲ್ಲ. ಮಾನ್ಯ ಮಂತ್ರಿಗಳು ಕುಳಿತುಕೊಂಡು ಕರೆದಂತ ಸಭೆಗೆ ಓಸ್ವಾಲ್ ಕಂಪನಿಯ ಮಾಲೀಕ ಬರುತ್ತಾ ಇಲ್ಲ. ನಿಮಗೆ ಗೊತ್ತಿದೆ ಶಿವಮೊಗ್ಗ ಶುಗರ್ ಫ್ಯಾಕ್ಟರಿ ಏನಾಯಿತೆಂದು ಅಲ್ಲಿಯ ರೈತರು ಏನು ಅನಾಹುತಕ್ಕೆ ಒಳಗಾದರು ಎಂದು, ಇವತ್ತು ಒಂದೊಂದೇ ಕಂಪನಿಗಳು ರೈತರಿಗೆ ಟೋಪಿ ಹಾಕಿಕೊಂಡು ರೈತರು ಕೈ ಎತ್ತಿಕೊಂಡು ಹೋದರೆ ನಮ್ಮ ಕೃಷಿ ಯಾವ ದಿಕ್ಕಿಗೆ ಹೋಗುತ್ತದೆ. ಏನು ಮಾಡಬೇಕು ಹೇಳಿ ನೇಣುಗಂಬಕ್ಕೆ ಏರಬೇಕಾ ? ಸಾಲ ಮಾಡಿ ಇವತ್ತು ಪಾಮ್ ಬೆಳೆಸಿದ್ದಾರೆ. ಆ ಯೀಲ್ಡ್‌ನ್ನು ಅವನು 3-4 ವರ್ಷ ಅವನ ಆರ್ಥಿಕ ಪರಿಸ್ಥಿತಿಗೆ ಕೊಡಲಿ ಏಟು ಬೀಳುವಂಥ ವ್ಯಕ್ತಿ ಭವಿಷ್ಯದಲ್ಲಿ ಒಳ್ಳೆಯ ಬೆಲೆ ಬರುತ್ತದೆಂದು ಯೋಚನೆ ಮಾಡತಕ್ಕಂಥ ರೈತ ಏನು ಮಾಡಬೇಕಾಗುತ್ತದೆ. ಇವತ್ತು ಎಷ್ಟು ಕೆಪಾಸಿಟಿ ಬೇಕು ಅಷ್ಟು ಕೆಪಾಸಿಟಿ ಫ್ಯಾಕ್ಟರಿ ಮಾಡಲಿಲ್ಲ. ಯಾವುದೇ ಸರ್ಕಾರದ ಸಬ್ಸಿಡಿ ಬರುತ್ತದೆ. ಸರ್ಕಾರದ ಸಹಭಾಗಿತ್ವದ 49 ಪರ್ಸೆಂಟು ಷೇರು ಬರುತ್ತದೆ. ನಮ್ಮ ಕರ್ನಾಟಕ ಸರಕಾರ, ಮಾಡಬೇಕಲ್ಲ ನೀವು. ನಿಮ್ಮ ಸರ್ಕಾರ ಅವನನ್ನು ಹಿಡಿದು ನಿಲ್ಲಿಸಬೇಕು. ಇಲ್ಲದಿದ್ದರೆ ನೀನು ಹೋಗಯ್ಯಾ ನಾವು ವಹಿಸಿಕೊಳ್ಳುತ್ತೇವೆಂದು ನಮ್ಮ ಅಧಿಕಾರಿಗಳನ್ನು ಹಾಕಿ ಅದನ್ನು ನಡೆಸಬೇಕೆಂದು ನಾನು ಹೇಳುತ್ತೇನೆ.

ಶ್ರೀ ಡಿ. ಟಿ. ಜಯಕುಮಾರ್ (ತೋಟಗಾರಿಕೆ ಸಚಿವರು) : ಮಾನ್ಯ ಅಧ್ಯಕ್ಷರೆ, ತಾಳೆಬೆಳೆ ಬಗ್ಗೆ ಆ ಓಸ್ವಾಲ್ ಕಂಪನಿ ಬಗ್ಗೆ ಎರಡು ಸಭೆಗಳನ್ನು ಕರೆದು ಈಗಾಗಲೇ ನಾವು 10 ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇವೆ. ಇನ್ನು 20 ಲಕ್ಷ ರೂಪಾಯಿಗಳನ್ನು ಈ ತಿಂಗಳಲ್ಲಿ ಚೆಕ್‌ಬುಕ್‌ದಲ್ಲಿ ಕೊಟ್ಟು ಅದನ್ನು ತೀರಿಸುತ್ತೇವೆ. ಆದ್ದರಿಂದ ಆ ಸಮಸ್ಯೆಯನ್ನು ತಾತ್ಕಾಲಿಕವಾಗಿ ಬಗೆಹರಿಸಿದ್ದೇವೆಂದು ಹೇಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಉಳಿದ ಬೆಳೆಯನ್ನು ಎತ್ತಬೇಕಲ್ಲ. ಒಂದು ದಿವಸ ಹಣ್ಣನ್ನು ಕೊಯ್ದಿರೆ 24 ಗಂಟೆಯೊಳಗೆ ಅದು ಫ್ಯಾಕ್ಟರಿ ತಲುಪಬೇಕು. ಇಲ್ಲದಿದ್ದರೆ ಅದು ಹಾಳಾಗಿ ಹೋಗುತ್ತದೆ, ಕೊಳೆತು ಹಾಳಾಗುತ್ತದೆ ಟನ್‌ಗಟ್ಟಲೇ ಹಣ್ಣು, ಅದನ್ನು ಯಾರು ಎತ್ತುವುದು. ಹಳೆಯ ಬಾಕಿಯನ್ನು ಕೊಡುವುದು ತಾವು ಸೆಟಲ್ ಮಾಡಿದಿರಿ ಏನೋ ಅದು ಆಲ್ ರೈಟ್. ನಾನು ಅದಕ್ಕೆ ಅಭಿನಂದಿಸುತ್ತೇನೆ. You have taken initiative that day. ಇನ್ನು ಉಳಿದಿರತಕ್ಕಂಥ ಬೆಳೆಯನ್ನು ಯಾವ ರೀತಿ ಎತ್ತುವುದು ಕೆಪಾಸಿಟಿ ಇಲ್ಲ. ಫ್ಯಾಕ್ಟರಿಯನ್ನು ನೀವು ಹೊಸದಾಗಿ ಮಾಡಬೇಕಲ್ಲ. ಆದ್ದರಿಂದ, ತಾವು ಇಂತಹ ಒಂದು ವ್ಯವಸ್ಥೆಯ ಬಗ್ಗೆ ನಿಗಾ ಇಟ್ಟುಕೊಂಡರೆ ರೈತರಿಗೆ ಆಗತಕ್ಕಂಥ ಹಾನಿ ತಪ್ಪುತ್ತದೆ. ಈಗಾಗಲೇ 1,700 ಹೆಕ್ಟೇರ್ ಪ್ರದೇಶದಲ್ಲಿ ಪಾಮನ್ನು ಕಡಿದು ಅಡಿಕೆಯ ತೋಟವನ್ನು ಹಾಕುತ್ತಿದ್ದಾರೆ. ಇದು ಪರಿಸ್ಥಿತಿ ನಮ್ಮ ಶಿವಮೊಗ್ಗ ಜಿಲ್ಲೆಯಲ್ಲಿ. ತಾವು ದಯವಿಟ್ಟು ಇದರ ಬಗ್ಗೆ ಆಲೋಚನೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ

ಮಾಡಿಕೊಳ್ಳುತ್ತಾ ವಿಶೇಷವಾದಂಥ ಆದ್ಯತೆಯನ್ನು ಕೃಷಿಗೆ ಈ ಇಲಾಖೆಗೆ ಮತ್ತು ನಿಮ್ಮ ತೋಟಗಾರಿಕೆ ಇಲಾಖೆಗೆ ತುಂಬಬೇಕೆಂದು ಹೇಳುತ್ತೇನೆ.

7.00 ಪಿ.ಎಂ.

ಇನ್ನು ಹೂ ಬೆಳೆಯುವುದು, ಫ್ಲೋರಿಕಲ್ಚರ್ ಹೂಗಳನ್ನು ರಫ್ತು ಮಾಡುವ ಸಲುವಾಗಿ ವಿಮಾನ ನಿಲ್ದಾಣದಲ್ಲಿ ಕ್ಲಿಯರೆನ್ಸ್ ಸಿಗದೆ ಕೋಟಿಗಟ್ಟಳೆ ಮೊತ್ತದ ಹೂಗಳು ಇವೊತ್ತು ಕೊಳೆದು ನಾಶವಾಗುತ್ತಿದೆ ಎಂದು ಮೊನ್ನೆ ದಿವಸದ ಪತ್ರಿಕೆಯಲ್ಲಿ ವರದಿಯಾಗಿದೆ. ಆದುದರಿಂದ, ಪುಷ್ಪೋಧ್ಯಮ ಮಾಡಬೇಕಾಗಿದೆ. ಇದನ್ನು ಮಾಡುವುದಕ್ಕೆ ಬೇಕಾಗಿರುವ ಸೌಲಭ್ಯಗಳನ್ನು ಒದಗಿಸಿಕೊಡುವುದಕ್ಕಾಗುತ್ತದೆಯೇ ? ಎಂಬುದನ್ನು ಆಲೋಚಿಸಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರದ ಕಡೆಯಿಂದ ವ್ಯವಸ್ಥಿತವಾಗಿರುವ ಎಲ್ಲಾ ಪ್ರಯತ್ನಗಳೂ ಆಗಬೇಕಾಗಿದೆ. ಕೇವಲ ಘೋಷಣೆಗಳ ಮೂಲಕ ಆಗುವುದಿಲ್ಲ. ಮಾನ್ಯ ಸಚಿವರು ಇದರ ಕಡೆ ನಿರ್ದಿಷ್ಟವಾಗಿ ಗಮನಹರಿಸಬೇಕು. ಈ ಕುರಿತು ಕಳಕಳಿಯಿರುವಂಥ ಅಧಿಕಾರಿಗಳನ್ನು ತಾವು ನೇಮಿಸಬೇಕು. ಉತ್ತಮ ರೀತಿಯಲ್ಲಿ ಕಾರ್ಯನಿರ್ವಹಿಸುವ ಅಧಿಕಾರಿಗಳನ್ನು ತಾವು ಬೇರೆ ಬೇರೆ ಇಲಾಖೆಗಳಿಗೆ ನೇಮಿಸಿದ್ದೀರಿ.

ಶ್ರೀ ಕೆ. ಶ್ರೀನಿವಾಸಗೌಡ : ಹಾರ್ಟಿಕಲ್ಚರ್ ಬಗ್ಗೆ ಹೇಳುವುದಾದರೆ, ಕೋಲಾರ ಜಿಲ್ಲೆಯಲ್ಲಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಮಾವು ಬೆಳೆ ಬೆಳೆಯುವ ಸಂಗತಿ ನಮ್ಮ ಗಮನಕ್ಕೆ ಬಂದಿದೆ. ಈ ಸಲ ಏನಾಗಿದೆಯೆಂದರೆ, ಒಂದು ಟನ್ ಮಾವಿಗೆ ಸುಮಾರು ಎರಡು ಸಾವಿರದಿಂದ ಎರಡೂವರೆ ಸಾವಿರ ರೂಪಾಯಿಗಳವರೆಗೆ ಮಾತ್ರ ರೈತರಿಗೆ ಹಣ ಸಿಗುತ್ತಿದೆ. ಸಾವಿರಾರು ಎಕರೆಗಳಲ್ಲಿ ಬೆಳೆದಿದ್ದಂಥ ಮಾವಿನ ಬೆಳೆಗೆ ಎಕ್ಸ್‌ಪೋರ್ಟ್ ಮಾಡುವ ಅವಕಾಶ ಕೊಡಲಿಲ್ಲವಾದ್ದರಿಂದ ಬಹಳ ಕಡಿಮೆ ಬೆಲೆ ರೈತರಿಗೆ ಸಿಕ್ಕಿದೆ.

ಅಧ್ಯಕ್ಷರು : ಮಾವಿನ ಬೆಳೆ ನಿಧಾನವಾಗಿ ಬರುತ್ತಿತ್ತು. ಅಪರೂಪಕ್ಕೆ ಉತ್ತರ ಭಾರತದಲ್ಲಿ ಇದರ ಬೆಳೆ ಬೇಗ ಬಂದಿದ್ದರಿಂದ, ನಮ್ಮ ಸರಕು ಮತ್ತು ಅವರ ಸರಕು ಒಟ್ಟಾಗಿ ಮಾರುಕಟ್ಟೆಗೆ ಬಂದಿದ್ದರಿಂದ ಈ ಸಲ ಮಾವಿನ ಬೆಳೆಯಲ್ಲಿ ನಮಗೆ ಸೂಕ್ತ ಬೆಲೆ ಸಿಗಲಿಲ್ಲ. ಎಕ್ಸ್‌ಪೋರ್ಟ್ ಮಾಡಲು ಅವಕಾಶ ಕೊಡಲಿಲ್ಲವೆಂದು ಹೇಳಿದಿರಿ, ಅದಲ್ಲ.

ಶ್ರೀ ಕೆ. ಶ್ರೀನಿವಾಸಗೌಡ : ನಾನು ತಮ್ಮ ಮೂಲಕ ಸರ್ಕಾರದಲ್ಲಿ ಕೇಳಿಕೊಳ್ಳುವುದೇನೆಂದರೆ, ನಮ್ಮ ಕೋಲಾರ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾವು ಬೆಳೆ ಬೆಳೆಯುವುದರಿಂದ ಅಲ್ಲೊಂದು ಶಾಶ್ವತವಾದ ಕೋಲ್ಡ್ ಸ್ಟೋರೇಜ್, ಜ್ಯೂಸ್ ಫ್ಯಾಕ್ಟರಿಯನ್ನು ಸ್ಥಾಪಿಸಿದರೆ ಬೆಳೆ ನಾಶವಾಗದೆ ಉಪಯೋಗವಾಗುತ್ತದಲ್ಲದೆ ಸದರಿ ಬೆಳೆಗೆ ಒಂದು ಬೆಲೆಯನ್ನು ನಿಗದಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಮುಖ್ಯವಾಗಿ ಕೃಷಿ ಸಂಸ್ಕರಣಾ ಘಟಕಗಳನ್ನು ತೆರೆಯಬೇಕಾಗಿದೆ. ನಮ್ಮಲ್ಲಿ ಕೇವಲ ಶೇಕಡ ನಾಲ್ಕರಷ್ಟು ಸಂಸ್ಕರಣಾ ಘಟಕಗಳಿವೆ. ಇಂಡೋನೇಶಿಯಾದಂಥ ಅತ್ಯಂತ ಚಿಕ್ಕ ರಾಷ್ಟ್ರ ಶೇಕಡಾ80ರಷ್ಟು ಕೃಷಿ ಸಂಸ್ಕರಣಾ ಘಟಕಗಳನ್ನು ತೆರೆದಿದೆಯೆಂದು ಪತ್ರಿಕೆಗಳಲ್ಲಿ ವರದಿಯಾಗಿದೆ. ಆದುದರಿಂದ ಸಂಸ್ಕರಣಾ ಘಟಕಗಳಿಗೆ ವಿಶೇಷವಾದ ಪ್ರೋತ್ಸಾಹ ಕೊಟ್ಟು, ಯಾವ ಘಟಕಗಳನ್ನು

ತೆರೆದರೆ, ಯಾವ ಬೆಳೆಗೆ, ಯಾವ ರೈತರಿಗೆ ಉಪಯೋಗವಾಗುತ್ತದೆಂಬುದರ ದಿಕ್ಕಿನತ್ತ ವಿಶೇಷ ಪ್ರಯತ್ನ ಮಾಡಬೇಕೆಂದು ಹೇಳುತ್ತಾ, ಈ ವರ್ಷ ಹನಿ ನೀರಾವರಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದಿಂದ ಕೋಟಿಗಟ್ಟಲೆ ಹಣ ಬಂತು. ಮಾನ್ಯ ಮುಖ್ಯಮಂತ್ರಿಗಳೆ, ಇದರಲ್ಲಿ ಸ್ಥಿತಿ ಏನಾಗಿದೆಯೆಂದರೆ ಈ ರೀತಿ ಬಂದಂಥ ಕೋಟಿಗಟ್ಟಲೆ ಹಣವನ್ನು ತಿಂದು ತೇಗಿದರು. ಇದು ತಮಗೆ ಗೊತ್ತಿದೆ. ಶಿವಮೊಗ್ಗದಲ್ಲಿರುವ ತೋಟಗಾರಿಕೆ ಇಲಾಖೆಯ ಒಬ್ಬ ಡೆಪ್ಯುಟಿ ಡೈರೆಕ್ಟರ್ ತಲೆ ಹೊಡೆದರು, ಅವರು ಸತ್ತುಹೋಗಬೇಕಾಗಿತ್ತು. ಆ ಕಛೇರಿಯಲ್ಲಿ ಡೆಪ್ಯುಟಿ ಡೈರೆಕ್ಟರ್ ಮತ್ತು ಅವರ ಕೆಳಗಡೆಯಿರುವ ಸಹಾಯಕರ ನಡುವೆ ಪರ್ಸೆಂಟೇಜ್‌ನಲ್ಲಿ ವ್ಯತ್ಯಾಸ ಬಂದು ಅವರಿಬ್ಬರನ್ನೂ ಸೇರಿಸಿ ಹೊಡೆಯಬೇಕೆಂದು ರೈತರು ಹೋಗಿದ್ದರು. ಆತ ತಲೆ ಹೊಡೆದು ಕೊಂಡು ರಕ್ತ ಬರುವುದನ್ನು ನೋಡಿದ ರೈತರು ಮಾನವೀಯತೆ ದೃಷ್ಟಿಯಿಂದ ಏನೂ ಮಾಡದೆ ವಾಪಸ್ಸು ಬಂದಿದ್ದಾರೆ. ನಾನು ಒಂದು ದಿವಸ ಆ ಕಛೇರಿಗೆ ಹೋದಾಗ ಬಹಳಷ್ಟು ಫೈಲುಗಳನ್ನು ಇಟ್ಟುಕೊಂಡಿದ್ದಾರೆ, ಒಂದು ಫೈಲಿಗೂ ಸಿಗ್ನೇಚರ್ ಹಾಕಿಲ್ಲ, ಏಕೆಂದರೆ ದುಡ್ಡು ಬರುವುದಿಲ್ಲವೆಂದು. ಇದರ ಬಗ್ಗೆ ನಾನೇ ಸ್ವತಃ ಹೋಗಿ ನೋಡಿದ್ದೇನೆ. ಕೇಂದ್ರ ಸರ್ಕಾರದಿಂದ ಸಹಾಯಧನದ ದುಡ್ಡು ಬರುತ್ತದೆ. ಎರಡು ಎಕರೆಗಳಲ್ಲಿ ಕೃಷಿ ಮಾಡಿದ್ದರೆ ಇಪ್ಪತ್ತು ಎಕರೆಗಳೆಂದು ಪಹಣಿಯಲ್ಲಿ ತಿದ್ದಿ ಸಹಾಯಧನದ ಹಣ ತಿಂದಿದ್ದಾರೆ. ಎರಡು ಎಕರೆಗಳಲ್ಲಿ ಕೃಷಿ ಮಾಡಿದಂತಹ ರೈತರಿಗೆ ಸಹಾಯಧನ ಸಿಕ್ಕಿತ್ತೇ? ಸರ್ಕಾರದ ದುಡ್ಡನ್ನು ಅಧಿಕಾರಿಗಳು ತಿಂದಿದ್ದಾರೆ. ನಿಮ್ಮ ಚನ್ನಗಿರಿಯಲ್ಲಿ ಮೂರೂವರೆ ಕೋಟಿ ರೂಪಾಯಿಗಳನ್ನು ಕ್ಲೇಮ್ ಮಾಡುತ್ತಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್ : ಹನಿ ನೀರಾವರಿಯಲ್ಲಿ ಸಾಕಷ್ಟು ದುಡ್ಡಿದೆ. ಹಣ ದುರುಪಯೋಗವಾಗುತ್ತಿದೆಯೆಂದರೆ ಕೇವಲ ಒಬ್ಬ ಅಧಿಕಾರಿಯಿಂದ ಮಾತ್ರ ಸಾಧ್ಯವಿಲ್ಲ. ಅಧಿಕಾರಿ, ರೈತ, ಕೆಲವರು ಮಧ್ಯವರ್ತಿಗಳು ಸೇರಿಕೊಂಡು ನುಂಗಿ ಹಾಕುತ್ತಿದ್ದಾರೆ. ಈ ದಿಶೆಯಲ್ಲಿ ಈಗಾಗಲೇ ಶಿವಮೊಗ್ಗದಲ್ಲಿನ ಇಬ್ಬರು ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇವೆ.

ಅಧ್ಯಕ್ಷರು : ಅವರು ಸರಿಯಾಗಿ ಹೇಳಲಿಲ್ಲ. ಯಾರೋ ಡೆಪ್ಯುಟಿ ಡೈರೆಕ್ಟರ್ ಅವರನ್ನು ಸಸ್ಪೆಂಡ್ ಮಾಡುವುದು ಮುಖ್ಯವಲ್ಲ. ಹನಿ ನೀರಾವರಿಗೆ ಕೇಂದ್ರ ಸರ್ಕಾರ ಹೆಚ್ಚಿನ ಪ್ರಾಧಾನ್ಯತೆ ನೀಡಿ, ಇದರಲ್ಲಿ ಶೇಕಡಾ 75ರಷ್ಟು ಸಹಾಯಧನದ ನೆರವು ನೀಡುತ್ತಿದೆ. ಹನಿ ನೀರಾವರಿಯಲ್ಲಿ ಇಷ್ಟು ದೊಡ್ಡ ಪ್ರಮಾಣದಲ್ಲಿ ಸಹಾಯಧನದ ನೆರವು ಯಾರಿಗೆ ತಲುಪಬೇಕೋ ಅವರಿಗೆ ತಲುಪಲಿಲ್ಲ. ಇವರು ಸಹಾಯಧನದ ಹಣವನ್ನು ಪಡೆದುಕೊಳ್ಳುವುದಕ್ಕೋಸ್ಕರ ಏನು ಮಾಡುತ್ತಾರೆಂದರೆ ಕೆಲವು ಕಲ್ಪಿತ ದಾಖಲೆಗಳನ್ನು ಸೃಷ್ಟಿಸಿ, ಕೆಲವು ರೈತರುಗಳನ್ನು ಒಳಪಡಿಸಿಕೊಂಡು ಸಿಗ್ನೇಚರ್ ಮಾಡಿ ಹಣವನ್ನು ಡ್ರಾ ಮಾಡಿ ದುಡ್ಡು ತಿನ್ನುವಂಥ ಕೆಲಸ ಮಾಡುತ್ತಾರೆ. ಹನಿ ನೀರಾವರಿ ಯೋಜನೆ ಕೈಗೊಳ್ಳುವುದರಿಂದ ಏನಾಗುತ್ತದೆಂದರೆ ನೀರಿನ ಸದ್ಬಳಕೆಯಾಗುತ್ತದೆ. ನಾವು ನೀರನ್ನು ಬಹಳ ವೇಸ್ಟ್ ಮಾಡುತ್ತಿದ್ದೇವೆ. Water has become a costly mineral for us. This is the most important principle that is involved, not the suspension of the Deputy Director that is involved. ಸಸ್ಪೆಂಡ್ ಆಗುತ್ತಾನೆ, ಟ್ರಿಬ್ಯುನಲ್‌ಗೆ ಹೋಗುತ್ತಾನೆ, ಸ್ಟೇ ತರುತ್ತಾನೆ, ಆತ ಹಾಳಾಗಿ ಹೋಗುತ್ತಾನೆ.

ಆತನನ್ನು ಬಿಡಿ. ಆದರೆ, Try to propagate this philosophy more and more to the people in this State. ಹನಿ ನೀರಾವರಿ ಯೋಜನೆಯಲ್ಲಿ ಕೇಂದ್ರ ಸರ್ಕಾರದಿಂದ ಸಿಗುವ ಹಣವನ್ನು ಹೆಚ್ಚು ಪ್ರಮಾಣದಲ್ಲಿ ಪಂಜಾಬ್ ರಾಜ್ಯದವರು ತೆಗೆದುಕೊಂಡಿದ್ದಾರೆ. ಎರಡನೆಯದಾಗಿ, ಮಹಾರಾಷ್ಟ್ರದವರು ತೆಗೆದುಕೊಂಡಿದ್ದಾರೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಹಾರಾಷ್ಟ್ರ ನಂ.1, ಕರ್ನಾಟಕ ನಂ.2 ಸ್ಥಾನದಲ್ಲಿದೆ. ದುರಂತವೇನೆಂದರೆ, ಕಳೆದ ವರ್ಷದ ಮಾರ್ಚಿ ಅಂತ್ಯದಲ್ಲಿ ಮಾನ್ಯ ಸಚಿವರು ಎಂಟರಿಂದ ಒಂಭತ್ತು ಕೋಟಿ ರೂಪಾಯಿಗಳಷ್ಟು ಹಣವನ್ನು ಕ್ಲೇಮ್ ಮಾಡಲಿಲ್ಲ. ಮಾರ್ಚಿ 31ನೇ ತಾರೀಖಿಗೆ ಏನು ಬಿಲ್ಲುಗಳು ಪೆಂಡಿಂಗ್ ಇತ್ತು, ಸರ್ಕಾರದಿಂದ ಪ್ರಪೋಸಲ್ ಹೋಗಲಿಲ್ಲ. ಶೇಕಡಾ ಹತ್ತರಷ್ಟನ್ನು ಇವರ ಕಾಂಟ್ರಿಬ್ಯೂಷನ್‌ನಿಂದ ಅಡ್ಜಸ್ಟ್ ಮಾಡಿಕೊಂಡು ಕ್ಲೇಮ್ ಮಾಡಬೇಕಾಗಿತ್ತು. ಇವರಿಗೆ ಅದರತ್ತ ಗಮನವೇ ಇಲ್ಲ. ನಾನು ಅವೊತ್ತು ಸದನದಲ್ಲಿ ಹಣ ಲ್ಯಾಪ್ಸ್ ಆಗುತ್ತಿದೆಯೆಂದು ಇದರ ಬಗ್ಗೆ ಪ್ರಸ್ತಾಪಿಸಿದರೆ ಕೇಳುವವರು ಯಾರೂ ಇಲ್ಲ. ಈ ವರ್ಷ ಕೇಂದ್ರ ಸರ್ಕಾರದವರು ಆ ಎಂಟು ಕೋಟಿ ರೂಪಾಯಿಗಳನ್ನು ಕೊಡುವುದಕ್ಕೆ ಒಪ್ಪಿದ್ದಾರೆ. ಈ ವರ್ಷದ ಹಣದಲ್ಲಿ ಖೋತಾ ಮಾಡುತ್ತಾರೆ. ತಾವು ಒಂದು ಇಲಾಖೆ ನಡೆಸಬೇಕಾದರೆ ನಿಮ್ಮ ಇಲಾಖೆಯನ್ನು ಕಂಟ್ರೋಲಿಗೆ ತೆಗೆದುಕೊಳ್ಳಿ. ತಾವು ಕ್ಲೇಮ್ ಮಾಡದಿರುವುದರಿಂದ, ತುಮಕೂರಿನಲ್ಲಿ, ಎರಡೂವರೆ ಕೋಟಿ ರೂಪಾಯಿಗಳು ಉಳಿದು ಹೋಯಿತು ಶಿವಮೊಗ್ಗದಲ್ಲಿ ಎರಡು ಕೋಟಿ ರೂಪಾಯಿಗಳು ಹಾಗೂ ಚಿತ್ರದುರ್ಗದಲ್ಲಿ ಒಂದೂವರೆ ಕೋಟಿ ರೂಪಾಯಿಗಳು ಉಳಿದು ಹೋಯಿತು. ಮಾರ್ಚಿ ತಿಂಗಳಾದ ನಂತರ ಏಪ್ರಿಲ್‌ನಲ್ಲಿ ಪ್ರಪೋಸಲ್ ಕಳುಹಿಸಿದಿರಿ. ಈ ವರ್ಷದ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಅವರು ಒಪ್ಪಿದ್ದಾರೆ. ಇಂತಹ ಬರುವ ಹಣವನ್ನಾದರೂ ತಾವು ತರಿಸಿಕೊಡುವುದಕ್ಕಾಗುವುದಿಲ್ಲವೇ?

ಶ್ರೀ ಡಿ. ಟಿ. ಜಯಕುಮಾರ್ : ಕಳೆದ ಸಾರಿ ಕೇಂದ್ರ ಸರ್ಕಾರದಿಂದ ಹಣ ಮಾರ್ಚಿ ತಿಂಗಳಿನಲ್ಲಿ ಬಂತು. ಈ ಕಾರಣಕ್ಕೋಸ್ಕರ ಅರ್ಜಿಗಳು ಸಿಕ್ಕಾಪಟ್ಟೆ ಸೇರ್ಪಡೆಯಾಯಿತು. ಅರ್ಜಿಗಳನ್ನು ವಿಲೇವಾರಿಗೊಳಿಸುವುದಕ್ಕೆ ನಾವು ಅವಕಾಶ ಕೊಟ್ಟಿದ್ದರೆ ಅಷ್ಟೂ ಹಣ ದುರುಪಯೋಗವಾಗುತ್ತಿತ್ತು. ಆದುದರಿಂದ, ಈ ದಿಶೆಯಲ್ಲಿ ಕಾನೂನುಬದ್ಧವಾಗಿ, ಕ್ರಮಬದ್ಧವಾಗಿ ಮಾಡುವಲ್ಲಿ ಸ್ವಲ್ಪ ವಿಳಂಬವಾಗಿದೆ. ಈ ಸಲ ಪ್ರಾಪರ್ ಆಗಿ ಪ್ಲಾನ್ ಮಾಡಿದ್ದು, ಕ್ರಮಬದ್ಧವಾಗಿ ಎಲ್ಲವನ್ನೂ ಮಾಡಿರುವುದರಿಂದ ಯಾವುದೇ ಹಣ ದುರುಪಯೋಗವಾಗುವುದಕ್ಕೆ ಅವಕಾಶವಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಫೆಬ್ರವರಿ ಅಂತ್ಯದವರೆವಿಗೂ ಇವರು ಅರ್ಜಿಗಳನ್ನು ತೆಗೆದುಕೊಳ್ಳಲಿಲ್ಲ. ಡೆಪ್ಯುಟಿ ಡೈರೆಕ್ಟರ್ ಆಫೀಸಿನಲ್ಲಿ ಸೆಪ್ಟೆಂಬರ್, ಅಕ್ಟೋಬರ್, ನವೆಂಬರ್, ಡಿಸೆಂಬರ್ ಮತ್ತು ಜನವರಿವರೆಗೂ ವರ್ಕ್ಸ್ ಇತ್ತು. ಅರ್ಜಿಗಳನ್ನು ಪ್ರೋಸೆಸ್ ಮಾಡುವುದಕ್ಕೆ ಪ್ರಾರಂಭಿಸಿದ್ದು ಮಾರ್ಚಿ ತಿಂಗಳಿನಲ್ಲಿ. ಇದನ್ನು ಮಾಡಿದವರು ಯಾರೆಂದರೆ, ಡ್ರಿಪ್ ಇರಿಗೇಶನ್ ಏಜೆಂಟ್‌ಗಳು ಕುಳಿತುಕೊಂಡು ನಿಮ್ಮ ಬಿಲ್ಲುಗಳನ್ನು ಬರೆದುಕೊಟ್ಟಿದ್ದಾರೆ.

ಶ್ರೀ ಎ.ಟಿ. ರಾಮಸ್ವಾಮಿ : ಹನಿ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ತೋಟಗಾರಿಕೆ ಇಲಾಖೆ ಸುಮಾರು 55-60 ಕೋಟಿ ರೂಪಾಯಿಗಳಷ್ಟು ಹಣ ಖರ್ಚು ಮಾಡುತ್ತಿದ್ದು, ಯೋಜನೆಯಲ್ಲಿ

ಸಹಾಯಧನವನ್ನೂ ನೀಡುತ್ತಿದೆ. ಕೃಷಿ ಇಲಾಖೆಯ 30-40 ಕೋಟಿಯನ್ನು ಸೇರಿಸಿದರೆ ಒಟ್ಟಾರೆ ನೂರು ಕೋಟಿ ರೂಪಾಯಿಗಳಿಗೂ ಮೇಲ್ಪಟ್ಟು ಸದರಿ ಯೋಜನೆಗೆ ಖರ್ಚು ಮಾಡುತ್ತಿದ್ದಾರೆ. ಇವರು ಏನು ಮಾಡುತ್ತಾರೆಂದರೆ, ಇಂತಿಂಥ ಕಂಪನಿಗಳಿಂದಲೇ ಸ್ಪ್ರಿಂಕ್ಲರ್ ಸೆಟ್ಟುಗಳನ್ನು, ಡ್ರಿಪ್ ಇರಿಗೇಶನ್ ಸೆಟ್ಟುಗಳನ್ನು ಖರೀದಿಸಬೇಕೆಂದು ನಿಗದಿಪಡಿಸಿದ್ದಾರೆ. ಅಧಿಕಾರಿಗಳು ಏನು ಮಾಡುತ್ತಾರೆಂದರೆ, ತಮಗೆ ಬೇಕಿರುವಂಥ ಕಂಪನಿಗಳಿಂದ ಪರ್ಸೆಂಟೇಜ್ ತೆಗೆದುಕೊಳ್ಳುವ ಸಲುವಾಗಿ ನಿರ್ದಿಷ್ಟ ಪಡಿಸಿದ ಕಂಪನಿಗಳಿಂದಲೇ ಕೃಷಿ ಉಪಕರಣಗಳನ್ನು ಖರೀದಿಸಬೇಕೆಂದು ನಿಗದಿಪಡಿಸುತ್ತಾರೆ. ಇದರಿಂದ ಏನಾಗುತ್ತದೆಂದರೆ, ಆ ಕಂಪನಿಗಳು ಡಬಲ್ ರೇಟ್ ಹಾಕಿರುತ್ತವೆ, ಮತ್ತು ಉಪಕರಣಗಳ ಗುಣಮಟ್ಟವೂ ಕಳಪೆಯಾಗಿರುತ್ತದೆ. ಉದಾಹರಣೆಗೆ ಹೇಳುವುದಾದರೆ ಕೆ.ಆರ್.ಪೇಟೆ ತಾಲ್ಲೂಕಿನ ಮಂದಗೆರೆಗೆ 2-3 ತಿಂಗಳುಗಳ ಹಿಂದೆ ಭೇಟಿಯಿತ್ತು ಪರಿಶೀಲಿಸಿದೆ. ಅಲ್ಲೊಬ್ಬರು ಕೃಷಿಕರು ಸರ್ಕಾರಿ ಯೋಜನೆಯಡಿ ಕೃಷಿ ಉಪಕರಣಗಳನ್ನು ತೆಗೆದುಕೊಳ್ಳಲು ಹೋದಾಗ ಅವರಿಗೆ. ಸುಮಾರು ಮೂರು ಲಕ್ಷ ಚಿಲ್ಲರೆ ರೂಪಾಯಿಗಳಷ್ಟು ಸ್ಕೀಮ್ ಮಾಡಿಕೊಟ್ಟಾಗ ಸರ್ಕಾರಿ ಸ್ಕೀಮ್ ಬೇಡವೆಂದು ಅವರೇ ಸ್ವತಃ ಖರ್ಚು ಮಾಡಿ ಹಾಕಿಸಿಕೊಂಡಿದ್ದಾರೆ. ಅವರು ಹನಿ ನೀರಾವರಿಗೆ ಹಾಕಿಸಿಕೊಂಡ ಉಪಕರಣಗಳಿಗೆ ಒಂದು ಲಕ್ಷ ರೂಪಾಯಿಯಾಯಿತು, ಮತ್ತು ಉಪಕರಣಗಳ ಗುಣಮಟ್ಟವೂ ಚೆನ್ನಾಗಿದೆ, ಹಾಗೂ ಕಡಿಮೆ ದುಡ್ಡಿನಲ್ಲಿ ಲಭ್ಯವಾಯಿತು. ನಾನು ಕೇಳುವುದೇನೆಂದರೆ ನೀವೇಕೆ ಇಂತಿಂಥ ಕಂಪನಿಗಳಿಂದಲೇ ಉಪಕರಣಗಳನ್ನು ಖರೀದಿಸಬೇಕೆಂದು ನಿಗದಿಪಡಿಸುತ್ತೀರಿ? ಅದನ್ನು ರೈತರಿಗೆ ಬಿಟ್ಟುಬಿಡಿ. ಅವರು ಎಲ್ಲಾದರೂ ಒಂದು ಕಡೆ ಸ್ಪ್ರಿಂಕ್ಲರ್ ಸೆಟ್ಟನ್ನು, ಡ್ರಿಪ್ ಇರಿಗೇಶನ್ ಸೆಟ್ಟುಗಳನ್ನು ಖರೀದಿಸಿ ಹಾಕಿಸಿಕೊಂಡ ನಂತರ ಆತ ಒಂದು ಎಕರೆಗಷ್ಟೇ ಸೀಮಿತವಾಗಿ ಹಾಕಿಸಿಕೊಂಡರೆ ಅದಕ್ಕೆ ಎಷ್ಟು ಸಬ್ಸಿಡಿ ಕೊಡಬೇಕೋ ಅಷ್ಟು ಕೊಡಿ. ಆದರೆ, ತಪ್ಪಿತಸ್ಥ ಅಧಿಕಾರಿಗಳ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು. ಇಂತಿಂಥ ಕಂಪನಿಗಳಿಂದಲೇ ತೆಗೆದುಕೊಳ್ಳಬೇಕೆಂದು ಅಧಿಕಾರಿಗಳೇ ಇಂಡೆಂಟ್ ಮಾಡುವುದು. ಆದುದರಿಂದ, ಈ ಪದ್ಧತಿಯನ್ನು ಬಿಟ್ಟುಬಿಡಿ.

ಶ್ರೀ ಡಿ.ಟಿ. ಜಯಕುಮಾರ್ : ಆ ರೀತಿಯಾದ ಕಡ್ಡಾಯವನ್ನು ನಾವು ಎಲ್ಲಿಯೂ ಮಾಡಿಲ್ಲ. ಆಕಸ್ಮಾತ್ ಆ ತರಹ ಎಲ್ಲಾದರೂ ಇದ್ದು ದಯವಿಟ್ಟು ನೀವು ನಮ್ಮ ಗಮನಕ್ಕೆ ತಂದರೆ ನಾನು ಕ್ರಮ ಕೈಗೊಳ್ಳುತ್ತೇನೆ.

ಶ್ರೀ ಎ.ಟಿ. ರಾಮಸ್ವಾಮಿ : ಎಲ್ಲಾ ಕಡೆಗಳಲ್ಲೂ ಅಧಿಕಾರಿಗಳು ಈ ರೀತಿ ಇಂಡೆಂಟ್ ಮಾಡುತ್ತಿದ್ದಾರೆ. ನೀವು ಇದರ ಬಗ್ಗೆ ವಿಚಾರ ಮಾಡಿ ನೋಡಿ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಮಂತ್ರಿಗಳೆ, ನಮ್ಮ ತಾಲ್ಲೂಕಿನಲ್ಲಿ ಕೆಲವರು ಸ್ವತಃ ಬೇರೆ ಕಂಪನಿಗಳಿಂದ ಉಪಕರಣಗಳನ್ನು ಖರೀದಿಸಿ ಅಳವಡಿಸಿಕೊಂಡು ಸಹಾಯಧನಕ್ಕಾಗಿ ಕ್ಲೈಮ್ ಮಾಡಿದರೆ ಕೆಲವು ನಿರ್ದಿಷ್ಟಪಡಿಸಿದ ಕಂಪನಿಗಳಿಂದ ಖರೀದಿಸಿದರೆ ಮಾತ್ರ ನಿಮಗೆ ಸಹಾಯಧನ ನೀಡಲು ಸಾಧ್ಯವಾಗುತ್ತದೆ, ಇಲ್ಲದಿದ್ದರೆ ಆಗುವುದಿಲ್ಲವೆಂದು ಶಿವಮೊಗ್ಗದಲ್ಲಿರುವ ನಿಮ್ಮ ಇಲಾಖೆ ಹೇಳಿದೆ. ಹನಿ ನೀರಾವರಿ ಸಂಬಂಧದಲ್ಲಿ ಉಪಕರಣಗಳನ್ನು ಒದಗಿಸುವ ಕಂಪನಿಗಳು ಕೇಂದ್ರ

ಸರ್ಕಾರದ ಜೊತೆ ಇಂತಹ ರೇಟ್‌ಗೆ ನಾವು ಸಪ್ಲೈ ಮಾಡುತ್ತೇವೆಂದು ಒಂದು ಲೇಟ್ ಕಂಟ್ರಾಕ್ಟ್ ಮಾಡಿಕೊಂಡಿವೆ. ವಿಚಿತ್ರ ಎಂದರೆ ಕರ್ನಾಟಕ ರಾಜ್ಯದಾದ್ಯಂತ ರೈತರಿಗೆ ಏನು ಹಂಚಿದ್ದಾರೆ ಆ ಎಲ್ಲವುಗಳಿಗೆ ರೇಟ್ಸ್‌ಗಳನ್ನು ಜಾಸ್ತಿ ಹಾಕಿದ್ದಾರೆ. ನಿಮ್ಮ ಅಧಿಕಾರಿಗಳು ಒಂದು ವರ್ಷದಿಂದ ಕಣ್ಣು ತೆರೆದಿಲ್ಲ. ನಿಮ್ಮ ಕಂಪನಿಯ ಏಜೆಂಟ್ ಮತ್ತು ಅಧಿಕಾರಿಗಳು ನೋಡಿದರೂ ಕೂಡ ಸುಮ್ಮನೆ ಇದ್ದು ಬಿಲ್ ಮಾಡಿ ಒಂದು ಸಾರಿ ಸಬ್ಸಿಡಿ ಕ್ಲೈಮ್ ಮಾಡಿದ್ದಾರೆ. ರೈತರಿಗೆ ಇದು ಗೊತ್ತೇ ಇಲ್ಲ ಗುಪ್ತವಾಗಿಟ್ಟಿದ್ದಾರೆ. ಕೊನೆಯಲ್ಲಿ ಸಂಸದೀಯ ಒಂದು ಸಮಿತಿ ಕರ್ನಾಟಕ ರಾಜ್ಯದಲ್ಲಿ ಬಂದು ಇದನ್ನು ಪತ್ತೆ ಹಚ್ಚಿದ್ದಾರೆ. ಪತ್ತೆ ಹಚ್ಚಿ ಈ ರೀತಿ ಜಾಸ್ತಿ ಏಕೆ ಕೊಟ್ಟಿದ್ದೀರಿ ಎಂದು ನಿಮಗೆ ಕೇಳಿದ್ದಾರೆ.

ಶ್ರೀ ಡಿ. ಟಿ. ಜಯಕುಮಾರ್ : ಮಾನ್ಯ ಉಪಾಧ್ಯಕ್ಷರೇ ಆ ರೇಟ್ ನಮಗೆ ಗೊತ್ತಾಗುವುದಿಲ್ಲ ಆದಕಾರಣ ಮಹಾರಾಷ್ಟ್ರ ಸರ್ಕಾರದಲ್ಲಿ ಯಾವ ಪ್ಯಾಟರ್ನ್ ಮಾಡಿದ್ದಾರೋ, ಯಾವ ಬೆಲೆಗಳನ್ನು ನಿಗದಿ ಮಾಡಿದ್ದಾರೋ ಆ ಪ್ರಕಾರವೇ ನಾವು ಕೂಡ ಇಲ್ಲಿ ನಮ್ಮ ಕರ್ನಾಟಕ ರಾಜ್ಯದಲ್ಲಿ ಅಳವಡಿಸಿದ್ದೇವೆ. ಏಕೆಂದರೆ ಪ್ರಪ್ರಥಮ ಬಾರಿಗೆ ಅದು ಅಲ್ಲಿ ಇಂಟ್ರಡ್ಯೂಸ್ ಆಗಿದ್ದು. ಆದ್ದರಿಂದ ಅದೇ ಕ್ರಮವನ್ನು ನಾವು ಇಲ್ಲಿ ಉಪಯೋಗಿಸಿದ್ದೇವೆ. ಒಂದು ವೇಳೆ ಅಲ್ಲಿ ಕಡಿಮೆಯಾಗಿ ಇಲ್ಲಿ ಜಾಸ್ತಿಯಾಗಿದ್ದರೆ ನಾವು ಅದನ್ನು ಪರಿಶೀಲನೆ ಮಾಡುತ್ತೇವೆ. ಪರಿಶೀಲನೆ ಮಾಡಿ ಅಲ್ಲಿ ಏನಾದರೂ ಅನ್ಯಾಯ ಆಗಿದ್ದರೆ ಖಂಡಿತ ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ, ಈಗಾಗಲೇ ಸಾಕಷ್ಟು ಅಧಿಕಾರಿಗಳ ಮೇಲೆ ಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಏನೇನು ಲೋಪದೋಷಗಳು ಇವೆ ಅದನ್ನು ಪರಿಶೀಲನೆ ಮಾಡಿ ಸರಿಪಡಿಸುತ್ತೇನೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಶ್ರೀ ಅರಗ ಜ್ಞಾನೇಂದ್ರ : ಈಗ ಒಂದು ಹೊಸ ಉಪಾಯವನ್ನು ಮಾಡಿದ್ದಾರೆ. ಈಗ ರೇಟ್ ಲಿಸ್ಟ್ ಎಲ್ಲಾ ತೆಗೆದುಕೊಂಡು ಬಂದು ಎಲ್ಲಾ ಚೆಕ್ ಮಾಡುತ್ತಿದ್ದಾರೆ, ಅವರ ಬಿಲ್ ರೇಟಿಗೂ ಮತ್ತು ಅವರು ನೆಗೋಸಿಯೇಶನ್ ಮಾಡಿಕೊಂಡಂಥ ರೇಟಿಗೂ ವ್ಯತ್ಯಾಸ ಇದೆ. ಆ ಹಣವನ್ನು ನೀನು ರೈತನಿಗೆ ವಾಪಸ್ಸು ಕೊಟ್ಟು ಬಾ ಇಲ್ಲದಿದ್ದರೆ ಆ ರೀತನಿಂದ ನನಗೆ ಹಣ ವಾಪಸ್ಸು ಬಂದಿದೆ ಎಂದು ರೈತನಿಂದ ಪತ್ರವನ್ನು ತೆಗೆದುಕೊಂಡು ಬಾ ನಾನು ನಿನಗೆ ಸಬ್ಸಿಡಿಯನ್ನು ಕೊಡುತ್ತೇನೆ ಎಂದು ಕಾಂಟ್ರಾಕ್ಟ್‌ರಿಗೆ ಹೇಳುತ್ತಾರೆ. ಆ ರೀತಿ ಹೇಳಿದ ನಂತರ ಆ ಕಾಂಟ್ರಾಕ್ಟ್‌ರ್ ನಮ್ಮ ರೈತರ ಹತ್ತಿರ ಬಂದು ವಾಪಸ್ಸು ಬಂದಿದೆ ಎಂದು ಹೇಳಿ ಒಂದು ಸಹಿ ಮಾಡಿಸಿಕೊಂಡು ಹೋಗುತ್ತಾನೆ. ಇಲ್ಲದಿದ್ದರೆ 25,000-30,000 ಸಬ್ಸಿಡಿ ಐದಾರು ತಿಂಗಳಿಂದ ಕ್ಲೈಮ್ ಆಗಲಿಲ್ಲ. ಇದರಿಂದ ರೈತರಿಗೆ ಏನೂ ಅರ್ಥ ಆಗುವುದಿಲ್ಲ, ನಮ್ಮಂಥವರಿಗೆ ಅರ್ಥವಾಗುತ್ತದೆ. ಅವರಿಗೆ ಅರ್ಥವಾಗುವುದರೊಳಗೆ ಅದರ ಕಥೆ ಮುಗಿದು ಹೋಗಿದೆ. ಕೋಟಿಗಟ್ಟಲೆ ಹಣದ ದುರ್ವ್ಯವಹಾರ ಇದರಲ್ಲಿ ಆಗಿದೆ. ಆದಕಾರಣ ತಾವು ದಯವಿಟ್ಟು ನೋಡಿ ಅದನ್ನು ಸರಿಪಡಿಸಿ.

ಇನ್ನೊಂದು ಸುಮಾರು ಆರೇಳು ತಿಂಗಳಿಂದ ಅನೇಕ ತಾಲ್ಲೂಕುಗಳಿಗೆ ಸಹಾಯಧನ ಬರಲಿಲ್ಲ. ಶಿವಮೊಗ್ಗ ಜಿಲ್ಲೆಯೊಂದಕ್ಕೆ ಸುಮಾರು ಎರಡೂವರೆಕೋಟಿ ರೂಪಾಯಿಗಳು ಬರಬೇಕು. ನನಗೆ ಇರತಕ್ಕಂಥ ಮಾಹಿತಿ ಪ್ರಕಾರ ತೀರ್ಥಹಳ್ಳಿ ತಾಲ್ಲೂಕಿಗೆ 25ಲಕ್ಷ ರೂಪಾಯಿಗಳು ಹಾಗೂ ಹೊಸನಗರ

ತಾಲ್ಲೂಕಿಗೆ 35ಲಕ್ಷ ರೂಪಾಯಿಗಳು ಬರಬೇಕು. ತಾವು ಹಣ ಉಳಿದಿದೆ ಎಂದು ಹೇಳಿದ್ದೀರಿ. ಆದಕಾರಣ ಎಲ್ಲಿ ಹಣ ಉಳಿದಿದೆ ಆ ಹಣವನ್ನು ಎಲ್ಲಿ ಶಾರ್ಟೇಜ್ ಆಗಿದೆ ಅಲ್ಲಿಗೆ ಕೊಡಬೇಕೆಂದು ನಿಮ್ಮ ಅಧಿಕಾರಿಗಳಿಗೆ ಸೂಚನೆಯನ್ನು ಕೊಡಬೇಕು.

ಇನ್ನೊಂದು ಸಂಗತಿ ಎಂದರೆ ಈ ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್ ಬಹಳ ಪ್ರಾಮುಖ್ಯವಾದಂಥ ಇಲಾಖೆ ನಿಮ್ಮಲ್ಲಿ 27ಜನ ಡೆಪ್ಯೂಟಿ ಡೈರೆಕ್ಟರ್ ಹುದ್ದೆಗಳು ಖಾಲಿ ಇವೆ. ಅಷ್ಟೊಂದು ಹುದ್ದೆಗಳನ್ನು ಖಾಲಿ ಇಟ್ಟುಕೊಂಡು ನಿಮಗೆ ಏನು ಕೆಲಸ ಮಾಡುವುದಕ್ಕೆ ಆಗುತ್ತದೆ? ಅದರ ಜೊತೆಗೆ ಇನ್ನೂ ಅನೇಕ ಹುದ್ದೆಗಳು ಕೂಡ ಖಾಲಿ ಇವೆ. ಕಛೇರಿಗೆ ಹೋದರೆ ಅವರು ಇಲ್ಲ, ಇವರು ಇಲ್ಲ ಎಂದು ಹೇಳುತ್ತಾರೆ. ಅಲ್ಲಿ ಯಾರು ಇನ್‌ಚಾರ್ಜ್ ಇರುತ್ತಾರೆ ಅವರು ಇವೊತ್ತು ಬಿಲ್ ಮಾಡುವಂಥ ಪರಿಸ್ಥಿತಿ ಇದೆ. ಅಗ್ರಿಕಲ್ಚರ್ ಡಿಪಾರ್ಟ್‌ಮೆಂಟಿನ ಅಸಿಸ್ಟೆಂಟ್ ಡೈರೆಕ್ಟ್‌ರ್‌ಗೆ ಚೀಫ್ ಇಲ್ಲ. ನಿಮ್ಮ ಸೀನಿಯರ್ ಅಸಿಸ್ಟೆಂಟ್ ಹಾರ್ಟಿಕಲ್ಚರ್‌ರವರಿಗೆ ಚೀಫ್ ಇಲ್ಲ. ನಮ್ಮ ಮಲೆನಾಡಿನಂಥ ತಾಲ್ಲೂಕುಗಳಲ್ಲಿ ಯಾವುದ್ಯಾವುದೋ ತುದಿಗೆ ಹೋಗಬೇಕು, ಬಿಲ್ ಮಾಡಬೇಕು, ಸ್ಪಾಟ್ ಇನ್‌ಸ್ಪೆಕ್ಷನ್ ಮಾಡಬೇಕು, ಯಾವುದಾದರೂ ತೋಟದಲ್ಲಿ ಗಿಡಗಳಿಗೆ ಕಾಯಿಲೆ ಬಂದರೆ ಅದನ್ನು ನೋಡಿ ತಜ್ಞತೆಯಿಂದ ಅದನ್ನು ಹೇಳಬೇಕು, ಅದನ್ನೆಲ್ಲಾ ಮಾಡಲಿಕ್ಕೆ ನಿಮ್ಮ ಹತ್ತಿರ ವೆಹಿಕಲ್ಸ್ ಎಲ್ಲಿದೆ ನಾವು ರೈತರಿಗೆ ಅದು ಮಾಡುತ್ತೇವೆ ಇದು ಮಾಡುತ್ತೇವೆ ಎಂದು ಹೇಳುತ್ತೀರಿ. ಇದು ಕೂಡ ರೈತರದ್ದೇ ಅಲ್ಲವಾ?

ಶ್ರೀ ಆರ್. ಶ್ರೀನಿವಾಸ್ (ಮುಳಬಾಗಿಲು ಕ್ಷೇತ್ರ) : ತಾವು ಹುದ್ದೆಗಳು ಇಲ್ಲ ಎಂದು ಹೇಳುತ್ತಿದ್ದೀರಿ ಆದರೆ ಅವುಗಳನ್ನು ಏತಕ್ಕೆ ಭರ್ತಿ ಮಾಡಬೇಕು? ಈಗ ತಮಗೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಹೊಗಳಗೆರೆ ಫಾರ್ಮ್ 600 ಎಕರೆಯಿಂದ, 1,000 ಎಕರೆ ಇದೆ. ಮುಡಿನೀರು ಫಾರ್ಮ 1,300 ಎಕರೆ ಇದೆ. ಇಷ್ಟು ಎರಡೇ ತಾಲ್ಲೂಕಿನಲ್ಲಿರುವಾಗ ಅವರು ನಮಗೆ ಸರ್ಕಾರಕ್ಕೆ ವಿತರಣೆ ಮಾಡುವಾಗ ಬರೀ ನಾವು ಗಿಡವನ್ನು ಆಂಧ್ರದಿಂದ ತರಿಸಿಕೊಳ್ಳುತ್ತೇವೆ, ಕನಿಷ್ಟಪಕ್ಷ 40 ಎಕರೆ ಇರತಕ್ಕಂಥ ಒಬ್ಬ ಮಾಲೀಕ ಇವೊತ್ತು ಕೋಲಾರ ಜಿಲ್ಲೆಯಲ್ಲಿರತಕ್ಕಂಥವನ್ನು ಅವನಲ್ಲಿ ಏನೇನು ಇದೆಯೋ ಎಲ್ಲ ಗಿಡಗಳು, ಸಬ್ಸಿಡಿ ರೇಟ್ ಆಗಲೀ ಎಲ್ಲ ಗಿಡಗಳನ್ನು ಒದಗಿಸುತ್ತಾನೆ, ಅಂಥದ್ದರಲ್ಲಿ ಒಬ್ಬ ಡೆಪ್ಯುಟಿ ಡೈರೆಕ್ಟರು ಅನೇಕ ಸಿಬ್ಬಂದಿ ವರ್ಗದವರು ಎಲ್ಲ ಇದ್ದರೂ ಕೂಡ ಕನಿಷ್ಟಪಕ್ಷ ಕೇವಲ ಒಂದು ತಾಲ್ಲೂಕಿಗೆ ಸಪ್ಲೈ ಮಾಡುವುದಕ್ಕೆ ಇವೊತ್ತು ಆಗುತ್ತಿಲ್ಲ ಈಗ ಎರಡೇ ತಾಲ್ಲೂಕನ್ನು ಉದಾಹರಣೆಗೆ ತೆಗೆದುಕೊಳ್ಳಿ ಮಿಕ್ಕಿದ್ದು ಬಿಟ್ಟುಬಿಡಿ.

(ಡಾ|| ಎಂ.ಪಿ. ಕರ್ಕಿ ಪೀಠವನ್ನಲಂಕರಿಸಿದರು.)

ಈಗ 1300 ಎಕರೆ ಪ್ರದೇಶ ಇದ್ದರೂ ಕೂಡ ಇದಕ್ಕೆ ನಾವು ಎಷ್ಟು ವೆಚ್ಚ ಮಾಡಿದರೂ ಕೂಡ ಇವೊತ್ತು ನಾವು ಒಂದು ತಾಲ್ಲೂಕಿಗೆ ಸಪ್ಲೈ ಮಾಡುವುದಕ್ಕೆ ಆಗುತ್ತಿಲ್ಲ. ಆದ್ದರಿಂದ ಈ ವ್ಯವಸ್ಥೆಯನ್ನು ನಾವು ಈಗ ಬದಲಾವಣೆ ಮಾಡಬೇಕಾಗಿದೆ. ಎರಡನೆಯದಾಗಿ ಹೇಳಬೇಕಾದರೆ ಈಗಾಗಲೇ ರೀಸರ್ಚ್ ಇನ್ಸಿಟಿಟ್ಯೂಟನ್ನು ಪ್ರಾರಂಭ ಮಾಡಿದ್ದೀರಿ. ಇವೊತ್ತು ಇದರಿಂದ ಸಾಮಾನ್ಯ ರೈತನಿಗೆ ಹೈಬ್ರೀಡ್ ವೆರೈಟಿಸ್ ಬೀಜ ಸಿಗುತ್ತಿಲ್ಲ. ಉದಾಹರಣೆಗೆ ಹೇಳಬೇಕಾದರೆ ಸಂಶೋಧನೆಯಲ್ಲಿ ಮಲ್ಲಿಕ

ಬಿಡುಗಡೆಯಾಗಿ ಹದಿನೈದರಿಂದ ಇಪ್ಪತ್ತು ವರ್ಷವಾಯಿತು. ಆದರೆ ನಮ್ಮ ತಾಲ್ಲೂಕಿನಲ್ಲಿ ಇದು ಒಬ್ಬ ಸಾಮಾನ್ಯ ರೈತನಿಗೆ ಸಿಕ್ಕಿಲ್ಲ. ಅದೇ ಈಗ ಎಸ್36 ಎಂದು ಒಂದು ಬೆಳೆಯಾಗಿದೆ. ಎಸ್10, ಹದಿಮೂರು ಅಮರಪಾಲಿ ಇವೆಲ್ಲವೂ ಕೂಡ ಇಂಡಿಯನ್ ಇನ್ಸಿಟಿಟ್ಯೂಟ್ ಆಫ್ ಹಾರ್ಟಿಕಲ್ಚರ್ ಇವರಿಂದ ಈಗಾಗಲೇ ಸಂಶೋಧನೆ ನಡೆದು ಬಿಡುಗಡೆಯಾದರೂ ಕೂಡ, ಹತ್ತು ವರ್ಷವಾದರೂ ಕೂಡ ಸಾಮಾನ್ಯ ರೈತರಿಗೆ ಸಿಕ್ಕುತ್ತಿಲ್ಲ. ಮಾಮೂಲಿ ರಾಜಗೀರಾ, ಬೆಳ್ಳುರ ಇಂತಹ ಒಂದು ತಳಿಗಳು ಮಾರುತ್ತಾರೆಯೇ ಹೊರತು ಈ ಆಧುನಿಕವಾದ ವೆರೈಟೀಸ್, ಹೈಬ್ರೀಡ್ ತಳಿಗಳು ಇವೊತ್ತಿನದಿವಸ ಸಿಕ್ಕುತ್ತಿಲ್ಲ. ಆದ್ದರಿಂದ ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಿಗೆ ಬೇಡಿಕೊಳ್ಳುವುದೇನೆಂದರೆ ಏನು ಇವೊತ್ತು ನಾವು ಬಿಡುಗಡೆ ಮಾಡುತ್ತಿದ್ದೇವೆ ಕೋಟ್ಯಾಂತರ ರೂಪಾಯಿಯನ್ನು ಇವೊತ್ತಿನ ದಿವಸ ಖರ್ಚು ಮಾಡುತ್ತಿದ್ದೇವೆ ಇದು ನೇರವಾಗಿ ತಾಲ್ಲೂಕು ಮಟ್ಟದಲ್ಲಿರತಕ್ಕಂಥ ರೈತನಿಗೆ ಸಾಮಾನ್ಯ ಬೆಳೆ ಏನು ಮಾಡುತ್ತಾನೆ. ಅವನಿಗೆ ಸಿಗತಕ್ಕಂಥ ವ್ಯವಸ್ಥೆಯನ್ನು ಮಾಡಬೇಕೇ ಹೊರತು ಬರೀ ನಮ್ಮಂಥವರಿಗೆ ಅಂದರೆ ಮೇಲ್ಮಟ್ಟದಲ್ಲಿರುವವರಿಗೆ ಮಲ್ಲಿಕಾ ಇವೆಲ್ಲಾ ನಾಟಿ ಮಾಡುವುದಕ್ಕೆ ಶಿಫಾರಸ್ಸು ಮಾಡುತ್ತಾರೆ, ಸಾಮಾನ್ಯವಾದ ರೈತರಿಗೆ ಸಿಕ್ಕುತ್ತಿಲ್ಲ. ಆದಕಾರಣ ದಯವಿಟ್ಟು ಅದರ ವ್ಯವಸ್ಥೆಯನ್ನು ಮಾಡಬೇಕು.

ಚೇರ್ಮನ್ : ಉತ್ತರವನ್ನು ಅನಂತರ ಕೊಡಿ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ : ಮಾನ್ಯ ಅಧ್ಯಕ್ಷರೆ, ಈಗ ಮಲ್ಲಿಕಾ ಬೇಕು ಅದು ಬೇಕು ಎಂದು ಹೇಳುತ್ತಾರೆ. ಈಗಾಗಲೇ ಮಲ್ಲಿಕಾ ಸಸಿಗಳು ರಾಜ್ಯದ ತುಂಬಾ ಇವೆ. ಆದಕಾರಣ ಎಲ್ಲೆಲ್ಲಿ ಮಲ್ಲಿಕಾ ಸಸಿಗಳು ಇವೆ ಅಲ್ಲೆಲ್ಲಾ ಗ್ರಾಫ್ಟಿಂಗ್ ಮಾಡಿಸಿ. ಇಡೀ ಕರ್ನಾಟಕದಲ್ಲಿ ಮಾವಿನ ಹಣ್ಣು ತಂದು ಬಿದ್ದಾಗ ಬಿದ್ದಿರುವ ವಾಟೆಗಳು ಒಂದು ಕಡೆ ಹೂಣಿ ಹಾಕುವುದು ಕಡದೇಟಿಗೆ ಅದನ್ನು ಗ್ರಾಫ್ಟಿಂಗ್ ಮಾಡಿ ಪ್ಲಾಸ್ಟಿಂಗ್ ಮಾಡುವುದು. ಏನು ಬಹಳ ದೊಡ್ಡ ಸುದ್ದಿ. ಫ್ರೀ ಕೊಡಿ. ನಾವು ನೀರಾವರಿ ಪ್ರದೇಶದ ರೈತರಿಗೆ ನಾವು 40 ಸಾವಿರ ರೂಪಾಯಿ ಖರ್ಚು ಮಾಡುತ್ತೇವೆ. ಲಿಫ್ಟ್ ಇರಿಗೇಶನ್‌ಗೆ 75 ಸಾವಿರ ರೂಪಾಯಿ ಖರ್ಚು ಮಾಡುತ್ತೇವೆ. ಕರ್ನಾಟಕದಲ್ಲಿ ಎಷ್ಟು ಮಾವಿನ ಸಸಿಗಳನ್ನು ನೆಡುತ್ತಾರೆ ಯಾವ ರೈತ ನೆಡುತ್ತಾನೆ ಅವನಿಗೆ ಫ್ರೀ ಕೊಡಬೇಕು.

ಶ್ರೀ ಡಿ.ಟಿ. ಜಯಕುಮಾರ್ : ಮಾನ್ಯ ಸಭಾಧ್ಯಕ್ಷರೆ, ಮಲ್ಲಿಕಾ ಹೊರಗಡೆ ಮಾರ್ಕೆಟ್‌ನಲ್ಲಿ 50 ರೂಪಾಯಿ ಇದೆ. ಆದರೆ ನಾವು ಕೇವಲ 15 ರೂಪಾಯಿಗೆ ಕೊಡುತ್ತಿದ್ದೇವೆ. ನಾವು ಈಗಾಗಲೇ ಹೋದ ವರ್ಷ ಎಂಟು ಲಕ್ಷ ಮಾವಿನ ಸಸಿ ಮಲ್ಲಿಕಾ ಮತ್ತು ಸಿ.13 ಕೊಟ್ಟಿದ್ದೇವೆ. ನಾವು ಹದಿನೈದು ರೂಪಾಯಿ ಬರೀ ಪ್ರೊಡಕ್ಷನ್ ಕಾಸ್ಟ್ ಮಾತ್ರ ತೆಗೆದುಕೊಳ್ಳುತ್ತಿದ್ದೇವೆ. ಈ ಸಾರಿ 25 ಲಕ್ಷ ಗಿಡಗಳನ್ನು ಉತ್ಪಾದನೆ ಮಾಡುತ್ತಿದ್ದೇವೆ.

ಶ್ರೀ ಅರಗ ಜ್ಞಾನೇಂದ್ರ : ಹಾರ್ಟಿಕಲ್ಚರ್ ಡಿಪಾರ್ಟ್‌ಮೆಂಟ್‌ನಲ್ಲಿ ಇವರದ್ದು ಒಂದೊಂದು ತಾಲ್ಲೂಕಿನಲ್ಲಿ ಒಂದೊಂದು ಫಾರ್ಮ್‌ಗಳು ಇವೆ. ಡಿಪಾರ್ಟ್‌ಮೆಂಟ್‌ನಲ್ಲಿಯೇ ಮಾಡುವಂಥ ಫಾರ್ಮ್‌ಗಳು. ತೀರ್ಥಹಳ್ಳಿಯಲ್ಲಿ ಸುಮಾರು 20ಎಕರೆಯ ಒಂದು ಅರಕಾ ರಿಸರ್ಚ್ ಘಟಕ ಇತ್ತು. ಅದು ಮೊದಲು ಕೃಷಿ ಕಾಲೇಜಿಗೆ ಬಂತು ನಂತರ ಏನೇನೋ ಆಗಿ ಈಗ ಸರ್ಕಾರದಲ್ಲಿ ಉಳಿದುಕೊಂಡಿದೆ.

ವಿಚಿತ್ರ ಎಂದರೆ ಅದರಲ್ಲಿ ಅಡಿಕೆ 20ಲಕ್ಷ ರೂಪಾಯಿಯ ಆದಾಯವನ್ನು ಕೊಡುತ್ತಿದೆ. ಆದರೆ ನೀವು ಇನ್‌ವೆಸ್ಟಮೆಂಟ್ ಮಾಡುವುದು ಎಷ್ಟು? ನೀವು ಎರಡರಿಂದ ಎರಡೂವರೆ ಲಕ್ಷ ರೂಪಾಯಿಗಳನ್ನು ವಾಪಸ್ಸು ಕೊಡುತ್ತೀರಿ ಅದು ಕೂಡ ಸಮಯಕ್ಕೆ ಸರಿಯಾಗಿ ಕೊಡುವುದಿಲ್ಲ. ಈಗ ನೋಡಿ ಹೊಡೆಯಬಾರದ ಮಳೆಹೊಡೆದು ಕೊಳೆ ರೋಗ ಬಂದು ಜತ್ತಿ ಉದುರಿಸಿದ ಹಾಗೆ ಆಗಿದೆ ಅಡಿಕೆ. ಆ ಅಡಿಕೆ ಎಲ್ಲ ಕೆಳಗೆ ಬಂದಿದೆ. ಅವರು ಬೋಡಾ ಮಿಶ್ರಣ ಹೊಡೆಯಬೇಕಾಗಿತ್ತು ಆದರೆ ಅವರ ಹತ್ತಿರ ದುಡ್ಡು ಇಲ್ಲ. ಏತಕ್ಕೆ ಇಂಥ ಕೆಲಸವನ್ನು ಮಾಡುತ್ತೀರಿ? ನಿಮಗೆ ಅಲ್ಲಿ ಕಲ್ಟಿವೇಶನ್ ಕಾಸ್ಟ್ ಎಷ್ಟು ಬೇಕಾಗುತ್ತದೆ? ನಿಮ್ಮ ಫಾರ್ಮಗಳು ನಮ್ಮ ರೈತರಿಗೆ ಮಾದರಿಯಾಗಿರಬೇಕು. ನಮ್ಮ ರೈತರು ಅಲ್ಲಿ ಹೋಗಿ ವಿಸಿಟ್ ಮಾಡಿ ಬೆಳೆಯುವುದು ಹೀಗೆ ಎಂದು ಅಂದುಕೊಳ್ಳಬೇಕು. ಅಲ್ಲಿ ಅಡಿಕೆ ಬೆಳೆಯುವುದು ಹೀಗೆ, ಮಾವು ಬೆಳೆಯುವುದು ಹೀಗೆ, ಚಿಕ್ಕು ಬೆಳೆಯುವುದು ಹೀಗೆ ಎಂದು ತೋರಿಸಿಕೊಡಬೇಕು. ನಮ್ಮ ರೈತರೇ ನಿಮ್ಮ ಫಾರ್ಮನ್ನು ನೋಡೀ ನಗುವ ಹಾಗೆ ಆಗಬಾರದು. ಇದು ಒಂದು ಸರ್ಕಾರಕ್ಕೆ ಇಲಾಖೆಗೆ ಅವಮಾನಕರವಾಗಿರತಕ್ಕಂಥದ್ದು. ಒಂದು ವರ್ಷಕ್ಕೆ 5 ಲಕ್ಷ - 10 ಲಕ್ಷ ಹಣ ವ್ಯವಸಾಯಕ್ಕೋಸ್ಕರ ಬೇಕಾಗುತ್ತದೆ ಆ ಹಣವನ್ನು ಅಧಿಕಾರಿಯ ಹೆಸರಿನ ಮೇಲೆ ಡಿಪಾಸಿಟ್ ಮಾಡಿ ಅವನಿಗೆ ಬಳಸು ಎಂದು ಹೇಳಿ. ಯಾವ ಟೈಮಿಗೆ ಗೊಬ್ಬರ ಹಾಕಬೇಕು, ಯಾವ ಟೈಮಿನಲ್ಲಿ ಔಷಧಿ ಸಿಂಪಡಣೆ ಮಾಡಬೇಕು ಅದನ್ನು ಮಾಡದಿದ್ದರೆ ಕೃಷಿ ಹೇಗೆ ಆಗುತ್ತದೆ? ಹಾರ್ಟಿಕಲ್ಚರ್ ಹೇಗೆ ಬೆಳೆಯುತ್ತದೆ ಹೇಳಿ? ಇದು ವ್ಯವಸ್ಥೆ. ನಮ್ಮ ಮಲೆನಾಡಿನ ತಾಲ್ಲೂಕುಗಳಲ್ಲಿ ಚಿಕ್ಕು ಗಿಡಬೇಕು, ಕಾಗೋಡು ತಿಮ್ಮಪ್ಪನವರಿಗೆ ಗೊತ್ತಿದೆ, ಚಿಕ್ಕು ಗಿಡ ಅಲ್ಲಿ ಬೇಕಾದಷ್ಟು ಬರುತ್ತದೆ ಅಲ್ಲಿ, ಚಿಕ್ಕು ಇಲ್ಲ ಅಲ್ಲಿ. ನಿಮ್ಮ ಹಾರ್ಟಿಕಲ್ಚರ್‌ನವರು ಬೆಂಗಳೂರಿನಿಂದ ತರಿಸಿಕೊಡುತ್ತೇವೆ ಎಂದು ಹೇಳುತ್ತಾರೆ. ಏಕೆ ಗ್ರಾಫ್ಟಿಂಗ್ ಮಾಡಬಾರದು ಅಲ್ಲಿ, ಅಲ್ಲಿ ಕಿರಣೆ ಗಿಡ ಸಿಗುವುದಿಲ್ಲ ಎಂದು ಹೇಳುತ್ತಾರೆ. ಕಿರಣೆ ಗಿಡ ಎಲ್ಲಿಂದ ತರಬೇಕು. ನೀವು ಬೇಕಾದರೆ ಚಾರ್ಜ್ ಮಾಡಿ, ರೈತನಿಗೆ ತಂದು ಕೊಡಿ. ಸೇಲ್ ಮಾಡಿ ನನ್ನಂಥ ರೈತನಿಗೆ ಉಚಿತ ಕೊಡುವುದ ಬೇಡ. ನನಗೆ ನೂರು ಗಿಡ ಬೇಕಾಗಿತ್ತು ನಾನು ಎಲ್ಲೆಲ್ಲೋ ಹೋಗಿ ತಂದೆ. ಯಾವುದೋ ಪ್ರೈವೇಟ್ ಫಾರ್ಮನಲ್ಲಿ ಹೋಗಿ ತಂದೆ. ನಿಮ್ಮ ಇಲಾಖೆ ಇದ್ದ ಮೇಲೆ ಏಕೆ ಬೇಕು ನಮಗೆ, ನಾನು ಹಣ ಕೊಡುತ್ತೇನೆ, ನೀವು ನನಗೆ ಸಬ್ಸಿಡಿ ರೇಟ್‌ನಲ್ಲಿ ಕೊಡುವುದು ಬೇಡ. ಇನ್ನು ಯಾವುದೋ ಸರ್ಕಾರಿ ಯೋಜನೆಗಳು ಇವೆ ಅವುಗಳಿಗೆ ಸಬ್ಸಿಡಿ ರೇಟ್‌ನಲ್ಲಿ ಕೊಡಿ, ಸ್ಪೆಶಲ್ ಕಾಂಪೋಸೆಂಟ್ ಇದೆ, ಇನ್ನೊಂದು ಇದೆ ಅದಕ್ಕೆ ಕೊಡಿ. ಜನರಲ್ಲಾಗಿ ಒಬ್ಬ ರೈತ ಇಂತಹ ಗಿಡ ಬೇಕು ಎಂದರೆ ಅವನಿಗೆ ತರಿಸಿಕೊಡಿ. ಅವನು ಬೇಕು ಎಂದಾಗ ನಿಮ್ಮಲ್ಲಿ ಕೊಡುವುದಕ್ಕೆ ಇಲ್ಲ ಎಂದರೆ ಅರ್ಥ ಇಲ್ಲ ಎನ್ನತಕ್ಕಂಥದ್ದು. ಈ ರೀತಿಯಲ್ಲಿ ಇಲಾಖೆಯನ್ನು ದಯಮಾಡಿ ನಡೆಸಬಾರದು. ಸ್ವಲ್ಪ ಶಕ್ತಿಯುತವಾಗಿ ನಡೆಸುವಂಥ ಕೆಲಸವನ್ನು ದಯಮಾಡಿ ತಾವು ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ವಿನಂತಿ ಮಾಡುತ್ತೇನೆ. ಆ ಫಾರ್ಮ್‌ಗಳನ್ನು ಹಾಗೆ ಇಡಬೇಡಿ ಚೆನ್ನಾಗಿ ಮಾಡಿ, ಅಲ್ಲಿ ಕೃಷಿ ಮಾಡಿ, ನಮ್ಮ ರೈತರಿಗೆ ಮಾದರಿಯಾಗುವಂಥ ರೀತಿಯಲ್ಲಿ ಆ ಫಾರ್ಮ್‌ಗಳು ಇಡಬೇಕು ಎಂದು ವಿನಂತಿ ಮಾಡುತ್ತೇನೆ. ಇನ್ನೊಂದು ಕೃಷಿಯ ಬಗ್ಗೆ ಒಂದು ವಿಚಾರ ಎಂದರೆ ಆಹಾರ ಬೆಳೆಯುವ ಪ್ರದೇಶ ಕಡಿಮೆಯಾಗುತ್ತಿದೆ. ನಾವೆಲ್ಲರೂ ಕೂಡ ಬಹಳ ಎಚ್ಚರಿಕೆಯಿಂದ ಇರಬೇಕು. ಭತ್ತ

ಬೆಳೆಯುವಂಥ, ಜೋಳ ಬೆಳೆಯುವಂಥ ಪ್ರದೇಶ ಬಹಳ ಕುಂಠಿತವಾಗುತ್ತದೆ. ಎಲ್ಲರೂ ವಾಣಿಜ್ಯ ಬೆಳೆ ಬೆಳೆಯುತ್ತಾ ಹೋಗುತ್ತಿದ್ದಾರೆ. ಮತ್ತೊಂದು ಸಲ ನಾವು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಸರ್ಕಾರ ವಿಶೇಷವಾದ ಒತ್ತನ್ನು ಕೊಟ್ಟು ಆಹಾರ ಧಾನ್ಯವನ್ನು ಯಾರು ಬೆಳೆಯುತ್ತಾರೆ ಅವರಿಗೆ ವಿಶೇಷವಾದ ಸೌಲಭ್ಯವನ್ನು ಕೊಟ್ಟು ಅವರಿಗೆ ಬೆಂಬಲ ಬೆಲೆಯನ್ನು ಫಿಕ್ಸ್ ಮಾಡುವಾಗ ರೈತನಿಗೆ ಕಲ್ಟಿವೇಶನ್ ಕಾಸ್ಟ್ ಎಷ್ಟು ಬಿದ್ದಿದೆ ಎಂಬುದನ್ನು ಆಲೋಚನೆ ಮಾಡಿ ವೈಜ್ಞಾನಿಕವಾದಂಥ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ ಅವನ ರಕ್ಷಣೆ ಕೊಡುವಂಥ ಅವಶ್ಯಕತೆ ಇದೆ. ಆಹಾರಧಾನ್ಯ ಬೆಳೆಯುವಂಥ ರೈತನಿಗೆ ಇದು ಲಾಭದಾಯಕ ಎನಿಸಿದರೆ ಮಾತ್ರ ಅವನು ಬೆಳೆಯುತ್ತಾನೆಯೆ ಹೊರತು ಹಾನಿಯಾದರೆ ಯಾರೂ ಕೂಡ ಬೆಳೆಯುವುದಿಲ್ಲ. ಆ ಆಹಾರ ಬೆಳೆಯುವಂಥ ಏರಿಯಾ ಕಡಿಮೆಯಾದರೆ ಬೆಳೆಯುತ್ತಿರುವ ಜನಸಂಖ್ಯೆ ಅನ್ನ ತಿನ್ನುವುದಕ್ಕಾಗುವುದಿಲ್ಲ, ಅದನ್ನು ಬಿಟ್ಟು ಬೇರೇನಾದರೂ ತಿನ್ನಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದನ್ನು ಇಲಾಖೆ ವತಿಯಿಂದ ಬಹಳ ಗಂಭೀರವಾಗಿ ಆಲೋಚನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತಾ ಇದಕ್ಕೆ ಪೂರಕವಾಗಿರುವ ಹಾಗೆ ವಿದ್ಯುತ್ ಅವಶ್ಯಕತೆ ಇದೆ. ವಿದ್ಯುತ್ ಖಾತೆಯ ಮಾನ್ಯ ಮುಖ್ಯಮಂತ್ರಿಗಳಿರುವುದರಿಂದ ದಯಮಾಡಿ ನಾನು ಈ ಮಾತನ್ನು ಹೇಳುತ್ತಿದ್ದೇನೆ. ನಾವು ಬೆಳೆ ಬೆಳೆಯಬೇಕಾದರೆ ಪಂಪ್‌ಸೆಟ್ ಕೊಂಡುಕೊಳ್ಳಬೇಕು. ನಾವು ಕಳೆದ ಅಧಿವೇಶನದಲ್ಲಿ ಅನ್ ಆಥರೈಸ್ಡ್ ಆಗಿ ಸಂಪರ್ಕ ಪಡೆದಿರುವಂಥ ರೈತರಿಗೆಲ್ಲಾ ವಿದ್ಯುತ್ ಸಂಪರ್ಕ ಕೊಟ್ಟು ಅವರನ್ನು ಆಥರೈಸ್ಡ್ ಮಾಡಬೇಕೆಂದು ಚರ್ಚೆ ಮಾಡಿದೆವು. ನಮ್ಮ ಕೆಲವು ತಾಲ್ಲೂಕುಗಳಲ್ಲಿ 1992ನೇ ಇಸವಿಯಿಂದ ನೀರಾವರಿ ಪಂಪ್‌ಸೆಟ್‌ಗಳನ್ನು ಕೊಂಡುಕೊಂಡಂಥ ರೈತರಿಗೆ ವೈರ್ ಕೊಟ್ಟಿಲ್ಲ, ಕಂಬ ಕೊಟ್ಟಿಲ್ಲ. ಅವರಿಗೆ 1992ನೇ ಇಸವಿಯಲ್ಲಿ ಮಂಜೂರಾತಿ ಕೊಟ್ಟಿದ್ದೀರಿ. ಅವರು ಐಆರ್‌ಡಿಪಿ ಯೋಜನೆಯಡಿಯಲ್ಲಿ ಬ್ಯಾಂಕ್‌ನಿಂದ ಸಾಲ ಪಡೆದು ಪಂಪ್‌ಸೆಟ್ ತಂದಂಥ ಸಣ್ಣ ಸಣ್ಣ ರೈತರು, ಅವರು ಬಡ್ಡಿ ಕಟ್ಟುತ್ತಾ ಕಣ್ಣೀರು ಹಾಕುತ್ತಿದ್ದಾರೆ. ಬೆಳೆ ಬೆಳೆಯುವುದು ಬಿಟ್ಟು ಬಡ್ಡಿ ಬೆಳೆಯುತ್ತಿದೆ. ಇಂಥ ಪರಿಸ್ಥಿತಿಯಲ್ಲಿ ನೀವು ವೈರ್ ಕೊಡುವುದಿಲ್ಲ, ಕಂಬ ಕೊಡುವುದಿಲ್ಲ. ನಾನು ಮೊನ್ನೆ ದಿನ ಕೆಇಬಿ ಆಫೀಸಿಗೆ ಹೋಗಿದ್ದೆ. ಮಾನ್ಯ ಚೇರ್ಮನ್‌ರವರು ನಾನು ಹೋದ ತಕ್ಷಣ ನಿಯಮದಂತೆ ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ಬಾಕಿ ಇದೆ ಎಂಬುದನ್ನು ತೋರಿಸುವ ಒಂದು ಚಾರ್ಟನ್ನು ತೆಗೆದಿಟ್ಟರು. ಅದು ತುಂಬಾ ಒಳ್ಳೆಯದು. ಬಹಳ ಸ್ಟ್ರಿಕ್ಟ್ ಮಾಡಿ ನೀವು ವಸೂಲಿ ಮಾಡಬೇಕು. ಒಬ್ಬ ಒಳ್ಳೆಯ ಚೇರ್ಮನ್‌ರನ್ನು ಆ ಇಲಾಖೆಯಲ್ಲಿ ನೇಮಕ ಮಾಡಿದ್ದೀರಿ. ಅವರು ಸಮರ್ಥವಾಗಿ ಕೆಲಸ ಮಾಡುತ್ತಾರೆ. ಆದರೆ ನಾನು ಹೇಳುವುದೇನೆಂದರೆ ನಮ್ಮ ತೀರ್ಥಹಳ್ಳಿ, ಹೊಸನಗರ ಈ ಕಡೆಗಳಲ್ಲೆಲ್ಲಾ ಯಾವ ಬಾಕಿಯೂ ಇಲ್ಲ ಎಂಬುದನ್ನು ನೋಡಿ ಅವರು ಸಂತೋಷಪಟ್ಟರು. ನಮ್ಮಲ್ಲಿ ಎಷ್ಟರಮಟ್ಟಿಗೆ ಕಾನೂನಿನ ಪಾಲನೆಯಾಗುತ್ತಿದೆ ಎಂದರೆ ಒಬ್ಬ ಮನುಷ್ಯ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ಎರಡು ಬಲ್ಬ್ ಹಾಕಿದ್ದಕ್ಕೆ ಇಡೀ ಮನೆಗೆ ಸಂಪರ್ಕ ಕಡಿದುಹಾಕಿದ್ದಾರೆ. ಇಂಥ ಸಾವಿರಾರು ಮನೆಗಳಲ್ಲಿ ಎರಡನೆ ಬಲ್ಬ್ ಹಾಕಿಕೊಂಡದ್ದಕ್ಕೆ ಇಡೀ ಮನೆಗೆ ಸಂಪರ್ಕ ಕಡಿದುಹಾಕಿದ್ದಾರೆ. ನಮ್ಮ ಮಲೆನಾಡು ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಸುಮಾರು ಒಂದು ಸಾವಿರ ಮನೆಗಳಿಗೆ ಈ ರೀತಿ ಡಿಸ್‌ಕನೆಕ್ಟ್ ಮಾಡಿರಬಹುದು. ಇಷ್ಟರಮಟ್ಟಿಗೆ ಕಾನೂನು ಉಲ್ಲಂಘನೆ ಮಾಡದೆ ಇರುವಂಥ

ತಾಲ್ಲೂಕಿಗೆ ನೀವು ಕೊಡುವಂಥ ಶಿಕ್ಷೆ ಇದೆ ಏನು? ನನ್ನ ತಾಲ್ಲೂಕಿನಲ್ಲಿ 1992ನೇ ಇಸವಿಯಿಂದ ಸುಮಾರು 400 ರಿಂದ 450 ಪಂಪ್‌ಸೆಟ್‌ಗಳನ್ನು ರೈತರು ಕೊಂಡಿಟ್ಟುಕೊಂಡಿದ್ದಾರೆ. ನೀವು ಅವರಿಗೆ ಏತಕ್ಕೆ ಕಂಬ ಮತ್ತು ವೈರ್‌ಗಳನ್ನು ಕೊಡುವುದಿಲ್ಲ? ಯಾರು ಅನಧಿಕೃತವಾಗಿ ಸಂಪರ್ಕ ತೆಗೆದುಕೊಳ್ಳುತ್ತಾರೆ ಅವರಿಗೆ ಕಂಬ, ವೈರ್ ಎಲ್ಲಾ ಉಂಟು. ನಿಮ್ಮ ಅಧಿಕಾರಿಗಳು ಲಂಚ ತೆಗೆದುಕೊಂಡು ಭ್ರಷ್ಟಾಚಾರ ಮಾಡಿಕೊಂಡವರಿಗೆಲ್ಲಾ ಕೊಡುತ್ತಾರೆ. ನಮ್ಮ ತಾಲ್ಲೂಕಿಗೆ ಕೊಡುವುದಿಲ್ಲ ಎಂದರೆ ಏನರ್ಥ? ಆ ರೈತ ಯಾರ ಬಳಿ ಕಣ್ಣೀರು ಹಾಕಬೇಕು? ಎರಡು ವರ್ಷದಿಂದ ನಾವು ಪ್ರಯತ್ನ ಮಾಡುತ್ತಿದ್ದೇವೆ. ಹೋದ ಸಲ ಆರ್‌ಇಸಿ ಸ್ಕೀಂಗಾಗಿ ನಾವು ಧರಣಿ ಮಾಡಿದೆವು. ಈ ಸ್ಕೀಂನ ವ್ಯಾಪ್ತಿಯಲ್ಲಿ 200 ಹಳ್ಳಿಗಳನ್ನು ತೆಗೆದುಕೊಂಡಿದ್ದೀರಿ, ಕೇಂದ್ರ ಸರ್ಕಾರದಿಂದ ಮ್ಯಾಚಿಂಗ್ ಗ್ರಾಂಟ್‌ನಲ್ಲಿ ಕೋಟಿಗಟ್ಟಲೆ ಹಣ ಬರುತ್ತಿದೆ. ಅದರಲ್ಲಿ ಒಂದು ಪೈಸೆ ಕೂಡ ಖರ್ಚು ಮಾಡಿಲ್ಲ. ಒಂದು ವರ್ಷದಲ್ಲಿ 30-40 ಹಳ್ಳಿಗಳಿಗೂ ನೀವು ವಿದ್ಯುತ್ ಸಂಪರ್ಕ ಕೊಡುವುದಿಲ್ಲ, ವೈರ್ ಇಲ್ಲ ಕಂಬ ಇಲ್ಲ ಎನ್ನುತ್ತೀರಿ. ಬಂದಿರುವ ಹಣವನ್ನು ಎಲ್ಲೆಲ್ಲಿಗೊ ಡೈವರ್ಟ್ ಮಾಡುತ್ತಿದ್ದಾರೆ. ಇದರ ಅರ್ಥವೇನು? ನಾವು ಕಾನೂನು ಪಾಲನೆ ಮಾಡುವುದೇ ತಪ್ಪೇನು. ನಮ್ಮ ಸಾಕಷ್ಟು ಪ್ರದೇಶಗಳು ಮುಳುಗಡೆಯಾಗಿವೆ. ದೇಶಕ್ಕೆ ಬೆಳಕು ಕೊಡುವಂಥ ಯೋಜನೆಗಳು ನಮ್ಮಲ್ಲಿ ಆಗಿವೆ. ಆದರೂ ನಮ್ಮ ತೀರ್ಥಹಳ್ಳಿ, ಹೊಸನಗರ, ಸಾಗರ ತಾಲ್ಲೂಕುಗಳಿಗೆ ಕರೆಂಟ್ ಇಲ್ಲ ಎಂದರೆ ಹೇಗೆ?

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ನಾನು ಹೇಳುವುದೇನೆಂದರೆ ಆ ಪ್ರದೇಶವನ್ನು ಮುಳುಗಡೆಯನ್ನಂತೂ ಮಾಡಿಸಿದ್ದೀರಿ. ಇರುವ ಜನರಿಗೆ ವಿದ್ಯುತ್ ಕೊಡಿಸಿ. ಏಕೆಂದರೆ ಆರ್‌ಇಸಿ ಪ್ರೋಗ್ರಾಂ ಪ್ರಕಾರ ಹ್ಯಾಮ್ಲೆಟ್‌ಗೆ ವಿದ್ಯುಚ್ಛಕ್ತಿ ಕೊಡುವುದಕ್ಕೋಸ್ಕರ ಅವರ ತೀರ್ಥಹಳ್ಳಿ ತಾಲ್ಲೂಕು, ಸಾಗರ ತಾಲ್ಲೂಕು ಇನ್ನೂ ಬೇರೆ ಯಾವುದೋ ತಾಲ್ಲೂಕುಗಳನ್ನು ಗುರುತಿಸಿದ್ದು ಆರ್‌ಇಸಿಯಿಂದ ಸ್ಯಾಂಕ್ಷನ್ ಆಗಿವೆ. ಅದು ಈ ಸಾಲಿನಲ್ಲಿ ಅಂದರೆ 1997-98ರಲ್ಲಿ ಕೆಲಸ ಪೂರ್ಣವಾಗಬೇಕಾಗಿತ್ತು. ಇವತ್ತಿನವರೆಗೆ ನಮ್ಮದು ಸುಮಾರು 236 ಇದೆ, ಇವರದ್ದು ಮುನ್ನೂರಕ್ಕಿಂತ ಹೆಚ್ಚಿದೆ, ಹೊಸನಗರದ್ದು ಸುಮಾರು ಸ್ವಲ್ಪ ಹೆಚ್ಚುಕಡಿಮೆ 500 ಅಥವಾ 600 ಇದೆ. ಈ ಆರ್‌ಇಸಿ ಪ್ರೋಗ್ರಾಂ ಅಪ್ರೂವ್ ಆಗಿದೆ.200 ಅಥವಾ 300 ಇರತಕ್ಕಂಥ ಹ್ಯಾಮ್ಲೆಟ್‌ನಲ್ಲಿ ಕೊನೆಪಕ್ಷ ಒಂದು ವರ್ಷಕ್ಕೆ ಐವತ್ತನ್ನಾದರೂ ಮಾಡದೆ ಹೋದರೆ ಆ ಆರ್‌ಇಸಿಯವರು ಮಂಜೂರು ಮಾಡಿದ್ದು ಏತಕ್ಕೆ? ಇದನ್ನು ಕೊಡುವುದು ಏತಕ್ಕೆ? ನಮ್ಮ ತಾಲ್ಲೂಕಿನ ಬಗ್ಗೆ ಹೇಳುವುದಾದರೆ ಕಳೆದ ವರ್ಷ 23 ಹ್ಯಾಮ್ಲೆಟ್‌ನಲ್ಲಿ 18 ಆಗಿವೆ, ಇನ್ನೂ 5 ಆಗಿಲ್ಲ. ಈ ವರ್ಷ ಒಂದೂ ಕೂಡ ಆಗಿಲ್ಲ. ಅದೇ ಸ್ಥಿತಿ ಅವರದ್ದೂ ಆಗಿದೆ, ಹೊಸನಗರದ್ದೂ ಆಗಿದೆ. ಈ ರೀತಿ ಆರ್‌ಇಸಿ ಯಿಂದ ಮಂಜೂರಾದ ಕಾರ್ಯಕ್ರಮದ ಹಣೆಬರಹವೇ ಹೀಗಾದರೆ ಉಳಿದ ಯೋಜನೆಗಳ ಗತಿ ಏನು? ತಮಗೆ ಗೊತ್ತಿದೆ ಇನ್ನೊಂದು ದುರುಂತ ಏನು ಎಂದರೆ ನಮ್ಮ ಮಲೆನಾಡು ಪ್ರದೇಶದವರು ಇದುವರೆಗೂ ಪಂಪ್‌ಸೆಟ್ ಕೇಳುವುದಕ್ಕೆ ಹೋಗಿರಲಿಲ್ಲ, ಮಳೆ ಜಾಸ್ತಿ ಬರಬಹುದು ಎಂಬ ಉದ್ದೇಶದಿಂದ. ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ಪಂಪ್‌ಸೆಟ್ ಇವೆ, ನಮ್ಮ ತಾಲ್ಲೂಕಿನಲ್ಲಿ ಎಷ್ಟು ಪಂಪ್‌ಸೆಟ್ ಇವೆ ಎಂದು ಲೆಕ್ಕಕ್ಕೆ ತೆಗೆದುಕೊಂಡರೆ ನೀವು ಮೊದಲಿನಿಂದಲೂ ಪಂಪ್‌ಸೆಟ್‌ಗಳನ್ನು ಹಾಕಿಕೊಂಡು, ಅವುಗಳ

ಸಂಖ್ಯೆಯನ್ನು ಜಾಸ್ತಿ ಮಾಡಿದ್ದೀರಿ. ನಾವು ಈ ಮಳೆ ಕಡಿಮೆಯಾದಮೇಲೆ ಈಗ ಸ್ವಲ್ಪ ಬುದ್ಧಿವಂತರಾಗಿ ಪಂಪ್‌ಸೆಟ್ ಹಾಕಿಕೊಳ್ಳುವುದಕ್ಕೆ ಹೊರಟಿದ್ದೇವೆ. ಕನಿಷ್ಠ ಒಂದು ವರ್ಷಕ್ಕೆ ಕೊನೇಪಕ್ಷ 100 ಪಂಪ್‌ಸೆಟ್‌ಗಳಿಗಾದರೂ ವಿದ್ಯುಚ್ಛಕ್ತಿ ಕೊಡುವಂಥ ಕೆಲಸ ಆಗದೆ ಹೋದರೆ ನಾವು ನಿಮ್ಮ ಜೊತೆಗೆ ಬರುವುದಾದರೂ ಹೇಗೆ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅವರು ತಮ್ಮ ಜೊತೆಗೆ ಬರಬಾರದು ಎಂದು ಹೇಳಿ ಪ್ರತಿ ಒಂದು ಕಂಬಕ್ಕೆ 5 ಸಾವಿರ ರೂಪಾಯಿ ಹಾಕಿದ್ದಾರೆ, ಹೊಸ ಮೀಟರ್ ಹಾಕಿಸಿದ್ದಾರೆ, ಹೊಸ ರೇಟ್ ಫಿಕ್ಸ್ ಮಾಡಿದ್ದಾರೆ. ಈಗ ನೀವು ಆ ರೀತಿ ತೆಗೆದುಕೊಂಡು ತಾವು ಏನು ಮಾಡುತ್ತೀರಿ, ತಾವು ಎಲ್ಲಿದ್ದೀರೋ ಸ್ವಲ್ಪ ಅಲ್ಲೇ ಇರಿ ಎಂದು ಅವರು ಮಾಡಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಈಗ ಏನಾಗಿದೆ ಎಂದರೆ ನಾನು ಮೊನ್ನೆ ಗುಲ್ಬರ್ಗಾ ಜಿಲ್ಲೆಗೆ ಕೃಷ್ಣಾ ಯುಕೆಪಿ ನೋಡುವುದಕ್ಕಾಗಿ ಕಮಿಟಿಯಿಂದ ಹೋಗಿದ್ದೆ. ಅಲ್ಲಿ ಒಂದು ಚಾನಲ್ ಮೇಲೆ ಮೋಟರ್ ಹಾಕಿಕೊಂಡು ಎರಡು ಕೊಕ್ಕೆ ನೇತುಹಾಕಿಕೊಂಡಿದ್ದಾರೆ. ಇದೇನು ಎಂದು ಕೇಳಿದರೆ ಅವರು ಇಲ್ಲಿಯ ವ್ಯವಸ್ಥೆಯೇ ಹಾಗೆ ಎನ್ನುತ್ತಾರೆ. ಆದರೆ ನಮ್ಮಲ್ಲಿ ಭಾಗ್ಯಜ್ಯೋತಿ ಯೋಜನೆಯಲ್ಲಿ ಎರಡನೆ ಬಲ್ಬ್ ಹಾಕಿಕೊಂಡರೆ ಕಿತ್ತು ಹಾಕುತ್ತೀರಿ. ಹಾಗಾದರೆ ಕಾನೂನು ಇಲ್ಲಿಗೊಂದು, ಅಲ್ಲಿಗೊಂದೇನು? ನಮಗೂ ಬಿಡಿ, ನಾವೂ ಹಾಕಿಕೊಳ್ಳುತ್ತೇವೆ. ಶರಾವತಿ, ವಾರಾಹಿ, ಚಕ್ರ ಈ ಎಲ್ಲಾ ಯೋಜನೆಗಳು ಬಂದು ನಮ್ಮನ್ನು ಮುಳುಗಿಸಿ ಉಳಿದಿರತಕ್ಕಂಥ ಹಳ್ಳಿಗಳಿಗಾದರೂ ಬೆಳಕು ಕೊಡದೆ ಹೋದರೆ ಹೇಗೆ? ನಮ್ಮನ್ನೆಲ್ಲಾ ಮುಳುಗಿಸಿ ಇಡೀ ರಾಜ್ಯಕ್ಕೆ ಅಲ್ಲಿಂದ ಬೆಳಕು ತೆಗೆದುಕೊಂಡು ಬಂದಿದ್ದೀರಿ. ಆದರೂ ಒಂದು ಬಲ್ಬ್ ಹಾಕಿಕೊಳ್ಳುವುದಕ್ಕೆ ಬಿಡುವುದಿಲ್ಲ, ನಮಗೊಂದಿಷ್ಟು ವೈರ್ ಕೊಡುವುದಿಲ್ಲ, ಕಂಬ ಕೊಡುವುದಿಲ್ಲ, ಇದು ನ್ಯಾಯವೆ, ಹೇಳಿ. ನಮ್ಮನ್ನು ಈ ರೀತಿ ಇಟ್ಟರೆ ಇದು ಇಡೀ ರಾಜ್ಯದ ಜನತೆಗೆ ಗೌರವ ತರುವಂಥ ಸಂಗತಿಯೆ. ನಾವು ಅಲ್ಲಿಂದ ಚುನಾಯಿತರಾಗಿ ಬಂದು ಆ ಜನಕ್ಕೆ ಏನು ಹೇಳಬೇಕು? ದಯಮಾಡಿ ಹೇಳಿ, ತಾವು ಮಂತ್ರಿಗಳಾಗಿದ್ದೀರಿ, ತಾವು ಆ ಭಾಗದಲ್ಲಿ ಓಡಾಟ ಮಾಡಿದಂಥವರು. ನಿಮಗೆ ನಾನು ಹೇಳಬೇಕಾಗಿಲ್ಲ. ನೀವು ಅಧಿಕಾರಿಗಳಿಗೆ ಕೊಡಿ ಎಂದು ಹೇಳಿದರೆ ಅವರು ಕೊಡುತ್ತಾರೆ. ನೀವು ಏತಕ್ಕೆ ಮನಸ್ಸು ಮಾಡುವುದಿಲ್ಲ, ಎಂಬುದು ನಮಗೆ ಅರ್ಥವಾಗುವುದಿಲ್ಲ. ಪಟೇಲರು ಎಂಧರೆ ನಮ್ಮ ಕಡೆ ಪ್ರಾಣ ಬಿಡುತ್ತಾರೆ. ಅಯ್ಯೋ ನಮ್ಮ ಪಟೇಲರು ಮುಖ್ಯ ಮಂತ್ರಿಗಳಾದರೂ ಎಂದು ಅವರು ಬಹಳ ಖುಷಿ ಪಟ್ಟಿದ್ದಾರೆ. ಆದರೆ ನೀವು ನಮ್ಮನ್ನು ಈ ಸ್ಥಿತಿಯಲ್ಲಿಟ್ಟರೆ ಹೇಗೆ? ನೀವೆ ಆ ಖಾತೆಯನ್ನು ಇಟ್ಟುಕೊಂಡಿದ್ದೀರಿ, ನೀವು ಬೆಳಕನ್ನು ಕೊಟ್ಟಿದ್ದೇ ಆದರೆ ಪಟೇಲರಿಗೆ ಅಧಿಕಾರ ಸಿಕ್ಕಿತು, ನಮಗೆ ಒಂದು ಬೆಳಕು ಸಿಕ್ಕಿತು ಎಂದು ಜನ ಎರಡನ್ನೂ ಎಂಜಾಯ್ ಮಾಡುವ ಹಾಗೆ ಮಾಡಿ. ಅಲ್ಲಿ ಇನ್ನೊಂದು ವಿಚಾರ ಇದೆ. ನಮ್ಮಲ್ಲಿ ಮೈನರ್ ಇರಿಗೇಷನ್ ಮಂತ್ರಿಗಳಿದ್ದಾರೆ. ನಮ್ಮ ಸಾಗರ, ಹೊಸನಗರ ಪ್ರದೇಶದಲ್ಲಿ ಕೆಲವು ನದಿಗಳಿದ್ದು ಅವುಗಳಿಗೆ ಸಣ್ಣ ಸಣ್ಣ ಲಿಫ್ಟ್ ಇರಿಗೇಷನ್ ಹಾಕುವಂತೆ ಮಾಡಬೇಕು. ನಾಗೇಗೌಡರು ನಮ್ಮನ್ನು ಮುಳುಗಿಸುತ್ತಿದ್ದಾರೆ. ಅಪ್ಪರ್ ತುಂಗಾ ಮಾಡುತ್ತಿದ್ದಾರೆ, ಟ್ರಸ್ಟ್ ಗೇಟ್ ಹಾಕುತ್ತಿದ್ದಾರೆ, ನಮಗೆ ಲಿಫ್ಟ್ ಇರಿಗೇಷನ್ ಕೂಡ ಕೊಡದೆ

ಹೋದರೆ ಹೇಗೆ? ಅದಕ್ಕೆ ಮಹಾ ಎಷ್ಟಾಗಿಬಿಡುತ್ತದೆ ಸುಮಾರು 25-30 ಲಕ್ಷ ರೂಪಾಯಿ ಖರ್ಚು ಮಾಡಿದರೆ 200-250 ಎಕರೆ ನೀರುಣಿಸುವಂಥ ಯೋಜನೆಯನ್ನಾದರೂ ಮಾಡಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಮಗೆ ಒಂದು ಕೆರೆ ನಿರ್ಮಾಣ ಮಾಡಿ ಕೊಡಿ ಎಂದರೆ ಕೊಡುವುದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಕೋಲಾರದವರು ಗಲಾಟೆ ಮಾಡಿ, ಮಾಡಿ ಅಲ್ಲಿ ಬಂದಿರುವಷ್ಟು ಸಬ್‌ಸ್ಟೇಷನ್ಸ್‌ನಲ್ಲಿ ನಮಗೆ ಒಂದೂ ಕೂಡ ಬಂದಿಲ್ಲ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ನಮ್ಮದೇನು ಆಕಾಶಗಂಗೆ ಪಾರ್ಟಿಯೆ, ನಮ್ಮ ಕೋಲಾರ ಜಿಲ್ಲೆಗೆ ಏನು ಸಿಕ್ಕಿದೆ?

ಶ್ರೀ ಕಾಗೋಡು ತಿಮ್ಮಪ್ಪ : ನಮಗೇನು ಸಿಕ್ಕಿದೆ, ನೀರು ಬರುತ್ತದೆ ಎಲ್ಲ ಹೋಗುತ್ತದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಹೇಳಿ ಕೇಳಿ ನಿಮ್ಮದು ಮಲೆನಾಡು, ನಮ್ಮದು ಮರಳುಗಾಡು. ಮಳೆ ಇಲ್ಲ, ನೀರು ಇಲ್ಲ ಏನೂ ಇಲ್ಲ. ನೀವೂ ಮಂತ್ರಿಗಳಾಗಿದ್ದಿರಿ, ನೀವು ಏನು ಕೊಟ್ಟಿದ್ದೀರಿ? ಹೇಳಿ, ಒಂದು ಕೆರೆಯ ಹೂಳು ತೆಗೆಯುವುದಕ್ಕೆ ಸಾಧ್ಯ ಇಲ್ಲ, ನೀವು ನೀರನ್ನು ಕೊಡುತ್ತೀರಾ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಇನ್ನೇನು ಕೊಡಬೇಕು? ಬೈರೇಗೌಡರಂಥ ಮಂತ್ರಿಗಳನ್ನು ಕೊಟ್ಟಿಲ್ಲವೆ? ಮತ್ತಿನ್ನೇನನ್ನು ಕೊಡಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಚೌಡಾರೆಡ್ಡಿಯವರನ್ನೂ ನೀವು ಕೊಟ್ಟಿದ್ದೀರಿ. ಅವರು ಬಂದ ತಕ್ಷಣ ಗೌರ್ನರ್ ಆಫೀಸ್ ಮುಂದೆ ವಾಟರ್ ಬುಲೆಟ್ ಹಾಕಿಸಿಬಿಟ್ಟರು.

ಶ್ರೀ ವಾಟಾಳ್ ನಾಗರಾಜ್ : ಸಮುದ್ರ ಕೈಯಲ್ಲಿಟ್ಟುಕೊಂಡು ನೀವು ಉಪ್ಪಿಗೋಸ್ಕರ ಓಡಾಡುತ್ತಿದ್ದೀರಿ, ಶ್ರೀ ಪಟೇಲರು ಸಮುದ್ರವಿದ್ದಂತೆ, ಅವರು ನಿಮ್ಮ ಜಿಲ್ಲೆಯವರು. ಅವರನ್ನೇ ಸಂಪೂರ್ಣವಾಗಿ ಇಟ್ಟುಕೊಂಡಿದ್ದೀರಿ. ಸುಮ್ಮನೆ ನೀವೆಲ್ಲಾ ಒಟ್ಟಿಗೆ ಸೇರಿಕೊಳ್ಳಿ. ನೀವು ಮತ್ತು ತಿಮ್ಮಪ್ಪ ಎಲ್ಲರೂ ಒಟ್ಟಿಗೆ ಸೇರಿದರೆ ನಾವೂ ಸ್ವಲ್ಪ ಸಹಾಯ ಮಾಡುತ್ತೇವೆ. ಕೆಲಸದ ವಿಚಾರದಲ್ಲಿ ಅವರು ಪ್ರಾಮಾಣಿಕವಾಗಿ ಮಾಡುತ್ತಾರೆ. ನೀವು ಸ್ವಲ್ಪ ಒಟ್ಟಿಗೆ ಸೇರಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನಿಮ್ಮ ಮಾತಿಗೆ ನಾನು ಒಪ್ಪುತ್ತೇನೆ. ನೀವು ಹಾಗೆ ತಿಳಿದುಕೊಳ್ಳಬೇಡಿ. ಈಗ ಅವರ ಮಾತು ನಡೆಯುತ್ತದೆ. ಅವರು ಹೇಳಿದ್ದನ್ನು ಸಂಪೂರ್ಣವಾಗಿ ಮಾಡಿಸಿಕೊಡುತ್ತಾರೆ. ತಾವು ಏನೂ ಚಿಂತೆ ಮಾಡಬೇಡಿ. ಮುಖ್ಯಮಂತ್ರಿಗಳ ಜೊತೆಯಲ್ಲಿ ಒಳ್ಳೆಯ ಸಂಪರ್ಕ ಇಟ್ಟುಕೊಂಡು ಅವರ ಮುಖಾಂತರ ಅವರು ಹೇಳಿದ ದಿನ ಹೋಗಿ.

ಶ್ರೀ ವಾಟಾಳ್ ನಾಗರಾಜ್ : ನನಗಿಂತ ಜಾಸ್ತಿ ಖರ್ಗೆಯವರದ್ದಿದೆ ಸ್ವಾಮಿ. ಅವರಿಗೆ ಯಾದಗಿರಿ ಆಗಬೇಕಾಗಿದೆ. ಆದುದರಿಂದ ಅವರ ಬಗ್ಗೆ ಬಹಳ ಪ್ರೀತಿಯಿಂದ ಇದ್ದಾರೆ.

ಶ್ರೀ ಕಾಗೋಡು ತಿಮ್ಮಪ್ಪ : ನೋಡಿ ಇಷ್ಟೆಲ್ಲಾ ಹೇಳಿದರೂ ಅವರು ಎದ್ದು ಕರೆಂಟ್ ಕೊಡುತ್ತೇವೆ, ವೈರ್ ಕೊಡುತ್ತೇವೆ ಎಂದು ಒಂದು ಮಾತನ್ನು ಹೇಳುವುದಿಲ್ಲ.

ಶ್ರೀ ಜೆ. ಹೆಚ್. ಪಟೇಲರು : ಮಾನ್ಯ ಸಭಾಧ್ಯಕ್ಷರೆ ಶ್ರೀ ಕಾಗೋಡು ತಿಮ್ಮಪ್ಪ ಅವರು ಹೇಳಿದಂತೆ ಆ ಪ್ರದೇಶದಲ್ಲಿ ಪಂಪ್‌ಸೆಟ್‌ಗಳ ಅವಶ್ಯಕತೆ ಇರಲಿಲ್ಲ. ಮೊದಲೆಲ್ಲಾ ಮಳೆ ಚೆನ್ನಾಗಿ ಬೀಳುತ್ತಿದ್ದುದರಿಂದ ಅವರ ತೋಟಗಳು ಅಲ್ಲಿನ ಪ್ರಕೃತಿಯಿಂದಲೇ ನೀರಾವರಿ ಆಗುತ್ತಿತ್ತು. ಇತ್ತೀಚೆಗೆ ಅದು ಒಂದು ಎಕೊಲಾಜಿಕಲ್ ಇಂಬ್ಯಾಲೆನ್ಸ್‌ನಿಂದ ಈ ರೀತಿ ಆಗಿದೆ. ಅನಂತರ ಎಲ್ಲಿ ಹಿಂದೆ ಬಹಳ ಮಳೆಯಾಗುತ್ತಿತ್ತು, ಭಾರಿ ಮಳೆ ಪ್ರದೇಶ ಎನ್ನುವ ಕಡೆ ಈಗ ಮಳೆಯೇ ಆಗುತ್ತಿಲ್ಲ. ಸರ್ಕಾರ ಆದೇಶ ಕೊಟ್ಟು ಮಳೆ ತರಿಸುವಂತಿದ್ದರೆ ಇಷ್ಟು ಹೊತ್ತಿಗೆ ತರಿಸಿಬಿಡುತ್ತಿದ್ದೆ. ಆದರೆ ಈ ವಿದ್ಯುಚ್ಛಕ್ತಿ ಇಲಾಖೆಯವರು ಏನಾದರೂ ಆ ರೀತಿ ಒಂದು ಬಲ್ಬ್ ಹಾಕಿಕೊಳ್ಳುವಲ್ಲಿ ಎರಡು ಬಲ್ಬ್ ಹಾಕಿದ್ದಕ್ಕೆ ಸಂಪರ್ಕ ಕಡಿದು ಹಾಕಿದರು ಅಥವಾ ನೇರವಾಗಿ ಹುಕ್ ಹಾಕಿದ್ದಕ್ಕೆ ಹಾಕಿದವರನ್ನು ಕೈಬಿಟ್ಟರು ಎಂದು ಹೇಳಿದ್ದಾರೆ. ಇಲ್ಲ, ಎರಡು ಬಲ್ಬ್ ಹಾಕಿಕೊಂಡಿರುವಂಥದ್ದನ್ನು ತೆಗೆದುಹಾಕಿಲ್ಲ. ಆದರೆ ಏನು ಮಾಡುತ್ತಾರೆ ಎಂದರೆ ಒಂದು ಮನೆಗೆ ಕನೆಕ್ಷನ್ ತೆಗೆದುಕೊಂಡು ಅನ್‌ಆಥರೈಸ್ಡ್ ಆಗಿ ಬೇರೆಯವರು ಸಂಪರ್ಕ ತೆಗೆದುಕೊಂಡಿರುತ್ತಾರೆ. ನನ್ನ ಗಮನಕ್ಕೆ ಬಂದಿರುವಂಥದ್ದನ್ನು ನಾನು ಹೇಳುತ್ತಿದ್ದೇನೆ. ತಮ್ಮ ಭಾಗದ ಜನರು ಬಹಳ ಗುಣಸಂಪನ್ನರು, ಕಾನೂನು ಪರಿಪಾಲನೆ ಮಾಡುವುದರಲ್ಲಿ ಮೊದಲನೆಯವರು. ತೀರ್ಥಹಳ್ಳಿಯಲ್ಲಿಯೇ ನಮ್ಮ ಪಾಲಿಟಿಕ್ಸ್ ಬೆಳೆದದ್ದು. ಆದುದರಿಂದ ಅಲ್ಲಿ ಯಾರಾದರೂ ಅಕಸ್ಮಾತ್ ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆಯಾಗುತ್ತದೆ. ಕೆಇಬಿಯವರು ತಪ್ಪು ಮಾಡಿದ್ದರೆ ಅವರಿಗೆ ಶಿಕ್ಷೆ ಕೊಡುತ್ತಾರೆ, ಅಥವಾ ಈ ಜನರು ಯಾರು ಹುಕ್ ಹಾಕಿಕೊಂಡಿದ್ದಾರೆ ಅವರನ್ನೂ ಸಹ ನಾವು ಶಿಕ್ಷೆಗೆ ಒಳಪಡಿಸಬೇಕಾಗುತ್ತದೆ.

7.30 ಪಿ.ಎಂ.

ಆರ್.ಇ.ಸಿ.ದು ಕ್ಲಿಯರ್ ಆದ ತಕ್ಷಣ ದುಡ್ಡು ಬಂದಿರುತ್ತದೆ. ಆದರೆ ಮೆಟೀರಿಯಲ್ ಅವೇಲಬಿಲಿಟಿ ಇಲ್ಲ. ಮಾನ್ಯ ವಿರೋಧ ಪಕ್ಷದ ನಾಯಕರು ಏನು ಹೇಳಿದರು, ಮೆಟೀರಿಯಲ್‌ದು ಏನು ತೊಂದರೆ ಆಯಿತು ಎಂದರೆ, ಈ ಮಧ್ಯೆ, ನಾನು ಮತ್ತೆ ಹಿಂದಿನದವರದನ್ನೆಲ್ಲಾ ಹೇಳುವುದಕ್ಕೆ ಹೋಗುವುದಿಲ್ಲ, ಅನಾವಶ್ಯಕವಾಗಿ ಕೆಲವು ವಸ್ತುಗಳನ್ನು ಕೊಂಡುಕೊಂಡು ಇಟ್ಟುಬಿಟ್ಟರು. ಅವುಗಳ ಅವಶ್ಯಕತೆ ಇಲ್ಲ. ಈಗ ವೈರ್ ಬೇಕು. ವೈರ್ ಬೇಕು, ಕಂಬ ಬೇಕು. ವೈರ್‌ದು ಏನಾಯಿತು ಎಂದರೆ ಇಂಟರ್‌ನ್ಯಾಷನಲ್ ಮಾರ್ಕೆಟಿನಲ್ಲಿ ಅಲ್ಯೂಮಿನಿಯಂನ ರೇಟ್ ಜಾಸ್ತಿಯಾದದ್ದರಿಂದ, ಯಾರು ನಮ್ಮ ಕೆ.ಇ.ಬಿ.ಗೆ ಕೊಡುತ್ತೇವೆ ಎಂದು ಕಾಂಟ್ರಾಕ್ಟ್ ಮಾಡಿಕೊಂಡಿದ್ದರು, ಅವರು ಕೊಡಲಿಲ್ಲ ಹಾಗಾಗಿ ಸ್ವಲ್ಪ ಸಪ್ಲೈ ಕಡಿಮೆಯಾಯಿತು. ಎಲ್ಲೆಲ್ಲಿ ಹೆಚ್ಚು ಅವಶ್ಯಕತೆ ಇದೆಯೋ ಅಲ್ಲಿಗೆ ಮೊದಲು ಆದ್ಯತೆಯ ಮೇಲೆ ಕೊಡುತ್ತೇವೆ. ಮೊದಲು ಕೆ.ಇ.ಬಿ. ಯವರಿಗೆ ಹೇಳುತ್ತೇನೆ, 1992 ರಿಂದ ಪಂಪು ಹಾಕಿಕೊಂಡು ಕುಳಿತಿದ್ದಾರೆ, ಏಕೆ ಕನೆಕ್ಷನ್ ಕೊಟ್ಟಿಲ್ಲ ಎಂದು. 1992ರಲ್ಲಿ ಅವರು ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ತೆಗೆದುಕೊಂಡಿದ್ದರೇ? ಬ್ಯಾಂಕಿನಿಂದ ಸಾಲ ತೆಗೆದುಕೊಳ್ಳಬೇಕಾದರೆ ನಾವು ಕರೆಂಟ್ ಕೊಡುತ್ತೇವೆ

ಎಂದು ಹೇಳಿದ್ದೇವೇ? ಹೀಗೆ ಕೆಲವು ಕಡೆ ಲ್ಯಾಪ್ಸಸ್ ಇದೆ. ಅವನ್ನು ನಾನು ಒಪ್ಪಿಕೊಳ್ಳುತ್ತೇನೆ. ಇದೆಲ್ಲವೂ ಬರೀ ಕೆ.ಇ.ಬಿ. ಯಿಂದ ಆಗುತ್ತದೆ ಎಂದು ಅಲ್ಲ. ಕೆಲವು ಕಡೆ ಜನರೂ ಸಹ, ಹೇಗಾದರೂ ಕನೆಕ್ಷನ್ ತೆಗೆದುಕೊಳ್ಳಬಹುದು ಎಂದು ಪರವಾನಗಿ ಇಲ್ಲದೇ ಎಷ್ಟೋ ಜನ ಪಂಪು ಹಾಕಿಕೊಂಡಿರುವುದೂ ಉಂಟು. ಅದರಲ್ಲೂ ಅದನ್ನು ಸಾಲ ತೆಗೆದುಕೊಂಡು. ಆ ಕಡೆ ಅದಕ್ಕೆ ಬಡ್ಡಿ ಕಟ್ಟುತ್ತಾರೆ, ಈ ಕಡೆ ಕರೆಂಟೂ ಇಲ್ಲ. ಇಂಥವು ಇರುವುದು ನಮ್ಮ ಗಮನಕ್ಕೆ ಬಂದಿದೆ. ಅದಕ್ಕಾಗಿ ಹೇಳುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ : ಈ ರೀತಿಯದೆಲ್ಲಾ ಆಗಿರುವುದು ಕೋಲಾರ, ತುಮಕೂರು ಇಲ್ಲಿ. ನಮ್ಮಲ್ಲಂತೂ ಒಂದೂ ಇಲ್ಲ.

ಶ್ರೀ ಜೆ. ಹೆಚ್. ಪಟೇಲ್ : ಯಾರು ತಪ್ಪು ಮಾಡಿದರೂ ಅದು ತಪ್ಪೇ. ಆದರೆ ಒಂದು ಮಾತ್ರ ಹೇಳುತ್ತೇನೆ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ತಿಮ್ಮಪ್ಪನವರಿಗೆ ಏಕೆ ನಮ್ಮ ಮೇಲೆ ಇಷ್ಟೊಂದು ಕಣ್ಣು. ನಮ್ಮ ಕಡೆ ಸರಿಯಾಗಿ ನೀರಿಲ್ಲ, ಒಂದು ಬಾವಿ ಇಲ್ಲ, ಕೆರೆ ಇಲ್ಲ.

ಶ್ರೀ ಕಾಗೋಡು ತಿಮ್ಮಪ್ಪ : ಅವೆಲ್ಲವನ್ನೂ ಅನ್‌ಆಥರೈಸ್ಡ್ ಆಗಿ ತೆಗೆದುಕೊಂಡು 2-3 ವರ್ಷವಾಗಿದೆ.

ಶ್ರೀ ಜೆ.ಹೆಚ್. ಪಟೇಲ್ : ಈಗ ಹೊಸದಾಗಿ ಅನ್‌ಆಥರೈಸ್ಡ್ ಇರುವುದನ್ನು ರೆಗ್ಯುಲರೈಸೇಷನ್ ಮಾಡಬೇಕೆಂದಿದ್ದೇವೆ. ಯಾರ್‍ಯಾರು ಅನ್‌ಆಥರೈಸ್ಡ್ ಆಗಿ ಮಾಡಿಕೊಂಡಿದ್ದಾರೆ, ಅವರು ಕರೆಂಟೂ ಉಪಯೋಗಿಸಿಕೊಳ್ಳುವುದು, ಬಿಲ್ಲೂ ಕೊಡುವ ಹಾಗಿಲ್ಲ, ಹೀಗೆ ಆಗುತ್ತದೆ ಎಂದು ಇತ್ತೀಚೆಗೆ ನಾವು ಏನು ಮಾಡಿದ್ದೇವೆ ಎಂದರೆ ಇಷ್ಟು ದುಡ್ಡು ಎಂದು ಕಟ್ಟಿಸಿಕೊಂಡು ರೆಗ್ಯುಲರೈಸ್ ಮಾಡಿ ಎಂದು ಹೇಳಿದ್ದೇವೆ. ಆ ಪ್ರಕಾರ ನಿಮ್ಮ ಕಡೆ ಹೆಚ್ಚು ಗಮನ ಕೊಡಲು ಹೇಳುತ್ತೇನೆ.

ಶ್ರೀ ಬಿ. ಶಿವರಾಮು : ಮಾನ್ಯ ಅಧ್ಯಕ್ಷರೇ, ಈಗ ಅನ್‌ಆಥರೈಸ್ಡ್ ಇರುವುದನ್ನು ಇಷ್ಟು ಹಣ ಕಟ್ಟಿಸಿಕೊಂಡು ಆಥರೈಸ್ಡ್ ಮಾಡುತ್ತೇವೆ ಎಂದು ಹೇಳಿದಿರಿ. ತಾವು ಸದನದಲ್ಲಿ ಒಂದು ಆಶ್ವಾಸನೆಯನ್ನೂ ಕೊಟ್ಟಿದ್ದೀರಿ. ಈಗ ತಾವು ಅದಕ್ಕೆ ಎಷ್ಟು ದಂಡ ಹಾಕಬಹುದು? ಒಂದು ಪ್ರಮಾಣ, ಇತಿಮಿತಿ ಬೇಕಲ್ಲವೇ? ಅರಸೀಕೆರೆ ತಾಲ್ಲೂಕಿನದು ಒಂದು ಹೇಳುತ್ತೇನೆ. 4,386 ಬಾವಿಗಳು ರಿಜಿಸ್ಟರ್ ಆಗಿ, 1993-94ರಿಂದ ಪೆಂಡಿಂಗ್ ಇವೆ. ಈ ಅಂಕಿ ಅಂಶಗಳನ್ನು ತಾವೇ ಕೊಟ್ಟಿರತಕ್ಕಂಥಾದ್ದು. ಇವರಲ್ಲಿ ಎಷ್ಟು ಜನ ಸಾಲ ತೆಗೆದುಕೊಂಡಿರಬಹುದು? ಅಥವಾ ಸ್ವಂತ ಹಣ ಹಾಕಿರಬಹುದು? ಇಷ್ಟು ದಿವಸದಿಂದ ಕಾಯುತ್ತಿದ್ದರೆ, ಕೆ.ಇ.ಬಿ. ನವರು ಮೆಟೀರಿಯಲ್ ಸಪ್ಲೈ ಮಾಡದೇ ಹೋದರೆ ಅವರು ಏನು ಮಾಡುತ್ತಾರೆ? ಅನ್‌ಆಥರೈಸ್ಡ್ ಕನೆಕ್ಷನ್ ತೆಗೆದುಕೊಳ್ಳುತ್ತಾರೆ.

ಶ್ರೀ ಜೆ. ಹೆಚ್. ಪಟೇಲ್ : ಅನ್‌ಆಥರೈಸ್ಡ್ ಅಂದರೆ ಏನು ಎನ್ನುವುದನ್ನು ಹೇಳುತ್ತೇನೆ ಕೇಳಿ. ನನ್ನಿಷ್ಟಕ್ಕೆ ನಾನೇ ಬಾವಿ ತೆಗೆಸಿಕೊಂಡು, ಪಂಪು ಕೂಡಿಸಿಕೊಂಡು ಇರುವಂಥಾದ್ದಲ್ಲ. ಮೊದಲು ರಿಜಿಸ್ಟರ್ ಆಗಿರಬೇಕು. ಪಾರ್ಷಿಯಲ್ ಕೆಲಸ ಆಗಿರಬೇಕು. ಕೆಲಸ ಮಾಡಿಕೊಡುತ್ತೇವೆ ಎಂದು

ಕೆ.ಇ.ಬಿ.ಯವರು ಒಪ್ಪಿಕೊಂಡಿರಬೇಕು. ಆ ರೀತಿಯಾಗಿ ತಡವಾದ ಕಡೆ ಇವತ್ತು ಕೆ.ಇ.ಬಿ.ಯವರು ಆದ್ಯತೆ ಕೊಟ್ಟು ರೆಗ್ಯುಲರೈಸ್ ಮಾಡುತ್ತಾರೆ. ನನ್ನಷ್ಟಕ್ಕೆ ನಾನೇ ಬಾವಿ ತೆಗೆಸಿಕೊಂಡು, ಪಂಪು ಕೂಡಿಸಿಕೊಂಡು, ರಿಜಿಸ್ಟರ್ ಮಾಡದೇ, ಯಾವುದೇ ಮೆಟೀರಿಯಲನ್ನೂ ಕೇಳದೆ ಮಾಡಿರುವುದು ಅಲ್ಲ. ರೆಗ್ಯುಲರೈಸ್ ಮಾಡುವುದು ಕಮಿಟ್‌ಮೆಂಟ್ ಇದ್ದಂಥವುಗಳನ್ನು.

ಶ್ರೀ ಬಿ. ಶಿವರಾಮು : ನೀವೇ ಕೊಟ್ಟಿರುವ ಅಂಕಿ ಅಂಶಗಳಂತೆ ಹಾಸನ ಜಿಲ್ಲೆ ಅರಸೀಕೆರೆ ತಾಲ್ಲೂಕಿನಲ್ಲಿ ಫೆಬ್ರವರಿ 1997ರ ಅಂತ್ಯದವರೆಗೆ ರಿಜಿಸ್ಟರ್ ಆಗಿ, ವಿದ್ಯುದ್ದೀಕರಣವಾಗದೇ ಉಳಿದಿರತಕ್ಕಂಥ ಬಾವಿಗಳ ಸಂಖ್ಯೆ 4,386, ಇದು 1993-94ರಿಂದ. ಅಂದರೆ ರಿಜಿಸ್ಟರ್ ಆಗಿ ಅವನು ಬಾವಿ ಹಾಕಿಕೊಂಡು ಎಷ್ಟು ವರ್ಷ ಕಾಯಬಹುದು? ಆ ಸಂದರ್ಭದಲ್ಲಿ ಅವನು ಏನು ಮಾಡುತ್ತಾನೆ ಎಂದರೆ, ಕೆ.ಇ.ಬಿ. ಯಿಂದ ಯಾವಾಗ ಸಪ್ಲೈ ಮಾಡುವುದಿಲ್ಲ ಎನ್ನುವ ತೀರ್ಮಾನಕ್ಕೆ ಬಂದರು, ಆಗ ಅವನೇ ಕಂಬಗಳನ್ನು, ವೈರುಗಳನ್ನು ಹಾಕಿಕೊಂಡಿದ್ದಾನೆ. ಈಗ ಕೆ.ಇ.ಬಿ. ಯವರಿಗೆ ಆ ಕಂಬ ಮತ್ತು ವೈರುಗಳ ಖರ್ಚು ಆಗುತ್ತಿತ್ತು ಅಲ್ಲವೇ? ಅವರ ಬದಲು ರೈತನೇ ಹಾಕಿಕೊಂಡಿದ್ದಾನೆ. ಒಂದು ಕಂಬಕ್ಕೆ 10,000 ಸಾವಿರ ರೂಪಾಯಿಗಳು ತಗಲಿರಬಹುದು, ಎರಡು ಕಂಬಕ್ಕೆ 20,000 ರೂಪಾಯಿಗಳು ತಗುಲಿರಬಹುದು. ಈ ವ್ಯವಸ್ಥೆಯನ್ನು ಅವನೇ ಮಾಡಿಕೊಂಡ ಮೇಲೆ ತಾವು ಅದಕ್ಕೆ ದಂಡವನ್ನು ಎಷ್ಟರಮಟ್ಟಿಗೆ ಹಾಕಬಹುದು.

ಶ್ರೀ ಜೆ. ಹೆಚ್. ಪಟೇಲ್ : ಕಂಬಗಳನ್ನು ಎಲ್ಲಿಂದ ತಂದಿದ್ದಾರೆ ರೈತರು? ಕಂಬಗಳನ್ನು ವೈರುಗಳನ್ನು ಅವರು ಮಾಡಲು ಆಗುವುದಿಲ್ಲ. ಅವರು ಏನು ಮಾಡಿರುತ್ತಾರೆ ಎಂದರೆ, ಕೆ.ಇ.ಬಿ. ಯಲ್ಲಿರತಕ್ಕಂಥ ಕೆಳಮಟ್ಟದ ಅಧಿಕಾರಿಗಳು.

SRI B. SHIVARAMU : It is a wrong notion from the officials.

ಶ್ರೀ ಜೆ. ಹೆಚ್. ಪಟೇಲ್ : ಸ್ವಲ್ಪ ಕೇಳಿ. ಅವರು ಏನು ಮಾಡುತ್ತಾರೆ ಎಂದರೆ ಕೆಳಮಟ್ಟದ ಅಧಿಕಾರಿಗಳು ಯಾರಿರುತ್ತಾರೆ, ಅಸಿಸ್ಟೆಂಟ್ ಇಂಜಿನಿಯರೋ ಯಾರೋ ಒಬ್ಬನಿಗೆ ಹೇಳಿಬಿಟ್ಟು ದುಡ್ಡು ಕೊಟ್ಟು ಯಾವುದೋ ಬೇರೆ ಕಡೆ ಕನೆಕ್ಷನ್ ಕೊಡುವಂಥ ಕಂಬವನ್ನು ಇವರು ಕೊಂಡುಕೊಳ್ಳುತ್ತಾರೆ, ಇವನೂ ಭ್ರಷ್ಟ, ಅವನೂ ಭ್ರಷ್ಟ. ಇದರಲ್ಲಿ ನಾವು ಮಾಡಿದ್ದೆಲ್ಲಾ ಸರಿ ಎಂದು ನಾನು ಹೇಳುವುದಿಲ್ಲ. ಅದಕ್ಕೋಸ್ಕರ ಈಗ ಕೆ.ಇ.ಬಿ. ಯವರು ಕರಾರುವಕ್ಕಾಗಿ ಮಾಡುತ್ತಿದ್ದಾರೆ. ಟ್ರಾನ್ಸ್‌ಫಾರ್ಮರ್‌ಗಳು, ಕಂಬ, ವೈರು ಇವುಗಳು ಕೆ.ಇಬಿ ಯಿಂದ ಸಪ್ಲೈ ಆಗದೇ ಮತ್ತೆ ಎಲ್ಲಿಂದ ತರುತ್ತಾರೆ? ಅದನ್ನು ಯಾರಾದರೂ ಪ್ರೈವೇಟ್‌ನವರು ಪ್ರೊಡಕ್ಷನ್ ಮಾಡುತ್ತಿದ್ದಾರೆಯೇ ಹೀಗಾಗಿ ಕೆ.ಇ.ಬಿಯ ಮೆಟೀರಿಯಲ್‌ಗಳೇ ಮಿಸ್‌ಗೈಡ್ ಆಗಿ ಅಥವಾ ಮಿಸ್‌ಲೀಡ್ ಆಗಿ ಅಥವಾ ಏನೋ ಕಾರಣದಿಂದ ಅಪವ್ಯಯ ಆಗುತ್ತಿದೆ.

ಶ್ರೀ ಬಿ. ಶಿವರಾಮು : ಹಾಗಾದರೆ, ತಮ್ಮ ಇಲಾಖೆಯ ವತಿಯಿಂದ ತಾವು ಒಪ್ಪಿಕೊಳ್ಳುತ್ತೀರಿ, ಇಷ್ಟು ಪ್ರಮಾಣದಲ್ಲಿ ಅನಧಿಕೃತವಾಗಿರುವ ಆಗಿರುವ ರೈತನ ಬಾವಿಯ ಎಲ್ಲಾ ಕಂಬ ಮತ್ತು ವೈರು ತಮ್ಮ ಇಲಾಖೆಯದು ಎಂದು. ಹಾಗಾದರೆ, ನಿಮ್ಮ ಇಲಾಖೆಯ ಅಧಿಕಾರಿಗಳು ಈವರೆಗೆ ಏನು ಮಾಡುತ್ತಿದ್ದರು? ಎಷ್ಟು ಜನರ ಮೇಲೆ ಕ್ರಮ ತೆಗದುಕೊಂಡಿದ್ದೀರಿ?

ಶ್ರೀ ಜೆ. ಹೆಚ್. ಪಟೇಲ್ : ಇಂಥ ಕೆಳಮಟ್ಟದ ಕೆಲವು ಅಧಿಕಾರಿಗಳು ಇದ್ದಾರೆ. ಅವರಿಗೆ ಈಗ ಶಿಕ್ಷೆಯಾಗುತ್ತಿದೆ. ಇಲ್ಲ ಎಂದು ಹೇಳುವುದಿಲ್ಲ ನಾನು. ಮೀಟರ್ ತಿರುಗಿಸುವವರೂ ಇದ್ದರು. ಕಂಬಗಳನ್ನು ಮಾರಿಕೊಳ್ಳವವರೂ ಇದ್ದರು, ವೈರನ್ನು ಮಾರಿಕೊಳ್ಳುವವರೂ ಇದ್ದರು. ಎಲ್ಲಾ ಸತ್ಯವಂತರು ಎಂದು ನಾನು ಹೇಳಲಿಲ್ಲ. ಸುಮಾರು 50 ಸಾವಿರ ಜನ ಕೆಲಸ ಮಾಡುವಂಥ ಅಂಥ ಒಂದು ದೊಡ್ಡ ಸಂಸ್ಥೆಯಲ್ಲಿ ಅವರನ್ನು ಈ ರೀತಿ ಮಿಸ್‌ಲೀಡ್ ಮಾಡತಕ್ಕಂಥವರೂ ಇದ್ದರು.

ಶ್ರೀ ಬಿ. ಶಿವರಾಮು : ಇದು ಬಹಳ ಮುಖ್ಯವಾದುದು. ಮುಖ್ಯ ಮಂತ್ರಿಗಳ ಹತ್ತಿರ ಇದನ್ನು ಪ್ರಸ್ತಾಪ ಮಾಡಬೇಕು ಎಂದು ಹೊರಗಡೆಯಿಂದ ಓಡಿ ಬಂದಿದ್ದೇನೆ. ಒಂದು ತಾಲ್ಲೂಕಿನಲ್ಲೇ ಈ ಪ್ರಮಾಣದಲ್ಲಿದೆ ಎಂದರೆ ಇಡೀ ರಾಜ್ಯದಲ್ಲಿ ಎಷ್ಟು ಇದೆ ಎನ್ನುವಂಥಾದ್ದು ರೈತರಿಗೆ ಸಂಬಂಧಪಟ್ಟಿದೆ. ಕಂಬಗಳು ಮತ್ತು ವೈರು ಇಲಾಖೆಯಿಂದ ಬಂದಿದೆ ಎನ್ನುವ ಶಂಕೆಯನ್ನು ತಾವು ಏನು ವ್ಯಕ್ತ ಮಾಡಿದ್ದೀರಿ, ಅದು ಖಾಸಗಿಯಾಗಿ ಸಿಗುತ್ತಿದೆ. ತಮ್ಮ ಇಲಾಖೆಯಲ್ಲಿ ಒಂದು ಕಂಬಕ್ಕೆ 800 ರೂಪಾಯಿಗಳ ದರವನ್ನು ಫಿಕ್ಸ್ ಮಾಡಿದ್ದೀರಿ. ಅದನ್ನು 1,000-1,200 ರೂಪಾಯಿಗಳಿಗೆ ಅದರ ತಯಾರಕನೇ ಸಾರಾಸಗಟಾಗಿ ಕೊಡುತ್ತಿದ್ದಾನೆ. ವೈರಿನ ರೇಟನ್ನು ತಮ್ಮ ಇಲಾಖೆಯಲ್ಲಿ 42 ರೂಪಾಯಿ ಎಂದು ಏನು ಫಿಕ್ಸ್ ಮಾಡಿದ್ದೀರಿ, ಅದನ್ನು 60-70 ರೂಪಾಯಿಗೆ ಕಂಪನಿಯವನೇ ಕೊಡುತ್ತಿದ್ದಾನೆ. ಏಕೆಂದರೆ ಕೆ.ಇ.ಬಿ. ಯವರು ಅವರ ಬಿಲ್ಸ್ ಸೆಟಲ್ ಮಾಡಿಲ್ಲ. ಬೇಕಾದಷ್ಟು ಬಿಲ್ ಪೇಡಿಂಗ್ ಇದೆ. ಇವುಗಳನ್ನು ಕಂಪನಿಯ ತಯಾರಕರೇ ಕೊಡುತ್ತಿರತಕ್ಕಂಥಾದ್ದೇ ಹೊರತು, ಅದು ನಿಮ್ಮ ಇಲಾಖೆಯದಲ್ಲ. ರೈತ ಒಂದಕ್ಕೆ ಎರಡರಷ್ಟು ದುಡ್ಡು ಕೊಟ್ಟು ಅವುಗಳನ್ನು ಕೊಂಡುಕೊಂಡಿದ್ದಾನೆ. ಇವತ್ತು ಬೇಕಾದರೂ ನೀವು ಅರಸೀಕೆರೆ ತಾಲ್ಲೂಕಿನ ಗಂಡಸಿಗೆ ಬನ್ನಿ. ನಿಮಗೆ ಎಷ್ಟು ಕಂಬಗಳು ಬೇಕು? ಓಪನ್ ಮಾರ್ಕೆಟ್‌ನಲ್ಲಿಟ್ಟು ಮಾರುತ್ತಿದ್ದಾರೆ. ವೈರುಗಳನ್ನು ಟನ್ನುಗಟ್ಟಳೆ ತಂದು ಮಾರಾಟ ಮಾಡುತ್ತಿದ್ದಾರೆ. ರೈತ ಒಂದಕ್ಕೆ ಎರಡರಷ್ಟು ದುಡ್ಡು ಕೊಟ್ಟು ತಂದು ಹಾಕಿಕೊಂಡು, ಸರ್ವೀಸ್‌ಗಾಗಿ ಇಷ್ಟು ವರ್ಷ ಕಾದಿದ್ದೇ ಅಲ್ಲದೆ, ರೆಗ್ಯುಲರೈಸ್ ಮಾಡಿದರೆ 10,000 ರೂಪಾಯಿ ದಂಡ ಹಾಕಿ, 6 ತಿಂಗಳು ಉಪಯೋಗಿಸಿದರೆ ಇನ್ನೂ 10,000 ದಂಡ ಎನ್ನುವುದಾದರೆ ರೈತನ ಪರಿಸ್ಥಿತಿ ಸುಧಾರಣೆಯಾಗುತ್ತದೆಯೇ? ಏಕೆಂದರೆ ಕೆ.ಇ.ಬಿಯಲ್ಲಿ ಹಿರಿಯ ಅಧಿಕಾರಿಗಳು ಇದನ್ನೇ ಹೇಳುವುದು, ನಿಮಗೆ ಕಂಬ, ವೈರು ಎಲ್ಲಿಂದ ಬಂತು? ಎಲ್ಲಾ ನಮ್ಮ ಇಲಾಖೆಯಿಂದ ಕದ್ದಿರುವುದು ಅದಕ್ಕೆ ನಾವು ದಂಡ ಹಾಕುತ್ತಿದ್ದೇವೆ ಎಂದು ಹೇಳುತ್ತಿದ್ದಾರೆ. ನಿಮಗೆ ಎಷ್ಟು ಕಂಬ, ವೈರು ಬೇಕು, ಅದನ್ನು ಕೊಡಿಸುತ್ತೇವೆ. ಒಂದೊಂದು ತಾಲ್ಲೂಕಿನಲ್ಲಿ ಈ ಪ್ರಮಾಣದಲ್ಲಿರುವಂಥಾದಾದರೆ, ಈಗ ಅರಸೀಕೆರೆ ತಾಲ್ಲೂಕಿನಲ್ಲಿ ಏನಾಗಿದೆ ಎಂದರೆ, ಅದನ್ನು ಬ್ಲಾಕ್ ಏರಿಯಾ ಎಂದು ಡಿಕ್ಲೇರ್ ಮಾಡಿದ್ದಾರೆ. ಇವರ ಪರಿಸ್ಥಿತಿ ಏನಾಗಬೇಕು?

ಛೇರ್ಮನ್ : ತಾವು ಈಗಾಗಲೇ ತಮ್ಮ ಪಾಯಿಂಟ್‌ಗಳನ್ನು ಕ್ಲಿಯರ್ ಮಾಡಿದ್ದೀರಿ. ಅದಕ್ಕೆ ಸೂಕ್ತವಾಗಿರತಕ್ಕಂಥ ಕ್ರಮ ಕೈಗೊಳ್ಳುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದಾರೆ.

ಶ್ರೀ ಜೆ. ಹೆಚ್. ಪಟೇಲ್ : ಕ್ರಮ ಕೈಗೊಳ್ಳುತ್ತೇವೆ. ಆಮೇಲೆ, ಗಂಡಸಿಯಲ್ಲಿ ಏನೇನು ನಡೆಯುತ್ತಿದೆ ಎಂದು ನನಗೆ ಈಗ ಗೊತ್ತಾಯಿತು. ಅಲ್ಲಿಗೆ ಒಬ್ಬ ಅಧಿಕಾರಿಯನ್ನು ಕಳುಹಿಸುತ್ತೇನೆ.

ಯಾವನು ಕಂಬ ಮಾರುತ್ತಾನೆ, ಯಾವನು ವೈರ್ ಮಾರುತ್ತಾನೆ, ಏಕೆ ಮಾರುತ್ತಾನೆ, ಎಲ್ಲಿಂದ ತಂದಿದ್ದಾನೆ ಇದೆಲ್ಲವನ್ನೂ ವಿಚಾರಣೆ ಮಾಡಿಸುತ್ತೇನೆ.

ಶ್ರೀ ಬಿ. ಶಿವರಾಮು : ತಾವು ಒಂದ ಆಶ್ವಾಸನೆ ಕೊಟ್ಟಿದ್ದಿರಲ್ಲ. ಅನ್‌ಆಥರೈಸ್ಡ್ ಸೇಲ್ಸ್‌ಗೆ ಪ್ರವರ್ಗ-1, 2, 3 ಮಾಡಿ, ಕೆ.ಇ.ಬಿಯವರು ರೆಗ್ಯುಲರೈಸ್ ಮಾಡಲು 10 ಸಾವಿರ, 15 ಸಾವಿರ ದಂಡವನ್ನು ಹಾಕಿದ್ದಾರಲ್ಲ, ಅದನ್ನು ಕಡಿಮೆ ಮಾಡುತ್ತೇವೆ ಎಂದು ತಾವು ಸದನದಲ್ಲಿ ಒಂದು ಆಶ್ವಾಸನೆ ಕೊಟ್ಟಿದ್ದಿರಿ. ದಯವಿಟ್ಟು ರೈತರು ಈಗ ಏನು ಮೆಟೀರಿಯಲ್ಸ್ ಹಾಕಿದ್ದಾರೆ, ಅದಕ್ಕೆ ಕಡಿಮೆ ದಂಡ ಹಾಕುವಂಥ ವ್ಯವಸ್ಥೆಯನ್ನು ಮಾಡಿ. ಅದರಲ್ಲೂ ವಿಶೇಷವಾಗಿ ಕೆಲವರು ಕಟ್ಟಿದ್ದಾರೆ, ಕೆಲವರು ಕಟ್ಟಿಲ್ಲ. ಯಾರು ಕಟ್ಟಿಲ್ಲ ಎಂದರೆ ಆರ್ಥಿಕವಾಗಿ ದುರ್ಬಲವಾಗಿರತಕ್ಕಂಥವರು ಕಟ್ಟಿಲ್ಲ, ಪರಿಶಿಷ್ಟ ಜಾತಿ ಮತ್ತು ವರ್ಗದವರು ಕಟ್ಟಿಲ್ಲ. ಆದ್ದರಿಂದ ಅದನ್ನು ಕಡಿಮೆ ಮಾಡತಕ್ಕಂಥಾದ್ದನ್ನು ಮಾಡಬೇಕು.

ಛೇರ್ಮನ್ : ತಾವು ಏನು ಹೇಳಬೇಕು ಎಂದಿದ್ದೀರಿ ಅದನ್ನು ಬರವಣಿಗೆಯಲ್ಲಿ ಕೊಡಿ. ಪರಿಶೀಲಸುತ್ತೇವೆ ಎಂದು ಅವರು ಹೇಳುತ್ತಾರೆ.

ಶ್ರೀ ಅರಗ ಜ್ಞಾನೇಂದ್ರ : ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಎಲ್ಲ ಡ್ಯಾಂಗಳೂ ಭರ್ತಿಯಾಗಿವೆ. ನಿಮಗೆ ಕರೆಂಟ್ ಸಾಕಷ್ಟು ಸಿಗುವುದಿದೆ. ಅದರ ಕಾಸ್ಟ್ ಕೂಡ ಕಡಿಮೆಯಾಗುತ್ತದೆ. ಹಾಗಾಗಿ ಅದರ ದರವನ್ನು ಹೆಚ್ಚು ಮಾಡಬಾರದು ಎನ್ನುವುದು ನನ್ನ ಮೊದಲನೇ ಬೇಡಿಕೆ. ಇನ್ನೂ ಜಾಸ್ತಿ ಮಾಡಬೇಡಿ. ಈಗ ಏನು ಮಾಡಿದ್ದೀರಿ ಅದನ್ನು ತೆಗೆದುಹಾಕಿ. ಹಳೇ ದರದಲ್ಲೇ ಕೊಡಿ. ಏಕೆಂದರೆ ನಿಮಗೆ ಕರೆಂಟ್ ಬಹಳ ಕಡಿಮೆ ದರದಲ್ಲಿ ಸಿಗುತ್ತದೆ. ಏಕೆಂದರೆ ಹೈಡಲ್ ಪ್ರಾಜೆಕ್ಟ್‌ಗಳ ಡ್ಯಾಂಗಳೆಲ್ಲಾ ತುಂಬಿಬಿಟ್ಟವೆ. ಏಕೆಂದರೆ ಮೊನ್ನೆ ನೀವು ಕಾವೇರಿಗೆ ಒಳ್ಳೆಯ ಪೂಜೆ ಮಾಡಿಸಿದ್ದೀರಿ ಎಂದು ಕಾಣುತ್ತದೆ. ಪ್ರಾಜೆಕ್ಟ್‌ಗಳ ಕೆಲವು ಡ್ಯಾಂಗಳೆಲ್ಲಾ ತುಂಬಿವೆ. ಸ್ವಲ್ಪ ಒಳ್ಳೆಯ ಮುಹೂರ್ತದಲ್ಲಿ ತಾವು ಹೋಗಿದ್ರಿ ಎಂದು ಕಾಣುತ್ತದೆ. ಆದಕಾರಣ ಸ್ವಲ್ಪ ಪ್ರಾಜೆಕ್ಟ್‌ನಲ್ಲಿ ನೀರು ತುಂಬಿದೆ. ಆ ಲಾಭ ಜನರಿಗೂ ಕೂಡ ಮುಟ್ಟುವ ಹಾಗೆ ಮಾಡಿ. ನಮಗೆ ಬೆಳಕು ಕೊಡುವ ಹಾಗೆ ಮಾಡಿ. ತೀರ್ಥಹಳ್ಳಿ ಹಾಗೂ ಹೊಸನಗರದಲ್ಲಿ ಭಾಗ್ಯಜ್ಯೋತಿಯಲ್ಲಿ ಎರಡನೇ ದೀಪ ಹಾಕಿಕೊಂಡವರಿಗೆ ಕಿತ್ತುಹಾಕಿರುವ ಕನೆಕ್ಷನನ್ನು ರೀ-ಕನೆಕ್ಷನ್ ಮಾಡಲಿಕ್ಕೆ ತಾವು ಆದೇಶ ಕೊಡಬೇಕು ಎಂದು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಂಡು ನನ್ನ ಭಾಷಣವನ್ನು ಬಹಳ ಕುತೂಹಲದಿಂದ ತಾವು ಕೇಳಿದ್ದೀರಿ ಹಾಗೂ ಮಧ್ಯೆ ಪ್ರವೇಶ ಮಾಡಿ ಆ ಚರ್ಚೆಯಲ್ಲಿ ಭಾಗವಹಿಸಿದ್ದೀರಿ ಅದಕ್ಕಾಗಿ ತಮಗೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳಿಗೆ, ಮಂತ್ರಿಗಳಿಗೆ ಮತ್ತು ಸಭಾಧ್ಯಕ್ಷರಿಗೆ ನನ್ನ ಧನ್ಯವಾದಗಳನ್ನು ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಛೇರ್ಮನ್ : ಕುಮಾರ ಸ್ವಾಮಿಯವರು.

(ಕುಮಾರ ಸ್ವಾಮಿಯವರು ಗೈರುಹಾಜರಿದ್ದರು.)

ಶ್ರೀ ವಾಟಾಳ್ ನಾಗರಾಜ್ : ಅಧ್ಯಕ್ಷರೇ, ಇನ್ನು ಎಷ್ಟು ಗಂಟೆಯವರೆಗೆ ಸಭೆಯನ್ನು ನಡೆಸುತ್ತೀರಿ ?

ಛೇರ್ಮನ್ : 9.00 ಗಂಟೆಯವರೆಗೆ ಎಂದು ಹೇಳಲಾಗಿದೆ.

ಶ್ರೀ ವಾಟಾಳ್ ನಾಗರಾಜ್ : ಅದು ಬಹಳ ಕಡಿಮೆಯಾಯಿತು 12.00 ಗಂಟೆಯವರೆಗೆ ನಡೆಸಿಬಿಡಿ. ನಾವು ಬೆಳಿಗ್ಗೆ ಹತ್ತು ಗಂಟೆಗೆ ಬಂದಿದ್ದೇವೆ.

ಛೇರ್ಮನ್ : ತಾವು ಹೇಗೂ ನಿಂತಿದ್ದೀರಿ. ಬಾಕಿಯವರು ಯಾರೂ ಇಲ್ಲ ಆದಕಾರಣ ತಾವೇ ಮಾತನಾಡಿ ಚೆನ್ನಾಗಿರುತ್ತದೆ.

ಶ್ರೀ ವಾಟಾಳ್ ನಾಗರಾಜ್ : ನಾನು ಈಗ ಮಾತನಾಡುವುದಿಲ್ಲ. ನಾನು ನಾಳೆ ಮಾತನಾಡುತ್ತೇನೆ. ಏನಿದು ಎದ್ದು ನಿಂತಿದ್ದೇ ತಪ್ಪಾಯಿತು ಎಂದೆನಿಸುತ್ತದೆ. ಏನಿದು ಮದುವೆಯಾಗು ಎಂದರೆ ನೀನೇ ನನ್ನ ಹೆಂಡತಿ ಆಗು ಎಂಬ ಗಾದೆಯ ಹಾಗೆ ಆಯಿತು. ತಾವು ಒಂದು ಕೆಲಸ ಮಾಡಿ. 7.45 ಗಂಟೆಗೆ ತಾವು ಮುಂದಕ್ಕೆ ಹಾಕುವುದಾದರೆ ನಾನು ಮಾತನಾಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಅರ್ಧ ಗಂಟೆಯ ಡಿಸ್ಕಶನ್ ಇದೆಯಲ್ಲ ಅದನ್ನು ತೆಗೆದುಕೊಳ್ಳಿ. ಇಲ್ಲದಿದ್ದರೆ ಗೃಹಸಚಿವರು ಚಿಂತಾಮಣಿಯ ಬಗ್ಗೆ ಒಂದು ಸ್ಟೇಟ್‌ಮೆಂಟನ್ನು ಮಾಡಬೇಕು ಅದನ್ನು ತೆಗೆದುಕೊಳ್ಳಿ. ಗೃಹಸಚಿವರು ರೆಡಿಯಾಗಿದ್ದರೆ ಸ್ಟೇಟ್‌ಮೆಂಟ್ ಮಾಡಿಸಿ.

ಛೇರ್ಮನ್ : ತಾವು ಸ್ಟೇಟ್‌ಮೆಂಟ್ ಮಾಡುತ್ತೀರಾ?

ಶ್ರೀ ಆರ್. ರೋಶನ್ ಬೇಗ್ : ಹೌದು ನಾನು ಸ್ಟೇಟ್‌ಮೆಂಟ್ ಮಾಡುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ತಾವು ನನಗೆ ಮಾತನಾಡಿ ಎಂದು ಹೇಳಿದ್ದೀರಿ. ನಾನು ಪ್ರಾರಂಭ ಮಾಡಿ ಐದು ನಿಮಿಷ ಮಾತನಾಡುತ್ತೇನೆ. ಹಾಗೆ ನಾಳೆ ಮುಂದುವರೆಸುತ್ತೇನೆ.

ಛೇರ್ಮನ್ : ಬೇಡ ಅವರು ಸ್ಟೇಟ್‌ಮೆಂಟ್‌ಮಾಡಲಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಆಯಿತು ಅವರು ಸ್ಟೇಟ್‌ಮೆಂಟ್ ಮಾಡುತ್ತಾರೆ ನಂತರ ತಾವು ಕಾಲಿಂಗ್ ಅಟೆನ್‌ಶನ್ ತೆಗೆದುಕೊಳ್ಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ನಾನು ಕೂಡ ಆ ಸ್ಥಳಕ್ಕೆ ಹೋಗಿ ಬಂದಿದ್ದೇನೆ. ಆದಕಾರಣ ಅವರು ಸ್ಟೇಟ್‌ಮೆಂಟ್ ಮಾಡುವುದಕ್ಕಿಂತ ಮುಂಚೆ ನಾನು ಐದು ನಿಮಿಷ ಮಾತನಾಡುತ್ತೇನೆ.

ಛೇರ್ಮನ್ : ಬೇಡ ಮೊದಲು ಅವರು ಸ್ಟೇಟ್‌ಮೆಂಟ್ ಮಾಡಲಿ.

ಶ್ರೀ ಜಿ. ವಿ. ಶ್ರೀರಾಮರೆಡ್ಡಿ : ಅವರು ಸ್ಟೇಟ್‌ಮೆಂಟ್ ಮಾಡಿದಮೇಲೆ ನನಗೆ ಐದು ನಿಮಿಷ ಮಾತನಾಡಲು ಅವಕಾಶ ಮಾಡಿಕೊಡಿ.